ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ನೆನಪಿಟ್ಟುಕೊಳ್ಳಲು ಇವೆ ಹಲವು ಉಪಾಯಗಳು

ಆಳ–ಅಗಲ
ವಾರಸುದಾರಿಕೆ ಮತ್ತು ಉತ್ತರಾಧಿಕಾರ ಹಕ್ಕುಗಳಿಗೆ ಏಕರೂಪ...

ಅರಣ್ಯ ಸಂರಕ್ಷಣೆ ತಿದ್ದುಪಡಿ ಮಸೂದೆ ಅಂಗೀಕಾರ 11

ಆಲಮಟ್ಟಿ: 1.25 ಲಕ್ಷ ಕ್ಯುಸೆಕ್ ನೀರು ಹೊರಕ್ಕೆ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,707 ▲	19,778 ▲	₹61,320 (ಬೆಂಗಳೂರು)	₹76,400 (ಬೆಂಗಳೂರು)	82.01 ▼

ಕಿಡಿ ಹೊತ್ತಿಸಿದ ಮೊಕದ್ದಮೆ ವಾಪಸ್ ಪ್ರಸ್ತಾವ

ಬೆಂಗಳೂರು/ಮೈಸೂರು: ಹಿಂದಿನ 5 ವರ್ಷಗಳ ಅವಧಿಯಲ್ಲಿ ಬೆಂಗಳೂರಿನ ಡಿ.ಜೆ. ಹಳ್ಳಿ, ಕೆ.ಜೆ. ಹಳ್ಳಿ ಸೇರಿದಂತೆ ರಾಜ್ಯದ ವಿವಿಧೆಡೆ ನಡೆದಿರುವ ಗಲಭೆಗಳಲ್ಲಿ ನಿರ್ದಿಷ್ಟ ಕೋಮಿನ ಅಮಾಯಕ ಯುವಕರು, ವಿದ್ಯಾರ್ಥಿಗಳ ವಿರುದ್ಧ ದಾಖಲಿಸಿರುವ ಮೊಕದ್ದಮೆಗಳನ್ನು ಹಿಂಪಡೆಯಬೇಕೆಂಬ ಬೇಡಿಕೆಯ ಪರಿಶೀಲನೆಗೆ ಗೃಹ ಸಚಿವ ಜಿ. ಪರಮೇಶ್ವರ ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ. 5

₹10 ಲಕ್ಷ ಕೋಟಿ ಅನುತ್ಪಾದಕ ಸಾಲ ವಸೂಲಿ

ನವದೆಹಲಿ (ಪಿಟಿಐ): ಎನ್‌ಪಿಎ ಎಂದು ವರ್ಗೀಕೃತ ಆಗಿದ್ದ ಒಟ್ಟು ₹10 ಲಕ್ಷ ಕೋಟಿಗೂ ಹೆಚ್ಚಿನ ಮೊತ್ತದ ಸಾಲವನ್ನು ಕಳೆದ ಒಂಬತ್ತು ವರ್ಷಗಳಲ್ಲಿ ವಸೂಲು ಮಾಡಲು ಬ್ಯಾಂಕುಗಳಿಗೆ ಸಾಧ್ಯವಾಗಿದೆ. ಅನುತ್ಪಾದಕ ಸಾಲದ ಪ್ರಮಾಣವನ್ನು ತಗ್ಗಿಸಲು ಕೇಂದ್ರ ಸರ್ಕಾರ ಹಾಗೂ ಆರ್‌ಬಿಐ ಕೈಗೊಂಡ ಕ್ರಮಗಳು ಬ್ಯಾಂಕುಗಳ ನೆರವಿಗೆ ಬಂದಿವೆ. 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಚರ್ಚೆಗೆ ಲೋಕಸಭಾ ಸ್ಪೀಕರ್ ಅಸ್ತು • ಪ್ರಧಾನಿ ಹೇಳಿಕೆಗೆ 'ಇಂಡಿಯಾ' ಅಸ್ತ್ರ

ಅವಿಶ್ವಾಸ ನಿರ್ಣಯ ಮಂಡನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ನಿರೀಕ್ಷೆಯಂತೆ ಬುಧವಾರ ಪ್ರತಿಪಕ್ಷಗಳ ಮೈತ್ರಿಕೂಟವಾದ 'ಇಂಡಿಯಾ' ಲೋಕಸಭೆಯಲ್ಲಿ ಮಂಡಿಸಿದ ಅವಿಶ್ವಾಸ ನಿರ್ಣಯವನ್ನು ಚರ್ಚೆಗೆ ತೆಗೆದುಕೊಳ್ಳಲು ಸ್ಪೀಕರ್ ಓಂ ಬಿರ್ಲಾ ಒಪ್ಪಿಗೆ ಸೂಚಿಸಿದ್ದಾರೆ.

ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಮೋದಿ ಅವರು ಸಂಸತ್‌ನಲ್ಲಿ ಹೇಳಿಕೆ ನೀಡಬೇಕು. ಆ ಬಳಿಕವಷ್ಟೇ ಸುದೀರ್ಘ ಚರ್ಚೆಗೆ ಸಿದ್ಧವೆಂದು ವಿರೋಧ ಪಕ್ಷಗಳು ಬಿಗಿಪಟ್ಟು ಹಿಡಿದಿವೆ. ಇದರಿಂದ ಉಭಯ ಸದನಗಳಲ್ಲಿ ಸುಗಮ ಕಲಾಪಕ್ಕೆ ಅಡ್ಡಿಯಾಗಿದೆ.

ಕುಕಿ ಬುಡಕಟ್ಟು ಸಮುದಾಯದ ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ಕೃತ್ಯದ ವಿಡಿಯೊ ಬಹಿರಂಗಗೊಂಡಿದ್ದ ವೇಳೆ ಸದನದ ಹೊರಗೆ ಪ್ರತಿಕ್ರಿಯಿಸಿದ್ದ ಪ್ರಧಾನಿ ಅವರು, ಸಂಸತ್‌ನಲ್ಲಿ ಹೇಳಿಕೆ ನೀಡಿಲ್ಲ.

11ನೇ ಪುಟ ನೋಡಿ

ಕಲಾಪದಿಂದ ಅಮಾನತುಗೊಂಡಿರುವ ಎಎಪಿ ಸಂಸದ ಸಂಜಯ್ ಸಿಂಗ್ ಅವರನ್ನು ಬುಧವಾರ ಸೋನಿಯಾ ಗಾಂಧಿ ಭೇಟಿಯಾಗಿ ಬೆಂಬಲ ಸೂಚಿಸಿದರು –ಪಿಟಿಐ ಚಿತ್ರ

ಮಣಿಪುರ ಸಂಘರ್ಷದ ಬಗ್ಗೆ ಸಂಸತ್‌ನಲ್ಲಿ ಹೇಳಿಕೆ ನೀಡಿದರೆ ತಮ್ಮ ಆತ್ಮಗೌರವಕ್ಕೆ ಚ್ಯುತಿಯಾಗುತ್ತದೆ ಎಂದು ಪ್ರಧಾನಿ ಮೋದಿ ಅವರು ಭಾವಿಸಿರುವುದು ಶೋಚನೀಯ

ಮಲ್ಲಿಕಾರ್ಜುನ ಖರ್ಗೆ
ಎಐಸಿಸಿ ಅಧ್ಯಕ್ಷ

ದೇಶದ ಜನರಿಗೆ ಮೋದಿ, ಬಿಜೆಪಿ ಮೇಲೆ ನಂಬಿಕೆ ಇದೆ. ಪ್ರತಿಪಕ್ಷಗಳಿಗೆ ಹಿಂದಿನ ಬಾರಿಯೂ ಪಾಠ ಕಲಿಸಿದ್ದಾರೆ. ಮತ್ತೆ ಅದೇ ಪುನರಾವರ್ತನೆಯಾಗಲಿದೆ

ಪ್ರಲ್ಹಾದ ಜೋಶಿ
ಕೇಂದ್ರ ಸಚಿವ

ಸಂಖ್ಯಾಬಲ

ಎನ್‌ಡಿಎಯಿಂದ ವೈಎಸ್‌ಆರ್ ಕಾಂಗ್ರೆಸ್ ಅಂತರ ಕಾಯ್ದುಕೊಂಡಿದೆ. ಆದರೂ, ಮೋದಿ ಸರ್ಕಾರ ಸದನದಲ್ಲಿ ಇಕ್ಕಟ್ಟಿಗೆ ಸಿಲುಕಿದಾಗಲೆಲ್ಲಾ ಅದರ ರಕ್ಷಣೆಗೆ ನಿಂತಿದೆ.

'ಇಂಡಿಯಾ'ದ ನಡೆಗೆ ಅರ್ಥವಿಲ್ಲ ಎಂದು ಆ ಪಕ್ಷದ ರಾಜ್ಯಸಭೆಯ ನಾಯಕ ವಿ. ವಿಜಯಸಾಯಿ ರೆಡ್ಡಿ ಹೇಳಿದ್ದಾರೆ. ಇದರಿಂದ ಆ ಪಕ್ಷದ ಸದಸ್ಯರು, ನಿರ್ಣಯದ ವಿರುದ್ಧ ಮತ ಚಲಾಯಿಸುವ ಸಾಧ್ಯತೆಯಿದೆ. ಹಾಗಾಗಿ, ಬಿಜೆಪಿ ನೇತೃತ್ವದ ಎನ್‌ಡಿಎ ಸದಸ್ಯರ ಬಲ 357 ಆಗುವ ಸಾಧ್ಯತೆ ಇದೆ. ಲೋಕಸಭೆಯ ಒಟ್ಟು ಸದಸ್ಯರ ಸಂಖ್ಯೆ 543. ಬಹುಮತಕ್ಕೆ 272 ಸದಸ್ಯರ ಬೆಂಬಲ ಬೇಕಿದೆ. 'ಇಂಡಿಯಾ'ದ ಸದಸ್ಯರ ಬಲ 154 ಇದೆ. ಉಳಿದಂತೆ ಬಿಜೆಡಿ 12, ಬಿಎಸ್ಪಿ 9 ಅಕಾಲಿದಳ 2, ಜೆಡಿಎಸ್‌ನ ಒಬ್ಬರು ಸದಸ್ಯ ಇದ್ದಾರೆ. ವಿವಿಧ ಕಾರಣದಿಂದ ಉಳಿದ ಸ್ಥಾನಗಳು ಖಾಲಿ ಇವೆ.

ಜನನ– ಮರಣಗಳ ನೋಂದಣಿ ಕಾಯ್ದೆ ತಿದ್ದುಪಡಿ ಮಸೂದೆ ಮಂಡನೆ

ಜನನ ಪ್ರಮಾಣಪತ್ರವೇ ಎಲ್ಲಕ್ಕೂ ಆಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಜನನ ಮತ್ತು ಮರಣಗಳ ನೋಂದಣಿ ಕಾಯ್ದೆ–1969ಕ್ಕೆ ತಿದ್ದುಪಡಿ ತರುವ ಉದ್ದೇಶದ ಮಸೂದೆಯನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಬುಧವಾರ ಮಂಡಿಸಿದೆ.

ಈ ಕಾಯ್ದೆ ಜಾರಿಗೆ ಬಂದು 54 ವರ್ಷಗಳ ನಂತರ ಇದೇ ಮೊದಲ ಬಾರಿಗೆ ತಿದ್ದುಪಡಿ ಮಾಡುತ್ತಿರುವುದು ಗಮನಾರ್ಹ.

ಶಾಲಾ-ಕಾಲೇಜುಗಳಲ್ಲಿ ಪ್ರವೇಶ, ಚಾಲನಾ ಪರವಾನಗಿ ಪಡೆಯಲು ಹಾಗೂ ಸರ್ಕಾರಿ ನೌಕರಿಗೆ ನಡೆಯುವ ನೇಮಕಾತಿ ಸಂದರ್ಭಗಳಲ್ಲಿ ಜನನ ಪ್ರಮಾಣಪತ್ರವನ್ನು ಏಕೈಕ ದಾಖಲೆಯಂತೆ ಬಳಸಲು ಉದ್ದೇಶಿತ ತಿದ್ದುಪಡಿಗಳು ಅವಕಾಶ ಕಲ್ಪಿಸುತ್ತವೆ.

ಮತದಾರರ ಪಟ್ಟಿ ಸಿದ್ಧಪಡಿಸಲು, ಆಧಾರ್ ಸಂಖ್ಯೆ ನೀಡುವಾಗ ಹಾಗೂ ವಿವಾಹ ನೋಂದಣಿ ಸಂದರ್ಭದಲ್ಲಿಯೂ ಜನನ ಪ್ರಮಾಣಪತ್ರವನ್ನು ಬಳಸಲು ಈ ಉದ್ದೇಶಿತ ತಿದ್ದುಪಡಿಗಳಿಂದ ಸಾಧ್ಯವಾಗಲಿದೆ.

ಈ ಉದ್ದೇಶಗಳಿಗೆ ಜನನ ಪ್ರಮಾಣಪತ್ರ ಬಳಸಬೇಕು ಎಂಬ ಸರ್ಕಾರದ ಯೋಜನೆಗೆ ಈ ಹಿಂದೆ ಭಾರಿ ವಿರೋಧ ವ್ಯಕ್ತವಾಗಿತ್ತು. ಖಾಸಗಿತನದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದ ಹಲವರು ಈ ನಡೆಯು ರಾಜ್ಯಗಳ ಹಕ್ಕುಗಳನ್ನು ಕಸಿಯಲಿದೆ ಎಂದು ದೂರಿದ್ದರು. ಜನರಿಗೆ ಸಂಬಂಧಿಸಿದ ಮಾಹಿತಿಯನ್ನು ಸರ್ಕಾರವು ಅನಿಯಂತ್ರಿತವಾಗಿ ಪಡೆಯುವುದು ಸಾಧ್ಯವಾಗಲಿದೆ ಎಂಬ ಆತಂಕವನ್ನು ವ್ಯಕ್ತಪಡಿಸಿದ್ದರು.

ಮಸೂದೆ ಮಂಡಿಸಿ ಮಾತನಾಡಿದ ಗೃಹ ಖಾತೆಯ ರಾಜ್ಯ ಸಚಿವ ನಿತ್ಯಾನಂದ ರಾಯ್, 'ಸಾಮಾಜಿಕ ಬದಲಾವಣೆ ಮತ್ತು ತಂತ್ರಜ್ಞಾನದಲ್ಲಿನ ಪ್ರಗತಿಗೆ ತಕ್ಕಂತೆ ಈ ಕಾಯ್ದೆಗೆ ತಿದ್ದುಪಡಿ ತರುವ ಅಗತ್ಯವಿದೆ' ಎಂದು ಹೇಳಿದರು.

11ನೇ ಪುಟ ನೋಡಿ

ಶಿಕಾರಿಪುರ ತಾಲ್ಲೂಕಿನ ಅಂಬ್ಲಿಗೊಳ್ಳ ಜಲಾಶಯ ಕೋಡಿ ಹರಿದಿದ್ದು, ಸುತ್ತಮುತ್ತಲಿನ ಗ್ರಾಮಸ್ಥರು ಬುಧವಾರ ಮೀನು ಶಿಕಾರಿ ಮಾಡಿದರು ಚಿತ್ರ: ಎಚ್‌.ಎಸ್. ರಘು

ಇಬ್ಬರ ಸಾವು • ದೂಧ್ ಸಾಗರ ಬಳಿ ಭೂಕುಸಿತ

ತಗ್ಗಿದ ಮಳೆಯ ಅಬ್ಬರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಕೆಲ ದಿನಗಳಿಂದ ತೀವ್ರಗೊಂಡಿದ್ದ ಮಳೆಯ ಅಬ್ಬರ ಬುಧವಾರ ಕೊಂಚ ತಗ್ಗಿದ್ದು, ಜಿಟಿ ಜಿಟಿ ಮಳೆ ಮುಂದುವರಿದಿದೆ. ಆದರೆ ಮಲೆನಾಡು, ಕರಾವಳಿಯ ಕೆಲ ಭಾಗಗಳಲ್ಲಿ ಧಾರಾಕಾರ ಮಳೆಯಾಗುತ್ತಿದೆ.

ವಿವಿಧೆಡೆ ಮಂಗಳವಾರ ಸಂಜೆ ಮತ್ತು ರಾತ್ರಿ ಬಿರುಸಿನ ಮಳೆ ಆಗಿರುವುದರಿಂದ ನದಿಗಳಲ್ಲಿ ನೀರಿನ ಮಟ್ಟ ಏರಿದ್ದು, ಜಲಾಶಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ.

ಇಬ್ಬರ ಸಾವು: ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಹೊಸ ಸಿದ್ದರಹಳ್ಳಿಯ ರೇವಮ್ಮ (66) ಮಂಗಳವಾರ ಸಂಜೆ ಕಾಲುವೆ ನೀರಿನಲ್ಲಿ ಕೊಚ್ಚಿ ಹೋಗಿದ್ದರು. ಬುಧವಾರ ಬೆಳಿಗ್ಗೆ ಅವರ ಮೃತದೇಹ ಪತ್ತೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ತಾಲ್ಲೂಕಿನ ಹಳೆಕೋಟೆ ನಿವಾಸಿ ಮುಜಂಬಿಲ್ (32) ಮಂಗಳೂರು ನಗರದ ಕಸಬಾ ಗ್ರಾಮದ ಧಕ್ಕೆಯಲ್ಲಿ ಕಾಲು ಜಾರಿ ನದಿಗೆ ಬಿದ್ದು ಮಂಗಳವಾರ ಮೃತಪಟ್ಟಿದ್ದಾರೆ.

ದೂಧ್ ಸಾಗರ ಬಳಿ ಭೂಕುಸಿತ: ಗೋವಾ ರಾಜ್ಯದ ದೂಧ್ ಸಾಗರ ಜಲಪಾತದ ಬಳಿ ಮಂಗಳವಾರ ರಾತ್ರಿ ಎರಡು ಕಡೆ ಭೂ ಕುಸಿತವಾಗಿದೆ. ಯಾವುದೇ ಅನಾಹುತ ಸಂಭವಿಸಿಲ್ಲ.

ಜಲಪಾತದ ಸ್ವಲ್ಪ ದೂರದಲ್ಲಿ ರೈಲು ಹಳಿಗಳ ಬಳಿ ಭೂ ಕುಸಿತ ಸಂಭವಿಸಿದೆ. ಇನ್ನೊಂದೆಡೆ ಜಲಪಾತದತ್ತ ಸಾಗುವ ರೈಲು ಹಳಿಗಳ ಸುರಂಗದಲ್ಲಿ ಗುಡ್ಡದ ಭಾಗ ಕುಸಿದು ಹಳಿಗಳ ಮೇಲೆ ಬಿದ್ದಿದೆ. ಕೂಡಲೇ ಎಚ್ಚೆತ್ತುಕೊಂಡ ಅಧಿಕಾರಿಗಳು ಕೆಲ ರೈಲುಗಳ ಮಾರ್ಗಗಳನ್ನು ಬದಲಾಯಿಸಿದ್ದು, ಕೆಲವನ್ನು ರದ್ದುಗೊಳಿಸಿದ್ದಾರೆ.

ತುಂಬಿ ಹರಿದ ಕಪಿಲಾ: ಕೇರಳದ ವಯನಾಡಿನಲ್ಲಿ ಸತತ ಮಳೆ ಯಾಗುತ್ತಿರುವುದರಿಂದ ಕಪಿಲಾ ನದಿ ತುಂಬಿ ಹರಿದಿದ್ದು, ನಂಜನಗೂಡಿನಲ್ಲಿ ಶ್ರೀಕಂಠೇಶ್ವರಸ್ವಾಮಿ ದೇವಾಲಯ ಮುಂಭಾಗದ ಸ್ನಾನಘಟ್ಟದ ಸೋಪಾನ ಕಲ್ಲುಗಳು ಸಂಪೂರ್ಣ ಮುಳುಗಿದವು. ಕಬಿನಿ ಅಣೆಕಟ್ಟೆಯಿಂದ 20 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಿರುವುದರಿಂದ ಕಪಿಲಾ ನದಿ ಸ್ನಾನಘಟ್ಟದ ಹದಿನಾರು ಕಾಲು ಮಂಟಪ ಭಾಗಶಃ ಮುಳುಗಿದೆ.

'ಪ್ರವಾಹ ಪೀಡಿತ ಪ್ರದೇಶಗಳ ಜನರ ಸ್ಥಳಾಂತರ'

ಬೆಂಗಳೂರು: ಮಳೆ, ಪ್ರವಾಹದಿಂದಾಗುವ ಜೀವಹಾನಿ ತಡೆಯಲು ಜಿಲ್ಲಾಡಳಿತಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಪ್ರವಾಹಪೀಡಿತ ಪ್ರದೇಶಗಳ ಜನರ ಮನವೊಲಿಸಿ, ಇಲ್ಲವೇ ಬಲವಂತವಾಗಿಯಾದರೂ ಸ್ಥಳಾಂತರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾಡಳಿತದ ಅಧಿಕಾರಿಗಳಿಗೆ ಆದೇಶಿಸಿದರು. 7

ಎಂಟು ವರ್ಷ ಕಳೆದರೂ ಪೂರ್ಣಗೊಳ್ಳದ ಬಹುಮಹಡಿ ಕಟ್ಟಡದ ಕಾಮಗಾರಿ, ಬೀದಿಬದಿಯಲ್ಲೇ ವ್ಯಾಪಾರ

‘ಸಂಪಿಗೆ ರಸ್ತೆ’ಯ ಹೂವು ಮಾರುಕಟ್ಟೆಗಿಲ್ಲ ಕಂಪು

• ಆದಿತ್ಯ ಕೆ.ಎ.

ಬೆಂಗಳೂರು: ಮಲ್ಲೇಶ್ವರದ ಸಂಪಿಗೆ ರಸ್ತೆಯ ಬದಿಯಲ್ಲಿ ಬಗೆಬಗೆಯ ಹೂವಿನ ರಾಶಿಯು ನಿತ್ಯವೂ ಪಾದಚಾರಿಗಳು, ವಾಹನ ಸವಾರರು ಹಾಗೂ ಖರೀದಿದಾರರ ಕಣ್ಮನ ಸೆಳೆಯುತ್ತದೆ. ಈ ರಸ್ತೆಯಲ್ಲಿ ಹೂವುಗಳು ಕಂಪು ಬೀರಿದರೂ ವ್ಯಾಪಾರಸ್ಥರ ಬದುಕು ಮಾತ್ರ ಸುಂದರವಾಗಿಲ್ಲ. ಅವರ ಬದುಕು ಬೀದಿಗೆ ಬಿದ್ದಿದೆ.

ಮಲ್ಲೇಶ್ವರದ 12 ಹಾಗೂ 13ನೇ ಕ್ರಾಸ್‌ನ ರಸ್ತೆ ಬದಿಯಲ್ಲಿ ಕಳೆದ ಕೆಲವು ವರ್ಷಗಳಿಂದ ಹೂವಿನ ವ್ಯಾಪಾರ ನಡೆಸುವವರ ಸಮಸ್ಯೆಗಳಿಗೆ ಕಿವಿಯಾದರೆ ಅವರ ಸಂಕಷ್ಟಗಳು ಅನಾವರಣಗೊಳ್ಳುತ್ತವೆ. ಬಣ್ಣ ಬಣ್ಣದ ಹಾಗೂ ವಿವಿಧ ತಳಿಯ ಹೂವುಗಳು ಬಂದರೂ ಸುಸಜ್ಜಿತ ಮಾರುಕಟ್ಟೆ ವ್ಯವಸ್ಥೆ ಇಲ್ಲವಾಗಿದೆ.

ರಸ್ತೆ ಬದಿಯಲ್ಲೇ 50ಕ್ಕೂ ಹೆಚ್ಚು ಮಂದಿ ವ್ಯಾಪಾರ ನಡೆಸುತ್ತಿದ್ದು, ಕನಿಷ್ಠ ಸೌಲಭ್ಯಗಳು ಮಾರುಕಟ್ಟೆಯಲ್ಲಿ ಇಲ್ಲದೇ ತಪ್ಪಿಸುತ್ತಿದ್ದಾರೆ. ಅದೇ ಮಾರ್ಗದಲ್ಲಿ ಜನ ಪ್ರತಿನಿಧಿಗಳು, ಬಿಡಿಎ ಹಾಗೂ ಬಿಬಿಎಂಪಿ ಅಧಿಕಾರಿಗಳೂ ಸಾಗಿದರೂ ವ್ಯಾಪಾರಸ್ಥರ ಸಮಸ್ಯೆಗೆ ಪರಿಹಾರ ಸಿಗುತ್ತಿಲ್ಲ.

100ಕ್ಕೂ ಹೆಚ್ಚು ವ್ಯಾಪಾರಸ್ಥರು ರಸ್ತೆಬದಿಯ ಹಳೇ ಕಟ್ಟಡದಲ್ಲಿ 60 ವರ್ಷಗಳಿಂದ ವ್ಯಾಪಾರ ನಡೆಸುತ್ತಿದ್ದರು. ಅವರಿಗೆ ಬಹುಮಹಡಿ ಕಟ್ಟಡ ನಿರ್ಮಿಸಿಕೊಡುವ ಭರವಸೆ ಮೇಲೆ ಅಲ್ಲಿಂದ ತೆರವುಗೊಳಿಸಲಾಗಿತ್ತು. ಅದರ ಪಕ್ಕವೇ 87 ತಾತ್ಕಾಲಿಕ ಶೆಡ್‌ಗಳನ್ನು ₹ 1.35 ಕೋಟಿ ವೆಚ್ಚದಲ್ಲಿ ನಿರ್ಮಿಸಿ ಅಲ್ಲಿಗೆ ಸ್ಥಳಾಂತರಿಸಲಾಗಿತ್ತು. ಎರಡು ವರ್ಷದ ಒಳಗೆ ಬಹುಮಹಡಿಯ ಸುಸಜ್ಜಿತ ಕಟ್ಟಡ ನಿರ್ಮಿಸುವುದಾಗಿ, 2015ರಲ್ಲಿ ಕಾಮಗಾರಿ ಆರಂಭಿಸಿದ್ದ ಬಿಡಿಎ, 8 ವರ್ಷ ಕಳೆದರೂ ಪೂರ್ಣಗೊಳಿಸಿಲ್ಲ ಎಂದು ವ್ಯಾಪಾರಸ್ಥರು ಅಳಲು ತೋಡಿಕೊಳ್ಳುತ್ತಾರೆ.

ಏನೆಲ್ಲಾ ಲಭಿಸುತ್ತಿವೆ?: ಬಿಡಿ ಹೂವು, ಕಟ್ಟಿದ ಹಾರ, ಬಾಳೆಯ ಎಲೆ, ತರಕಾರಿ, ಮಾವಿನ ಸೊಪ್ಪು, ಎಲೆ-ಅಡಿಕೆ, ಪೂಜಾ ಸಾಮಾಗ್ರಿ ಸೇರಿದಂತೆ ಅಗತ್ಯ ವಸ್ತುಗಳು ಇಲ್ಲಿ ಲಭಿಸುತ್ತಿವೆ. ಮಲ್ಲೇಶ್ವರ ಸೇರಿದಂತೆ ಸುತ್ತಮುತ್ತ ಬಡಾವಣೆಗಳಿಗೆ ಪ್ರಸಿದ್ಧಿಯಾಗಿದ್ದ ಹೂವಿನ ಮಾರುಕಟ್ಟೆ ಈಗ ಸೊರಗಿದೆ.

ಮಳೆ ಬಂದರೆ ಕೆಸರು ವಾತಾವರಣ ನಿರ್ಮಾಣವಾಗಲಿದೆ. ಅಲ್ಲದೇ ಸೊಳ್ಳೆ ಕಾಟವೂ ವಿಪರೀತವಾಗಿದೆ. ಸೊಳ್ಳೆ ಕಾಟದಿಂದ ಸಂಜೆ 5 ಗಂಟೆಗೆ ಬಾಗಿಲು ಬಂದ್ ಮಾಡುವ ಸ್ಥಿತಿಯಿದೆ. ರಾಜಕಾಲುವೆ ಮೇಲೆ ತಾತ್ಕಾಲಿಕ ಶೆಡ್ ನಿರ್ಮಿಸಲಾಗಿದ್ದು, ದುರ್ವಾಸನೆ ನಡುವೆ ವ್ಯಾಪಾರ ನಡೆಸುತ್ತಿದ್ದಾರೆ.

ರಸ್ತೆಬದಿಯಲ್ಲಿ ತಾತ್ಕಾಲಿಕ ಮಳಿಗೆ ಇರುವ ಕಾರಣಕ್ಕೆ ಗ್ರಾಹಕರು ಅಪಾಯದಲ್ಲಿ ಹೂವು-ಹಣ್ಣು ಖರೀದಿಸುತ್ತಿದ್ದಾರೆ. ಒಂದು ವೇಳೆ ವಾಹನಗಳ ಬ್ರೇಕ್ ವಿಫಲವಾದರೆ ಅಪಾಯ ಸಂಭವಿಸುವ ಸಾಧ್ಯತೆಯಿದೆ. ರಸ್ತೆಯಿಂದ ಸ್ವಲ್ಪ ಹಿಂಭಾಗದಲ್ಲಿ ನಿರ್ಮಿಸಿರುವ ಮಳಿಗೆಗಳಿಗೆ ಗ್ರಾಹಕರ ಕೊರತೆಯಿದ್ದು ಬಂದ್ ಆಗಿವೆ. ಅಲ್ಲಿಗೆ ರಾತ್ರಿವೇಳೆ ಪುಂಡರು ಬಂದು ಗಾಂಜಾ ಹಾಗೂ ಮದ್ಯ ಸೇವಿಸುತ್ತಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ.

‘ಹೂವಿನ ವ್ಯಾಪಾರದಲ್ಲಿ ಲಾಭ ಕಡಿಮೆ. ಹೂವುಗಳು ಬಾಡುತ್ತವೆ. ಮರುದಿವಸ ಮಾರಾಟ ನಡೆಸುವುದು ಕಷ್ಟ. ಜತೆಗೆ, ಮಾರುಕಟ್ಟೆ ಸಮಸ್ಯೆ ಬೇರೆ. ಇಷ್ಟೊಂದು ಕಷ್ಟ ಬೇಡವೆಂದು ಹಲವರು ಬೇರೆ ವೃತ್ತಿಗೆ ಹೋಗಿದ್ದಾರೆ’ ಎಂದು ಮಾರಾಟಗಾರ ರಾಮೋಜಿರಾವ್ ಹೇಳಿದರು

ಹುಸಿಯಾದ ಭರವಸೆ: ಹಿಂದಿನ ಸರ್ಕಾರ ಅವಧಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಎಸ್.ಆರ್. ವಿಶ್ವನಾಥ್ ಅವರು ಡಿಸೆಂಬರ್ ಒಳಗೆ ಕಟ್ಟಡ ಲೋಕಾರ್ಪಣೆ ಮಾಡಲಾಗುವುದು ಎಂದು ಭರವಸೆ ನೀಡಿದ್ದರು. ಅವರ ಹೇಳಿಕೆ ಗಡುವು ಮುಗಿದು ಏಳು ತಿಂಗಳು ಕಳೆದಿದೆ. ಆದರೆ, ಶೇ 50ರಷ್ಟು ಕಾಮಗಾರಿಯೂ ಪೂರ್ಣಗೊಂಡಿಲ್ಲ. ಕಾಂಗ್ರೆಸ್ ಸರ್ಕಾರವಾದರೂ ನಮ್ಮ ಬೇಡಿಕೆ ಈಡೇರಿಸಲಿ ಎಂದು ಸಂಘದ ಪದಾಧಿಕಾರಿಗಳು ಆಗ್ರಹಿಸಿದರು.

ಮಾರುಕಟ್ಟೆ ಅವ್ಯವಸ್ಥೆ ಕುರಿತು ಗಮನ ಸೆಳೆಯಲು ಕ್ಷೇತ್ರದ ಶಾಸಕ ಸಿ.ಎನ್.ಅಶ್ವತ್ಥ ನಾರಾಯಣ್ ಅವರನ್ನು ಸಂಪರ್ಕಿಸಿದರೂ ಅವರು ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

ಮಲ್ಲೇಶ್ವರದ ಸಂಪಿಗೆ ರಸ್ತೆಬದಿಯಲ್ಲೇ ನಡೆಯುತ್ತಿರುವ ಹೂವಿನ ಮಾರುಕಟ್ಟೆ.



ಎಂಟು ವರ್ಷಗಳಿಂದ ಹೂವಿನ ಮಾರುಕಟ್ಟೆ ಕಾಮಗಾರಿ ನಡೆಯುತ್ತಿದ್ದರೂ ಪೂರ್ಣಗೊಂಡಿಲ್ಲ —ಪ್ರಜಾವಾಣಿ ಚಿತ್ರಗಳು

ರಸ್ತೆಯ ಹಿಂಬದಿಯಲ್ಲಿ ನಿರ್ಮಿಸಿರುವ ತಾತ್ಕಾಲಿಕ ಶೆಡ್‌ಗಳಿಗೆ ಬೀಗ ಬಿದ್ದಿದೆ.

ಮಾರುಕಟ್ಟೆ ಕಷ್ಟ ಸಿಕ್ಕಾಪಟ್ಟೆ

ಹೂವಿಗೂ ಕಳ್ಳರ ಕಾಟ

‘ತಾತ್ಕಾಲಿಕ ಮಳಿಗೆಗಳಿಗೆ ಬಾಗಿಲು ನಿರ್ಮಿಸಿಲ್ಲ. ರಾತ್ರಿ ವೇಳೆ ಕಳ್ಳರು ಹೂವು ಹಾಗೂ ಬ್ಯಾಟರಿ ಕಳವು ಮಾಡಿ ಪರಾರಿ ಆಗುತ್ತಿದ್ದಾರೆ. ಪೊಲೀಸರಿಗೆ ದೂರು ನೀಡಲಾಗಿತ್ತು. ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದರು. ಆದರೆ, ಕಳ್ಳರು ಪತ್ತೆಯಾಗುತ್ತಿಲ್ಲ. ಈಗ ಸ್ವಲ್ಪ ದೂರದಲ್ಲಿ ಸಿಸಿ ಟಿವಿ ಕ್ಯಾಮೆರಾ ಅಳವಡಿಸಲಾಗಿದೆ’ ಎಂದು ಹೂವು ವ್ಯಾಪಾರಸ್ಥರು ಹೇಳುತ್ತಾರೆ.

ಬಹುಮಹಡಿ ಕಟ್ಟಡದಲ್ಲಿ ಏನಿರಲಿದೆ?

- ಕಟ್ಟಡದ ಎರಡು ನೆಲಮಹಡಿಗಳಲ್ಲಿ ಸಾರ್ವಜನಿಕ ವಾಹನ ನಿಲುಗಡೆ ವ್ಯವಸ್ಥೆ ಕಲ್ಪಿಸಲು ಉದ್ದೇಶಿಸಲಾಗಿದೆ.
- ಮೊದಲ ಮಹಡಿಯಲ್ಲಿ ಹೂವು-ಹಣ್ಣು ವ್ಯಾಪಾರಿಗಳಿಗೆ 181 ಮಳಿಗೆ ನಿರ್ಮಿಸಲು ತೀರ್ಮಾನಿಸಲಾಗಿದೆ.
- 2ರಿಂದ 4ನೇ ಮಹಡಿವರೆಗೆ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಯೋಜನೆ ರೂಪಿಸಲಾಗಿದೆ.
- ಮೊದಲ ಮಹಡಿಯಿಂದ ನಾಲ್ಕನೇ ಮಹಡಿವರೆಗೆ ನಿರ್ಮಾಣವಾಗಲಿರುವ ಮಳಿಗೆಗಳು ಬಿಡಿಎಗೆ ಸೇರಿರುತ್ತವೆ. ಇವುಗಳನ್ನು ಬಾಡಿಗೆ ಅಥವಾ ಗುತ್ತಿಗೆ ಆಧಾರದಲ್ಲಿ ಮಾಲ್‌ಗಳಿಗೆ ಅಥವಾ ಇತರ ವಾಣಿಜ್ಯ ಚಟುವಟಿಕೆಗಳಿಗೆ ನೀಡಲು ಬಿಡಿಎ ಉದ್ದೇಶಿಸಿದೆ.

ವ್ಯಾಪಾರಿಗಳ ಅಳಲು

ಕಾಮಗಾರಿ ಪೂರ್ಣಗೊಳಿಸಿ ಮಳಿಗೆಗಳನ್ನು ಹಸ್ತಾಂತರಿಸುವಂತೆ ಬಿಡಿಎ ಹಾಗೂ ಬಿಬಿಎಂಪಿ ಕಚೇರಿಗೆ ಅಲೆದು ಸಾಕಾಗಿದೆ. ಮಾರುಕಟ್ಟೆ ಬಳಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸುವಂತೆ ಸ್ಥಳೀಯ ಶಾಸಕರಿಗೆ ಮನವಿ ಸಲ್ಲಿಸಲಾಗಿತ್ತು. ಇದಕ್ಕೆ ಮನ್ನಣೆ ಸಿಕ್ಕಿಲ್ಲ. ಸುಭದ್ರ ಕಟ್ಟಡ ತೆರವುಗೊಳಿಸಿ ವ್ಯಾಪಾರಿಗಳನ್ನು ಬೀದಿಗೆ ತಳ್ಳಿಬಿಟ್ಟರು.

– **ಲಕ್ಷ್ಮಣ್,** ಅಧ್ಯಕ್ಷ, ಹೂವು ಹಾಗೂ ಹಣ್ಣಿನ ವ್ಯಾಪಾರಿಗಳ ಸಂಘ



ಮಳೆಗಾಲದಲ್ಲಿ ರಸ್ತೆಯಲ್ಲಿ ಹರಿಯುವ ನೀರು ಮಳಿಗೆ ಸೇರುತ್ತಿತ್ತು. ಸ್ವಂತ ಖರ್ಚಿನಲ್ಲಿ ನೀರು ಒಳ ಪ್ರವೇಶಿಸದಂತೆ ಕಟ್ಟೆ ನಿರ್ಮಿಸಿಕೊಂಡಿದ್ದೇವೆ. ರಸ್ತೆಯ ದೂಳು ಅಂಗಡಿಯ ಒಳಕ್ಕೇ ಬರುತ್ತದೆ. ಮಧ್ಯಾಹ್ನ ಊಟ ಮಾಡುವುದಕ್ಕೂ ತೊಂದರೆಯಾಗಿದೆ.

– **ರಾಮೋಜಿರಾವ್**

ತಾತ್ಕಾಲಿಕ ಶೆಡ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ. ಮನೆಯಿಂದಲೇ ಬ್ಯಾಟರಿ ಚಾರ್ಜ್ ಮಾಡಿಕೊಂಡು ಬರುತ್ತೇವೆ. ಆಕಸ್ಮಿಕವಾಗಿ ಬ್ಯಾಟರಿಯನ್ನು ರಾತ್ರಿ ಬಿಟ್ಟು ಹೋದರೆ ಅವುಗಳು ಕಳ್ಳರ ಪಾಲಾಗಿರುತ್ತವೆ.

– **ಮುನಿರತ್ನಮ್ಮ**

ಹೂವಿನ ವ್ಯಾಪಾರವನ್ನೇ ನಂಬಿ ಬದುಕುತ್ತಿದ್ದೇವೆ. ಆದಷ್ಟು ಬೇಗನೇ ಬಹುಮಹಡಿ ಕಟ್ಟಡ ನಿರ್ಮಿಸಿಕೊಡಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೇ ಇಲ್ಲಿ ವ್ಯಾಪಾರ ನಡೆಸುತ್ತಾರೆ. ಅವರಿಗೆ ಶೌಚಾಲಯ ನಿರ್ಮಿಸಿಕೊಟ್ಟಿಲ್ಲ. ದೂರದ ಬಿಜೆಪಿ ಕಚೇರಿ ಬಳಿಯಿರುವ ಶೌಚಾಲಯಕ್ಕೆ ತೆರಳಬೇಕು. ಅಲ್ಲಿಗೆ ಹೋಗಲು ಸಾಕಷ್ಟು ಸಮಯ ಹಿಡಿಯುತ್ತದೆ. ಆ ವೇಳೆ ಹತ್ತಾರು ಗ್ರಾಹಕರು ಬಂದು ಹೋಗಿರುತ್ತಾರೆ. ಇತ್ತ ವ್ಯಾಪಾರವೂ ನಷ್ಟವಾಗುತ್ತಿದೆ.

– **ಕಲಾ**

ನಿರ್ಮಾಣ ಹಂತದ ಕಟ್ಟಡದಲ್ಲಿ ಕಿರಿದಾದ ಮಳಿಗೆ ನಿರ್ಮಿಸಲಾಗುತ್ತಿದೆ. ಇದರಿಂದ ವ್ಯಾಪಾರಕ್ಕೆ ತೊಂದರೆಯಾಗುವ ಸಾಧ್ಯತೆಯಿದೆ. ವಿಸ್ತೀರ್ಣ ದೊಡ್ಡದು ಮಾಡಬೇಕು.

– **ಸುನಿಲ್**

ನಗರದಲ್ಲಿ ಇಂದು

ಅಂತರ ಕಾಲೇಜು ಸಾಂಸ್ಕೃತಿಕ ಹಬ್ಬ ‘ಕಲಾ ಪರ್ವ-2023’: ಸಾಂಸ್ಕೃತಿಕ ಹಬ್ಬ ಶೀರ್ಷಿಕೆ ಅನಾವರಣ: ರಾಜ್ ಬಿ. ಶೆಟ್ಟಿ, ಅತಿಥಿಗಳು: ಬಿ.ಎಸ್. ರಾಗಿಣಿ ನಾರಾಯಣ್, ಅರ್ಚನಾ ಕೊಟ್ಟಿಗೆ, ದಯಾನಂದ್ ಪೈ, ಅಬಿರಾಮ್ ಶರ್ಮಾ, ರವಿ ವೆಂಕಟೇಸಂ, ಸ್ಟ್ಯಾಂಡ್ ಅಪ್ ಕಾಮಿಡಿ: ಅಕ್ಷಯ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಎಸ್ ಮಹಿಳಾ ಮಹಾವಿದ್ಯಾಲಯ, ಬಸವನಗುಡಿ, ಬೆಳಿಗ್ಗೆ 9.30ರಿಂದ

ಹರಿನಾಮ ಸಂಕೀರ್ತನೆ: ಗಾಯನ: ಸುಷ್ಮಾ ಜೋಯಿಸ್ ಸಿಂಧನೂರು, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

‘ಶ್ರೀಕೃಷ್ಣ ಸಂಧಾನ’ ನಾಟಕ ಪ್ರದರ್ಶನ: ರಚನೆ: ವಿ.ಎನ್. ಅಶ್ವತ್ಥ್, ನಿರ್ದೇಶನ: ಪೋಟೊ ವೆಂಕಿ, ಅತಿಥಿಗಳು: ಮಂಜುನಾಥ್, ಮುನಿರಾಜ್, ನಂದ ಕುಮಾರ್, ಟಿ.ಎನ್. ಮಂಜುನಾಥ್, ಆಯೋಜನೆ: ಸಿಂಧು ಭೈರವಿ ಕಲಾ ತಂಡ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30ರಿಂದ

‘ಬೀಚಿ ನಗೆಯ ದೊರೆಯಷ್ಟೇ ಅಲ್ಲ ಒಬ್ಬ ದಾರ್ಶನಿಕ’ ಕುರಿತು ಉಪನ್ಯಾಸ: ಎಸ್. ವೆಂಕಟೇಶ್ ಕೊಟ್ಟೂರು, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: ‘ವಚನಕಾರರ ಮನೋವಿಶ್ಲೇಷಣೆ’ ಕುರಿತ ಉಪನ್ಯಾಸ: ವರದರಾಜ ಐಯ್ಯಂಗಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಹರಿದಾಸ ಝೇಂಕಾರ: ಗಾಯನ: ಪೂಜಾ ತಾಯೂರ್, ಪಿಟೀಲು: ಬಳ್ಳಾರಿ ಸುರೇಶ್, ಮೃದಂಗ: ಮುರಳಿ ನಾರಾಯಣರಾವ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, ಸಂಜೆ 7.30

‘ಮಾಯಾ ಉತ್ಸವ’ ಆಗಸ್ಟ್ 6ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕೈಮಗ್ಗ ದಿನಾಚರಣೆಯ ಅಂಗವಾಗಿ ಮಹಿಳಾ ಮಾಲೀಕತ್ವದ ಬೆಂಗಳೂರಿನ ‘ಮಾಯಾ’ ಸಂಸ್ಥೆಯಿಂದ ‘ಮಾಯಾ ಉತ್ಸವ’ವನ್ನು ಆ.6ರಂದು ಬೆಳಿಗ್ಗೆ 10ರಿಂದ ಬಸವನಗುಡಿಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಭಾರತೀಯ ದೇವಾಲಯದ ಇತಿಹಾಸ ತಜ್ಞೆ ಚಿತ್ರ ಮಾಧವನ್ ಅವರು ‘ಕಾಂಜಿವರಂ ಮೋಟಿಫ್‌ಗಳು, ದೇವಸ್ಥಾನಗಳ ವಾಸ್ತುಶಿಲ್ಪಗಳ ಸ್ಫೂರ್ತಿ’ ಬಗ್ಗೆ ಶ್ರವ್ಯ, ದೃಶ್ಯ ಪ್ರಸ್ತುತಿ ಮಾಡಲಿದ್ದಾರೆ. ಸಂಧ್ಯಾ ರಾವ್ ಉಡುಪ ಅವರ ಭರತನಾಟ್ಯ ಮತ್ತು ಅನುಶ್ರೀ ಪದ್ಮನಾಭ ಅವರ ಒಡಿಶಿ ಜುಗಲ್‌ಬಂದಿ ನೃತ್ಯ ಪ್ರದರ್ಶನಗೊಳ್ಳಲಿದೆ ಎಂದು ಮಾಯಾ ಸಂಸ್ಥಾಪಕಿ ಸ್ಮಿತಾ ಶ್ರೀನಾಥ್ ಹೇಳಿದ್ದಾರೆ.

ಮಾಹಿತಿ ಮತ್ತು ನೋಂದಣಿಗೆ ಮೊಬೈಲ್: 99023 56001 ಇ ಮೇಲ್: weavemaya@gmail.com ಸಂಪರ್ಕಿಸಬಹುದು.

ಉಚಿತ ಜ್ಯೋತಿಷ ತರಗತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಯೋತಿಷ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯಾದ ಜ್ಞಾನಜ್ಯೋತಿ ಜ್ಯೋತಿಷ ವಿದ್ಯಾ ಕೇಂದ್ರ ಪ್ರಸಕ್ತ ಸಾಲಿನ ಜ್ಯೋತಿಷ, ವಾಸ್ತು, ಹಸ್ತ ಸಾಮುದ್ರಿಕಾ ತರಗತಿಗಳನ್ನು ಜುಲೈ 30 ರಿಂದ ಉಚಿತವಾಗಿ ನಡೆಸಲಿದೆ.

ತರಗತಿಗಳು ಪ್ರತಿ ಭಾನುವಾರ 11.00 ರಿಂದ 2.00 ಗಂಟೆಯವರೆಗೆ, ಬಿಟಿಎಂ ಬಡಾವಣೆಯ ಬಸ್ ನಿಲ್ದಾಣದ ಸಮೀಪ ಇರುವ ವಿದ್ಯಾಜ್ಯೋತಿ ಶಾಲೆ, 3ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, 2ನೇ ಹಂತ, ಬಿಟಿಎಂ ಬಡಾವಣೆ, ಬೆಂಗಳೂರು-560068ನಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಅಧ್ಯಕ್ಷ ಡಾ. ಆರ್.ಕೃಷ್ಣಕುಮಾರ್ ಮೊಬೈಲ್ ಸಂಖ್ಯೆ 9945523296 ರಲ್ಲಿ ಸಂಪರ್ಕಿಸಿ.

ಸನ್ಮಾನ

ಬಸವನಗುಡಿ ಬ್ರಾಹ್ಮಣ ಸಂಘವು ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಧಾಳಿ ಲಕ್ಷ್ಮಿನರಸಿಂಹ ಭಟ್ಟ ಅವರಿಗೆ ಸನ್ಮಾನ ಮಾಡಲಾಯಿತು. ಸಂಘದ ಅಧ್ಯಕ್ಷೆ ಶಾರದಾ ಸುಬ್ರಮಣ್ಯ, ಐಎಎಸ್ ಅಧಿಕಾರಿ ಕೆ.ಎನ್. ರಮೇಶ್, ಶಾಸಕ ರವಿ ಸುಬ್ರಮಣ್ಯ, ಕರ್ನಾಟಕ ರಾಜ್ಯ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್, ವಿದ್ಯಾರ್ಥಿ ಭವನ ಹೋಟೆಲ್‌ನ ಅರುಣ್ ಅಡಿಗ, ಆಡನ್ ವಿದ್ಯಾ ಸಂಸ್ಥೆಯ ರಾಮಣ್ಣ ಹಾಗೂ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಎಲ್.ಎಸ್. ಕುಮಾರ್ ಇದ್ದಾರೆ

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಿಗಳರ (ಅಗ್ನಿವಂಶ ಕ್ಷತ್ರಿಯ) ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2023ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 90ಕ್ಕೂ ಹೆಚ್ಚು ಅಂಕಗಳಿಸಿದ ತಿಗಳ ಜನಾಂಗದ (ಅಗ್ನಿವಂಶ ಕ್ಷತ್ರಿಯ) ವಿದ್ಯಾರ್ಥಿಗಳು ಆಗಸ್ಟ್ 20ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10, ಮಾಹಿತಿಗೆ: 080-23200608ಗೆ ಸಂಪರ್ಕಿಸಬಹುದು.

ವಾರ್ಡ್ ಕಚೇರಿಗಳಲ್ಲಿ ‘ಗೃಹಲಕ್ಷ್ಮಿ’ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ‘ಗೃಹಲಕ್ಷ್ಮಿ’ ಯೋಜನೆ ಜಾರಿಗೊಳಿಸಲು ಎಲ್ಲಾ ವಾರ್ಡ್ ಕಚೇರಿಗಳಲ್ಲಿ ನೋಂದಣಿ ವ್ಯವಸ್ಥೆ ಮಾಡಲಾಗಿದೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಪಾಲಿಕೆಯ ಎಲ್ಲಾ ವಾರ್ಡ್ ಕಚೇರಿಗಳಲ್ಲಿ ಸಹಾಯ ಕೇಂದ್ರಗಳನ್ನು ತೆರೆದು ‘ಗೃಹಲಕ್ಷ್ಮಿ’ ಯೋಜನೆ ಫಲಾನುಭವಿಗಳು ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು. ಈ ನಿಟ್ಟಿನಲ್ಲಿ ವಲಯ ಮಟ್ಟದ ಅಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜೊತೆ ಸಮನ್ವಯ ಸಾಧಿಸಬೇಕು. ಕಂದಾಯ ವಿಭಾಗದ ಉಪ ಆಯುಕ್ತರಾದ ಲಕ್ಷ್ಮೀದೇವಿ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ ಎಂದು ವರ್ಚ್ಯುಯಲ್ ಸಭೆಯಲ್ಲಿ ವಲಯ ಆಯುಕ್ತರಿಗೆ ಸೂಚಿಸಿದರು.

ಯೋಜನೆಗೆ ಅರ್ಜಿ ಸಲ್ಲಿಸುವ ಸಂಬಂಧ ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಬೇಕು. ಆನ್‌ಲೈನ್ ಮೂಲಕ ಅರ್ಜಿ ನೋಂದಾಯಿಸಿಕೊಳ್ಳುವ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ನೀಡಲು ತರಬೇತಿ ನೀಡಬೇಕು ಎಂದರು.

ಪ್ರತಿ ವಾರ್ಡ್ ಕಚೇರಿ ಮುಂಭಾಗವೂ ‘ಗೃಹಲಕ್ಷ್ಮಿ’ ಯೋಜನೆ ನೋಂದಣಿ ಕೇಂದ್ರ ಎಂಬ ಬ್ಯಾನರ್ ಅಳವಡಿಸಬೇಕು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಆಡಿಯೊ, ವಿಡಿಯೊ ಕ್ಲಿಪ್ಸ್ ಪಡೆದು ನಗರದ ಜನದಟ್ಟಣೆ ಪ್ರದೇಶ, ಕೊಳೆಗೇರಿಗಳಲ್ಲಿ ಹೆಚ್ಚಿನ ಪ್ರಚಾರ ನೀಡಬೇಕು. ಎಲ್ಲ ಫಲಾನುಭವಿಗಳು ನೋಂದಣಿ ಮಾಡಿಕೊಳ್ಳುವಂತೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವೆಬ್‌ಸೈಟ್‌ನಲ್ಲಿ ಮಾಹಿತಿ: ವಾರ್ಡ್ ಕಚೇರಿಗಳಲ್ಲಿ ಸಹಾಯ ಕೇಂದ್ರಗಳ ವಿಳಾಸ, ಇತರೆ ಮಾಹಿತಿಯನ್ನು ಪಾಲಿಕೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಅಧಿಕಾರಿಗಳಿಗೆ ತುಷಾರ್ ಗಿರಿನಾಥ್ ಆದೇಶಿಸಿದರು.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395

315 ವರ್ಕ್ ಅವೆನ್ಯೂ ಕ್ಯಾಂಪಸ್, ಅಸೆಂಟ್ ಬಿಲ್ಡಿಂಗ್, ನಂ.77, ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560095, ಕರ್ನಾಟಕ, ಭಾರತ.

ದೂರವಾಣಿ: + 91 80 6824 3333 / ಫ್ಯಾಕ್ಸ್: + 91 80 6824 3001

corporateaffairs@teamlease.com | https://group.teamlease.com/

ವಿಡಿಯೋ ಕಾನ್ಫರೆನ್ಸಿಂಗ್ ಅಥವಾ ಇತರ ಆಡಿಯೋ ವಿಷುಯಲ್ ಮಾರ್ಗಗಳ ಮೂಲಕ ನಡೆಸಲಾಗುವ ಟೀಂಲೀಸ್ ಸರ್ವೀಸಸ್ ಲಿಮಿಟೆಡ್‌ನ ಇಪ್ಪತ್ತಮೂರನೇ (23ನೇ) ವಾರ್ಷಿಕ ಸರ್ವಸದಸ್ಯರ ಸಭೆಗೆ ಸಂಬಂಧಿಸಿದ ಮಾಹಿತಿ

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್ (ಟೀಮ್‌ಲೀಸ್/ ಕಂಪನಿ)ಯು ತನ್ನ ಎಜಿಎಮ್‌ನ ಸೂಚನೆಯಲ್ಲಿ ಹೇಳಿರುವಂತಹ ವ್ಯವಹಾರವನ್ನು ನಡೆಸುವ ಸಲುವಾಗಿ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹಾಗೂ ಸೆಕ್ಯೂರಿಟೀಸ್ ಎಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಹೊರಡಿಸಿರುವ ಸುತ್ತೋಲೆಗಳಿಗೆ ಬದ್ಧವಾಗಿ ತನ್ನ ಇಪ್ಪತ್ತಮೂರನೇ (23ನೇ) ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಶುಕ್ರವಾರ, ಸೆಪ್ಟೆಂಬರ್ 15, 2023ರಂದು ಭಾ.ಕಾ. ಮಧ್ಯಾಹ್ನ 03:00 ಗಂಟೆಗೆ ವಿಡಿಯೋ ಕಾನ್ಫರೆನ್ಸಿಂಗ್ (ವಿ.ಸಿ.) ಅಥವಾ ಇತರ ಆಡಿಯೋ ವಿಷುಯಲ್ ಮಾರ್ಗಗಳ (ಓ.ಎ.ವಿ.ಎಮ್.) ಮೂಲಕ ನಡೆಸಲು ಉದ್ದೇಶಿಸುತ್ತಿದೆ ಎಂದು ಈ ಮೂಲಕ ಎಲ್ಲಾ ಭಾಗೀದಾರರಿಗೂ ಸೂಚನೆ ನೀಡಲಾಗುತ್ತಿದೆ.

ಸದರಿ ಸುತ್ತೋಲೆಗಳ ನಿಬಂಧನೆಗಳ ಅನುಸಾರ, ಆರ್ಥಿಕ ವರ್ಷ 22-23ರ ವಾರ್ಷಿಕ ವರದಿಯ ಜೊತೆಯಲ್ಲಿ ಕಂಪನಿಯ ಇಪ್ಪತ್ತಮೂರನೇ (23ನೇ) ವಾರ್ಷಿಕ ಸರ್ವಸದಸ್ಯರ ಸಭೆಯ ನೋಟೀಸನ್ನು, ಯಾವ ...

ದಿನಾಂಕ : ಜುಲೈ 26, 2023
ಸ್ಥಳ : ಬೆಂಗಳೂರು

(M. No. F10911)

ಪುರಸಭಾ ಕಾರ್ಯಾಲಯ, ಬಿಡದಿ

ಬಿಡದಿ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ-562109

ಸಂಖ್ಯೆ:ಪುಕಾಬಿ/ತಾಂ.ಶಾ-2/ಸಿಆರ್/ಟೆ.ಪ್ರ/06/2023-24 ದಿನಾಂಕ: 25-07-2023

ಟೆಂಡರ್ ಪ್ರಕಟಣೆ

(ಸ್ಟಾಂಡರ್ಡ್ ಡಾಕ್ಯುಮೆಂಟ್ KW-1 ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಬಿಡದಿ ಪುರಸಭಾ ವ್ಯಾಪ್ತಿಯಲ್ಲಿ 2023-24ನೇ ಸಾಲಿನ ಪುರಸಭೆ ಅನುದಾನದಡಿ ಪುರಸಭೆ ವ್ಯಾಪ್ತಿಯ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ 3 ಮತ್ತು ಮೇಲ್ದರ್ಜೆ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಪುರಸಭೆಯ ಅಭಿಯಂತರರನ್ನು ವಿಚಾರಿಸಬಹುದು. ಅಥವಾ ಪುರಸಭೆಯ ಅಂತರ್‌ಜಾಲದಲ್ಲಿ ಪಡೆಯಬಹುದು.

ಕ್ರ. ಸಂ.	ಕಾಮಗಾರಿಗಳ ವಿವರಗಳು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಟೆಂಡರ್ ಫಾರಂ ಮೊತ್ತ ರೂ. ಗಳಲ್ಲಿ	ಇ.ಎಂ.ಡಿ ಮೊತ್ತ ರೂ. ಗಳಲ್ಲಿ
1	ಬಿಡದಿ ಪುರಸಭೆ ವ್ಯಾಪ್ತಿಯ ವಾರ್ಡ್ ನಂ. 16ರ ಬಾನಂದೂರು ಗ್ರಾಮದ ಅಂಬೇಡ್ಕರ್ ಭವನದ ಹತ್ತಿರ ಕಲ್ವರ್ಟ್ ನಿರ್ಮಾಣ ಕಾಮಗಾರಿ.	2.80	1000-00	7000-00

1. ಟೆಂಡರ್ ಫಾರಂಗಳನ್ನು ಪಡೆಯುವ ದಿನಾಂಕ: 28-07-2023 ಬೆಳಗ್ಗೆ 10-00 ಗಂಟೆಯಿಂದ
2. ಭರ್ತಿ ಮಾಡಿದ ಟೆಂಡರ್ ಫಾರಂನ್ನು ಸಲ್ಲಿಸುವ ಕೊನೆಯ ದಿನಾಂಕ: 12-08-2023 ಸಂಜೆ 5-30 ಗಂಟೆಯವರೆಗೆ.
3. ಟೆಂಡರ್‌ನ್ನು ತೆರೆಯುವ ದಿನಾಂಕ: 14-08-2023 ಬೆಳಗ್ಗೆ 11-00 ಗಂಟೆಯವರೆಗೆ.

ಸಹಿ/- ಆಡಳಿತಾಧಿಕಾರಿಗಳು, ಪುರಸಭೆ, ಬಿಡದಿ
ಸಹಿ/- ಮುಖ್ಯಾಧಿಕಾರಿ, ಪುರಸಭೆ, ಬಿಡದಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಮುಖ್ಯ ವೈದ್ಯಾಧಿಕಾರಿಗಳ ಕಚೇರಿ, ಸಾರ್ವಜನಿಕ ಆಸ್ಪತ್ರೆ, ನೆಲಮಂಗಲ ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂಖ್ಯೆ: ಸಾಆನೆ/20/2022-23 ದಿನಾಂಕ: 26.07.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ, ನೆಲಮಂಗಲ ಇಲ್ಲಿಗೆ **2023-24ನೇ ಸಾಲಿಗೆ ನಾನ್‌ಕ್ಲಿನಿಕಲ್ ಮತ್ತು ಗ್ರೂಪ್-ಡಿ ನೌಕರರ ಹೊರಗುತ್ತಿಗೆ ಸೇವೆಯನ್ನು ಒದಗಿಸುವ ಸಂಬಂಧ** ಅಧಿಕೃತ ಸಂಸ್ಥೆದಾರರಿಂದ ಕಾರ್ಯಗತ ಮಾಡಲು ದ್ವಿ-ಲಕೋಟೆ ಪದ್ಧತಿ ಅನ್ವಯ ಕರ್ನಾಟಕ ಪಾರದರ್ಶಕ ನಿಯಮ 1999-2000 ರಂತೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

ಅರ್ಹ ಅಧಿಕೃತ ಸಂಸ್ಥೆದಾರರು ಖಾಲಿ ಟೆಂಡರ್ ಫಾರಂಗಳನ್ನು ದಿನಾಂಕ: **27.07.2023 ರಿಂದ ದಿನಾಂಕ: 10.08.2023ರ ಅಪರಾಹ್ನ 4.00 ಗಂಟೆಯೊಳಗೆ** ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದ್ವಿ-ಲಕೋಟೆ ಪದ್ಧತಿಯಂತೆ ಸಲ್ಲಿಸುವುದು.

ಅರ್ಹ ಸಂಸ್ಥೆಗಳು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **10.08.2023ರಂದು ಅಪರಾಹ್ನ 4.00 ಗಂಟೆಯೊಳಗಾಗಿ** ಅರ್ಜಿ ಸಲ್ಲಿಸಬಹುದಾಗಿದ್ದು (ಅಪ್‌ಲೋಡ್), ಟೆಂಡರ್ ಫಾರಂನ ಬೆಲೆ ರೂ. 1000/- (ಹಿಂದಿರುಗಿಸಲಾಗುವುದಿಲ್ಲ).

ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **14.08.2023 ಅಪರಾಹ್ನ 4.30 ಗಂಟೆ** ಮತ್ತು ಆರ್ಥಿಕ ಲಕೋಟೆ ತೆರೆಯುವ ದಿನಾಂಕ: **17.08.2023 ಅಪರಾಹ್ನ 12.00 ಗಂಟೆಗೆ.** ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **www.kppp.karnataka.gov.in** ಮೂಲಕ ಅಥವಾ ಆಸ್ಪತ್ರೆಯ ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು

DIPR/CP/676/Yakshi/2023-24

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ.: SBC-GSU-ENGG-2023-18

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ದಂಡು –	ರೂ. 16,31,84,044.78

ವೈಟ್‌ಫೀಲ್ಡ್ ಚತುಷ್ಪಥೀಕರಣ: 1) ಬೈಯಪ್ಪನಹಳ್ಳಿ ಯಾರ್ಡ್‌ನ ಚೈ. 344886.750 ರಲ್ಲಿ ಪ್ರಸ್ತುತವಿರುವ ಫುಟ್ ಓವರ್‌ಬ್ರಿಡ್ಜ್‌ಅನ್ನು ಕಿತ್ತುಹಾಕುವುದು, ಚೈ. 344876.000 ರಲ್ಲಿ ಗ್ಯಾಂಗ್‌ವೇ-1 ಮತ್ತು ಚೈ. 344795.000 ರಲ್ಲಿ ಗ್ಯಾಂಗ್‌ವೇ-2 ರಲ್ಲಿ ಬ್ರಿಡ್ಜ್ ಸಂ. 835ಬಿ ಯ ಫುಟ್ ಓವರ್ ಬ್ರಿಡ್ಜ್‌ನ ಮರುನಿರ್ಮಾಣ ಕಾರ್ಯ 2) ಬೈಯಪ್ಪನಹಳ್ಳಿ ಯಾರ್ಡ್‌ನಲ್ಲಿ ಗ್ಯಾಂಗ್‌ವೇಯೊಂದಿಗೆ ಚೈ. 344487 ರಲ್ಲಿ ಫುಟ್ ಓವರ್ ಬ್ರಿಡ್ಜ್‌ನ ನಿರ್ಮಾಣ ಕಾರ್ಯ. 3) ಬೈಯಪ್ಪನಹಳ್ಳಿ ಯಾರ್ಡ್‌ನಲ್ಲಿ ಈಗಿರುವ ಪ್ಲಾಟ್‌ಫಾರ್ಮ್ ಅಡಗುತಾಣವನ್ನು ಕಿತ್ತುಹಾಕುವುದು ಮತ್ತು ಪುನರ್ ನಿರ್ಮಾಣ ಮಾಡುವುದು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **09.08.2023, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಖ್ಯ ಯೋಜನಾ ವ್ಯವಸ್ಥಾಪಕರು, ಗತಿ ಶಕ್ತಿ ಬೆಂಗಳೂರು

PUB/265/AAD/PRB/SWR/2022-23

S.W.Railways | SWRRLY | SWRRLY

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರ್ ಸೂಚನೆ ಸಂ. 18/2023 ದಿನಾಂಕ: 21.07.2023

ಸಂಕ್ಷಿಪ್ತ ವಿವರಣೆ: ಲಗತ್ತಿಸಲಾದ ವಿವರವಾದ ತಾಂತ್ರಿಕ ವಿವರಣೆಯ ಪ್ರಕಾರ 55 "ಫುಲ್ ಎಚ್‌ಡಿ, ಎಚ್‌ಡಿಎಂಐ/ಡಿವಿಐ ಕನೆಕ್ಟಿವಿಟಿ, ಇನ್ ಬಿಲ್ಟ್ ಸ್ಪೀಕರ್ ಇತ್ಯಾದಿ ಹೊಂದಿರುವ ಕೈಗಾರಿಕಾ ದರ್ಜೆಯ ಆಪರೇಟರ್ ವಿಡಿಯು ...

PUB/261/AAV/PRB/SWR/2023-24

S.W.Railways | SWRRLY | SWRRLY

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395

ನೋಂದಾಯಿತ ಕಚೇರಿ: 315 ವರ್ಕ್ ಅವೆನ್ಯೂ ಕ್ಯಾಂಪಸ್, ಅಸೆಂಟ್ ಬಿಲ್ಡಿಂಗ್, ನಂ.77, ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560095, ಕರ್ನಾಟಕ, ಭಾರತ.

E-MAIL: corporateaffairs@teamlease.com | WEBSITE: https://group.teamlease.com/

30ನೇ ಜೂನ್ 2023ಕ್ಕೆ ಕೊನೆಯಾದ ತ್ರೈಮಾಸಿಕಕ್ಕೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕೆಗಳು ಲಕ್ಷ ರೂಪಾಯಿಗಳಲ್ಲಿ)

ವಿವರಗಳು	ಏಕಿಕೃತ		ಕ್ರೋಢೀಕೃತ	
	30.06.2023ಕ್ಕೆ ಕೊನೆಯಾದ 3 ತಿಂಗಳಿಗೆ	ಹಿಂದಿನ ಅವಧಿಯ 3 ತಿಂಗಳಿಗೆ ಕೊನೆಯಾದ 30.06.2022ಕ್ಕೆ	30.06.2023ಕ್ಕೆ ಕೊನೆಯಾದ 3 ತಿಂಗಳಿಗೆ	ಹಿಂದಿನ ಅವಧಿಯ 3 ತಿಂಗಳಿಗೆ ಕೊನೆಯಾದ 30.06.2022ಕ್ಕೆ
	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
ಕಾರ್ಯಾಚರಣೆಗಳಿಂದ ಒಟ್ಟು ಆದಾಯ	1,97,198.97	1,63,039.14	2,18,564.46	1,89,165.32
ಸದರಿ ಅವಧಿಗೆ ನಿವ್ವಳ ಲಾಭ / (ನಷ್ಟ) (ತೆರಿಗೆಗೆ ಮುನ್ನ, ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು)	2,798.93	2,325.48	2,582.77	2,788.06
ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ ಅಥವಾ ಅಸಾಧಾರಣ ಐಟಂಗಳ ನಂತರ)	2,740.52	2,329.98	2,575.92	2,652.12
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)]	2,798.93	2,318.85	2,571.30	2,653.87
ಪೇಯ್ಡ್-ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	1,676.89	1,709.68	1,676.89	1,709.68
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)-ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ	76,037.97	66,141.89	79,052.79	67,611.33
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕೀಕರಣಗೊಂಡಿಲ್ಲ)				
(ಎ) ಮೂಲ (ರೂ.)	16.12	13.63	15.53	15.51
(ಬಿ) ಡೈಲ್ಯೂಟೆಡ್ (ರೂ.)	16.12	13.63	15.53	15.51

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, 30ನೇ ಜೂನ್, 2023ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಅಪರಿಶೋಧಿತ ಏಕಿಕೃತ ಮತ್ತು ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (https://group.teamlease.com/) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ 30ನೇ ಜೂನ್, 2023ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಲಿಯು 26ನೇ ಜುಲೈ, 2023ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ದಿನಾಂಕ: 26ನೇ ಜುಲೈ, 2023
ಸ್ಥಳ: ಬೆಂಗಳೂರು

ಟೀಂಲೀಸ್ ಸರ್ವೀಸಸ್ ಲಿಮಿಟೆಡ್‌ನ ನಿರ್ದೇಶಕ ಮಂಡಲಿಗಾಗಿ, ಮತ್ತು ಅದರ ಪರವಾಗಿ
ಸಹಿ/-
ಅಶೋಕ್ ಕುಮಾರ್ ನೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814

ಸರಿತಾಗೆ ಬೆಳ್ಳಿ ಪದಕ

ಮಂಗಳೂರು: ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಮಾಡಿರುವ ಗಮನಾರ್ಹ ಸಾಧನೆಗಾಗಿ ಇಂಗ್ಲೆಂಡ್‌ನ ರಾಜ ಚಾರ್ಲ್ಸ್‌ನ ಸಹೋದರಿ ರಾಜಕುಮಾರಿ ಆ್ಯನ್ ಅವರ ಹೆಸರಿನಲ್ಲಿ ನೀಡುವ ಎಚ್‌ಆರ್‌ಎಚ್ (ಹರ್ ರಾಯಲ್ ಹೈನೆಸ್) ಬೆಳ್ಳಿ ಪದಕಕ್ಕೆ ಮಂಗಳೂರು ಮೂಲದ ಸರಿತಾ ಅರುಣ್ ಕುಮಾರ್ ಆಯ್ಕೆಯಾಗಿದ್ದಾರೆ.

ಸರಿತಾ ಅವರು ಐಬಿಎಂ ಸಂಸ್ಥೆಯ ಉದ್ಯೋಗಿ. ಐಟಿ ಸೆಕ್ಯುರಿಟಿ ತಜ್ಞೆಯಾಗಿರುವ ಅವರು, ರಕ್ಷಣೆ ಹಾಗೂ ಹಣಕಾಸು ಕ್ಷೇತ್ರದಲ್ಲಿ ಬಳಸುವ ತಂತ್ರಜ್ಞಾನದ ರಕ್ಷಣೆಗೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಈ ಗೌರವ ನೀಡಲಾಗಿದೆ.

‘ಫ್ರೀಡಂ ಆಯಿಲ್’ ಸಹಯೋಗದಲ್ಲಿ ಕಾರ್ಯಕ್ರಮ

ಜುಲೈ 29ಕ್ಕೆ ಭೂಮಿಕಾ ಕ್ಲಬ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ನ ‘ಭೂಮಿಕಾ ಕ್ಲಬ್’ ವೇದಿಕೆಯು ಜುಲೈ 29ರಂದು 7ನೇ ಆವೃತ್ತಿಯ ಕಾರ್ಯಕ್ರಮ ಹಮ್ಮಿಕೊಂಡಿದೆ.

‘ಫ್ರೀಡಂ ಆಯಿಲ್’ ಸಹಯೋಗದಲ್ಲಿ ಬನಶಂಕರಿ 2ನೇ ಹಂತದ 27ನೇ ಅಡ್ಡರಸ್ತೆಯಲ್ಲಿ ಇರುವ ಹೋಟೆಲ್ ಪೈ ವಿಸ್ಟಾದಲ್ಲಿ ಮಧ್ಯಾಹ್ನ 2.30ಕ್ಕೆ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮವನ್ನು ಭಾವನಾ ರಾವ್ ಉದ್ಘಾಟಿಸಲಿದ್ದಾರೆ. ಸೌಂಡ್ ಹೀಲಿಂಗ್ ಗೋಷ್ಠಿಯನ್ನು ಶಕ್ತಿ ನಡೆಸಿಕೊಡಲಿದ್ದಾರೆ. ಆರೋಗ್ಯಕರ ಅಡುಗೆ ಶೋವನ್ನು ಷೆಫ್ ಆದರ್ಶ್ ತತ್ಪತಿ ನಡೆಸಿಕೊಡುವರು. ಮಿಮಿಕ್ರಿ ಗೋಪಿ ಅವರಿಂದ ಸ್ಟ್ಯಾಂಡಪ್ ಕಾಮಿಡಿ ನಡೆಯಲಿದೆ.

ಹೊಸ ವಿಷಯಗಳನ್ನು ಅನ್ವೇಷಿಸಲು, ಸಮಾನ ಮನಸ್ಕ ಸ್ನೇಹಿತರನ್ನು ಆಯ್ಕೆ ಮಾಡಿಕೊಳ್ಳಲು, ಸೃಜನಶೀಲತೆ ಪ್ರದರ್ಶಿಸಲು, ಆರೋಗ್ಯ ಮತ್ತು ಕ್ಷೇಮದ ಜಗತ್ತಿನಲ್ಲಿ ಧುಮುಕಲು ಸಹಾಯ ಮಾಡುವ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದು.

ಕಾರ್ಯಕ್ರಮದಲ್ಲಿ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಹೆಸರು ನೋಂದಣಿ ಮಾಡಿಕೊಳ್ಳಬಹುದು.

ನೋಂದಣಿಗೆ bit.ly/bhumikaclubjuly ಸಂಪರ್ಕಿಸಿ.

ಬಿ.ಎಸ್.ಎಂ. ತಾಂತ್ರಿಕ ವಿದ್ಯಾಲಯ (ಬಿಎನ್‌ಎಂಐಟಿ) ಹಮ್ಮಿಕೊಂಡಿದ್ದ ‘ಸಂಕಲ್ಪ’ ಕೈಗಾರಿಕಾ ಸಮಾವೇಶದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳೊಂದಿಗೆ ಕೈಗಾರಿಕಾ ತಜ್ಞರಾದ ಮನು ಪ್ರಸಾದ್, ಸ್ವರೂಪ್ ವಿ, ಮಾಲಿನಿ ನಾರಾಯಣಮೂರ್ತಿ, ವಿನಯ್ ಸಂಪತ್ ಕುಮಾರ್, ಶ್ರೀಕಾಂತ್ ಕೆ. ಅವಧಾನಿ, ಬಿಎನ್‌ಎಂಐಟಿ ಡೀನ್ ಈಶ್ವರ್ ಎನ್. ಮಾನಯ್ ಇದ್ದರು.

ಪುಷ್ಪಗಳಲ್ಲಿ ಅರಳಲಿದೆ ‘ವಿಧಾನಸೌಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ವತಿಯಿಂದ ಆಗಸ್ಟ್ 4ರಿಂದ 15ರವರೆಗೆ ಲಾಲ್‌ಬಾಗ್‌ನಲ್ಲಿ ‘ಕರ್ನಾಟಕದ ಶಕ್ತಿ ಕೇಂದ್ರ ವಿಧಾನಸೌಧದ ನಿರ್ಮಾತೃ ಕೆಂಗಲ್ ಹನುಮಂತಯ್ಯ’ ಅವರ ವಿಷಯಾಧಾರಿತ 214ನೇ ಫಲಪುಷ್ಪ ಪ್ರದರ್ಶನ ನಡೆಯಲಿದೆ.

ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಕೆಂಗಲ್ ಹನುಮಂತ್ಯಯ ಅವರ ಸಾಧನೆಯನ್ನು ಬಣ್ಣ-ಬಣ್ಣದ ಪುಷ್ಪಗಳಲ್ಲಿ ಅನಾವರಣಗೊಳಿಸಲು ತೋಟಗಾರಿಕೆ ಇಲಾಖೆ ಸಜ್ಜಾಗುತ್ತಿದೆ.

‘ಈ ಬಾರಿಯ ಫಲಪುಷ್ಪ ಪ್ರದರ್ಶನಕ್ಕೆ ಸುಮಾರು ₹2.5 ಕೋಟಿ ವೆಚ್ಚವಾಗಲಿದೆ. ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ದೇಶದ ಬೇರೆ ಬೇರೆ ರಾಜ್ಯಗಳಿಂದ ತರಹೇವಾರಿ ಹೂವಿನ ಕುಂಡಗಳನ್ನು ಈಗಾಗಲೇ ತೆಗೆದುಕೊಂಡು ಬರಲಾಗಿದೆ. ಗಾಜಿನ ಮನೆಯ ಒಳಾಂಗಣದಲ್ಲಿ ವಿಧಾನಸೌಧ, 14 ಅಡಿ ಎತ್ತರದ ಕೆಂಗಲ್ ಹನುಮಂತಯ್ಯ ಪ್ರತಿಮೆ, ಶಿವಪುರ ಸತ್ಯಾಗ್ರಹ ಸೌಧ, ಕೋಲಾರದ ಹಟ್ಟಿ ಚಿನ್ನದ ಗಣಿ ರಾಷ್ಟ್ರೀಕರಣದಂತಹ ಐತಿಹಾಸಿಕ ಘಟನೆಗಳನ್ನು ಹೂವಿನ ಕಲಾಕೃತಿಗಳಲ್ಲಿ ಮರುಸೃಷ್ಟಿಸಲಾಗುವುದು’ ಎಂದು ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಎಂ. ಜಗದೀಶ್ ಮಾಹಿತಿ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಕೆಂಗಲ್ ಹನುಮಂತಯ್ಯ ಅವರು ರೈಲ್ವೆ ಸಚಿವರಾಗಿ ಕಾರ್ಯನಿರ್ವಹಿಸಿದ ಸಂದರ್ಭದಲ್ಲಿ ಮಾಡಿದ ಸುಧಾರಣೆಗಳು, ಲಾಭದಾಯಕ ರೈಲ್ವೆ ಬಜೆಟ್ ಮಂಡನೆ ಎಂಬ ಪರಿಕಲ್ಪನೆಗಳನ್ನು ಪುಷ್ಪಗಳ ಮೂಲಕ ಅನಾವರಣ ಮಾಡಲಾಗುವುದು’ ಎಂದರು.

‘ಆಕರ್ಷಕ ಬೆಂಗಳೂರು’ ಸಮಿತಿ ಶಿಫಾರಸು

ಕೆರೆ, ಹೂ ಹಬ್ಬ, ಸಾಂಸ್ಕೃತಿಕ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಪಾರಂಪರಿಕ ಕಾರಿಡಾರ್‌ಗಳನ್ನು ನಿರ್ಮಿಸುವ ಜೊತೆಗೆ ಕೆರೆ, ಹೂ, ಬೆಂಗಳೂರು ಹಬ್ಬ ಆಯೋಜಿಸಬೇಕು. ಸಾಂಸ್ಕೃತಿಕ ಉತ್ಸವಗಳು ನಡೆಯುತ್ತಿರಬೇಕು ಎಂದು ‘ಆಕರ್ಷಕ ಬೆಂಗಳೂರು’ ಸಮಿತಿ ಶಿಫಾರಸು ಮಾಡಿದೆ.

‘ಬ್ರ್ಯಾಂಡ್ ಬೆಂಗಳೂರು’ ಯೋಜನೆಯಡಿ ಶಿಫಾರಸು ನೀಡಲು ಸಮಿತಿ ರಚಿಸಲಾಗಿದ್ದು, ಅಧ್ಯಕ್ಷ ಜಯರಾಂ ರಾಯ್‌ಪುರ ಅವರ ನೇತೃತ್ವದಲ್ಲಿ ಬುಧವಾರ ನಡೆದ ಸಭೆಯಲ್ಲಿ ಹಲವು ಸಲಹೆಗಳನ್ನು ನೀಡಲಾಗಿದೆ.

‘ಪ್ರಮುಖ ಶಿಫಾರಸುಗಳನ್ನು ಪರಿಗಣಿಸಿ ಅವುಗಳನ್ನು ಸರ್ಕಾರದ ಗಮನಕ್ಕೆ ತಂದು ಶೀಘ್ರ ಕಾರ್ಯರೂಪಕ್ಕೆ ತರಲಾಗುವುದು’ ಎಂದು ಹಣಕಾಸು ವಿಭಾಗದ ವಿಶೇಷ ಆಯುಕ್ತ ಹಾಗೂ ಜಯರಾಂ ರಾಯಪುರ ತಿಳಿಸಿದರು.

‘ಒಂದು ತಿಂಗಳ ಅವಧಿಯಲ್ಲಿ ಕನಿಷ್ಠ 20 ಯೋಜನೆಗಳನ್ನು ನಿಗದಿತ ಸಮಯದೊಳಗಾಗಿ ಅನುಷ್ಠಾನಗೊಳಿಸಲು ಯೋಜನೆ ರೂಪಿಸಬೇಕು. ಅದಕ್ಕೆ ಬೇಕಾದಂತಹ ಎಲ್ಲಾ ರೀತಿಯ ತಯಾರಿಗಳನ್ನು ಮಾಡಿಕೊಳ್ಳಬೇಕು’ ಎಂದು ಅಧಿಕಾರಿಗಳಿಗೆ ಸೂಚಿಸಿದರು.

‘ಶಿಫಾರಸುಗಳನ್ನು ಕಡಿಮೆ, ಮಧ್ಯಮ ಹಾಗೂ ದೀರ್ಘಕಾಲದ ಯೋಜನೆಗಳನ್ನಾಗಿ ವಿಂಗಡಿಸಿ, ಕಾಲಮಿತಿ ನಿಗದಿಪಡಿಸಲಾಗುತ್ತದೆ. ಆ.8ರಂದು ನಡೆಯುವ ಸಭೆಯಲ್ಲಿ ಶಿಫಾರಸುಗಳನ್ನು ಅಂತಿಮಗೊಳಿಸಿ ಸರ್ಕಾರದ ಮುಂದಿರಿಸಲಾಗುತ್ತದೆ. ಅನುಮೋದನೆ ದೊರೆತ ಮೇಲೆ ಅನುಷ್ಠಾನ ಕಾರ್ಯ ಆರಂಭಿಸಲಾಗುತ್ತದೆ’ ಎಂದು ಹೇಳಿದರು.

ಸಮಿತಿ ಸದಸ್ಯರಾದ ನರೇಶ್ ನರಸಿಂಹನ್, ರಘುನಂದನ್ ರಾಮಣ್ಣ, ಪ್ರಶಾಂತ್ ಪ್ರಕಾಶ್, ಕೃಷ್ಣಕುಮಾರ್, ಕೆ.ವೈ. ನಾರಾಯಣಸ್ವಾಮಿ, ಶಶಿಧರ ಭರಿಘಾಟ್, ಬಿ. ರವಿಚಂದ್ರನ್ ಇದ್ದರು.

ಅಗತ್ಯ ವಸ್ತುಗಳ ಬೆಲೆ ಇಳಿಸುವ ಮೂಲಕ ತಿಂಡಿ–ತಿನಿಸುಗಳ ದರ ತಗ್ಗಿಸಲು ಆಗ್ರಹ

ಹೋಟೆಲ್ ಬೆಲೆ ಏರಿಕೆ: ಸರ್ಕಾರಗಳಿಗೆ ಹಿಡಿಶಾಪ

• ವರುಣ ಹೆಗಡೆ

ಬೆಂಗಳೂರು: 'ಖಾಸಗಿ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಾವು, ಹೋಟೆಲ್ ತಿಂಡಿ–ತಿನಿಸುಗಳನ್ನೇ ಅವಲಂಬಿಸಿದ್ದೇವೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯ ಕಾರಣ ನೀಡಿ ಹೋಟೆಲ್‌ಗಳೂ ದರ ಏರಿಸುತ್ತಿವೆ. ಆದರೆ, ನಮ್ಮ ವೇತನದಲ್ಲಿ ಮಾತ್ರ ಅಂತಹ ವ್ಯತ್ಯಾಸವಾಗಿಲ್ಲ. ಇದರಿಂದ ಜೀವನ ನಿರ್ವಹಣೆ ಕಷ್ಟವಾಗಿದೆ.'

ಇವು ಬಸವನಗುಡಿಯ ಎಸ್.ಎಲ್.ವಿ. ಹೋಟೆಲ್‌ಗೆ ಬಂದಿದ್ದ ಗ್ರಾಹಕರ ಬೇಸರದ ಮಾತುಗಳು. ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘವು ಹೋಟೆಲ್‌ಗಳ ತಿಂಡಿ–ತಿನಿಸುಗಳ ಬೆಲೆಯನ್ನು ಶೇ 10ರಷ್ಟು ಹೆಚ್ಚಿಸಲು ನಿರ್ಧಾರ ಕೈಗೊಂಡಿದ್ದು, ಆ.1ರಿಂದ ಪರಿಷ್ಕೃತ ದರ ಜಾರಿಯಾಗಲಿದೆ. ಆದರೆ, ಈಗಾಗಲೇ ಕೆಲ ಹೋಟೆಲ್ ಹಾಗೂ ದರ್ಶಿನಿಗಳು ಸ್ವಯಂ ಪ್ರೇರಿತವಾಗಿ ದರ ಏರಿಕೆ ಮಾಡಿವೆ. ಇದರಿಂದಾಗಿ ಕಾಫಿ, ಚಹದ ಬೆಲೆ ಸರಾಸರಿ ₹ 15ರಿಂದ ₹ 20ಕ್ಕೆ ತಲುಪಿದೆ. ಅದೇ ರೀತಿ, ಹಲವೆಡೆ ದಕ್ಷಿಣ ಭಾರತದ ಊಟದ ಬೆಲೆಯೂ ₹ 100ರ ಗಡಿ ದಾಟಿದೆ.

ಈಗ ದರ ಏರಿಕೆಯಿಂದ ಊಟದ ಬೆಲೆಯಲ್ಲಿ ₹ 10 ಹೆಚ್ಚಳವಾದರೆ, ತಿಂಡಿ ಬೆಲೆಯಲ್ಲಿ ₹ 5 ಏರಿಕೆಯಾಗಲಿದೆ. ಕಾಫಿ, ಚಹದ ಬೆಲೆ ₹ 2ರಿಂದ ₹ 3 ಹೆಚ್ಚಳವಾಗಲಿದೆ. ಹೋಟೆಲ್‌ಗಳ ಸಂಘದ ಈ ನಿರ್ಧಾರಕ್ಕೆ ಗ್ರಾಹಕರು ಸರ್ಕಾರಗಳ ನಡೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದು, 'ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಸರ್ಕಾರ ಕಡಿವಾಣ ಹಾಕಬೇಕಿತ್ತು. ಆದರೆ, ಈ ಬಗ್ಗೆ ಕ್ರಮ ವಹಿಸದಿರುವುದರಿಂದ ಹೋಟೆಲ್‌ಗಳು ಬೆಲೆ ಹೆಚ್ಚಿಸುತ್ತಿವೆ. ಹೋಟೆಲ್ ತಿಂಡಿ–ತಿನಿಸು ಹಾಗೂ ಊಟವನ್ನು ಅವಲಂಬಿಸಿರುವ ಬಡ–ಮಧ್ಯಮ ವರ್ಗದವರಿಗೆ ಶೇ 10 ರಷ್ಟು ಬೆಲೆ ಏರಿಕೆಯು ಕಷ್ಟವಾಗಲಿದೆ. ಹೀಗಾಗಿ, ಗ್ರಾಹಕರನ್ನೂ ಗಮನದಲ್ಲಿಟ್ಟುಕೊಂಡು ಶೇ 5 ರಷ್ಟು ಹೆಚ್ಚಿಸುವುದು ಉತ್ತಮ. ಕೇಂದ್ರ ಹಾಗೂ ರಾಜ್ಯ ಸರ್ಕಾರವು ಬೇಳೆ ಕಾಳುಗಳು ಸೇರಿ ಅಗತ್ಯ ವಸ್ತುಗಳ ಬೆಲೆ ನಿಯಂತ್ರಣಕ್ಕೆ ಕ್ರಮವಹಿಸಬೇಕು' ಎಂದು ಆಗ್ರಹಿಸಿದ್ದಾರೆ.

ಆತಿಥ್ಯ ಉದ್ಯಮ ಚೇತರಿಕೆ: 2020ರಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಆತಿಥ್ಯ ಉದ್ಯಮಕ್ಕೆ ಹೊಡೆತ ಬಿದ್ದು, ಎರಡು ವರ್ಷಗಳು ಹೋಟೆಲ್ ವಹಿವಾಟು ಕುಸಿತ ಕಂಡಿತ್ತು. ಲಾಕ್‌ಡೌನ್ ಅವಧಿಯಲ್ಲಿ ಹೋಟೆಲ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಮುಚ್ಚಲಾಗಿತ್ತು. ಆ ಅವಧಿಯಲ್ಲಿ ಬಾಡಿಗೆ ಪಾವತಿ ಹಾಗೂ ವಿದ್ಯುತ್ ಸೇರಿದಂತೆ ವಿವಿಧ ಶುಲ್ಕಗಳನ್ನು ಪಾವತಿಸಲಾಗದೆಯೇ ನಗರದಲ್ಲಿ ಸಾವಿರಕ್ಕೂ ಅಧಿಕ ಹೋಟೆಲ್‌ಗಳು ಶಾಶ್ವತವಾಗಿ ಬಾಗಿಲು ಮುಚ್ಚಿದ್ದವು. 60 ಸಾವಿರ ಮಂದಿ ಉದ್ಯೋಗ ಕಳೆದುಕೊಂಡಿದ್ದರು. ಕಳೆದ ವರ್ಷಾರಂಭದಿಂದ ಹೋಟೆಲ್ ಉದ್ಯಮ ಚೇತರಿಕೆ ಹಾದಿ ಹಿಡಿದಿದ್ದು, ಈಗ ಕೋವಿಡ್ ಪೂರ್ವದ ಸ್ಥಿತಿ ತಲುಪಿದೆ.

ಡಕೋವಿಡ್ ನಿಯಂತ್ರಣದ ಬಳಿಕ ಸಂಘವು ತಿಂಡಿ–ತಿನಿಸುಗಳ ದರ ಪರಿಷ್ಕರಣೆ ಮಾಡಿತ್ತು. ಊಟದ ದರದಲ್ಲಿ ₹ 10 ಹಾಗೂ ತಿಂಡಿ–ತಿನಿಸುಗಳ ದರದಲ್ಲಿ ₹ 5 ಹೆಚ್ಚಳವಾಗಿತ್ತು.

ಚಹ, ಕಾಫಿ ದರದಲ್ಲಿ ₹ 2ರಿಂದ ₹ 3 ಹೆಚ್ಚಳ ಮಾಡಿತ್ತು. ಆದರೆ, ಕೆಲ ಹೋಟೆಲ್‌ಗಳು ಒಂದೂರೆ ವರ್ಷದಲ್ಲಿ ಎರಡು ಮೂರು ಬಾರಿ ದರವನ್ನು ಹೆಚ್ಚಿಸಿವೆ.

ನೃಪತುಂಗ ರಸ್ತೆಯಲ್ಲಿರುವ ನಿಸರ್ಗ ಗ್ರ್ಯಾಂಡ್ ಹೋಟೆಲ್‌ನಲ್ಲಿ ಗ್ರಾಹಕರು ಊಟ ಸವಿಯುತ್ತಿರುವುದು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಅಂಕಿಅಂಶ

24,500 ನಗರದಲ್ಲಿರುವ ಒಟ್ಟು ಹೋಟೆಲ್‌ಗಳು	**3,500** ನಗರದಲ್ಲಿರುವ ತಾರಾ (ಸ್ಟಾರ್) ಹೋಟೆಲ್‌ಗಳು
21,000 ಸಣ್ಣ, ಮಧ್ಯಮ ಮತ್ತು ದೊಡ್ಡ ಗಾತ್ರದ ಹೋಟೆಲ್‌ಗಳು	**1.40** ಲಕ್ಷ ಆತಿಥ್ಯ ಉದ್ಯಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳು

'ದರ ಹೆಚ್ಚಳ ಅನಿವಾರ್ಯ'

'ಅಗತ್ಯ ವಸ್ತುಗಳ ಬೆಲೆ ಹೆಚ್ಚಳದಿಂದ ತಿಂಡಿ ತಿನಿಸುಗಳ ದರ ಏರಿಕೆ ಅನಿವಾರ್ಯವಾಗಿದೆ. ಜೀರಿಗೆ ದರ ಕೆ.ಜಿ.ಗೆ ₹ 240ರಿಂದ ₹ 560ಕ್ಕೆ ಏರಿಕೆಯಾಗಿದೆ. ಬ್ಯಾಡಗಿ ಮೆಣಸು ₹ 300ರಿಂದ ₹ 800ಕ್ಕೆ ತಲುಪಿದೆ. ತರಕಾರಿಗಳ ಬೆಲೆ ಶೇ 40 ರಷ್ಟು ಹೆಚ್ಚಳವಾಗಿದೆ. ₹ 300 ಇದ್ದ ಕಾಫಿ ಪುಡಿ ದರ ಈಗ ₹ 600ಕ್ಕೆ ತಲುಪಿದೆ. ಹಾಲು, ಅಕ್ಕಿ ಎಲ್ಲ ಅಗತ್ಯ ವಸ್ತುಗಳ ದರ ಹೆಚ್ಚಳವಾಗಿದೆ. ಆದ್ದರಿಂದ ದರ ಹೆಚ್ಚಿಸುತ್ತಿದ್ದೇವೆ. ಇದು ಗ್ರಾಹಕರಿಗೂ ಅರ್ಥವಾಗುತ್ತದೆ. ಕಳೆದ ಒಂದೂವರೆ ವರ್ಷದಿಂದ ದರ ಹೆಚ್ಚಿಸಿರಲಿಲ್ಲ' ಎಂದು ನಿಸರ್ಗ ಗ್ರ್ಯಾಂಡ್ ಹೋಟೆಲ್‌ನ ಮಾಲೀಕ ಎಸ್.ಪಿ. ಕೃಷ್ಣರಾಜ್ ತಿಳಿಸಿದರು.

ತರಕಾರಿ ಸೇರಿ ವಿವಿಧ ದಿನಬಳಕೆ ವಸ್ತುಗಳ ಬೆಲೆ ಇಳಿಕೆಗೆ ಸರ್ಕಾರ ಕ್ರಮವಹಿಸಬೇಕು. ಒಮ್ಮೆಲೆಯೇ ಶೇ 10 ರಷ್ಟು ದರ ಹೆಚ್ಚಳ ಮಾಡಬಾರದು.
ಭಾಗೀರತಿ, ರಾಜರಾಜೇಶ್ವರಿ ನಗರ

ತಿಂಡಿ ತಿನಿಸುಗಳ ಬೆಲೆಯನ್ನು ಶೇ 10 ರಷ್ಟು ಹೆಚ್ಚಿಸಿದರೆ ಬಡ ಮಧ್ಯಮ ವರ್ಗದವರಿಗೆ ಕಷ್ಟವಾಗುತ್ತದೆ. ಶೇ 5 ರಷ್ಟು ಹೆಚ್ಚಿಸುವುದು ಉತ್ತಮ.
ರೇಖಾ, ವಿಜಯನಗರ

ಹಾಲು, ಅಕ್ಕಿ ವಿವಿಧ ದಿನಬಳಕೆ ವಸ್ತುಗಳ ಬೆಲೆ ಏರಿಕೆಯಾಗಿದೆ. ಆದ್ದರಿಂದ ಹೋಟೆಲ್‌ಗಳು ಆ ಹೊರೆಯನ್ನು ನಮ್ಮ ಮೇಲೆ ಹಾಕುತ್ತಿವೆ.
ಭಾಸ್ಕರ್, ಬಿಟಿಎಂ ಬಡಾವಣೆ

ಹತ್ತು ವರ್ಷಗಳಿಂದ ಸಂಪಾದನೆಯಲ್ಲಿ ಅಂತಹ ವ್ಯತ್ಯಾಸವಾಗಿಲ್ಲ. ಆದರೆ, ಬೇರೆ ಎಲ್ಲದರ ಬೆಲೆ ಏರಿದೆ. ಮೂರು ವರ್ಷಗಳ ಹಿಂದೆ ₹ 20 ಇದ್ದ ಮಸಾಲೆ ಪುರಿ ಈಗ ₹ 40 ಆಗಿದೆ.
ವಿನಯ್, ನಗರಪೇಟೆ

ಎಲ್ಲಾ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಹಾಲು, ಕಾಫಿ–ಚಹ ಪುಡಿ ಬೆಲೆಯೂ ಏರಿದೆ. ದರ ಹೆಚ್ಚಳ ಮಾಡುವುದು ಅನಿವಾರ್ಯ.
ಪಿ.ಸಿ. ರಾವ್, ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ

ಬೆಂಗಳೂರು ಉತ್ತರಕ್ಕೆ ಹೋಲಿಸಿದರೆ ದಕ್ಷಿಣದಲ್ಲಿನ ಹೋಟೆಲ್‌ಗಳಲ್ಲಿ ಬೆಲೆ ಸ್ವಲ್ಪ ಕಡಿಮೆಯಿದೆ. ಸರ್ಕಾರ ಅಗತ್ಯ ವಸ್ತುಗಳ ಬೆಲೆ ಇಳಿಕೆಗೆ ಕ್ರಮವಹಿಸಬೇಕು.
ಬದ್ರಿ, ಬಸವನಗುಡಿ

ಸುದ್ದಿ 2 ನಿಮಿಷ

ತಿರುಮಲ: 384 ಕೊಠಡಿಗಳಿರುವ ವಸತಿಗೃಹ ಡಿಸೆಂಬರ್‌ಗೆ ಪೂರ್ಣ

ಬೆಂಗಳೂರು: ತಿರುಪತಿಯ ತಿರುಮಲದಲ್ಲಿ ಕರ್ನಾಟಕ ಯಾತ್ರಿಗಳಿಗೆ ನಿರ್ಮಿಸುತ್ತಿರುವ ವಸತಿ ಗೃಹ ಹಾಗೂ ಕಲ್ಯಾಣ ಮಂಟಪದ ಕಾಮಗಾರಿಗಳನ್ನು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ, ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಆಯುಕ್ತ ಬಸವರಾಜೇಂದ್ರ ಪರಿಶೀಲಿಸಿದರು.

ರಾಜ್ಯ ಸರ್ಕಾರ ತಿರುಮಲದಲ್ಲಿ ₹ 220 ಕೋಟಿ ವೆಚ್ಚದಲ್ಲಿ ಕಲ್ಯಾಣ ಮಂಟಪ, 384 ಕೊಠಡಿಗಳಿರುವ ವಸತಿಗೃಹ ನಿರ್ಮಿಸಲಾಗುತ್ತಿದೆ. ಡಿಸೆಂಬರ್ ಒಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ನಂತರ ತಿರುಮಲದಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ತಿರುಪತಿ ತಿರುಮಲ ದೇವಸ್ಥಾನದ ಅಧಿಕಾರಿ ಧರ್ಮೇಂದ್ರ ರೆಡ್ಡಿ ಉಪಸ್ಥಿತರಿದ್ದರು.

ಕೆ.ಆರ್. ಪುರ- ಬೈಯಪ್ಪನಹಳ್ಳಿ: ಮೆಟ್ರೊ ಪ್ರಾಯೋಗಿಕ ಸಂಚಾರ

ಬೆಂಗಳೂರು: ಕೆ.ಆರ್.ಪುರ–ಬೈಯಪ್ಪನಹಳ್ಳಿ ನಡುವಿನ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಿಎಂಆರ್‌ಸಿಎಲ್ ಬುಧವಾರ ಪ್ರಾಯೋಗಿಕವಾಗಿ ಮೆಟ್ರೊ ರೈಲು ಸಂಚಾರ ಆರಂಭಿಸಿದೆ.

ಕೆ.ಆರ್.ಪುರ ಮೆಟ್ರೊ ನಿಲ್ದಾಣದಿಂದ ಬುಧವಾರ ಸಂಜೆ 6 ಗಂಟೆ 4 ನಿಮಿಷಕ್ಕೆ ಪ್ರಾಯೋಗಿಕ ಸಂಚಾರ ಆರಂಭವಾಯಿತು. ಮೆಟ್ರೊ ರೈಲಿನಲ್ಲಿ ಬಿಎಂಆರ್‌ಸಿಎಲ್ ತಾಂತ್ರಿಕ ತಂಡವು ಸಂಚರಿಸಿ ಪರಿಶೀಲಿಸಿತು. ಬೈಯಪ್ಪನಹಳ್ಳಿವರೆಗೆ ತೆರಳಿ ಕೆ.ಆರ್. ಪುರ ಮೆಟ್ರೊ ನಿಲ್ದಾಣಕ್ಕೆ ವಾಪಸ್ಸಾಯಿತು. ಮುಕ್ಕಾಲು ಗಂಟೆ ಪರಿಶೀಲನೆ ನಡೆಯಿತು.

ನೇರಳೆ ಮಾರ್ಗದಲ್ಲಿನ ವಿಸ್ತರಿತ ಕಾಮಗಾರಿ ಇದಾಗಿದ್ದು, ಬೈಯಪ್ಪನಹಳ್ಳಿ–ಕೆ.ಆರ್. ಪುರ ನಡುವೆ 2.5 ಕಿಲೋಮೀಟರ್ ಹಾಗೂ ಕೆಂಗೇರಿ–ಚಲ್ಲಘಟ್ಟದ ನಡುವೆ 1.9 ಕಿ.ಮೀ ಕಾಮಗಾರಿ ಬಾಕಿ ಉಳಿದಿತ್ತು. ಎರಡೂ ಕಡೆಗಳಲ್ಲಿ ಕಾಮಗಾರಿ ಮುಗಿದಿದೆ. ಬೈಯಪ್ಪನಹಳ್ಳಿ–ಕೆ.ಆರ್. ಪುರ ನಡುವೆ ಪ್ರಾಯೋಗಿಕ ಸಂಚಾರ ಆರಂಭವಾಗಿದೆ. ಎಲ್ಲ ತಾಂತ್ರಿಕ ತೊಂದರೆಗಳು ಬಗೆಹರಿದ ಬಳಿಕ ವಾಣಿಜ್ಯ ಸಂಚಾರ ಆರಂಭಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಕೆ.ಆರ್.ಪುರ–ವೈಟ್‌ಫೀಲ್ಡ್ (13.71 ಕಿ.ಮೀ) ನಡುವೆ ಮೆಟ್ರೊ ವಾಣಿಜ್ಯ ಸಂಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಮಾರ್ಚ್ ತಿಂಗಳಲ್ಲೇ ಚಾಲನೆ ನೀಡಿದ್ದರು. ಬೈಯಪ್ಪನಹಳ್ಳಿ– ಕೆ.ಆರ್.ಪುರದ ನಡುವೆ ಮೆಟ್ರೊ ಸಂಚರಿಸದ ಕಾರಣದಿಂದ ಪ್ರಯಾಣಿಕರು ತೊಂದರೆಗೆ ಸಿಲುಕಿದ್ದರು.

'ಸುಂದರ ಬದುಕಿಗೆ ಶಿಸ್ತಿನ ಕಲಿಕೆ'

ದಾಸರಹಳ್ಳಿಯ ಕಾಳಸ್ತ್ರೀ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಶಾಸಕ ಎಸ್. ಮುನಿರಾಜು ಅವರು ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಮತ್ತು ಪುರಸ್ಕಾರ ನೀಡಿದರು. ಬೆಂಗಳೂರು ಉತ್ತರ ಜಿಲ್ಲೆ ಪಿಯು ಮಂಡಳಿಯ ಉಪನಿರ್ದೇಶಕ ಫಾಲಾಕ್ಷ, ಕಾಲೇಜಿನ ಪ್ರಾಂಶುಪಾಲರಾದ ಬಿ.ಸಿ. ವಾಣಿಶ್ರೀ, ಪಾಲಿಕೆ ಮಾಜಿ ಸದಸ್ಯ ಉಮಾದೇವಿ ನಾಗರಾಜು, ವಿನೋದ್ ಗೌಡ ಇದ್ದರು.

ಪೀಣ್ಯ ದಾಸರಹಳ್ಳಿ: 'ವಿದ್ಯಾರ್ಥಿ ಜೀವನ ಬಹಳ ಸುಂದರವಾದದ್ದು, ಅದರಲ್ಲೂ ಕಾಲೇಜಿನ ವಿದ್ಯಾರ್ಥಿಗಳು ಅನೇಕ ಕನಸುಗಳ ಹೊತ್ತಿರುತ್ತಾರೆ. ಶಿಸ್ತು, ಶ್ರದ್ಧೆಯಿಂದ ಕಲಿತಾಗ ಬದುಕು ಯಶಸ್ವಿಯಾಗುತ್ತದೆ' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಕಾಳಸ್ತ್ರೀ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು.

'ನಾವು ಹಣ, ಆಸ್ತಿ ಗಳಿಸಬಹುದು. ಅದು ಶಾಶ್ವತವಲ್ಲ. ಉಸಿರಿರುವವರೆಗೂ ನಮ್ಮ ಜೊತೆ ಇರುವ ಏಕೈಕ ಸೊತ್ತು ಎಂದರೆ ನಾವು ಕಲಿತ ವಿದ್ಯೆ' ಎಂದರು.

'ಹೆಚ್ಚು ಅಂಕ ಪಡೆದು ಪುರಸ್ಕಾರಗೊಂಡ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವುದು ಖುಷಿಯ ವಿಚಾರ. ಉಳಿದವರೂ ಅವರಂತೆ ಚೆನ್ನಾಗಿ ಓದಿ ಮನೋಸ್ಥೈರ್ಯ ಬೆಳೆಸಿಕೊಂಡು ಉತ್ತಮ ಪ್ರಜೆಗಳಾಗಬೇಕು. ನಿಮ್ಮ ಗುರುಗಳು, ಶಿಕ್ಷಣ ಇಲಾಖೆ ಸಹ ನಿಮಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ನನ್ನ ಸಹಕಾರವು ಇರುತ್ತದೆ' ಎಂದು ಭರವಸೆ ನೀಡಿದರು.

'ಎಸ್‌.ಸಿ, ಎಸ್‌ಟಿ ಮಕ್ಕಳ ಶಾಲಾ ನೋಂದಣಿ ಹೆಚ್ಚಿಸಿ'

ಪ್ರಜಾವಾಣಿ ವಾರ್ತೆ



ಎಚ್‌.ಸಿ. ಮಹಾದೇವಪ್ಪ

ಬೆಂಗಳೂರು: ರಾಜ್ಯದಲ್ಲಿ ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಟಿ)ಮಕ್ಕಳ ಶಾಲಾ ನೋಂದಣಿಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹಾದೇವಪ್ಪ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದರು.

ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅನುದಾನ ಹಂಚಿಕೆ ಕುರಿತು ಬುಧವಾರ ನಡೆದ ನೋಡಲ್ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, 'ಎಸ್.ಸಿ ಮತ್ತು ಎಸ್.ಟಿ ಮಕ್ಕಳ ಶಾಲಾ ಪ್ರವೇಶಾತಿಯ ಪ್ರಮಾಣವು ಕರ್ನಾಟಕದಲ್ಲಿ ಉಳಿದ ರಾಜ್ಯಗಳಿಗಿಂತ ಕಡಿಮೆ ಇದೆ. ಈ ಪ್ರಮಾಣವನ್ನು ಹೆಚ್ಚಿಸಲು ಶ್ರಮಿಸಬೇಕು' ಎಂದು ಹೇಳಿದರು.

ಶಿಕ್ಷಣ ಹಕ್ಕು ಕಾಯ್ದೆಯ ಅಡಿಯಲ್ಲಿ ಈಗ ಒಂದರಿಂದ ಎಂಟನೇ ತರಗತಿಯವರೆಗೆ ಉಚಿತ ಸೀಟುಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಅದನ್ನು ಒಂಬತ್ತು ಮತ್ತು ಹತ್ತನೇ ತರಗತಿಗಳಿಗೂ ವಿಸ್ತರಿಸುವ ಕುರಿತು ಪರಿಶೀಲಿಸಬೇಕು. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು ಶಿಕ್ಷಣಕ್ಕೆ ಸಂಬಂಧಿಸಿದ ಕೆಲಸಗಳಿಗೆ ಹೆಚ್ಚು ಬಳಕೆ ಮಾಡಬೇಕು. ವಿದ್ಯಾರ್ಥಿನಿಲಯಗಳ ನಿರ್ಮಾಣ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ನಿರ್ದೇಶನ ನೀಡಿದರು.

ಈ ಯೋಜನೆಗಳ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಬೇಕು. ತಪ್ಪಿದಲ್ಲಿ ಅಂತಹ ಇಲಾಖೆಗಳಿಂದ ಅನುದಾನ ಹಿಂಪಡೆಯಲಾಗುವುದು. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಗಳ ಅನುದಾನವನ್ನು ಅನ್ಯ ಉದ್ದೇಶಗಳಿಗೆ ಬಳಕೆ ಮಾಡುವುದನ್ನು ನಿಷೇಧಿಸಲಾಗಿದೆ. ಈ ತಿದ್ದುಪಡಿಯನ್ನು ಗಮನದಲ್ಲಿ ಇರಿಸಿಕೊಂಡು ಅಧಿಕಾರಿಗಳು ಕೆಲಸ ಮಾಡಬೇಕು ಎಂದು ಹೇಳಿದರು.

ಜಲ ಜೀವನ್ ಮಿಷನ್ ಕಾಮಗಾರಿಗಳಿಗೆ ಕೇಂದ್ರದಿಂದ ಶೇಕಡ 50ರಷ್ಟು ಅನುದಾನವನ್ನು ಜನವರಿಯೊಳಗೆ ಪಡೆಯಬೇಕು. ಇಲ್ಲವಾದರೆ ರಾಜ್ಯದಿಂದ ನೀಡುತ್ತಿರುವ ಹೆಚ್ಚುವರಿ ಅನುದಾನವನ್ನು ಹಿಂಪಡೆಯಲಾಗುವುದು. ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಲ್ಲೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಕಡ್ಡಾಯವಾಗಿ 100 ದಿನಗಳ ಉದ್ಯೋಗ ನೀಡಬೇಕು ಎಂದು ಸೂಚಿಸಿದರು.

ಅರ್ಧಕ್ಕೆ ಶಿಕ್ಷಣ ತೊರೆದ 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು

ನವದೆಹಲಿ: ಕಳೆದ ಐದು ವರ್ಷಗಳಲ್ಲಿ ಐಐಟಿ, ಐಐಎಂ ಮತ್ತು ಎನ್‌ಐಟಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅರ್ಧಕ್ಕೆ ಶಿಕ್ಷಣ ತೊರೆದಿದ್ದಾರೆ. ಇದೇ ಅವಧಿಯಲ್ಲಿ ಈ ಸಮುದಾಯಗಳ 10 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕೇಂದ್ರ ಸರ್ಕಾರ ಬುಧವಾರ ರಾಜ್ಯಸಭೆಯಲ್ಲಿ ತಿಳಿಸಿದೆ.

ಬಿಜೆಪಿಯ ಸುಶೀಲ್ ಕುಮಾರ್ ಮೋದಿ ಅವರು ಕೇಳಿದ್ದ ಪ್ರಶ್ನೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಶಿಕ್ಷಣ ಖಾತೆ ರಾಜ್ಯ ಸಚಿವ ಸುಭಾಷ್ ಸರ್ಕಾರ್ ಈ ಮಾಹಿತಿ ನೀಡಿದ್ದು, ಸ್ನಾತಕೋತ್ತರ ಪದವಿ ಮತ್ತು ಪಿಎಚ್‌.ಡಿಯಲ್ಲಿ ಅರ್ಧಕ್ಕೆ ಶಿಕ್ಷಣ ತೊರೆದವರ ಸಂಖ್ಯೆಯೇ ಹೆಚ್ಚು. ಅರ್ಧಕ್ಕೆ ಶಿಕ್ಷಣ ತೊರೆದವರಲ್ಲಿ ಒಬಿಸಿ ವಿದ್ಯಾರ್ಥಿಗಳ ಸಂಖ್ಯೆ ಅತಿ ಹೆಚ್ಚು ಇದೆ ಎಂದು ಹೇಳಿದ್ದಾರೆ.

ಸ್ನಾತಕಪೂರ್ವ ಕೋರ್ಸ್‌ಗಳಲ್ಲಿ ತಪ್ಪಾದ ಆಯ್ಕೆಗಳು, ಕಳಪೆ ಓದು, ವೈದ್ಯಕೀಯ ಹಾಗೂ ವೈಯಕ್ತಿಕ ಕಾರಣಗಳಿಂದ ಶಿಕ್ಷಣ ತೊರೆದಿರಬಹುದು ಎಂದು ಸಚಿವಾಲಯವು ತನ್ನ ಉತ್ತರದಲ್ಲಿ ತಿಳಿಸಿದೆ.

ಜಯಪ್ರಕಾಶ್ ಗೌಡಗೆ ಶಾಂತವೇರಿ ಗೋಪಾಲಗೌಡ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರದಿಂದ ನೀಡುವ 'ಶಾಂತವೇರಿ ಗೋಪಾಲಗೌಡ' ಪ್ರಶಸ್ತಿಗೆ ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷರಾದ ಜಯಪ್ರಕಾಶ್ ಗೌಡ ಆಯ್ಕೆಯಾಗಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ, 'ಪ್ರಶಸ್ತಿಯು ₹25 ಸಾವಿರ ನಗದು, ಪ್ರಶಸ್ತಿ ಪತ್ರ ಹಾಗೂ ಕಂಚಿನ ಫಲಕ ಒಳಗೊಂಡಿದೆ' ಎಂದು ಮಾಹಿತಿ ನೀಡಿದರು.

ಆಗಸ್ಟ್ 22ರಂದು ಬೆಂಗಳೂರಿನ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯುವ ಶಾಂತವೇರಿ ಗೋಪಾಲಗೌಡ ಪ್ರಶಸ್ತಿಯ ಬೆಳ್ಳಿಹಬ್ಬದ ಕಾರ್ಯಕ್ರಮದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಶಿಕ್ಷಣ ತಜ್ಞ ಎಂ.ಆರ್. ದೊರೆಸ್ವಾಮಿ, ಶಾಂತವೇರಿ ರಾಮಮನೋಹರ ಭಾಗವಹಿಸಲಿದ್ದಾರೆ.

ಬಾಣಸವಾಡಿ ಕೆರೆಯಲ್ಲಿ ಉದ್ಯಾನ ನಿರ್ಮಿಸುವ ಯೋಜನೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬಿಬಿಎಂಪಿ ಅಧಿಕಾರಿಗಳು ವಿವರಿಸಿದರು. ಸಚಿವ ಕೆ.ಜೆ. ಜಾರ್ಜ್ ಇದ್ದರು

ಬಾಣಸವಾಡಿ ಕೆರೆಯಲ್ಲಿ ಉದ್ಯಾನ: ಡಿಸಿಎಂ

ಬೆಂಗಳೂರು: 'ಬಾಣಸವಾಡಿ ಕೆರೆ ಜಾಗದಲ್ಲಿ ಉದ್ಯಾನ ನಿರ್ಮಿಸುವ ಯೋಜನೆ ಇದೆ. ಈ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಪಡೆಯಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬುಧವಾರ ತಿಳಿಸಿದರು.

ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಡಿ.ಕೆ. ಶಿವಕುಮಾರ್ ಅವರು ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದಲ್ಲಿ ನಾನಾ ಅಭಿವೃದ್ಧಿ ಯೋಜನೆಗಳ ಸ್ಥಳ ಪರಿಶೀಲನೆಯನ್ನು ನಡೆಸಿದರು.

'ಕೆರೆ ಜಾಗದಲ್ಲಿ ಪಾರ್ಕ್ ನಿರ್ಮಾಣದ ವಿಚಾರವಾಗಿ ಅಧಿಕಾರಿಗಳು ಪ್ರಸ್ತಾವ ಸಲ್ಲಿಸಿದ್ದಾರೆ. ಈ ಹಿಂದೆ ಮಂಜೂರಾಗಿದ್ದ ಕಾಮಗಾರಿಗಳನ್ನು ಕಳೆದ ಸರ್ಕಾರ ರದ್ದು ಮಾಡಿತ್ತು. ಈಗ ಮತ್ತೆ ಸರ್ಕಾರಿ ಆಸ್ತಿ ಉಳಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಮನವಿ ಮಾಡಿದ್ದಾರೆ. ಈ ಬಗ್ಗೆ ತೀರ್ಮಾನ ಮಾಡುವ ಮುನ್ನ ನಾನು ಹಾಗೂ ಸಚಿವ ಕೆ.ಜೆ. ಜಾರ್ಜ್ ಅವರು ಖುದ್ದಾಗಿ ಬಂದು ಪರಿಶೀಲನೆ ಮಾಡಿದ್ದೇವೆ. ಬಿಡಿಎ, ಬಿಬಿಎಂಪಿ, ಕೆರೆ ಅಭಿವೃದ್ಧಿ ಪ್ರಾಧಿಕಾರದ ದಾಖಲೆ ಪರಿಶೀಲನೆ ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

ಮಳೆಯಲ್ಲಿಯೇ ಸೇವಾನಗರ ಮೇಲ್ಸೇತುವೆ, ಬಾಣಸವಾಡಿ ಕೆರೆ, ಕಾಚರಕನಹಳ್ಳಿಕೆರೆ ಹಾಗೂ ಹೆಣ್ಣೂರು ಬಂಡೆಗೆ ಭೇಟಿ ನೀಡಿ ಪರಿಶೀಲಿಸಿದರು.

47 ಎಕರೆ ವಿಸ್ತೀರ್ಣದಲ್ಲಿದ್ದ ಬಾಣಸವಾಡಿ ಕೆರೆ ಈಗ 17 ಎಕರೆಯಷ್ಟು ಮಾತ್ರ ಕೆರೆಯಾಗಿ ಉಳಿದಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದರು. ಕಾಚರಕನಹಳ್ಳಿ ಕೆರೆ ಸುತ್ತಲಿನ ಕೊಳೆಗೇರಿಯನ್ನು ಬೇರೆಡೆಗೆ ಸ್ಥಳಾಂತರ ಮಾಡಿ ಕೆರೆ ಜಾಗ ವಾಪಸ್ ಪಡೆಯಲು ಕೋರ್ಟ್‌ನಿಂದ ಆದೇಶ ಬಂದಿದೆ. ಕೆರೆ ಅಭಿವೃದ್ಧಿ ಮಾಡಿ ಪಕ್ಕದಲ್ಲೇ ವ್ಯೂ ಪಾರ್ಕ್ ಹಾಗೂ ಸ್ಟೇಡಿಯಂ ನಿರ್ಮಾಣ ಮಾಡುವ ಯೋಜನೆ ರೂಪಿಸಲಾಗಿದೆ ಎಂದು ಸಚಿವರಿಗೆ ಅಧಿಕಾರಿಗಳು ಹೇಳಿದರು.

ಹೆಣ್ಣೂರು ಬಂಡೆಯ 29 ಎಕರೆ ಜಾಗದಲ್ಲಿ ಸ್ವಲ್ಪ ಜಾಗ ಒತ್ತುವರಿಯಾಗಿದೆ. ಉಳಿದ ಜಾಗದಲ್ಲಿ ಪಾರ್ಕ್ ನಿರ್ಮಾಣ ಮಾಡಬೇಕಿದೆ ಎಂದು ಸಚಿವರ ಮುಂದೆ ಅಧಿಕಾರಿಗಳು ಪ್ರಸ್ತಾವ ಮುಂದಿಟ್ಟರು.

'ರಾಜಕೀಯದಲ್ಲಿ ಮಾತ್ರ ನೈತಿಕತೆ ಹುಡುಕಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೈತಿಕತೆಯನ್ನು ಕೇವಲ ರಾಜಕೀಯದಲ್ಲಿ ಮಾತ್ರ ಹುಡುಕದೆ, ನಮ್ಮ ಸರ್ವಾಂಗೀಣ ಸಾಮಾಜಿಕ ಬದುಕಿನಲ್ಲಿಯೂ ಅಳವಡಿಸಿಕೊಳ್ಳಬೇಕು' ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಹೇಳಿದರು.

ಅವರು ತಮ್ಮ ನಿವಾಸದಲ್ಲಿ ವೈ.ಜಿ. ಮುರಳೀಧರ ಅವರ 'ಆಡಳಿತದಲ್ಲಿ ನೈತಿಕತೆ' ಕೃತಿ ಬಿಡುಗಡೆ ಮಾಡಿ, ಮಾತನಾಡಿದರು. 'ಪ್ರಪಂಚದ ಬಹುದೊಡ್ಡ ಪ್ರಜಾಪ್ರಭುತ್ವ ಹೊಂದಿರುವ ಈ ದೇಶದಲ್ಲಿ ಸಂವಿಧಾನ ರೂಪಗೊಂಡ ವಿಧಾನಗಳ ಬಗ್ಗೆ ಮತ್ತು ದೇಶದಲ್ಲಿ ಸಾಮಾಜಿಕ ಪಲ್ಲಟಗಳನ್ನುಂಟು ಮಾಡಿದ ತೀರ್ಪುಗಳ ಬಗೆಗೆ ಹೆಚ್ಚು ಚರ್ಚೆ ನಡೆಯಬೇಕು. ಸಂವಿಧಾನವನ್ನು ಜನಾಂದೋಲನಗಳು ಕೂಡ ಬಲಗೊಳಿಸಿವೆ. ಅಮೆರಿಕದಂತಹ ದೇಶಗಳಲ್ಲಿ ಪ್ರಪಂಚದ ವಿವಿಧ ದೇಶಗಳ ಸಂವಿಧಾನಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಹೀಗಾಗಿ, ಅಂಥದೇ ಚರ್ಚೆಗಳು ಇಲ್ಲಿ ನಡೆಯಬೇಕಿವೆ' ಎಂದರು.

ಲೇಖಕ ವೈ.ಜಿ. ಮುರಳೀಧರ, 'ಮಾನವೀಯ ಮೌಲ್ಯಗಳು ಕುಸಿಯುತ್ತಿರುವ ಈ ದಿನಗಳಲ್ಲಿ ಎಂ.ಎನ್. ವೆಂಕಟಾಚಲಯ್ಯ ಅವರು ನಮ್ಮ ಜೀವನ ಮತ್ತು ಕೆಲಸಗಳಿಗೆ ಸಾಕ್ಷಿ ಪ್ರಜ್ಞೆಯಾಗಿದ್ದಾರೆ. 94ರ ಹೊಸ್ತಿಲಿನಲ್ಲಿದ್ದರೂ ಅವರ ಓದು, ಬರಹ ಚಿಂತನೆ ಹಾಗೂ ದರ್ಶನಗಳು ಸಕಾಲಿಕವಾಗಿವೆ. ಯುವ ಜನಾಂಗಕ್ಕೆ ಅವರು ಪ್ರೇರಣೆಯಾಗಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



'ಆಡಳಿತದಲ್ಲಿ ನೈತಿಕತೆ' ಕೃತಿಯನ್ನು ನ್ಯಾ.ಎಂ.ಎನ್. ವೆಂಕಟಾಚಲಯ್ಯ ಬಿಡುಗಡೆ ಮಾಡಿದರು. ಲೇಖಕಿ ಸುನಂದಾ, ಪ್ರಕಾಶಕ ಅಭಿನವ ರವಿಕುಮಾರ್, ವೈ.ಜಿ. ಮುರಳೀಧರ ಇದ್ದರು.

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ರವಿ ಪೂಜಾರಿ ಪ್ರಕರಣ: ಕೇಂದ್ರಕ್ಕೆ ನೋಟಿಸ್

ಬೆಂಗಳೂರು: 'ಸೆನೆಗಲ್ ನ್ಯಾಯಾಲಯ ನನ್ನ ವಿರುದ್ಧ ಉಲ್ಲೇಖಿಸಿರುವ ಪ್ರಕ ರಣಗಳಡಿ ಮಾತ್ರ ವಿಚಾರಣೆಗೆ ಒಳಪಡಿ ಸಬೇಕು' ಎಂದು ಕೋರಿ ಭೂಗತ ಪಾತಕಿ ರವಿ ಪೂಜಾರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ರವಿ ಪೂಜಾರಿ ಅಲಿಯಾಸ್ ರವಿಪ್ರಕಾಶ್ ಸಲ್ಲಿಸಿರುವ ಈ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ನ್ಯಾಯಪೀಠವು ಬುಧವಾರ ವಿಚಾರಣೆ ನಡೆಸಿತು. 'ಹಸ್ತಾಂತರ ಆದೇಶದಲ್ಲಿ ಉಲ್ಲೇಖಿಸದೇ ಇರುವ ಪ್ರಕರಣಗಳನ್ನು ವಿಚಾರಣೆಗೆ ಒಳಪಡಿಸಬಹುದೇ ಎಂಬ ಬಗ್ಗೆ ಸ್ಪಷ್ಟನೆ ನೀಡಿ' ಎಂದು ಪ್ರತಿವಾದಿ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್

ಹೆಚ್ಚುತ್ತಿರುವ ಸಂವಿಧಾನದ ಅಪವ್ಯಾಖ್ಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನ ಬದಲಾಯಿಸುವ ಮಾತುಗಳು, ಸಂವಿಧಾನದ ಪ್ರತಿಗಳನ್ನು ಸುಡುವ ಕಾರ್ಯಗಳು ಈಗ ಕಡಿಮೆಯಾಗಿವೆ. ಆದರೆ, ಸಂವಿಧಾನವನ್ನು ಅಪವ್ಯಾಖ್ಯಾನ ಮಾಡುವ, ಅಪ್ರಸ್ತುತಗೊಳಿಸುವ ಕಾರ್ಯಗಳು ಹೆಚ್ಚಿವೆ' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಹೇಳಿದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರ ಕ್ಷೇಮಾಭಿವೃದ್ಧಿ ಸಂಘವು ಬುಧವಾರ ಹಮ್ಮಿಕೊಂಡಿದ್ದ ಬಿ.ಆರ್. ಅಂಬೇಡ್ಕರ್ ಅವರ 132ನೇ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

'ಸಂವಿಧಾನವು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಮೀಸಲಾತಿಯನ್ನು ನೀಡಿತ್ತು. ಕೇಂದ್ರ ಸರ್ಕಾರ ಆರ್ಥಿಕ ಮಾನದಂಡ ತಂದು ಮೀಸಲಾತಿ ನೀಡುವ ಮೂಲಕ ಸಂವಿಧಾನವನ್ನು ಅಪವ್ಯಾಖ್ಯಾನ ಮಾಡಿದೆ. ಆಹಾರ, ಭಾಷೆ, ಧರ್ಮ, ಪ್ರದೇಶ, ಲಿಂಗ ಕಾರಣಕ್ಕಾಗಿ ತಾರತಮ್ಯ ಮಾಡಬಾರದು. ಆದರೆ, ಇಂದು ಇವು ಯಾವುದನ್ನೂ ಸಹಿಸದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಸಂವಿಧಾನ ಅರ್ಥವಾದರೆ ಸಹಿಷ್ಣುತೆ ಅರ್ಥವಾಗುತ್ತದೆ' ಎಂದರು.

'ಆಡಳಿತಗಾರರಿಗೆ ಜನರ ಬದುಕಿಗಿಂತ ಭಾವೋದ್ವೇಗವೇ ಮುಖ್ಯವಾಗಿದೆ. ಅಪ್ರಜಾಸತ್ತಾತ್ಮಕ ಯೋಜನೆಗಳನ್ನು ಮಾಡುತ್ತಿದ್ದಾರೆ. ಜನರಿಗೆ ಸಂವಿಧಾನದ ಅರಿವಿಲ್ಲ. ಸಂವಿಧಾನ ಕಲಿಸುವುದನ್ನು ಸರ್ಕಾರಗಳು ಮಾಡಿಲ್ಲ. ದೇಶ ಅರ್ಥವಾಗದೇ ಸಂವಿಧಾನವೂ ಅರ್ಥವಾಗದು' ಎಂದರು.

'ಸಂಸದರು, ಶಾಸಕರಲ್ಲಿ ಶೇ 88ರಷ್ಟು ಮಂದಿ ಕೋಟ್ಯಧಿಪತಿಗಳಾಗಿದ್ದಾರೆ. ಅಪರಾಧದ ಹಿನ್ನೆಲೆಯುಳ್ಳವರು ಶೇ 43ರಷ್ಟು, ವಂಶಪಾರಂಪರ್ಯ, ಬಿಲ್ಡರ್‌ಗಳು ಶೇ 53ರಷ್ಟು ಇದ್ದಾರೆ. ಅವರಿಗೆ ಬಡವರ ಕಷ್ಟ ಅರ್ಥವಾಗುವುದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಮಾತನಾಡಿ, 'ಮುಟ್ಟಿಸಿಕೊಳ್ಳದೇ ಇರುವುದು ಅಸ್ಪೃಶ್ಯರ ಸಮಸ್ಯೆಯಲ್ಲ. ಅಸ್ಪೃಶ್ಯತೆ ಆಚರಿಸುವವರ ಸಮಸ್ಯೆ. ದೇಶದಲ್ಲಿ ಕೊಳಕು ಇರಲು ಜನಸಂಖ್ಯೆ ಹೆಚ್ಚಿರುವುದು ಕಾರಣವಲ್ಲ, ಸ್ವಚ್ಛತೆಯನ್ನು ಅದಕ್ಕಾಗಿ ಇರುವ ಜಾತಿಯಷ್ಟೇ ಮಾಡಬೇಕು ಎಂಬ ಮನಃಸ್ಥಿತಿ ಕಾರಣ' ಎಂದರು.

'ಸುಭದ್ರವಾದ, ಜವಾಬ್ದಾರಿಯುತ ಸರ್ಕಾರ ಇರುತ್ತಿದ್ದರೆ ಮಣಿಪುರದ ಅಮಾನವೀಯ ಘಟನೆ ನಡೆಯಲು ಸಾಧ್ಯವೇ ಇರಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಶಾಸಕ ಸಿ.ಎನ್. ಅಶ್ವತ್ಥ್ ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷೆ ಬಿ. ಮಂಜಮ್ಮ ಜೋಗತಿ ಉದ್ಘಾಟಿಸಿದರು.

ನಗರದಲ್ಲಿ ಬುಧವಾರ ನಡೆದ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್, ಮೂಡ್ನಾಕೂಡು ಚಿನ್ನಸ್ವಾಮಿ, ಡಾ.ಸಿ.ಎನ್‌. ಅಶ್ವತ್ಥನಾರಾಯಣ, ಬಿ. ಮಂಜಮ್ಮ ಜೋಗತಿ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು
–ಪ್ರಜಾವಾಣಿ ಚಿತ್ರ

ಕರ್ನಾಟಕವು ಆರ್ಥಿಕವಾಗಿ ಬಲಿಷ್ಠವಾಗಿದೆ. ಇಲ್ಲಿನ ತಲಾ ಆದಾಯವು ಉಳಿದ ರಾಜ್ಯಗಳಿಗಿಂತ ಹೆಚ್ಚಿದೆ. ಯಾವುದೇ ಭಾಗ್ಯಗಳನ್ನು ನೀಡುವ ಶಕ್ತಿ ರಾಜ್ಯಕ್ಕಿದೆ.
ಡಾ. ಸಿ.ಎನ್. ಅಶ್ವತ್ಥ್ ನಾರಾಯಣ, ಶಾಸಕ

ಕಣ್ಣಿನ ಕಾಯಿಲೆಗೆ ಜೀನ್ ಥೆರಪಿ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ನಾರಾಯಣ ನೇತ್ರಾಲಯವು ಕಣ್ಣಿನ ಕಾಯಿಲೆಗಳಿಗೆ 'ಜೀನ್ ಥೆರಪಿ' ಚಿಕಿತ್ಸೆ ನೀಡಲು ಮುಂದಾಗಿದ್ದು, ಇದರ ಮಾನವ ಕ್ಲಿನಿಕಲ್ ಪ್ರಯೋಗಗಳು ಶೀಘ್ರದಲ್ಲಿಯೇ ಪ್ರಾರಂಭವಾಗಲಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ. ರೋಹಿತ್ ಶೆಟ್ಟಿ, 'ವಂಶಾವಳಿಯಿಂದ ಕಾಣಿಸಿಕೊಳ್ಳುವ ಕಣ್ಣಿನ ಸಮಸ್ಯೆಗಳಿಗೆ ಕೈಗೆಟುಕುವ ದರದಲ್ಲಿ ಜೀನ್ ಥೆರಪಿ ಚಿಕಿತ್ಸೆ ನೀಡುವುದು ಈ ಸಂಶೋಧನೆಯ ಉದ್ದೇಶ. ನಮ್ಮ ನೇತ್ರಾಲಯದ ಸಂಶೋಧಕರು ಕಣ್ಣಿನ ಕಾಯಿಲೆಗಳಿಗೆ ಸ್ಥಳೀಯ ಜೀನ್ ಚಿಕಿತ್ಸೆಯ ಮಾನವ ಕ್ಲಿನಿಕಲ್ ಪ್ರಯೋಗಗಳನ್ನು ಪ್ರಾರಂಭಿಸಲು ಸಿದ್ಧರಾಗಿದ್ದಾರೆ. ದೇಶದಲ್ಲಿ ಇಂತಹ ಪ್ರಯತ್ನ ಇದೇ ಮೊದಲಾಗಿದೆ. ಈ ಜೀನ್ ಥೆರಪಿಯು ರೋಗದ ಬೆಳವಣಿಗೆಗೆ ಕಾರಣವಾಗಿರುವ ದೋಷಯುಕ್ತ ಜೀನ್‌ಗಳನ್ನು ರೋಗಶಾಸ್ತ್ರೀಯವಾಗಿ ಸರಿಪಡಿಸುವ ಚಿಕಿತ್ಸಾ ವಿಧಾನವಾಗಿದೆ' ಎಂದು ಹೇಳಿದರು.

'ವಿದೇಶಗಳಲ್ಲಿ ಈ ಚಿಕಿತ್ಸೆಯ ಒಂದು ಇಂಜೆಕ್ಷನ್‌ಗೆ ₹ 7 ಕೋಟಿ ಇದೆ. ಇಷ್ಟು ಮೊತ್ತದ ಹಣ ನೀಡಿ ಭಾರತೀಯರು ಚಿಕಿತ್ಸೆ ಪಡೆಯಲು ಸಾಧ್ಯವಿಲ್ಲ. ದೇಶದಲ್ಲಿ ಬಹಳಷ್ಟು ಮಂದಿಗೆ ಜೀನ್ ಥೆರಪಿ ಅಗತ್ಯವಿದೆ. ಹಾಗಾಗಿ, ಈ ತಂತ್ರಜ್ಞಾನಗಳನ್ನು ಸ್ಥಳೀಯವಾಗಿ ಅಭಿವೃದ್ಧಿಪಡಿಸಿದರೆ ವೆಚ್ಚವನ್ನು ಕಡಿಮೆ ಮಾಡಬಹುದಾಗಿದೆ' ಎಂದರು.

'ಜೀನ್‌ಥೆರಪಿ ಚಿಕಿತ್ಸೆಗೆ ಸ್ವಯಂಪ್ರೇರಿತವಾಗಿ ಒಳಗೊಳ್ಳಲು ಬಯಸುವ ರೋಗಿಗಳು ಆಸ್ಪತ್ರೆಯ ದೂರವಾಣಿ ಸಂಖ್ಯೆ 080 66660715 ಅಥವಾ ಇಮೇಲ್ ವಿಳಾಸ genetictest@narayananethralaya.comಗೆ ಸಂಪರ್ಕಿಸಬಹುದು' ಎಂದು ತಿಳಿಸಿದರು.

ಡಿಸಿಪಿ ವಿರುದ್ಧ ಕ್ರಮ ಕೈಗೊಳ್ಳಲು ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ಆಗ್ರಹ

‘ದಲಿತರೆಂಬ ಕಾರಣಕ್ಕೆ ಕುರ್ಚಿ ತೆಗೆಸಿದರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಲಿತರೆಂಬ ಕಾರಣಕ್ಕೆ ಇನ್‌ಸ್ಪೆಕ್ಟರ್ ಕುಳಿತುಕೊಳ್ಳುತ್ತಿದ್ದ ಕುರ್ಚಿಯಲ್ಲಿ ಕುಳಿತುಕೊಳ್ಳಲು ಬೆಂಗಳೂರು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ್ ನಿಂಬರಗಿ ನಿರಾಕರಿಸಿದ್ದರು’ ಎಂದು ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ಮುಖ್ಯಮಂತ್ರಿ, ಗೃಹ ಸಚಿವರಿಗೆ ದೂರು ಸಲ್ಲಿಸಿದೆ.

ಮೈಸೂರಿನ ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ, ಒಕ್ಕೂಟದ ಅಧ್ಯಕ್ಷ ಬಿ.ಗೋಪಾಲ್, ದಸಂಸ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್, ಒಳಮೀಸಲಾತಿ ಹೋರಾಟ ಸಮಿತಿಯ ಬಸವರಾಜ ಕೌತಾಳ್, ಭೀಮ್ ಆರ್ಮಿ ಪ್ರಧಾನ ಕಾರ್ಯದರ್ಶಿ ರಾಜಗೋಪಾಲ್, ಮುಖಂಡರಾದ ಎಂ.ಪಿ.ಗಿರೀಶ್ ದೇವನಹಳ್ಳಿ, ಸುರೇಶ್ ಅವರು ಈ ದೂರಿಗೆ ಸಹಿ ಹಾಕಿದ್ದಾರೆ.

‘ಖಾಸಗಿ ಸಂಸ್ಥೆಯೊಂದು ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್‌ಗೆ ವಂಚಿಸಿದ ಪ್ರಕರಣದ ಮಾಹಿತಿ ಪಡೆಯಲು ವಿಜಯನಗರ ಠಾಣೆಗೆ ಡಿಸಿಪಿ ಭೇಟಿ ನೀಡಿದ್ದರು. ಆಗ ಇಂತಹ ವರ್ತನೆ ತೋರಿದ್ದಾರೆ. ಇದು ರಾಜ್ಯದ ಕೆಲ ಅಧಿಕಾರಿಗಳು ದಲಿತ ಸಮುದಾಯವನ್ನು ನಡೆಸಿಕೊಳ್ಳುತ್ತಿರುವ ರೀತಿಗೆ ಉದಾಹರಣೆ. ಶೋಷಿತ, ದಮನಿತ ಸಮುದಾಯಕ್ಕೆ ರಕ್ಷಣೆ ಕೊಡಬೇಕಾದ ಉನ್ನತ ಪೊಲೀಸ್ ಅಧಿಕಾರಿಗಳೇ ಅಧೀನ ಅಧಿಕಾರಿಗಳ ಜತೆ ಹೀಗೆ ನಡೆದುಕೊಂಡರೆ ಹೇಗೆ’ ಎಂದೂ ಪ್ರಶ್ನಿಸಿದ್ದಾರೆ.

‘ಪ್ರತಿ ಠಾಣೆಗೆ ಮೇಲಧಿಕಾರಿಗಳು ಭೇಟಿ ನೀಡಿದಾಗಲೂ ಆ ಠಾಣೆಯ ಮುಖ್ಯಸ್ಥರ ಕುರ್ಚಿಯಲ್ಲಿ ಕುಳಿತು ಸಭೆ ನಡೆಸುವುದು, ಮಾಹಿತಿ ಪಡೆಯುವುದು ಮೊದಲಿನಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ. ಬೇರೆ ಠಾಣೆಗಳಿಗೆ ಭೇಟಿ ನೀಡಿದ್ದ ಡಿಸಿಪಿ ಅವರು ಇನ್‌ಸ್ಪೆಕ್ಟರ್‌ಗಳು ಬಳಸುವ ಕುರ್ಚಿಯಲ್ಲೇ ಕುಳಿತುಕೊಂಡಿದ್ದಾರೆ. ವಿಜಯನಗರ ಠಾಣೆಗೆ ಭೇಟಿ ನೀಡಿದಾಗ ಅಲ್ಲಿನ ಇನ್‌ಸ್ಪೆಕ್ಟರ್ ಡಿ. ಸಂತೋಷ್ ಕುಮಾರ್ ಅವರ ಜಾತಿ ಕೇಳಿದ ನಂತರ ಕುರ್ಚಿ ತೆಗೆಸಿ, ಅದೇ ಜಾಗದಲ್ಲಿ ಬೇರೆ ಕುರ್ಚಿ ಹಾಕಿಸಿಕೊಂಡು ಕುಳಿತಿದ್ದಾರೆ. ಇದು ದಲಿತರ ಮೇಲಿನ ದೌರ್ಜನ್ಯ ಹಾಗೂ ಅಸ್ಪೃಶ್ಯತೆ ಆಚರಣೆಗೆ ಸಾಕ್ಷಿ. ರಾಜ್ಯದಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

ಖಾಸಗಿ ಸಂಸ್ಥೆಯ ವಿರುದ್ಧ ತನಿಖೆಗೆ ಅಡ್ಡಿಪಡಿಸಿದ್ದಾರೆ. ದೋಷಾರೋಪ ಪಟ್ಟಿ ಸಲ್ಲಿಸದಂತೆ ಸಂತೋಷ್ ಕುಮಾರ್ ಮೇಲೆ ಒತ್ತಡ ಹಾಕಿದ್ದಾರೆ. ಅವರ ಒತ್ತಡಕ್ಕೆ ಮಣಿಯದೇ ದೋಷಾರೋಪಪಟ್ಟಿ ಸಲ್ಲಿಸಿದ ನಂತರ ಆರೋಪಿಗಳನ್ನು ಬಂಧಿಸದಂತೆ ಒತ್ತಡ ತಂದಿದ್ದಾರೆ. ಈ ಎಲ್ಲ ಅಂಶಗಳನ್ನೂ ಠಾಣಾ ದಿನಚರಿಯಲ್ಲಿ ನಮೂದಿಸಿದ ಕಾರಣಕ್ಕೆ ಇನ್‌ಸ್ಪೆಕ್ಟರ್ ಅವರನ್ನು ಕಡ್ಡಾಯ ರಜೆ ಮೇಲೆ ಕಳುಹಿಸಿದ್ದಾರೆ. ಆರೋಪಿಗಳಿಗೆ ಅನುಕೂಲ ಮಾಡಿಕೊಡಲು ಬಂಧನದ ವಾರೆಂಟ್ ಬೇರೆ ಠಾಣೆಗೆ ವರ್ಗಾಯಿಸಿದ್ದಾರೆ. ಹಾಗಾಗಿ, ನಿಂಬರಗಿ ಅವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಸಂತೋಷ್‌ಗೆ ನೋಟಿಸ್

‘ದಲಿತರೆಂಬ ಕಾರಣಕ್ಕೆ ಕುರ್ಚಿ ತೆಗೆಸಿದರು’ ಎಂಬ ಆರೋಪವನ್ನು ಲಕ್ಷ್ಮಣ್ ನಿಂಬರಗಿ ನಿರಾಕರಿಸಿದ್ದಾರೆ. ಸುಳ್ಳು ಆರೋಪ ಮಾಡಿ, ಅದನ್ನು ಠಾಣಾ ದಿನಚರಿಯಲ್ಲಿ ನಮೂದಿಸಿರುವ ತಮ್ಮ ವಿರುದ್ಧ ಏಕೆ ಕ್ರಮ ಕೈಗೊಳ್ಳಬಾರದು ಎಂದು ಇನ್‌ಸ್ಪೆಕ್ಟರ್ ಸಂತೋಷ್ ಕುಮಾರ್ ಅವರಿಗೆ ಪೊಲೀಸ್ ಶಿಸ್ತು ಪ್ರಾಧಿಕಾರ ನೋಟಿಸ್ ನೀಡಿದೆ ಎಂದು ಮೂಲಗಳು ಹೇಳಿವೆ.

ಕಾರ್ಗಿಲ್ ವಿಜಯ ದಿವಸ ಕಾರ್ಯಕ್ರಮದಲ್ಲಿ ಸಿ.ಎಂ

ಮಳೆಯಿಂದ ಸ್ಥಿತಿ ಕೈ ಮೀರಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಬುಧವಾರ ರಾಷ್ಟ್ರೀಯ ಸೈನಿಕ ಸ್ಮಾರಕ ಮ್ಯಾನೇಜ್‌ಮೆಂಟ್ ಟ್ರಸ್ಟ್‌ನ ‘ಕಾರ್ಗಿಲ್ ವಿಜಯ್ ದಿವಸ್’ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಮಿಲಿಟರಿ ಸ್ಮಾರಕಕ್ಕೆ ವಿದ್ಯಾರ್ಥಿನಿಯರು ಪುಷ್ಪ ನಮನ ಸಲ್ಲಿಸಿದರು. –ಪ್ರಜಾವಾಣಿ ಚಿತ್ರ

ಬೆಂಗಳೂರು: ’ಕೆಲವು ದಿನಗಳಿಂದ ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿದ್ದು, ಕೈ ಮೀರಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ಬುಧವಾರ ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ಕೆ.ಆರ್.ಎಸ್ , ಕಬಿನಿ, ಹಾರಂಗಿ, ಹೇಮಾವತಿ, ಆಲಮಟ್ಟಿ, ಸೇರಿದಂತೆ ಎಲ್ಲ ಜಲಾಶಯಗಳಿಗೆ ನೀರು ಹರಿದು ಬರುತ್ತಿದೆ. ಬಿತ್ತನೆ ಕಾರ್ಯ ಚುರುಕುಗೊಂಡಿದ್ದು, ಕೆಲವೇ ದಿನಗಳಲ್ಲಿ ಶೇ 100ರಷ್ಟು ಬಿತ್ತನೆಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಜುಲೈ 31 ಕ್ಕೆ ಮಂಗಳೂರು, ಉಡುಪಿ, ಉತ್ತರ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ ಭೇಟಿ ನೀಡಿ, ಜನರ ಕಷ್ಟ ಕೇಳುವೆ’ ಎಂದರು.

‘ಕೆಲವೆಡೆ ಟ್ಯಾಂಕರ್ ನೀರು ಪೂರೈಸಲಾಗುತ್ತಿತ್ತು. ಈಗ ಕುಡಿಯುವ ನೀರಿನ ಸಮಸ್ಯೆ ಇಲ್ಲ’ ಎಂದರು.

ಯೋಧರ ಬದುಕು ಸ್ಫೂರ್ತಿ: ‘ಕಾರ್ಗಿಲ್ ಯುದ್ಧದಲ್ಲಿ 524 ಯೋಧರು ಹೋರಾಡಿದ್ದಾರೆ. ಅವರ ತ್ಯಾಗ, ಬಲಿದಾನವನ್ನು ಸ್ಮರಿಸಬೇಕು. ಅವರ ಜೀವನ ಇಂದಿನ ಯುವಕರಿಗೆ ಸ್ಫೂರ್ತಿ ಹಾಗೂ ಮಾರ್ಗದರ್ಶನವಾಗಬೇಕು’ ಎಂದರು.

2 ವಿಧದ ಬಿಪಿಎಲ್ ಚೀಟಿಗೆ ಚಿಂತನೆ: ಕೆ.ಎಚ್. ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಉದ್ದೇಶಕ್ಕೆ ಸೀಮಿತವಾದ ಪ್ರತ್ಯೇಕ ಪಡಿತರ ಚೀಟಿ ಸೇರಿದಂತೆ ಆಂಧ್ರಪ್ರದೇಶದ ಮಾದರಿಯಲ್ಲಿ ರಾಜ್ಯದಲ್ಲಿ ಎರಡು ವಿಧದ ಪಡಿತರ ಚೀಟಿಗಳನ್ನು ಜಾರಿಗೊಳಿಸುವ ಚಿಂತನೆ ನಡೆದಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಬಿಪಿಎಲ್ ಪಡಿತರ ಚೀಟಿದಾರರಲ್ಲಿ ಕೆಲವರು ಆಹಾರ ಧಾನ್ಯ ಪಡೆಯುತ್ತಿಲ್ಲ. ವೈದ್ಯಕೀಯ ಸೇವೆಗಳಲ್ಲಿ ಶುಲ್ಕ ರಿಯಾಯ್ತಿ ಪಡೆಯುವುದಕ್ಕೆ ಸೀಮಿತವಾಗಿ ಪಡಿತರ ಚೀಟಿ ಬಳಸುತ್ತಿದ್ದಾರೆ. ಆಂಧ್ರಪ್ರದೇಶದಲ್ಲಿ ಆಸಕ್ತರಿಗೆ ವೈದ್ಯಕೀಯ ಉದ್ದೇಶಕ್ಕೆ ಸೀಮಿತವಾಗಿ ಬಳಸಬಹುದಾದ ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ. ಅದೇ ಮಾದರಿಯನ್ನು ರಾಜ್ಯದಲ್ಲೂ ಜಾರಿಗೊಳಿಸುವ ಪ್ರಸ್ತಾವವಿದೆ’ ಎಂದರು.

ಆಂಧ್ರಪ್ರದೇಶ ಮಾದರಿ ಕುರಿತು ಮಾಹಿತಿ ಪಡೆಯಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿದ ಬಳಿಕ ಈ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

ಬಿಪಿಎಲ್ ಪಡಿತರ ಚೀಟಿ ಕೋರಿರುವ ಮೂರು ಲಕ್ಷ ಅರ್ಜಿಗಳು ಬಾಕಿ ಇವೆ. ಅವುಗಳನ್ನು ಶೀಘ್ರದಲ್ಲಿ ಪರಿಶೀಲಿಸಿ, ಅರ್ಹರಿಗೆ ಪಡಿತರ ಚೀಟಿ ವಿತರಿಸಲಾಗುವುದು ಎಂದರು.

ನಾಲ್ಕು ಜಿಲ್ಲೆಗಳಲ್ಲಿ ಬಾಕಿ: ರಾಜ್ಯದಲ್ಲಿ 1.28 ಕೋಟಿ ಬಿಪಿಎಲ್ ಪಡಿತರ ಚೀಟಿಗಳಿವೆ. ಈ ಪೈಕಿ 97.27 ಲಕ್ಷ ಪಡಿತರ ಚೀಟಿದಾರರ ಆಧಾರ್, ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆಗಳನ್ನು ಜೋಡಣೆ ಮಾಡಲಾಗಿದೆ. 30.90 ಲಕ್ಷ ಪಡಿತರ ಚೀಟಿಗಳಿಗೆ ಸಂಬಂಧಿಸಿದಂತೆ ಈ ಮಾಹಿತಿ ಜೋಡಣೆಯಾಗಿಲ್ಲ. ಮೊದಲ ಹಂತದಲ್ಲಿ ಅಗತ್ಯ ಮಾಹಿತಿ ಜೋಡಣೆಯಾಗಿರುವ ಪಡಿತರ ಚೀಟಿದಾರರ ಖಾತೆಗೆ ನೇರ ನಗದು ವರ್ಗಾವಣೆ ಮೂಲಕ ಅಕ್ಕಿಯ ಬಾಬ್ತು ಹಣ ವರ್ಗಾವಣೆ ಮಾಡಲಾಗುತ್ತಿದೆ ಎಂದು ಮುನಿಯಪ್ಪ ಹೇಳಿದರು.

ಮಾಹಿತಿ ಕೊರತೆ ಇರುವ ಪಡಿತರ ಚೀಟಿದಾರರನ್ನು ಸಂಪರ್ಕಿಸಿ, ಅಗತ್ಯ ಮಾಹಿತಿಗಳನ್ನು ಜೋಡಣೆ ಮಾಡಲಾಗುವುದು. ಎರಡರಿಂದ ಮೂರು ತಿಂಗಳಲ್ಲಿ ಅಂತಹ ಪಡಿತರ ಚೀಟಿದಾರರ ಖಾತೆಗೂ ಎರಡರಿಂದ ಮೂರು ತಿಂಗಳಲ್ಲಿ ಹಣ ವರ್ಗಾವಣೆ ಮಾಡಲಾಗುವುದು ಎಂದು ವಿವರ ನೀಡಿದರು.

ಈವರೆಗೆ 27 ಜಿಲ್ಲೆಗಳಲ್ಲಿ ನೇರ ನಗದು ವರ್ಗಾವಣೆ ಮೂಲಕ ₹ 566 ಕೋಟಿ ಪಾವತಿಸಲಾಗಿದೆ. ಚಿಕ್ಕಬಳ್ಳಾಪುರ, ಶಿವಮೊಗ್ಗ, ಉಡುಪಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಬಾಕಿ ಇದ್ದು, ವಾರದೊಳಗೆ ಎಲ್ಲರ ಖಾತೆಗಳಿಗೂ ಹಣ ವರ್ಗಾವಣೆ ಮಾಡಲಾಗುವುದು ಎಂದರು.

‘ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ ಪ್ರಕರಣ: ತೊಂದರೆಯಾಗಿದ್ದರೆ ಪರಿಶೀಲನೆ’

ಪ್ರಜಾವಾಣಿ ವಾರ್ತೆ

ಕೋಲಾರ: ‘ಕೆ.ಜಿ.ಹಳ್ಳಿ ಹಾಗೂ ಡಿ.ಜೆ. ಹಳ್ಳಿ ಘಟನೆಗೆ ಸಂಬಂಧಿಸಿದಂತೆ ಅಮಾಯಕರಿಗೆ ತೊಂದರೆಯಾಗಿದ್ದರೆ ಪರಿಶೀಲಿಸಬೇಕಾಗುತ್ತದೆ. ಶಾಸಕರು ಪತ್ರ ಮುಖೇನ ಗೃಹ ಸಚಿವರಿಗೆ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಘಟನೆ ಸಂಬಂಧ ಕಾನೂನಿನಡಿಯಲ್ಲಿ ಪ್ರಕರಣ ದಾಖಲಾಗಿತ್ತು. ಹೀಗಾಗಿ, ಗೃಹ ಇಲಾಖೆಯು ಪರಿಶೀಲನೆ ನಡೆಸಿ ಕಾನೂನು ಪ್ರಕಾರವೇ ಕ್ರಮ ವಹಿಸಲಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ತಿಳಿಸಿದರು.

ದಿನೇಶ್ ಗುಂಡೂರಾವ್

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಸಚಿವರ ವಿರುದ್ಧ ಯಾವುದೇ ಶಾಸಕರು ಅಸಮಾಧಾನ ವ್ಯಕ್ತಪಡಿಸಿಲ್ಲ. ಕೆಲವರು ನಕಲಿ ಪತ್ರ ಸೃಷ್ಟಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುತ್ತಾರೆ. ಈ ದಿನಗಳಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ಬರುವ ಮಾಹಿತಿ ನಂಬುವುದು ಕಷ್ಟ. ದಾಖಲೆಗಳು, ಧ್ವನಿಯನ್ನು ನಕಲಿ ಮಾಡುವುದು ಸುಲಭ. ಹೀಗಾಗಿ, ಪರಿಶೀಲಿಸಿ ನಿಜ ಯಾವುದು, ಸತ್ಯ ಯಾವುದು ಎಂಬುದನ್ನು ಕಂಡುಕೊಳ್ಳಬೇಕು. ನಕಲಿ ಪತ್ರವೆಂದು ಈಗಾಗಲೇ ಶಾಸಕ ಬಿ.ಆರ್. ಪಾಟೀಲ ಅವರು ಸ್ಪಷ್ಟಪಡಿಸಿದ್ದಾರೆ’ ಎಂದು ಹೇಳಿದರು.

‘ಹಲವಾರು ವಿಚಾರಗಳ ಬಗ್ಗೆ ಚರ್ಚಿಸಲು ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ. ಹಿಂದೆ ಸಭೆ ಕರೆದಾಗ ಚರ್ಚೆ ಮಾಡಲು ಶಾಸಕರಿಗೆ ಸಮಯ ಸಿಕ್ಕಿರಲಿಲ್ಲ. ಹೀಗಾಗಿ, ಮತ್ತೊಮ್ಮೆ ಸಭೆ ನಡೆಸಲು ತೀರ್ಮಾನಿಸಲಾಗಿತ್ತು. ನಿನ್ನೆ ಮೊನ್ನೆಯ ಘಟನೆಗಳಿಂದಾಗಿ ಸಭೆ ಕರೆದಿದ್ದಲ್ಲ. ಅವೆಲ್ಲಾ ಆಧಾರರಹಿತ ಸುದ್ದಿಗಳು’ ಎಂದು ಹೇಳಿದರು.

‘ಶಾಸಕಾಂಗ ಪಕ್ಷದ ಸಭೆ ಸಂಬಂಧ ಏಕಿಷ್ಟು ಚರ್ಚೆ ನಡೆಯುತ್ತಿದೆ ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟವರು ನಾವು. ಇಂಥ ಸಭೆ ನಡೆದಾಗ ಮುಕ್ತ ಚರ್ಚೆ ನಡೆಸಬಹುದು’ ಎಂದರು.

‘ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಈಗ ಏಕೆ ಚರ್ಚೆ ನಡೆಯುತ್ತಿದೆ ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಎಲ್ಲವೂ ಸುಗಮವಾಗಿ ನಡೆಯುತ್ತಿದೆ. ಬದಲಾವಣೆ ಬಗ್ಗೆ ಮಾತನಾಡುವ ಅವಶ್ಯವೇ ಇಲ್ಲ. ಮುಖ್ಯಮಂತ್ರಿ ಬದಲಾವಣೆ ಅಪ್ರಸ್ತುತ ವಿಚಾರ’ ಎಂದು ದಿನೇಶ್ ಹೇಳಿದರು.

‘ಅಸಮಾಧಾನ ಸೃಷ್ಟಿ ಮಾಡುತ್ತಿರುವುದು ಮಾಧ್ಯಮಗಳು. ಸರ್ಕಾರ ರಚನೆಗೆ ಮೊದಲು ಕಾಂಗ್ರೆಸ್‌ನಲ್ಲಿ ಒಗ್ಗಟ್ಟು ಇಲ್ಲವೆಂದು ಬಿಂಬಿಸಿದಿರಿ. ಅದಕ್ಕೆ ತೆರೆಬಿದ್ದಿದ್ದು, ಈಗ ಅಸಮಾಧಾನವಿದೆ ಎಂಬುದಾಗಿ ಸೃಷ್ಟಿಸುತ್ತಿದ್ದೀರಿ. ಸಮಾಧಾನ, ಅಸಮಾಧಾನ ಸಹಜ. ಅದನ್ನು ಸಮರ್ಥವಾಗಿ ನಿಭಾಯಿಸುವ ಮುಖಂಡರು ಇದ್ದಾರೆ’ ಎಂದರು.

‘ಕೆಲವರು ಸರ್ಕಾರ ಅಸ್ಥಿರಗೊಳಿಸುವ ಕೆಲಸ ಮಾಡುತ್ತಾರೆ. ಆದರೆ, ಅವರಿಗೆ ಯಶಸ್ಸು ಸಿಗುವುದಿಲ್ಲ’ ಎಂದು ತಿಳಿಸಿದರು.

ನೆಟ್ಟಾರು ಹತ್ಯೆ ಪ್ರಕರಣ: ದಾಖಲೆ ಸಲ್ಲಿಕೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ಯುವ ಮೋರ್ಚಾ ಸದಸ್ಯ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಿಗೆ ಕಿರುಕುಳ ನೀಡಲಾಗಿದೆ ಎಂಬ ಬಗೆಗಿನ ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ಹಾಗೂ ಎನ್‌ಐಎ ಕಚೇರಿಯಲ್ಲಿನ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿ ಲಭ್ಯವಿದ್ದರೆ ಅದನ್ನು ವಿಶೇಷ ಕೋರ್ಟ್‌ಗೆ ಸಲ್ಲಿಸುವಂತೆ ಹೈಕೋರ್ಟ್ ಆದೇಶಿಸಿದೆ.

ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಜಬೀರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಮತ್ತು ನ್ಯಾಯಮೂರ್ತಿ ಜಿ. ಬಸವರಾಜ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಎಫ್‌ಎಸ್‌ಎಲ್ ಮತ್ತು ಎನ್‌ಎಐ ಕಚೇರಿಗಳಲ್ಲಿ 2022ರ ನವೆಂಬರ್ ತಿಂಗಳ ಸಿಸಿಟಿವಿ ದೃಶ್ಯಾವಳಿ ಲಭ್ಯವಿದ್ದರೆ ಅದನ್ನು ವಿಶೇಷ ಕೋರ್ಟ್‌ಗೆ ಸಲ್ಲಿಸಬೇಕು’ ಎಂದು ವಿಧಿ ವಿಜ್ಞಾನ ಪ್ರಯೋಗಾಲಯ ಮತ್ತು ಎನ್‌ಐಎ ಕಂಪ್ಯೂಟರ್ ಕೋಶ ಮತ್ತು ಸಿಬ್ಬಂದಿಗೆ ಆದೇಶಿಸಿದ್ದು ಅರ್ಜಿ ವಿಲೇವಾರಿ ಮಾಡಿದೆ.

‘ಭಾರತೀಯ ಸಾಕ್ಷ್ಯ ಕಾಯ್ದೆ-1872ರ ಕಲಂ 124 ಮತ್ತು 126ರ ಪ್ರಕಾರ, ಅಧಿಕಾರಿಗಳ ನಡುವೆ ಹಲವು ಗೋಪ್ಯವಾದ ಅಧಿಕೃತ ಸಂವಹನ ನಡೆದಿರುತ್ತದೆ. ಅದನ್ನು ಬಹಿರಂಗಪಡಿಸಲು ಆಗದು’ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಕೋರಿಕೆ ಏನಿತ್ತು?: ‘2022ರ ನವೆಂಬರ್ ನಲ್ಲಿ ಎಫ್‌ಎಸ್‌ಎಲ್ ಮತ್ತು ಎನ್‌ಐಎ ಕಚೇರಿಗಳಲ್ಲಿ 18ನೇ ಆರೋಪಿ ಮೊಹಮ್ಮದ್ ಜಬೀರ್‌ಗೆ ಎನ್‌ಐಎ ಅಧಿಕಾರಿಗಳು ತಪ್ಪು ಒಪ್ಪಿಕೊಳ್ಳುವಂತೆ ಬಲವಂತ ಮಾಡಿ ಕಿರುಕುಳ ನೀಡಿದ್ದರು. ಹಾಗಾಗಿ, ಅಂದಿನ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಮತ್ತು ಎನ್‌ಎಐ ಅಧಿಕಾರಿಗಳ ಕರೆ ದಾಖಲೆಗಳ ವಿವರಗಳನ್ನು ಒದಗಿಸುವಂತೆ ಸಮನ್ಸ್ ಜಾರಿಗೊಳಿಸಬೇಕು’ ಎಂದು ಕೋರಲಾಗಿತ್ತು. ಆದರೆ ವಿಶೇಷ ನ್ಯಾಯಾಲಯ ಈ ಮನವಿಯನ್ನು ತಿರಸ್ಕರಿಸಿತ್ತು.

‘ಜಬೀರ್‌ಗೆ ಎನ್‌ಐಎ ಅಧಿಕಾರಿಗಳು ಕಿರುಕುಳ ನೀಡಿದ್ದಾರೆಂಬ ಆರೋಪ ಆಧಾರ ರಹಿತ ಮತ್ತು ಸುಳ್ಳು’ ಎಂದು ಹೇಳಿತ್ತು. ಎನ್‌ಐಎ ಪರ ಪಿ.ಪ್ರಸನ್ನಕುಮಾರ್ ವಾದ ಮಂಡಿಸಿದ್ದರು.

‘ರಾಜಕೀಯ ದುರುದ್ದೇಶ- ಖಟ್ಲೆಗಳ ಸಂಕೋಲೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತನ್ನ ಎದುರಾಳಿಯನ್ನು ಖಟ್ಲೆಗಳ ಸಂಕೋಲೆಯಲ್ಲಿ ಸಿಲುಕಿಸುವುದು ರಾಜಕೀಯ ದುರುದ್ದೇಶವಲ್ಲದೆ ಮತ್ತೇನೂ ಅಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

ಆದಾಯ ಮೀರಿದ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಸಿಬಿಐ ದಾಖಲಿಸಿರುವ ಎಫ್‌ಐಆರ್ ಮತ್ತು ಆ ಕುರಿತ ತನಿಖೆ ರದ್ದುಪಡಿಸುವಂತೆ ಕೋರಿ ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಶಿವಕುಮಾರ್ ಪರ ಹಿರಿಯ ವಕೀಲ ಸಂದೇಶ್ ಚೌಟ, ಸಿಬಿಐನ ವಾದಾಂಶಗಳನ್ನು ಸಾರಸಗಟು ತಿರಸ್ಕರಿಸಿದರು.

‘ಪ್ರಾಥಮಿಕ ತನಿಖೆಯನ್ನು ಸಾಮಾನ್ಯವಾಗಿ ಮೂರು ತಿಂಗಳು ನಡೆಸಲಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ಏಳು ತಿಂಗಳು ನಡೆಸಲಾಗಿದೆ. ಸಿಬಿಐ ಕೈಪಿಡಿಯನ್ನೇ ಪಾಲನೆ ಮಾಡಿಲ್ಲ. ಇಷ್ಟು ಸುದೀರ್ಘ ಅವಧಿ ಏತಕ್ಕಾಗಿ ಎಂಬುದು ಗೊತ್ತಾಗಬೇಕಿದೆ’ ಎಂದು ಆಕ್ಷೇಪಿಸಿದರು.

‘ಎಫ್‌ಐಆರ್ ದಾಖಲಿಸುವ ಮುನ್ನ ನಡೆಸಲಾದ ಪ್ರಾಥಮಿಕ ತನಿಖೆಯಲ್ಲಿ ಯಾವುದೇ ಮಾಹಿತಿಯ ಉಲ್ಲೇಖಗಳಿಲ್ಲ ಮತ್ತು ಯಾವ ರೀತಿಯಲ್ಲಿ ಅಕ್ರಮ ಆಸ್ತಿ ಸಂಪಾದಿಸಿದ್ದಾರೆ ಎಂಬುದನ್ನು ತೋರಿಸಲು ಸಿಬಿಐಗೆ ಸಾಧ್ಯವಾಗಿಲ್ಲ’ ಎಂದು ಅಂಕಿ-ಸಂಖ್ಯೆಗಳ ಮೂಲಕ ವಿವರಿಸಿದರು.

ವಾದ ಆಲಿಸಿದ ನ್ಯಾಯಪೀಠ, “ಪ್ರಕರಣಕ್ಕೆ ಸಂಬಂಧಿಸಿದ ಕೇಸ್ ಡೈರಿ ಅಗತ್ಯ ಎನಿಸಿದರೆ ಅದನ್ನು ತರಿಸಿಕೊಂಡು, ಪರಿಶೀಲಿಸಲಾಗುವುದು. ಕೇಸ್ ಡೈರಿ ತರಿಸಲು ಸಮನ್ ಮಾಡಿ ಎಂಬ ಅಂಶವನ್ನು ಒತ್ತಿ ಹೇಳಬೇಡಿ. ಇದು ನ್ಯಾಯಾಲಯದ ವಿವೇಚನೆಗೆ ಬಿಟ್ಟ ವಿಚಾರ. ನಿಮ್ಮ ಆಕ್ಷೇಪಣೆಯನ್ನು ದಾಖಲಿಸಲಾಗಿದೆ. ಅದಕ್ಕೆ ಸಿಬಿಐ ಉತ್ತರಿಸಲಿ ಬಿಡಿ" ಎಂದು ಹೇಳಿತು. ದಿನದ ಕಲಾಪದ ಅವಧಿ ಮುಕ್ತಾಯಗೊಂಡ ಕಾರಣ ವಿಚಾರಣೆಯನ್ನು ಇದೇ 31ಕ್ಕೆ ಮುಂದೂಡಿತು.



ವಿದ್ಯಾರ್ಥಿ ಅನುಮಾನಾಸ್ಪದ ಸಾವು: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲೇಜೊಂದರಲ್ಲಿ ಬಿಕಾಂ ವ್ಯಾಸಂಗ ಮಾಡುತ್ತಿದ್ದ ಮಾರ್ವೇಶ್ (19) ಎಂಬ ವಿದ್ಯಾರ್ಥಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ಹೆಣ್ಣೂರು ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ಅಸ್ವಸ್ಥಗೊಂಡಿದ್ದ ಮಾರ್ವೇಶ್‌ನನ್ನು ಜಿಯಾನ್ ಆಸ್ಪತ್ರೆಗೆ ಸುನೀಲ್ ಎಂಬಾತ ಕರೆ ತಂದು ದಾಖಲಿಸಿದ್ದ. ಅಷ್ಟರಲ್ಲಿಯೇ ವಿದ್ಯಾರ್ಥಿ ಮೃತಪಟ್ಟಿದ್ದ. ಸ್ಥಳಕ್ಕೆ ತೆರಳಿದ ಬಾಣಸವಾಡಿ ಪೊಲೀಸರು, ಪರಿಶೀಲಿಸಿ ಪೋಷಕರಿಗೆ ಮಾಹಿತಿ ನೀಡಿದ್ದರು. ಸದ್ಯ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಗೊತ್ತಿದ್ದವರೇ ಮನೆಯ ಬಳಿಗೆ ಮಾರ್ವೇಶ್ ಬಗ್ಗೆ ವಿಚಾರಿಸಿದ್ದರು. ಯುವತಿ ವಿಚಾರಕ್ಕೆ ಗಲಾಟೆ ನಡೆದಿರುವ ಅನುಮಾನವಿದೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್‌ಗೆ ಆರ್‌ಬಿಐ ನಿರ್ಬಂಧ

ಆತಂಕ: ₹ 8 ಕೋಟಿ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಸವನಗುಡಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್‌ನ ವ್ಯವಹಾರಗಳ ಮೇಲೆ ಆರ್‌ಬಿಐ ನಿರ್ಬಂಧ ವಿಧಿಸಿದ ಬಳಿಕ ಬ್ಯಾಂಕ್‌ನ ಗ್ರಾಹಕರು ಕಂಗಾಲಾಗಿದ್ದಾರೆ.

ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 35 'ಎ' ಪ್ರಕಾರ ನಿರ್ಬಂಧ ವಿಧಿಸಲಾಗಿದೆ. ಬ್ಯಾಂಕ್‌ನ ಮುಂದಿನ ಸಂಪೂರ್ಣ ವ್ಯವಹಾರ ಆರ್‌ಬಿಐ ನಿಗಾದಲ್ಲಿ ನಡೆಯಲಿದೆ.

ಇದರಿಂದ ಆತಂಕಗೊಂಡ ಠೇವಣಿದಾರರು ಕಳೆದ ಎರಡು ದಿನಗಳಲ್ಲಿ ₹ 8 ಕೋಟಿ ಮೊತ್ತವನ್ನು ವಾಪಸ್ ಪಡೆದಿದ್ದಾರೆ. 1,600 ಠೇವಣಿದಾರರು ಭಾಗಶಃ ಠೇವಣಿ ವಾಪಸ್ ಪಡೆದುಕೊಂಡಿದ್ದಾರೆ. ಠೇವಣಿ ಹಿಂಪಡೆಯುವಿಕೆ ಮಿತಿಯನ್ನು ಆರ್‌ಬಿಐ ₹ 50 ಸಾವಿರಕ್ಕೆ ಮಿತಿಗೊಳಿಸಿದೆ. ಆದರೆ, ಠೇವಣಿದಾರರು ತಮ್ಮ ಸಂಪೂರ್ಣ ಹಣ ವಾಪಸ್ ನೀಡುವಂತೆ ಪಟ್ಟು ಬುಧವಾರ ಹಿಡಿದಿದ್ದರು. ಠೇವಣಿದಾರರು ಹಾಗೂ ಬ್ಯಾಂಕ್ ಸಿಬ್ಬಂದಿ ನಡುವೆ ಬುಧವಾರ ವಾಗ್ವಾದವು ನಡೆಯಿತು. ಠೇವಣಿ ಹಣ ಪಡೆಯಲು ಬ್ಯಾಂಕ್ ಎದುರು ಗ್ರಾಹಕರು ಬೆಳಿಗ್ಗೆಯಿಂದಲೇ ಉದ್ದನೆಯ ಸಾಲಿನಲ್ಲಿ ಗ್ರಾಹಕರು ನಿಂತಿದ್ದರು.

'ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್‌ನ ವಸೂಲಾಗದ ಸಾಲದ ಪ್ರಮಾಣವು ಶೇ 50ಕ್ಕಿಂತಲೂ ಹೆಚ್ಚಿದೆ. ಹೀಗಾಗಿ ನಿರ್ಬಂಧ ವಿಧಿಸಲಾಗಿದೆ. ಸಾಲ ಹಿಂದಿರುಗಿಸದ ಸಾಲಗಾರರ ಆಸ್ತಿಗಳನ್ನು ಹರಾಜು ಹಾಕಿ ಹಣ ವಸೂಲು ಮಾಡುತ್ತೇವೆ' ಎಂದು ಠೇವಣಿದಾರರಿಗೆ ಬ್ಯಾಂಕ್‌ನ ಆಡಳಿತ ಮಂಡಳಿ ಹೇಳಿದೆ.

'ಬ್ಯಾಂಕ್‌ನಲ್ಲಿ ಸುಮಾರು ₹ 1,400 ಕೋಟಿ ಠೇವಣಿ ಇದೆ. ₹ 863 ಕೋಟಿ ಸಾಲ ನೀಡಲಾಗಿದೆ. ಕಾಲಕಾಲಕ್ಕೆ ಸಾಲ ವಸೂಲಾಗದ ಕಾರಣ ಎನ್‌ಪಿಎ ಪ್ರಮಾಣ ₹ 400 ಕೋಟಿ ದಾಟಿದೆ. ಅದೇ ಕಾರಣಕ್ಕೆ ಆರ್‌ಬಿಐ ನಿರ್ಬಂಧ ವಿಧಿಸಿದೆ. ಆರು ತಿಂಗಳ ಗಡುವು ನೀಡಿದೆ. ಆರ್‌ಬಿಐ ನೀಡಿರುವ ಅವಧಿಯಲ್ಲೇ ಸಾಲ ವಸೂಲಿ ಮಾಡುತ್ತೇವೆ' ಎಂದು ಬ್ಯಾಂಕ್‌ನ ಆಡಳಿತ ಮಂಡಳಿ ಹೇಳಿದೆ.

'ತಕ್ಷಣವೇ ₹280 ಕೋಟಿ ಠೇವಣಿ ಹಿಂತಿರುಗಿಸುವ ಆರ್ಥಿಕ ಸಾಮರ್ಥ್ಯ ಇದೆ. ಬ್ಯಾಂಕ್ ಗ್ರಾಹಕರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಬ್ಯಾಂಕ್‌ನಲ್ಲಿ ಕಪ್ಪುಹಣದ ವಹಿವಾಟು ನಡೆಯುತ್ತಿದೆ ಎಂಬುದು ಸುಳ್ಳು' ಎಂದು ಬ್ಯಾಂಕ್‌ನ ಅಧ್ಯಕ್ಷ ಎಚ್‌.ಸಿ. ಕೃಷ್ಣ ಹೇಳಿದರು.

ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ಬ್ಯಾಂಕ್ ಹಗರಣದ ಆರೋಪಿಯಾದ, ಅಧ್ಯಕ್ಷ ವೆಂಕಟನಾರಾಯಣ ಅವರು ಇದೇ ಬ್ಯಾಂಕ್‌ನಲ್ಲಿ ₹ 8 ಕೋಟಿಯಷ್ಟು ಸಾಲ ಪಡೆದಿದ್ದಾರೆ. ಅದನ್ನು ಅವರು ಹಿಂತಿರುಗಿಸಿಲ್ಲ. ನೋಟಿಸ್ ಜಾರಿಗೊಳಿಸಿದ್ದರೂ ಹಣ ಬಂದಿಲ್ಲ ಎಂದು ಮೂಲಗಳು ಹೇಳಿವೆ.

ಹಲವು ನಿರ್ಬಂಧ: ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಪರವಾನಗಿ ರದ್ದುಗೊಂಡಿಲ್ಲ. ಬ್ಯಾಂಕ್‌ನ ಆರ್ಥಿಕ ಪರಿಸ್ಥಿತಿ ಸುಧಾರಿಸುವವರೆಗೆ ಕೆಲವು ನಿರ್ಬಂಧ ಹೇರಲಾಗಿದೆ. ನಿರ್ಬಂಧಕ್ಕೆ ಒಳಪಟ್ಟು ವ್ಯವಹಾರ ಮುಂದುವರಿಸಲಿದೆ. ಬ್ಯಾಂಕ್‌ನ ಠೇವಣಿದಾರರು ಆತಂಕಪಡುವ ಅಗತ್ಯವಿಲ್ಲ ಎಂದು ಆರ್‌ಬಿಐ ಹೇಳಿದೆ.

ಆರ್‌ಬಿಐ ಹಾಗೂ ಬ್ಯಾಂಕಿಂಗ್ ವಲಯದ ಕೆಲವು ನಿಯಮಗಳ ಉಲ್ಲಂಘನೆ ಮಾಡಲಾಗಿತ್ತು. ಹೀಗಾಗಿ ಮೇ ತಿಂಗಳಲ್ಲಿ ವಿತ್ತೀಯ ದಂಡ ವಿಧಿಸಲಾಗಿತ್ತು. ಈಗ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ನಿರ್ಬಂಧ ಹಾಕಲಾಗಿದೆ. ಅದರಂತೆ ಪೂರ್ವಾನುಮತಿಯಿಲ್ಲದೆ ಹೊಸ ಸಾಲ ನೀಡುವುದು, ಹೊಸ ಠೇವಣಿಗಳನ್ನು ಸ್ವೀಕರಿಸಲು ಅವಕಾಶವಿಲ್ಲ ಎಂಬ ನಿರ್ಬಂಧ ಹೇರಲಾಗಿದೆ.

> **ಬ್ಯಾಂಕ್ ದಿವಾಳಿಯಾಗಿಲ್ಲ. ಬ್ಯಾಂಕ್‌ನ ಆರ್ಥಿಕ ಪರಿಸ್ಥಿತಿ ಸದೃಢವಾಗಿದೆ. ಎಲ್ಲ ಹಿತರಕ್ಷಣೆಗೆ ಬದ್ಧವಿದ್ದೇವೆ. ಠೇವಣಿ ವಾಪಸ್ ಬರಲಿದೆ.**
> **ಎಚ್‌.ಸಿ.ಕೃಷ್ಣ,** ಬ್ಯಾಂಕ್‌ನ ಅಧ್ಯಕ್ಷ

ಬೆಂಗಳೂರಿನ ಗಾಂಧಿ ಬಜಾರ್‌ನ ದಿ ನ್ಯಾಷನಲ್ ಕೋಆಪರೇಟಿವ್ ಬ್ಯಾಂಕ್ ಮುಂದೆ ತಮ್ಮ ಠೇವಣಿ ಹಣ ಹಿಂಪಡೆಯಲು ಜಮಾಯಿಸಿದ ಠೇವಣಿದಾರರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಮುಖ್ಯ ಕಚೇರಿ ಮುಂಭಾಗದಲ್ಲಿ ವಿದ್ಯಾರ್ಥಿಗಳು ಮಣಿಪುರದಲ್ಲಿನ ಘಟನೆ ಖಂಡಿಸಿ ಪ್ರತಿಭಟನೆ ನಡೆಸಿದರು.

ಮಣಿಪುರದಲ್ಲಿ ನಡೆದ ಮಹಿಳೆಯರ ಬೆತ್ತಲೆ ಮೆರವಣಿಗೆಯನ್ನು ಖಂಡಿಸಿ ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿಯ ಸದಸ್ಯರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

'ಮಣಿಪುರ: ರಾಷ್ಟ್ರಪತಿ ಮಧ್ಯ ಪ್ರವೇಶಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪುರದಲ್ಲಿ ಮಹಿಳೆಯರ ಮೇಲೆ ನಡೆದ ಅತ್ಯಾಚಾರ ಖಂಡಿಸಿ ಬೆಂಗಳೂರು ವಿಶ್ವವಿದ್ಯಾಲಯದ ಸ್ವಾಭಿಮಾನಿ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ ವತಿಯಿಂದ ಬುಧವಾರ ಪ್ರತಿಭಟನೆ ನಡೆಯಿತು.

ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕಿ ನಾಗರತ್ನಮ್ಮ, 'ದೇಶದ ಸಂವಿಧಾನದ ಪ್ರಕಾರ ಮಹಿಳೆಯರು ಮತ್ತು ಪುರುಷರು ಸಮಾನರು. ಆದರೆ, ಮಹಿಳೆಯರು ಕೀಳು, ಪುರುಷರು ಮೇಲು ಎಂಬ ಭಾವನೆಯಿಂದ ನೋಡುವ ಪ್ರವೃತ್ತಿ ಇಂದಿಗೂ ಬದಲಾಗಿಲ್ಲ. ಅದಕ್ಕೆ, ಮಣಿಪುರದಲ್ಲಿ ನಡೆದ ಘಟನೆಯೇ ಸಾಕ್ಷಿ. ಈ ಮನಸ್ಥಿತಿ ಬದಲಾಗಬೇಕು' ಎಂದರು.

ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕ ಸಿ.ಬಿ. ಹೊನ್ನು ಸಿದ್ಧಾರ್ಥ, 'ಮಣಿಪುರದಲ್ಲಿ ಜುಲೈ 19ರಂದು ಮೈತೇಯಿ ಸಮುದಾಯದವರು ಕುಕಿ ಬುಡಕಟ್ಟು ಸಮುದಾಯದ ಇಬ್ಬರು ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮತ್ತು ಸಾಮೂಹಿಕ ಅತ್ಯಾಚಾರ ಮಾಡುವ ಮೂಲಕ ಅಮಾನವೀಯ ಕೃತ್ಯವೆಸಗಿದ್ದಾರೆ. ಮಣಿಪುರದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಕೂಡಲೇ ರಾಷ್ಟ್ರಪತಿಗಳು ಮಧ್ಯೆ ಪ್ರವೇಶಿಸಿ ಶಾಂತಿ ಸ್ಥಾಪಿಸಬೇಕು' ಎಂದು ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ವೇದಿಕೆ ವತಿಯಿಂದ ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರಾದ ಶೇಖ್ ಲತೀಫ್ ಅವರ ಮೂಲಕ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಲಾಯಿತು.

ವೇದಿಕೆ ಅಧ್ಯಕ್ಷ ಲೋಕೇಶ್ ಎನ್. ಮತ್ತು ವಿದ್ಯಾರ್ಥಿ ಕಾರ್ಯದರ್ಶಿ ಲಿಂಗರಾಜು ಎಸ್.ಎಂ ಮತ್ತು ನಂದೀಶ್ ಆರ್. ಎನ್.ಹರ್ಷವರ್ಧನ, ಹಿರಿಯ ವಿದ್ಯಾರ್ಥಿ ಶ್ರೀಧರ್ ಎಸ್, ಶಶಿಕುಮಾರ್ ಇದ್ದರು.

ಮಹಿಳೆಯರ ಬೆತ್ತಲೆ ಮೆರವಣಿಗೆಗೆ ಖಂಡನೆ

ಬೆಂಗಳೂರು: ಮಣಿಪುರದಲ್ಲಿ ನಡೆದ ಮಹಿಳೆಯರ ಬೆತ್ತಲೆ ಮೆರವಣಿಗೆಯನ್ನು ಖಂಡಿಸಿ ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿಯ ಸದಸ್ಯರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಸಮಿತಿಯ ಸಂಚಾಲಕ ಇಂದೂಧರ ಹೊನ್ನಾಪುರ, 'ಮಣಿಪುರದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದ್ದು, ಹಿಂಸಾಚಾರವನ್ನು ನಿಯಂತ್ರಿಸಲು ವಿಫಲಗೊಂಡಿರುವ ಅಲ್ಲಿನ ಮುಖ್ಯಮಂತ್ರಿ ಮತ್ತು ಸರ್ಕಾರವನ್ನು ಕೂಡಲೇ ವಜಾಗೊಳಿಸಬೇಕು. ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅವರ ನೇತೃತ್ವದಲ್ಲಿ ಶಾಂತಿ ಸುವ್ಯವಸ್ಥೆ ಮರು ಸ್ಥಾಪಿಸಬೇಕು' ಎಂದು ಒತ್ತಾಯಿಸಿದರು.

'ಮಣಿಪುರದಲ್ಲಿ ಆರ್‌ಎಸ್‌ಎಸ್ ಮತ್ತು ಕೋಮುವಾದಿಗಳೇ ಹಿಂಸೆ ಮತ್ತು ಗಲಭೆಗೆ ಹೆಚ್ಚು ಪ್ರಚೋದನೆ ನೀಡುತ್ತಿದ್ದಾರೆ. ಕೋಮುವಾದಿಗಳ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ಕೇಂದ್ರ ಸರ್ಕಾರವೂ ಸೋತಿದೆ. ಈ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮೌನ ವಹಿಸುವ ಮೂಲಕ ಒಂದು ಸಮುದಾಯದ ನಾಯಕರಂತೆ ವರ್ತಿಸುತ್ತಿದ್ದಾರೆ. ಅವರು ಭಾರತದ ಪ್ರಧಾನಿಯಂತೆ ನಡೆದುಕೊಳ್ಳುತ್ತಿಲ್ಲ' ಎಂದು ಆರೋಪಿಸಿದರು.

ಸಮಿತಿಯ ಸಂಚಾಲಕರಾದ ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರೆಗೊಡ, ವಿ. ನಾಗರಾಜ್, ದು. ಸರಸ್ವತಿ, ಎನ್. ವೆಂಕಟೇಶ್, ವಿನಯ್ ಶ್ರೀನಿವಾಸ್ ಹಾಗೂ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪರಪ್ಪನ ಅಗ್ರಹಾರದಿಂದ ನಾಸೀರ್ ಕರೆತರಲು ಅನುಮತಿ

ಬೆಂಗಳೂರು: ರಾಜಧಾನಿಯಲ್ಲಿ ಸ್ಫೋಟಕ್ಕೆ ಸಂಚು ರೂಪಿಸಿದ್ದ ಪ್ರಕರಣದ ಪ್ರಮುಖ ಆರೋಪಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಟಿ.ನಾಸೀರ್‌ನನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಸಿಸಿಬಿಗೆ ಅನುಮತಿ ಸಿಕ್ಕಿದೆ. ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಕರೆ ತರಲು ಸಿಸಿಬಿ ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ಟಿ. ನಾಸೀರ್

'2008ರ ಸರಣಿ ಬಾಂಬ್ ಸ್ಫೋಟದ ಆರೋಪಿಯೂ ಆಗಿರುವ ಟಿ.ನಾಸೀರ್ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿದ್ದಾನೆ. ಈ ಪ್ರಕರಣದಲ್ಲೂ ಈತ ಪ್ರಮುಖ ಆರೋಪಿ. ನಾಸೀರ್‌ನನ್ನು ಗುರುವಾರ ನ್ಯಾಯಾಧೀಶರ ಎದುರು ಹಾಜರುಪಡಿಸಿ, ಸಿಸಿಬಿ ಕಸ್ಟಡಿಗೆ ನೀಡುವಂತೆ ಕೋರಲಾಗುವುದು' ಎಂದು ಮೂಲಗಳು ಹೇಳಿವೆ.

'ಕೊಲೆ ಪ್ರಕರಣದಲ್ಲಿ ಜುನೇದ್ ಹಾಗೂ ಆತನ ಸಹಚರರಾದ ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್ ಪಾಷಾ, ಮಹಮ್ಮದ್ ಫೈಜಲ್ ರಬ್ಬಾನಿ, ಮಹಮ್ಮದ್ ಊಮರ್ ಪರಪ್ಪನ ಅಗ್ರಹಾರದ ಜೈಲು ಸೇರಿದ್ದರು. ಅವರಿಗೆ ನಾಸೀರ್ ಜೈಲಿನೊಳಗೆ ಸ್ಫೋಟಕ್ಕೆ ತರಬೇತಿ ನೀಡುತ್ತಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ. ಆತನ ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆ ನಡೆಸಲಾಗುವುದು' ಎಂದು ಸಿಸಿಬಿ ಪೊಲೀಸರು ಹೇಳಿದರು.

ಬಂಧಿತ ಐವರು ಶಂಕಿತ ಉಗ್ರರ ಏಳು ದಿನಗಳ ಸಿಸಿಬಿ ಕಸ್ಟಡಿ ಅವಧಿ ಮುಕ್ತಾಯವಾಗಿದ್ದರಿಂದ ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಹೆಚ್ಚಿನ ವಿಚಾರಣೆಗೆ ಮತ್ತಷ್ಟು ಕಾಲಾವಕಾಶ ನೀಡುವಂತೆ ತನಿಖಾಧಿಕಾರಿಗಳು ಕೇಳಿದ್ದರಿಂದ ನ್ಯಾಯಾಧೀಶ ಗಂಗಾಧರ ಅವರು ಮತ್ತೆ 10 ದಿನ ಸಿಸಿಬಿ ಕಸ್ಟಡಿಗೆ ನೀಡಿ ಆದೇಶಿಸಿದರು.

'ನಮ್ಮ ಮೆಟ್ರೊ' ಭದ್ರತಾ ಅಧಿಕಾರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿಯಿಂದ ಕೆಂಗೇರಿ ಕಡೆಗೆ 'ನಮ್ಮ ಮೆಟ್ರೊ'ದಲ್ಲಿ ಪ್ರಯಾಣಿಸುವ ವೇಳೆ ಚಾಮರಾಜನಗರ ಜಿಲ್ಲೆ, ಕಂಡಯ್ಯನಪಾಳ್ಯದ ನಿವಾಸಿ ತಿಮ್ಮೇಗೌಡ (67) ಅವರು ಕುಸಿದು ಬಿದ್ದು ಮೃತಪಟ್ಟ ಪ್ರಕರಣ ಸಂಬಂಧ ಬಿಎಂಆರ್‌ಸಿಎಲ್‌ನ ಅಧಿಕಾರಿಗೆ ಪೊಲೀಸರು ನೋಟಿಸ್ ನೀಡಿದ್ದಾರೆ.

'ವಿಚಾರಣೆಗೆ ಹಾಜರಾಗುವಂತೆ ಮುಖ್ಯ ಭದ್ರತಾ ಅಧಿಕಾರಿ ಸೆಲ್ವಂ ಅವರಿಗೆ ನೋಟಿಸ್ ನೀಡಲಾಗಿದೆ. ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಎರಡನೇ ಬಾರಿಗೆ ನೋಟಿಸ್ ನೀಡಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಿಎಂಆರ್‌ಸಿಎಲ್ ಸಿಬ್ಬಂದಿ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದಿಂದ ತಂದೆಯ ಸಾವು ಸಂಭವಿಸಿದೆ ಎಂದು ಆರೋಪಿಸಿ ಮೃತರ ಪುತ್ರ ಟಿ. ಮುತ್ತುರಾಜು ಅವರು ಬೈಯಪ್ಪನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ದಾಖಲಿಸಿಕೊಂಡಿರುವ ಪೊಲೀಸ್ ಸಿಸಿ ಟಿವಿ ದೃಶ್ಯಾವಳಿ ಪರಿಶೀಲಿಸಿದ್ದಾರೆ.

'ತಿಮ್ಮೇಗೌಡ ಅವರು ಪುತ್ರನ ಮನೆಗೆ ಬಂದು ವಾಪಸ್ ಊರಿಗೆ ಹೊರಟಿದ್ದರು. ಕೆಂಗೇರಿ ಕಡೆಗೆ ಹೋಗಲು ಬೈಯಪ್ಪನಹಳ್ಳಿಯ ನಿಲ್ದಾಣದಲ್ಲಿ ಮೆಟ್ರೊ ಹತ್ತಿದ್ದರು. ಆದರೆ, ಮಾರ್ಗ ಮಧ್ಯದಲ್ಲಿ ಮೆಟ್ರೊದ ಒಳಗೆ ಕುಸಿದು ಬಿದ್ದಿದ್ದರು. ಸಹ ಪ್ರಯಾಣಿಕರೇ ಉಪಚರಿಸಿ, ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣದಲ್ಲಿ ಇಳಿಸಿದ್ದರು. ಅಲ್ಲಿಯೂ ಮೆಟ್ರೊದ ಸಿಬ್ಬಂದಿ ನೆರವಿಗೆ ಬಂದಿರಲಿಲ್ಲ. 20 ನಿಮಿಷಗಳ ಕಾಲ ಅವರು ಸ್ಥಳದಲ್ಲೇ ಅಸ್ವಸ್ಥ ಸ್ಥಿತಿಯಲ್ಲಿದ್ದರು' ಎಂದು ಉಲ್ಲೇಖಿಸಿ ದೂರು ನೀಡಿದ್ದರು.

'ಎಂ.ಜಿ.ರಸ್ತೆಯ ನಿಲ್ದಾಣದಲ್ಲೇ 15ರಿಂದ 20 ನಿಮಿಷಗಳಿದ್ದರೂ ಮೆಟ್ರೊ ಅಧಿಕಾರಿಗಳು ಹಾಗೂ ಸಿಬ್ಬಂದಿ ನೆರವಿಗೆ ಬಂದಿರಲಿಲ್ಲ. ನಿಲ್ದಾಣದಲ್ಲಿ ಗಾಲಿ ಕುರ್ಚಿ ವ್ಯವಸ್ಥೆ ಇಲ್ಲ. ಅಂಬುಲೆನ್ಸ್ ವ್ಯವಸ್ಥೆಯನ್ನೂ ಮಾಡಲಿಲ್ಲ. ಆಟೊದಲ್ಲಿ ಸಾರ್ವಜನಿಕರು ಇನ್ಫೆಂಟ್ರಿ ರಸ್ತೆಯ ಸ್ಪರ್ಶ ಆಸ್ಪತ್ರೆಗೆ ಕರೆದೊಯ್ದಿದ್ದರು. ಬಿಎಂಆರ್‌ಸಿಎಲ್ ಅಧಿಕಾರಿಗಳು ಸಕಾಲದಲ್ಲಿ ಸ್ಪಂದಿಸಿದ್ದರೆ ತಂದೆ ಬದುಕುಳಿಯುತ್ತಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

ಕೌಟುಂಬಿಕ ಗಲಾಟೆ: ಪತ್ನಿ ಕೊಂದ ಪತಿ

ಬೆಂಗಳೂರು: ಬಾಣಸವಾಡಿಯ ಎಚ್‌ಆರ್‌ಬಿಆರ್ ಲೇಔಟ್‌ನಲ್ಲಿ ಪತ್ನಿಯನ್ನು ಪತಿ ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ.

ಕೆಂಚಮ್ಮ(20) ಕೊಲೆಯಾದವರು. ಕೃತ್ಯ ಎಸಗಿದ ಈಕೆಯ ಪತಿ ಸಿದ್ದಪ್ಪ(25) ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಸಿದ್ದಪ್ಪ ಆರು ತಿಂಗಳ ಹಿಂದೆ ಕೆಂಚಮ್ಮ ಅವರನ್ನು ಮದುವೆಯಾಗಿದ್ದರು. ಎಚ್‌ಆರ್‌ಬಿಆರ್ ಲೇಔಟ್‌ನ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಸಿದ್ದಪ್ಪ ಗ್ಯಾಸ್ ಸಿಲಿಂಡರ್ ಡೆಲವರಿ ಕೆಲಸ ಮಾಡುತ್ತಿದ್ದರೆ ಕೆಂಚಮ್ಮ ಅವರು ಕೂಲಿ ಕೆಲಸ ಮಾಡಿಕೊಂಡಿದ್ದರು.

'ಮಂಗಳವಾರ ರಾತ್ರಿ ಮದ್ಯ ಸೇವಿಸಿ ಮನೆಗೆ ಬಂದಿದ್ದ ಸಿದ್ದಪ್ಪ ಜತೆ ಕೆಂಚಮ್ಮ ಜಗಳವಾಡಿದ್ದರು. ಆಗ ಕೋಪಗೊಂಡ ಕೆಂಚಮ್ಮ ಪತಿಗೆ ಥಳಿಸಿದ್ದರು. ಆಕ್ರೋಶಗೊಂಡ ಆರೋಪಿ, ಆಕೆಯ ಕುತ್ತಿಗೆ ಹಿಸುಕಿ ಕೊಲೆ ಮಾಡಿದ್ದಾನೆ. ಬಳಿಕ ಸಂಬಂಧಿಕರಿಗೆ ಕರೆ ಮಾಡಿ ಕೆಂಚಮ್ಮ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ತಿಳಿಸಿದ್ದ' ಎಂದು ಪೊಲೀಸರು ಹೇಳಿದರು.

ಅನುಮಾನಗೊಂಡ ಸಂಬಂಧಿಕರು ಪೊಲೀಸರಿಗೆ ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಿದಾಗ ಕೊಲೆ ಮಾಡಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸ್ ಹೇಳಿದರು.

ಬಾಣಸವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Notice is hereby given to the Public that the Present Owner of the Schedule Property, **Smt.Padma** and **Smt.Deepika Dinesh Akshay Raghuhas** lost the Original Rectification Deed dated 28.03.2005 executed by Sri.C.Dasaratha Naidu in favour of Smt.Padma and Sri.P.S Dinesh, which was registered at the office of the Senior Sub-Registrar, Bengaluru North Taluk, Bengaluru as Document No.BLN-1-60451/2004-05, stored in CD No.BLND156, Book-I.Ifany person coming across the above Original Rectification Deed dated 28.03.2005 shall immediately handover the same to the undersigned. If any person, who has/have claim on the said property, may lodge such claim with the undersigned within 7 days from the date of this notice. If no such claim(s) or objections received within the stipulated time, the undersigned will issue certificate of clearance that, there is no objections or claim(s) on the schedule property.

SCHEDULE PROPERTY

All the piece and parcel of the Residential property bearing Site No.150, BBMP Khatha No.136/150, situated at 2nd Stage, 12th Block, Nagarabhavi, Bengaluru, layout formed by Bengaluru Development Authority, Presently under BBMP Limits, Ward No.129, measuring **East to West:** 6.00 Meters, **North to South:** 9.00 Meters, totally measuring 54.00 Square Metersalong with the building and bounded on the; **East by:**Road, **West by:** Site No.151, **North by :** Site No.187, South by :Road

Sd/- Ravi MB, ADVOCATE
#69,8th Main,S.K.Layout,
Jnanajyothinagar,
Mob: 9036074066,
Office No.: 8147294698
Bangalore-560056.
Bangalore Dt: 25.07.2023

PUBLIC NOTICE

Public are hereby informed the General Public, the Original Possession Certificate in respect of the property No.90, 34. 13' Cross Thayappanahalli, Jayanagar Bangalore -560041 measuring East to West : 43.5 Feet and North to South 52.5 Feet and bounded on the East Site No.91, West by Road, North Site No.71 South by Road, is issued by Karnataka Housing Board to Sri. K.Sitarama Rao on 19/06/1960. The above said original Possession Certificate is misplaced during transit, In this respect Sri.Dr.K.Rajaram. and Sri.K.Chandiram has lodged Police complaint, the Police complaint lost Report No. 0044760/2021,dated : 06/09/2021 and certified and endorsement copy of the above possession certificate obtainedfrom Karnataka Housing Board represented by it's Assistant Executive Engineer vide duplicate possession certificate order **no. ಬೆಂ.ಸ.ಜಿ.ಯೋ.ಕ/ಮ.ಸ್ವಾಜ್ಞಾಪ/178/ 2021- 22. dated : .13/09/2021**
Any person or persons, financial institutions, Banks etc or any Individual having possession of this document , asserting any right, title, interest or claim in the above property or any part thereof, in any manner whatsoever or having any claim against the above property or the documents thereof or against the or objecting to the issuance of the above document by the Authority, should write to the undersigned within 3 days from the issuance of this notice with all documentary proof on which they are basing and asserting their rights with regard to the above property or any part thereof after which period I shall assume on the basis that there are no claims or whatsoever nature with regard to the above property.
Name of the Party and Address:
Dr. K. RAJARAM &
Dr. K.CHANDIRAM
S/o. Late K. Padmanabha Rao,
No.90, New No.10, 34.13 Cross,
4. T Block Jayanagar, Bangalore - 560041 Phone: 7892816366 / 8152854000

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CONNECT ಕ್ಲಾಸಿಫೈಡ್ಸ್

JOB OPPORTUNITIES

General

OPPORTUNITY TO Earn INCOME 60k & Above per month with Fixed Salary for Retired, Bankers, Sr.Citizens, Business People's, Homemaker's. Part/ Full Time. Contact:- 9035303572/ 9060034387.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

Distributors

DIPONED BANGALORE looking for Dealers and Distributors for its Mosquito Repellent ,Spray and Agarbatti with herbal activities: Whatsapp No: 6362731681/ 8904562041.

REAL ESTATE SELLING

Sites

M G Road And Around

4000 SQFT residential plot for sale on MG Road. Call 9663766492. Brokers excuse.

PERSONAL

Announcements

ANNOUNCEMENT

I, **RAFATHULLA SYED AMEER** R/@ #16, 4th cross, 1st main, Gowthamapuram, Halasuru, Bangalore-08, declare that in my Son's **(MOHAMMED KHALFAN AMIR)** educational documents my name is mentioned as **RAFATHULLA AMIR** my current name is **RAFATHULLA SYED AMEER** vide affidavit dated 26.7.2023, before notary L. Gopalakrishna, Bangalore.

Change of Name

CHANGE OF NAME

We, **Saravanan Subramanian** and **Meenal Saravanan** R/a # C 903, Vaishnavi Nakshathra Apartment, Tumkur Road, Yeshwantpur, Bangalore-560022 have changed our Names, **Son Name: S Hariharan to Hariharan Saravanan** (DOB 7.11.2007). **Father Name: S Saravanan to Saravanan Subramanian. Mother Name: S Meenal to Meenal Saravanan** vide affidavit dated 25.7.2023 before Notary M.K. Devaki, Bangalore.

CHANGE OF NAME

I, **THERESA SUPRIYA BERNARD** Residing at 1073, 34th Cross, 50feet Road, 1st Stage, Kumaraswamy Layout, Bengaluru-560078 have changed my minor son's name from **BHUUVIN REDDY THIMMA REDDY to BHUUVIN REDDY** vide affidavit dated 21.7.2023 before notary L.Puttaraju, Bengaluru. Henceforth he shall be called **BHUUVIN REDDY** only.

I, H. Venkatesh @ Venkatesha, S/o. Hanumantharayappa, aged about 57 years, R/at Henganahalli Village Vishwaneedam Post, Bangalore-560091 declare that the names VENKATESHA and H. VENKATESH belong to me only, and both names belong to one and the same person, Vide affidavit dated 17-05-2023 sworn before Advocate and Notary H.R. Karunakara Bengaluru.

SANKARI K, Wife/o 14835994H, NK/MT, SURESH V, Vill- Ramapuram, Nangamangalam, Arakkonam, Vellore, Tamil Nadu changed name SANKARI K to SHANKARI K, 25/07/2023, Notary K.V. Mani, Bangalore

I, SUMA BHADRAVATHI MOHAN W/o. Laxmikant Sansuddi R/a#46/3, Alkabalalu, Tharalu Estate, Kanakapura Main Road, Bangalore-560082 have changed my name to SUMMA L SANSUDDI vide affidavit dated:26.7.2023 before Notary Chethana.S.V. Bangalore.

S VAIYAPURI, Father/o 14835994H, NK/MT, SURESH V, Vill- Ramapuram, Nangamangalam, Arakkonam, Vellore, Tamil Nadu changed name S VAIYAPURI to VAIYAPURI SUBRAMANI, 25/07/2023, Notary K.V. Mani, Bangalore

ಅಮಾಯಕರ ವಿರುದ್ಧದ ಪ್ರಕರಣ ವಾಪಸ್‌ಗೆ ಶಾಸಕ ತನ್ವೀರ್ ಸೇಠ್ ಮನವಿ – ಪರಿಶೀಲನೆಗೆ ಗೃಹ ಸಚಿವರ ಸೂಚನೆ

ಕಿಡಿ ಹೊತ್ತಿಸಿದ ಮೊಕದ್ದಮೆ ವಾಪಸ್ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಮೈಸೂರು: ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಬೆಂಗಳೂರಿನ ಡಿ.ಜೆ. ಹಳ್ಳಿ, ಕೆ.ಜೆ. ಹಳ್ಳಿ ಸೇರಿದಂತೆ ರಾಜ್ಯದ ವಿವಿಧೆಡೆ ನಡೆದಿರುವ ಗಲಭೆಗಳಲ್ಲಿ ನಿರ್ದಿಷ್ಟ ಕೋಮಿನ ಅಮಾಯಕ ಯುವಕರು ಮತ್ತು ವಿದ್ಯಾರ್ಥಿಗಳ ವಿರುದ್ಧ ದಾಖಲಿಸಿರುವ ಮೊಕದ್ದಮೆಗಳನ್ನು ಹಿಂಪಡೆಯಬೇಕೆಂಬ ಬೇಡಿಕೆಯ ಪರಿಶೀಲನೆಗೆ ಗೃಹ ಸಚಿವ ಜಿ. ಪರಮೇಶ್ವರ ಅವರು ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಸಲ್ಲಿಸಿರುವ ಮನವಿ ಆಧರಿಸಿ ಜುಲೈ 19ರಂದು ಟಿಪ್ಪಣಿಯೊಂದನ್ನು ಹೊರಡಿಸಿರುವ ಸಚಿವರು, ಅಗತ್ಯ ಕ್ರಮಕ್ಕೆ ಸೂಚಿಸಿದ್ದಾರೆ. ಪ್ರಕರಣ ಹಿಂಪಡೆಯುವ ಪ್ರಸ್ತಾವವನ್ನು ಬಿಜೆಪಿ ತೀವ್ರವಾಗಿ ವಿರೋಧಿಸಿದ್ದು, ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

ಜೂನ್ 23ರಂದು ಗೃಹ ಸಚಿವರಿಗೆ ಪತ್ರ ಬರೆದಿದ್ದ ತನ್ವೀರ್ ಸೇಠ್, 'ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ವಿವಿಧ ಕಾರಣಗಳಿಗಾಗಿ ನಡೆದ ಪ್ರತಿಭಟನೆ ಹಾಗೂ ಗಲಭೆಗಳಲ್ಲಿ ನಿರ್ದಿಷ್ಟ ಕೋಮಿನ ಅಮಾಯಕ ಯುವಕರು ಮತ್ತು ವಿದ್ಯಾರ್ಥಿಗಳನ್ನು ಗುರಿಯಾಗಿಸಿ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಮೊಕದ್ದಮೆಗಳನ್ನು ಮರುಪರಿಶೀಲಿಸಿ ಹಿಂಪಡೆಯಬೇಕು' ಎಂದು ಒತ್ತಾಯಿಸಿದ್ದರು.

'ಅನೇಕ ಅಮಾಯಕ ಯುವಕರು ಮತ್ತು ವಿದ್ಯಾರ್ಥಿಗಳು ಕಾರಾಗೃಹದಲ್ಲಿದ್ದು ಸುಳ್ಳು ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ. ಅವರ ಜೀವನ ಅಂಧಕಾರದಲ್ಲಿ ಮುಳುಗಿದೆ ಹಾಗೂ ಆ ಕುಟುಂಬಗಳ ಭವಿಷ್ಯ ಹಾಳಾಗಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು.

'ಬೆಂಗಳೂರು ನಗರ ಡಿ.ಜೆ.ಹಳ್ಳಿ, ಕೆ.ಜೆ.ಹಳ್ಳಿ, ಶಿವಮೊಗ್ಗ, ಹುಬ್ಬಳ್ಳಿ ಹಾಗೂ ಇತರ ಕಡೆಗಳಲ್ಲಿ ನಡೆದಿರುವ ಗಲಭೆಗಳಲ್ಲಿ ದಾಖಲಿಸಿರುವ ಮೊಕದ್ದಮೆ ಗಳನ್ನು ಮರುಪರಿಶೀಲಿಸಿ ಹಿಂಪಡೆಯುವಂತೆ ಕೋರಿ ಬೆಂಗಳೂರಿನ ದಿ ಹೆಲ್ಪಿಂಗ್ ಸಿಟಿಜನ್ ಅಂಡ್ ಪೀಪಲ್ಸ್ ಕೋರ್ಟ್ ಸಂಸ್ಥಾಪಕ ಎ.ಆಲಂ ಪಾಶಾ ಕೂಡ ಮನವಿ ಸಲ್ಲಿಸಿದ್ದಾರೆ. ಅದನ್ನು ಆಧರಿಸಿ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ವರಿಗೆ ನಿರ್ದೇಶನ ನೀಡಬೇಕು' ಎಂದು ಪತ್ರದಲ್ಲಿ ಕೋರಿದ್ದರು.

ಸಚಿವರ ಸೂಚನೆಯಲ್ಲಿ ಏನಿದೆ?: 'ಶಾಸಕ ತನ್ವೀರ್ ಸೇಠ್ ಅವರ ಮನವಿ ಯನ್ನು ಲಗತ್ತಿಸಿದೆ. ಬೆಂಗಳೂರು ನಗರದ ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿ, ಶಿವಮೊಗ್ಗ, ಹುಬ್ಬಳ್ಳಿ ಮತ್ತು ಇತರೆಡೆ ನಡೆದ ಪ್ರತಿಭಟನೆ ಹಾಗೂ ಗಲಭೆಗಳಲ್ಲಿ ಅಮಾಯಕ ಯುವಕರು ಹಾಗೂ ವಿದ್ಯಾರ್ಥಿಗಳು ಸುಳ್ಳು ಮೊಕದ್ದಮೆಗಳಲ್ಲಿ ಬಂಧಿತರಾಗಿದ್ದು, ಸದರಿ ಮೊಕದ್ದಮೆಗಳನ್ನು ಮರು ಪರಿಶೀಲಿಸಿ, ನಿಯಮಾನುಸಾರ ಹಿಂಪಡೆಯಲು ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ. ಈ ಬಗ್ಗೆ ಪರಿಶೀಲಿಸಿ, ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದೆ' ಎಂದು ಗೃಹ ಸಚಿವರು ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ.

ಬಿಜೆಪಿ ವಿರೋಧ: ತನ್ವೀರ್ ಸೇಠ್ ಪತ್ರ ಮತ್ತು ಗೃಹ ಸಚಿವರ ಟಿಪ್ಪಣಿಯ ಪ್ರತಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಪ್ರಕರಣ ಹಿಂಪಡೆಯುವ ಪ್ರಸ್ತಾವಕ್ಕೆ ಬಿಜೆಪಿ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

> **ದಲಿತ ಶಾಸಕನ ಮನೆ ಸುಟ್ಟು ಹಾಕಿ ಬಂಧನಕ್ಕೊಳಗಾದ ಅಲ್ಪಸಂಖ್ಯಾತ ಸಮುದಾಯದ ರೌಡಿಗಳ ಬಿಡುಗಡೆಗೆ ಸರ್ಕಾರ ಮುಂದಾಗಿದೆ. ತುಷ್ಟೀಕರಣವೇ ಇದಕ್ಕೆ ಕಾರಣ**
> **ನಳಿನ್‌ಕುಮಾರ್ ಕಟೀಲ್,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಅಮಾಯಕರ ಮೇಲೆ ಪ್ರಕರಣ ನಿಜ'

ಶಿವಕುಮಾರ್

'ಅನೇಕ ಪ್ರಕರಣಗಳಲ್ಲಿ ಅಮಾಯಕರ ಮೇಲೆ ಕೇಸು ದಾಖಲಿಸಲಾಗಿದೆ. ಬೆಂಗಳೂರು, ಹುಬ್ಬಳ್ಳಿ ಸೇರಿದಂತೆ ಅನೇಕ ಕಡೆಗಳಲ್ಲಿ ಈ ರೀತಿ ಪ್ರಕರಣ ದಾಖಲಿಸಿದ್ದಾರೆ. ಸರ್ಕಾರದ ವಿರುದ್ಧ ಹೋರಾಟ ಮಾಡಿದ್ದಕ್ಕೆ ನಮ್ಮ ಮೇಲೆ ಎಷ್ಟು ಪ್ರಕರಣ ದಾಖಲಿಸಿದ್ದರು. ರೈತ ಸಂಘ, ಕನ್ನಡ ಸಂಘಟನೆಗಳ ಮೇಲೆ ಪ್ರಕರಣ ದಾಖಲಿಸಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

'ದ್ವೇಷ ಪ್ರಕರಣ; ಪುನರ್ ವಿಮರ್ಶೆ'

ಎಚ್‌.ಕೆ.ಪಾಟೀಲ

ಗದಗ: 'ದ್ವೇಷಕ್ಕಾಗಿ ಇಲ್ಲವೇ ಕೆಲ ಅಧಿಕಾರಿಗಳ ಅತಿಶಯದ ಕಾರಣದಿಂದ ತಪ್ಪು ತನಿಖೆ ಆಗಿದ್ದರೆ, ತಪ್ಪು ಪ್ರಕರಣಗಳು ದಾಖಲಾಗಿದ್ದರೆ ಅವುಗಳನ್ನು ಪುನರ್ ವಿಮರ್ಶೆ ಮಾಡಬೇಕಾದ್ದು ಹೊಸ ಸರ್ಕಾರದ ಕರ್ತವ್ಯ' ಎಂದು ಸಚಿವ ಎಚ್‌.ಕೆ.ಪಾಟೀಲ ಹೇಳಿದರು.

ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಅಂತಹ ದೂರುಗಳಿಗೆ ಸರ್ಕಾರ ಸ್ಪಂದಿಸಲಿದೆ' ಎಂದರು.

'ಕಾಂಗ್ರೆಸ್ ದ್ವೇಷ ರಾಜಕಾರಣ ಮಾಡುತ್ತಿದೆ' ಎಂಬ ಶಾಸಕ ಬಸವರಾಜ ಬೊಮ್ಮಾಯಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣದಲ್ಲಿ ಯಾರು ಕಿಂಗ್‌ಪಿನ್ ಎಂದು ಆರೋಪ ಮಾಡಿದ್ದೆವೋ ಅವರೇ ಕಿಂಗ್‌ಪಿನ್ ಎಂದು ಸಾಬೀತಾಗಿದೆ. ಅವರು ಯಾವ ರಾಜಕೀಯ ಪಕ್ಷಕ್ಕೆ ಸೇರಿದ್ದರು ಎಂಬುದು ಎಲ್ಲರಿಗೂ ತಿಳಿದಿದೆ. ಅಂತಹ ಪ್ರಕರಣಗಳ ಸತ್ಯ, ವಸ್ತುಸ್ಥಿತಿಯನ್ನು ಅರಿತುಕೊಂಡೇ ಮರು ತನಿಖೆಗೆ ಆದೇಶ ಮಾಡಿದ್ದೇವೆ' ಎಂದರು.

ದಂಗೆಕೋರರ ರಕ್ಷಣೆ ಜನತೆಗೆ ಮಾಡುವ ದ್ರೋಹ: ಬೊಮ್ಮಾಯಿ



ಬಸವರಾಜ ಬೊಮ್ಮಾಯಿ

ಬೆಂಗಳೂರು: 'ಡಿ.ಜೆ.ಹಳ್ಳಿ ಮತ್ತು ಕೆ.ಜೆ.ಹಳ್ಳಿಗಳಲ್ಲಿ ಗಲಭೆ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ದಂಗೆ ಎದ್ದವರಿಗೆ ರಕ್ಷಣೆ ನೀಡಲು ಮುಂದಾಗಿರುವುದು ರಾಜ್ಯದ ಜನತೆಗೆ ಮಾಡುವ ದ್ರೋಹ. ಶಾಸಕರಾಗಿದ್ದ ದಲಿತರೊಬ್ಬರ ಮನೆ ಸುಟ್ಟವರನ್ನು ರಕ್ಷಿಸುವುದು ಕಾಂಗ್ರೆಸ್‌ನ ದಲಿತ ವಿರೋಧಿ ನೀತಿಗೆ ಸಾಕ್ಷಿ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಕಿಡಿಕಾರಿದ್ದಾರೆ.

ಈ ಕುರಿತು ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಡಿ.ಜೆ.ಹಳ್ಳಿ ಮತ್ತು ಕೆ.ಜೆ.ಹಳ್ಳಿ ಪ್ರಕರಣ ಬಹಳ ಗಂಭೀರವಾಗಿದೆ. ಈ ಪ್ರಕರಣದಲ್ಲಿ ಪೊಲೀಸ್ ಠಾಣೆ, ಪೊಲೀಸ್ ವಾಹನಗಳು, ಸಾರ್ವಜನಿಕರ ವಾಹನಗಳು ಮತ್ತು ಶಾಸಕರ ಮನೆ ಸುಟ್ಟಿದ್ದರು. ರಾಜ್ಯದ ಮೇಲೆ ದಂಗೆ ಎದ್ದವರ ವಿರುದ್ಧದ ಪ್ರಕರಣಗಳನ್ನು ವಾಪಸ್ ಪಡೆಯಲು ತೀರ್ಮಾನ ಮಾಡಿದ್ದಾರೆ ಎಂದರೆ ರಾಜ್ಯದ ವಿರುದ್ಧ ಏನೇ ಮಾಡಿದರೂ ರಕ್ಷಣೆ ದೊರೆಯುತ್ತದೆ ಎಂಬ ಧೈರ್ಯ ಅಪರಾಧಿಗಳಿಗೆ ಬರುತ್ತದೆ. ದಂಗೆಕೋರರಿಗೆ ಆಶ್ರಯ ನೀಡಲು ಹೊರಟಿರುವುದು ಸ್ಪಷ್ಟವಾಗುತ್ತದೆ ಎಂದು ಹೇಳಿದರು.

'ಈ ದಂಗೆಯ ಪ್ರಕರಣವನ್ನು ಎನ್‌ಐಎ ತೆಗೆದುಕೊಂಡಿದೆ. ಇದರಲ್ಲಿ ಪಿಎಫ್‌ಐ, ಎಸ್‌ಡಿಪಿಐ ಕೈವಾಡ ಇರುವುದಕ್ಕೆ ಸ್ಪಷ್ಟ ಪುರಾವೆಗಳಿವೆ. ತನಿಖೆ ನಡೆಸಿ ದೋಷಾರೋಪ ಪಟ್ಟಿಯನ್ನೂ ಸಲ್ಲಿಸಿದೆ. ಈಗ ಇವರು ಈ ಪ್ರಕರಣವನ್ನು ಹೇಗೆ ವಾಪಸ್ ಪಡೆಯುತ್ತಾರೆ? ನಾವು ಅಧಿಕಾರದಲ್ಲಿ ಇದ್ದಾಗಲೂ ಈ ಪ್ರಕರಣಗಳನ್ನು ಹಿಂದೆ ಪಡೆಯುವಂತೆ ಒತ್ತಡ ಇತ್ತು. ನಾವು ಪುರಾವೆ ಸಮೇತ ಹಿಡಿದುಕೊಂಡು ಆರೋಪಿಗಳನ್ನು ಬಂಧಿಸಿದ್ದೆವು. ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಇಂತಹ ಒತ್ತಡಗಳಿಗೆ ಮಣಿಯಬಾರದು. ಒಂದು ವೇಳೆ ಮಣಿದು ಪ್ರಕರಣ ಹಿಂದಕ್ಕೆ ಪಡೆದರೆ ಅದು ರಾಜ್ಯಕ್ಕೆ ಎಸಗಿದ ದ್ರೋಹ ವಾಗುತ್ತದೆ' ಎಂದು ಹೇಳಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಬ್ಬರೇ ಕೆಲವು ಸಂಘಟನೆಗಳ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವಂತೆ ಒತ್ತಡ ಹೇರುತ್ತಿದ್ದಾರೆ ಎಂಬ ಮಾಹಿತಿ ಇದೆ. ಅವರು ನಿಲುವು ಸ್ಪಷ್ಟಪಡಿಸಬೇಕು' ಎಂದರು.

ಸಮಾವೇಶದಲ್ಲಿ ಭಾಗವಹಿಸಲು ಬಂದಿದ್ದ ಮಹಿಳಾ ಪ್ರತಿನಿಧಿಗಳನ್ನು ಸಿ.ಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್‌ಗೆ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಪರಿಚಯಿಸಿದರು —ಪ್ರಜಾವಾಣಿ ಚಿತ್ರ

ಬಿಜೆಪಿ- ಆರ್‌ಎಸ್‌ಎಸ್‌ನಿಂದ ಸಾಮರಸ್ಯಕ್ಕೆ ಧಕ್ಕೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾವಿರಾರು ವರ್ಷಗಳಿಂದಲೂ ಸಾಮರಸ್ಯದಿಂದ ಇದ್ದ ಭಾರತವನ್ನು ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ ಬಿಜೆಪಿ-ಆರ್‌ಎಸ್‌ಎಸ್ ಪರಿವಾರದ ಕಾರ್ಯಕರ್ತರು ಹಾಳುಗೆಡವಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾರತೀಯ ಯುವ ಕಾಂಗ್ರೆಸ್‌ನ (ಐವೈಸಿ) ಮೂರು ದಿನಗಳ ರಾಷ್ಟ್ರೀಯ ಸಮಾವೇಶ 'ಬೆಹ್ತರ್ ಭಾರತ್ ಕಿ ಬುನಿಯಾದ್' (ಉತ್ತಮ ಭಾರತದ ಅಡಿಪಾಯ) ಅನ್ನು ಅರಮನೆ ಮೈದಾನದಲ್ಲಿ ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಮೋದಿ ಪ್ರಧಾನಿಯಾದ ಬಳಿಕ ಮಹಿಳೆಯರು, ದಲಿತರು, ಶೂದ್ರರು, ಅಲ್ಪಸಂಖ್ಯಾತರು, ಆದಿವಾಸಿ ಸೇರಿ ಎಲ್ಲ ಸಮುದಾಯ ತಮ್ಮ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಮೋದಿ ಸರ್ಕಾರ ಶ್ರೀಮಂತ ಕಾರ್ಪೊರೇಟ್‌ಗಳ ಲಕ್ಷಾಂತರ ಕೋಟಿ ಸಾಲ ಮನ್ನಾ ಮಾಡಿ, ಬಡವರು ತಿನ್ನುವ ಮಂಡಕ್ಕಿ, ಮೊಸರಿನ ಮೇಲೆ ತೆರಿಗೆ ವಿಧಿಸಿದೆ. ಇದನ್ನು ಯುವಸಮೂಹ ಬೀದಿ ಬೀದಿಯಲ್ಲಿ ಪ್ರಶ್ನಿಸಬೇಕು' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಪಕ್ಷದ ಭಾರತ್ ಜೋಡೊ ಯಾತ್ರೆಯ ನಂತರ ಬೂತ್ ಜೋಡೊ ಕಾರ್ಯ ಆಗಬೇಕಿದೆ. ಬೂತ್ ಗೆದ್ದರೆ ಭಾರತವನ್ನು ಗೆದ್ದಂತೆ ಎಂಬುದನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಅಧಿಕಾರ ನಿಮ್ಮ ಬಳಿಗೇ ಬರುತ್ತದೆ' ಎಂದು ಯುವ ಕಾಂಗ್ರೆಸ್ ಕಾರ್ಯಕರ್ತರಿಗೆ ಸಲಹೆ ನೀಡಿದರು.

'ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ನೇತೃತ್ವದಲ್ಲಿ 'ಇಂಡಿಯಾ' ಒಗ್ಗಟ್ಟಾಗಿದೆ. ಈ 'ಇಂಡಿಯಾ' ಭಾರತವನ್ನು ರಕ್ಷಿಸಲಿದೆ' ಎಂದರು.

ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, 'ಮುಂಬರುವ ಲೋಕಸಭೆ ಚುನಾವಣೆ ಬಿಜೆಪಿಯ ಸುಳ್ಳು ಮತ್ತು ಕಾಂಗ್ರೆಸ್‌ನ ಸತ್ಯದ ನಡುವಿನ ಯುದ್ಧ. ಯುದ್ಧದಲ್ಲಿ ಯಾವಾಗಲೂ ಸತ್ಯ ಗೆಲ್ಲುತ್ತದೆ' ಎಂದರು.

ಸಚಿವ ಕೆ.ಜೆ. ಜಾರ್ಜ್, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ನಲಪಾಡ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜ್, ವಿವಿಧ ರಾಜ್ಯಗಳಿಂದ ಬಂದ 3 ಸಾವಿರಕ್ಕೂ ಹೆಚ್ಚು ಯುವ ಕಾಂಗ್ರೆಸ್ ಪ್ರತಿನಿಧಿಗಳು ಇದ್ದರು.

ಕೆಎಸ್‌ಪಿಸಿಬಿ: ಅಕ್ರಮ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಜಾಗೃತಿ ಕಾರ್ಯಕ್ರಮಗಳಿಗೆ ₹17 ಕೋಟಿ ವೆಚ್ಚ ಮಾಡಿರುವುದರಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಕುರಿತು ತನಿಖೆ ನಡೆಸಲು ರಾಜ್ಯ ಲೆಕ್ಕಪತ್ರ ಇಲಾಖೆಯ ಹೆಚ್ಚುವರಿ ನಿರ್ದೇಶಕ ಮಹದೇವ ಅವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿದೆ.

'ಮಂಡಳಿಯ ಅಧ್ಯಕ್ಷ ಶಾಂತ್ ತಿಮ್ಮಯ್ಯ ಅವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಉಲ್ಲಂಘಿಸಿ ₹ 17 ಕೋಟಿ ವೆಚ್ಚದ ಜಾಗೃತಿ ಕಾರ್ಯಕ್ರಮಕ್ಕೆ ಅನುಮೋದನೆ ನೀಡಿದ್ದು, ಅವ್ಯವಹಾರ ನಡೆದಿದೆ' ಎಂದು ಆರೋಪಿಸಿ ಮಂಡಳಿಯ ಪ್ರಭಾರ ಸದಸ್ಯ ಕಾರ್ಯದರ್ಶಿಯಾಗಿದ್ದ ಸೂರಿ ಪಾಯಲ, ಮುಖ್ಯಮಂತ್ರಿ ಕಚೇರಿಗೆ ದೂರು ನೀಡಿದ್ದರು. ಈ ಪ್ರಕರಣದಲ್ಲಿ ತನಿಖೆ ನಡೆಸುವಂತೆ ಒತ್ತಾಯಿಸಿ ಕಾಂಗ್ರೆಸ್ ಮುಖಂಡ ಪಿ.ಆರ್. ರಮೇಶ್ ಕೂಡ ಪತ್ರ ಬರೆದಿದ್ದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಎದುರೇ ಶಾಸಕರಿಂದ ಅಹವಾಲು ಸಂಭವ

ಸಿಎಲ್‌ಪಿ ಸಭೆ ಇಂದು: ಅಸಮಾಧಾನ ಸ್ಫೋಟ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಎರಡು ತಿಂಗಳಷ್ಟೆ ಕಳೆದಿದ್ದು, ಅದಾಗಲೇ ಸಚಿವರು ಮತ್ತು ಶಾಸಕರ ಮಧ್ಯದ ಭಿನ್ನಮತ ಬಹಿರಂಗವಾಗಿದೆ. ಗುರುವಾರ (ಜುಲೈ 27) ನಡೆಯಲಿರುವ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯಲ್ಲಿ ಈ ವಿಷಯ ಚರ್ಚೆಗೆ ಬರುವುದು ಖಚಿತ.

ತಾವು ಮಾಡಿರುವ ವರ್ಗಾವಣೆ ಶಿಫಾರಸುಗಳಿಗೆ ಸಚಿವರು ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿರುವ ಕೆಲವು ಶಾಸಕರು, ಸಚಿವರುಗಳ ಮೇಲೆ ಸಾಮೂಹಿಕವಾಗಿ ಮುಗಿಬೀಳುವ ಸಾಧ್ಯತೆಯಿದೆ. ಅಲ್ಲದೆ, ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಅನುದಾನ ಬಿಡುಗಡೆ ವಿಚಾರವನ್ನೂ ಪ್ರಸ್ತಾಪಿಸಿ, ಅಸಮಾಧಾನ ತೋಡಿಕೊಳ್ಳುವ ಸಂಭವವಿದೆ.

ಸಚಿವರ ಅಸಹಕಾರದ ಕುರಿತು ಮುಖ್ಯಮಂತ್ರಿಗೆ 30ಕ್ಕೂ ಹೆಚ್ಚು ಶಾಸಕರು ಸಹಿ ಹಾಕಿ ಪತ್ರ ನೀಡಿದ್ದರು. ಅಲ್ಲದೆ, ತಕ್ಷಣ ಸಿಎಲ್‌ಪಿ ಸಭೆ ಕರೆಯುವಂತೆಯೂ ಒತ್ತಾಯಿಸಿದ್ದರು. ಸಿಎಲ್‌ಪಿ ಸಭೆ ಕರೆಯುವಂತೆ ಶಾಸಕರು ಒತ್ತಾಯಿಸಿರುವುದನ್ನು ಮುಖ್ಯಮಂತ್ರಿ ಕೂಡಾ ಒಪ್ಪಿಕೊಂಡಿದ್ದಾರೆ. ಆದರೆ, ಯಾವುದೇ ದೂರು ಸಲ್ಲಿಸಿಲ್ಲ ಎಂದೂ ಹೇಳಿದ್ದಾರೆ.

ವಿಧಾನಮಂಡಲ ಅಧಿವೇಶನದ ಆರಂಭದಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿಯೇ ಕೆಲವು ಶಾಸಕರು ಸಚಿವರ ವಿರುದ್ಧ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ವಿಶೇಷ ಅನುದಾನದ ಬಗ್ಗೆಯೂ ಬೇಡಿಕೆ ಇಟ್ಟಿದ್ದರು. ಆದರೆ, ಪ್ರಸಕ್ತ ವರ್ಷ 'ಗ್ಯಾರಂಟಿ' ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಹಣದ ಅಗತ್ಯ ಇರುವುದರಿಂದ ವಿಶೇಷ ಅನುದಾನಕ್ಕೆ ಬೇಡಿಕೆ ಇಡದಂತೆ ಎಲ್ಲ ಶಾಸಕರಿಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದರು.

ಗುರುವಾರ ನಡೆಯಲಿರುವ ಸಿಎಲ್‌ಪಿ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾಗವಹಿಸುತ್ತಿದ್ದು, ಅವರ ಸಮ್ಮುಖದಲ್ಲಿಯೇ ಶಾಸಕರು ತಮ್ಮ ಅಹವಾಲು ಹೇಳಿಕೊಳ್ಳುವ ಸಾಧ್ಯತೆಯಿದೆ ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದರು.

ಮುಖ್ಯಮಂತ್ರಿಗೆ ಶಾಸಕರು ಬರೆದಿರುವ ಪತ್ರದ ಬಗ್ಗೆ ಬುಧವಾರ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಸಚಿವರ ವಿರುದ್ಧ ಶಾಸಕರು ಬರೆದಿದ್ದಾರೆ ಎನ್ನುವ ಪತ್ರ ನಕಲಿ. ಯಾರದ್ದೋ ಪತ್ರಕ್ಕೆ ಯಾವುದೋ ಸಹಿ ಸೇರಿಸಿ ಹಬ್ಬಿಸಿದರೆ ಅದಕ್ಕೆ ಪ್ರತಿಕ್ರಿಯೆ ನೀಡಲು ಆಗುವುದಿಲ್ಲ' ಎಂದರು.

'ನಾವು ಶಾಸಕರ ಸಭೆ ಕರೆದಿದ್ದು, ಅವರ ಜೊತೆ ಮಾತನಾಡುತ್ತೇವೆ. ಈ ವರ್ಷ ಕ್ಷೇತ್ರಗಳ ಅಭಿವೃದ್ಧಿಗೆ ಅನುದಾನ ನೀಡಲು ಆಗುವುದಿಲ್ಲ. ನೀರಾವರಿ ಸಚಿವನಾಗಿ ನನ್ನ ಇಲಾಖೆಗೂ ನೀಡಲು ಆಗುವುದಿಲ್ಲ. ಈ ವಿಚಾರವನ್ನು ಶಾಸಕಾಂಗ ಪಕ್ಷದ ಸಭೆಯಲ್ಲಿ ವಿವರಿಸುತ್ತೇವೆ' ಎಂದೂ ಹೇಳಿದರು.

'ಕಳೆದ ಬಿಜೆಪಿ ಸರ್ಕಾರ ರಾಜ್ಯದ ಆರ್ಥಿಕತೆಯನ್ನು ದಿವಾಳಿ ಮಾಡಿದೆ. ಹೀಗಾಗಿ ಬಜೆಟ್ ಮಂಡನೆ ಸಮಯದಲ್ಲಿ ಸಚಿವರು ಕೂಡ ತಾಳ್ಮೆ ಇಟ್ಟುಕೊಳ್ಳಬೇಕು ಎಂದು ಮುಖ್ಯಮಂತ್ರಿ ಹೇಳಿದ್ದರು. ಹಿಂದಿನ ಸರ್ಕಾರದ ತಪ್ಪುಗಳನ್ನು ಸರಿಪಡಿಸಬೇಕು. ಜತೆಗೆ 'ಗ್ಯಾರಂಟಿ' ಮಾತನ್ನೂ ಉಳಿಸಿಕೊಳ್ಳಬೇಕಿದೆ' ಎಂದೂ ಹೇಳಿದರು.

> **ಮುಖ್ಯಮಂತ್ರಿಗೆ ಬರೆದಿದ್ದಾರೆ ಎನ್ನಲಾದ ಪತ್ರವನ್ನು ಶಾಸಕ ಬಿ.ಆರ್. ಪಾಟೀಲ ಅವರೇ ನಕಲಿ ಎಂದಿದ್ದಾರೆ. ಆದರೂ ಆ ಪತ್ರಕ್ಕೆ ಮಾಧ್ಯಮಗಳು ಪ್ರಚಾರ ನೀಡಿವೆ.**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಸಿ.ಎಂ ಬಳಿ ಕಷ್ಟ ಹೇಳಿಕೊಳ್ಳಬಾರದೇ?'

ಹಾಸನ: 'ಮುಖ್ಯಮಂತ್ರಿಗೆ ಯಾರು ಪತ್ರ ಬರೆದಿದ್ದಾರೋ ನನಗೆ ಗೊತ್ತಿಲ್ಲ. ನಾವು ಗೆದ್ದು ಮೂರು ತಿಂಗಳಾಯ್ತು. ನಮ್ಮ ಕಷ್ಟವನ್ನ ಮುಖ್ಯಮಂತ್ರಿ ಹತ್ತಿರ ಹೇಳಿಕೊಳ್ಳಬಾರದಾ' ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಹಾಗೂ ಸಚಿವರ ಬಳಿ ಹೇಳಿಕೊಳ್ಳುವುದರಲ್ಲಿ ತಪ್ಪೇನಿದೆ? ನಮ್ಮ ಕೆಲಸವನ್ನು ಎಲ್ಲ ಮಂತ್ರಿಗಳೂ ಮಾಡಿಕೊಟ್ಟಿದ್ದಾರೆ. ಸಭೆ ಕರಿಯಲಿ ಅಂತ ಪತ್ರ ಕೊಟ್ಟಿರಬೇಕು. ನಾನು ಎಚ್‌.ಡಿ.ಕುಮಾರಸ್ವಾಮಿ ಪಕ್ಷದಲ್ಲೇ ಇದ್ದವನು, ಅವರ ಲೆಕ್ಕಾಚಾರ ಏನೂ ಇಲ್ಲ. ಕತ್ತು ಹಿಡಿದು ನೂಕಿದರೂ ಯಾವ ಶಾಸಕರೂ ಕಾಂಗ್ರೆಸ್ ಬಿಟ್ಟು ಎಲ್ಲಿಗೂ ಹೋಗಲ್ಲ. ಅವರಿಗೆ ಬೇಕಿರುವುದು ಸಮಸ್ಯೆಗಳಿಗೆ ಸ್ಪಂದನೆ ಮಾತ್ರ' ಎಂದರು.

'ಮಂತ್ರಿ ಮಾಡಲಿಲ್ಲ ಎಂಬ ಕಾರಣಕ್ಕೆ ಬಿ.ಕೆ.ಹರಿಪ್ರಸಾದ್ ಅವರು ತಮ್ಮ ಕಷ್ಟವನ್ನು ಸಮಾಜದ ಎದುರು ತೋಡಿಕೊಂಡಿದ್ದಾರೆ. ಅದು ವೈರಲ್ ಆಯ್ತು. ಅವರು ಸಿದ್ದರಾಮಯ್ಯ ಹೆಸರು ಹೇಳಿದ್ದಾರಾ' ಎಂದು ಪ್ರಶ್ನಿಸಿದರು.

ಮಠ, ದೇಗುಲಗಳಿಗೆ ಅನುದಾನ

• ಭರತ್ ಜೋಶಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಮುಖ್ಯಮಂತ್ರಿ ವಿಶೇಷ ಅನುದಾನ'ದ ಅಡಿ 2023–24ನೇ ಸಾಲಿಗೆ ವಿವಿಧ ಮಠಗಳು ಮತ್ತು ದೇವಸ್ಥಾನಗಳಿಗೆ ₹ 20 ಕೋಟಿ ಸಹಾಯಾನುದಾನ ಪ್ರಕಟಿಸಿದ್ದಾರೆ.

ಬಿಜೆಪಿ ಸರ್ಕಾರ ಇದ್ದಾಗ ಅದರಲ್ಲೂ ಬಿ.ಎಸ್.ಯಡಿಯೂರಪ್ಪ ಅವರು ಎಲ್ಲ ಸಮುದಾಯಗಳ ಮಠಗಳಿಗೂ ಪ್ರತಿ ಬಜೆಟ್‌ನಲ್ಲೂ ಅನುದಾನ ನೀಡುತ್ತಲೇ ಬಂದಿದ್ದರು. ಈ ಕ್ರಮ ಸಾಕಷ್ಟು ಟೀಕೆಗೂ ಗುರಿಯಾಗಿತ್ತು. ಆದರೆ, ಸಿದ್ದರಾಮಯ್ಯ ಇದೇ ಮೊದಲ ಬಾರಿಗೆ ಮಠಗಳಿಗೂ ಅನುದಾನ ನೀಡಲು ಮುಂದಾಗಿದ್ದಾರೆ. ತಮ್ಮ ಹಿಂದಿನ ಅವಧಿಯಲ್ಲಿ ಮಠಗಳಿಗೆ ಅನುದಾನ ನೀಡಿರಲಿಲ್ಲ.

2013–2018ರ ಅವಧಿಯ ಬಜೆಟ್‌ಗಳ ವೆಚ್ಚ ಅಂದಾಜಿನ ದಾಖಲೆ ಪರಿಶೀಲಿಸಿದಾಗ ಸಿದ್ದರಾಮಯ್ಯ ಅವರು ಮಠಗಳಿಗೆ ಅನುದಾನ ನೀಡಿರುವುದಕ್ಕೆ ಎಲ್ಲಿಯೂ ಉಲ್ಲೇಖವಿಲ್ಲ. ಆದರೆ, ಕೆಲವು ದೇವಸ್ಥಾನಗಳಿಗೆ ಅನುದಾನ ನೀಡಿರುವ ಮಾಹಿತಿ ಸಿಗುತ್ತದೆ. ವಿಶೇಷ ಅನುದಾನದಡಿ ನೀಡುವ ಮೊಬಲಗು, ಮುಖ್ಯಮಂತ್ರಿಯವರ ವಿವೇಚನಾ ಅಧಿಕಾರವನ್ನು ಒಳಗೊಂಡಿರುತ್ತದೆ.

ಬಸವರಾಜ ಬೊಮ್ಮಾಯಿ ಫೆಬ್ರುವರಿಯಲ್ಲಿ ಮಂಡಿಸಿದ್ದ ಚುನಾವಣಾ ಪೂರ್ವ ಬಜೆಟ್‌ನಲ್ಲಿ ವಿವಿಧ ಮಠಗಳು ಮತ್ತು ದೇವಸ್ಥಾನಗಳಿಗೆ ₹200 ಕೋಟಿ ನಿಗದಿ ಮಾಡಿದ್ದರು. ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಹೊಸ ಬಜೆಟ್ ಮಂಡಿಸಿದ ಸಿದ್ದರಾಮಯ್ಯ, ಇಷ್ಟು ಬೃಹತ್ ಮೊತ್ತದ ಅನುದಾನವನ್ನು ಕಡಿತ ಮಾಡಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಅಂದರೆ, 2008–2013 ಮತ್ತು 2020–2023(ಬೊಮ್ಮಾಯಿ ಬಜೆಟ್‌ವರೆಗೆ) ರಲ್ಲಿ ಮಠ ಮಂದಿರಗಳಿಗೆ ಸಾಕಷ್ಟು ಅನುದಾನ ನೀಡಲಾಗಿದೆ.

ರಾಜ್ಯದ ಪ್ರಮುಖ ಮಠಗಳಾದ ಆದಿಚುಂಚನಗಿರಿ, ಸಿದ್ಧಗಂಗಾ ಹಾಗೂ ಕಾಗಿನೆಲೆ ಕನಕ ಗುರುಪೀಠ, ಕೂಡಲಸಂಗಮದ ಪಂಚಮಸಾಲಿ ಪೀಠ ಸೇರಿದಂತೆ ಹಲವು ಮಠಗಳು ಸರ್ಕಾರದ ಅನುದಾನ ಪಡೆಯುತ್ತಿವೆ. 2020–21 ರಲ್ಲಿ ಯಡಿಯೂರಪ್ಪ ಅವರು ಕೋವಿಡ್ ಸಮಸ್ಯೆ ಇದ್ದರೂ ₹47.37 ಕೋಟಿ ವಿಶೇಷ ಅನುದಾನ ನೀಡಿದ್ದರು. 2021–22 ರಲ್ಲಿ ₹21.18, 2022–23 ರಲ್ಲಿ ₹20 ಕೋಟಿ ನಿಗದಿ ಮಾಡಿದ್ದರು.

ಜಾತಿ ಆಧಾರಿತ ಮಠಗಳಿಗೆ ಅನುದಾನ ನೀಡುವ ಪದ್ಧತಿ ಆರಂಭಿಸಿದ್ದ ಬಿ.ಎಸ್. ಯಡಿಯೂರಪ್ಪ ಅವರು ಮಠಗಳ ಮೂಲಕ ಆ ಸಮುದಾಯದ ಒಲವು ಗಳಿಸಲು ಪ್ರಯತ್ನಿಸಿ ದ್ದರು. ಆಗ 2009–10 ರಲ್ಲಿ ವಿಶೇಷ ಅನುದಾನದಡಿ ಮಠಗಳಿಗೆ ₹20 ಕೋಟಿ ನೀಡಿದ್ದರು.

ಮಠ, ದೇಗುಲಗಳಿಗೆ ಅನುದಾನ

ವರ್ಷ	ಮೊತ್ತ (ಕೋಟಿ ₹ ಗಳಲ್ಲಿ)
2007–08	15
2008–09	03
2009–10	20
2010–11	11
2012–13	99
2018–19	10
2020–21	47.37
2021–22	21.18
2022–23	155.21
2023–24	20

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಚೇರಿ (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560 009.

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
ಐಎಫ್‌ಟಿ ಸಂ: ಬೆಂಜಮಂ/ಮುಅ(ಯೋ)/ಅಮುಅ(ಯೋ)–2/605/2023–24	ದಿನಾಂಕ: 25.07.2023
ಬೆಂಗಳೂರಿನ ಪರಪ್ಪನ ಅಗ್ರಹಾರ ಗ್ರಾಮ ಕೇಂದ್ರ ಕಾರಾಗೃಹ ಮುಖ್ಯರಸ್ತೆಯಲ್ಲಿ ಕಾವೇರಿ ಹಂತ 5ನೇ ಯೋಜನೆ 1600ಮಿಮೀ ವ್ಯಾಸದ ಎಂಎಸ್ ಫೀಡರ್ ಮೈನ್ ಅನ್ನು ಕೂಡ್ಲುವಿನಲ್ಲಿ ಪ್ರಸ್ತುತವಿರುವ 30 ಎಂಎಲ್ ಜಿಎಲ್‌ಆರ್ ಟ್ಯಾಪಿಂಗ್‌ಗಾಗಿ 610ಮಿಮೀ ಡಯಾಮೀಟರ್ ಎಂಎಸ್ ಇನ್‌ಲೆಟ್ ನೀರು ಕೊಳವೆ ಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವುದು.	₹ 3,67,00,000/- / ₹ 6,50,000/-

ಭರ್ತಿಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸುವ ದಿನಾಂಕ 25.08.2023ರ ಸಂಜೆ 4:00 ಗಂಟೆಯವರೆಗೆ. ಟೆಂಡರ್‌ಗಳನ್ನು ದಿನಾಂಕ 28.08.2023ರ ಸಂಜೆ 4:30 ಗಂಟೆಯ ನಂತರ ತೆರೆಯಲಾಗುವುದು.

ಐಎಫ್‌ಟಿ ಸಂ: ಬೆಂಜಮಂ/ಮುಅ(ಯೋ)/ಅಮುಅ(ಕೇಂಉ & ಡಿಸಿಡಬ್ಲ್ಯೂ)–618/2023–24	ದಿನಾಂಕ: 26.07.2023
ತೇವಣಿ ಕೊಡುಗೆ ಕಾಮಗಾರಿಗಳಡಿಯಲ್ಲಿ ಕೊಮ್ಮಘಟ್ಟದ ಬಿಡಿಎ ಅರ್ಕಾವತಿ ಅಡಿಯಲ್ಲಿ ಅಂಜನಾಪುರದ ಮುಂದುವರೆದ ಬಡಾವಣೆಗಳಲ್ಲಿ ಎಸ್‌ಟಿಪಿಗಳು/ಐಎಸ್‌ಪಿಎಸ್/ಪಂಪಿಂಗ್ ಮೇನ್‌ಗಳ ಕಾಮಗಾರಿಗಳಿಗೆ ಯೋಜನಾ ನಿರ್ವಹಣೆ ಸಲಹಾಸೇವೆಗಳನ್ನು ಒದಗಿಸುವುದು. (3ನೇ ಕರೆ)	₹ 221.9 ಲಕ್ಷಗಳು / ₹ 3.33 ಲಕ್ಷಗಳು

ಭರ್ತಿಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸುವ ದಿನಾಂಕ 16.08.2023ರ ಬೆಳಿಗ್ಗೆ 11:00 ಗಂಟೆಯವರೆಗೆ. ಟೆಂಡರ್‌ಗಳನ್ನು ದಿನಾಂಕ 17.08.2023ರ ಮಧ್ಯಾಹ್ನ 12:00 ಗಂಟೆಯ ನಂತರ ತೆರೆಯಲಾಗುವುದು.

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ಯೋಜನೆ)

ವಾ.ಸಾ.ಸಂ.ಇ/675/2023–24

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_MARUTI SUPER CARRY YOM – 2021 Reg No – KA02AH7414
2) CB_Ashok Leyland Dost GOODS YOM – 2021 Reg No – KA51AG0889
3) MAHINDRA_AND_MAHINDRA - MAHINDRA BOLERO PICK-UP YOM – 2022 Reg No – KA469213
4) CB_MARUTI SUPER CARRY YOM – 2019 Reg No – KA05AK0388
5) ASHOK LEYLAND LIMITED - AL3116 YOM – 2019 Reg No – KA22B8870
6) CB_MARUTI SUPER CARRY YOM – 2021 Reg No – KA02AH7396
7) ASHOK LEYLAND LIMITED - CB_AMBULANCE YOM – 2022 Reg No – KA11C2781
8) CB_AL_DOST_LS_BS_III YOM – 2021 Reg No – KA51AG5938
9) TELCON LTD - CB_TATA HITACHI 210 EXCAVATOR. YOM – 2020 Reg No – NA
10) CB_ TATA INTRA V30 _COMMERCIAL VEHICLE YOM – 2022 Reg No – KA10A6638
11) CB_BOLERO PIK UP all Variants YOM – 2018 Reg No – KA40A8427
12) ASHOK LEYLAND LIMITED - CB_AMBULANCE YOM – 2021 Reg No – KA04AC5974
13) MAHINDRA_AND_MAHINDRA - MAHINDRA BOLERO PICK-UP YOM – 2021 Reg No – KA10A6565
14) CB_PRO_2114_CABIN_CHASSIS YOM – 2022 Reg No – KA52B4604

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 27.07.2023 (Please note that closing Auction date would not be a Weekly off / Holiday).

BRANCH ADDRESS: KOTAK MAHINDRA BANK LTD., 22, MG ROAD, BANGALORE, KARNATAKA – 560001
OR
Contact: Muzzammilkhan N
Kotak Mahindra Bank Ltd.
Contact / 080 - 61564205

Rajiv Gandhi Housing Corporation Limited
(A Government of Karnataka Enterprise)
Cauvery Bhavan, 9th Floor, E & F Block,
K. G. Road, Bengaluru - 560 009.
Telephone No: 23118888 Fax: 91-080-22247317,
E-mail: rgrhcladm@gmail.com

No. RGHCL 03 ADR 01 2023 Date: 25-07-2023

HIRING OF LEGAL CONSULTANT

Rajiv Gandhi Housing Corporation Ltd intends to engage retired Judge as Legal Advisor on temporary basis.

Details of requirements are given as follows.

Activity: Legal Advisor for RGHCL. **Deliverables:** The objectives of this job is to assist in the matters related to legal and handle the cases pending in the various Courts representing as petitioner/respondent on behalf of Rajiv Gandhi Housing Corporation Ltd and should also provide advice and opinions in matters related to legal issues and prepare parawise answers, written statements and objections for the cases.

The details of the job description can be downloaded from the website: **https://ashraya.karnataka.gov.in**

Qualification: Retired Judge. **Contract Period:** 11 Months. **Total Number of Resources:** One. Remuneration will be on consolidated/ Fixed Basis **(Rs.75,000/-. per month)**

Refer complete job description at **https://ashraya.karnataka.gov.in.** Eligible persons should apply with their complete Bio-data in prescribed format (giving contact telephone number, e-mail id, recent passport size photo and other necessary documents) on or before **date:14.08.2023, 5:00 p.m.** To, "The Managing Director, Rajiv Gandhi Housing Corporation Ltd", at the above address. In addition to hard copy, a soft copy shall also be sent to **rgrhcladm@gmail.com**

Sd/- Managing Director,
Rajiv Gandhi Housing Corporation Ltd,
Bangalore.

DIPR/CB/AAPL/RO664/2023-24

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಸಂಘ
ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿ
ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಕಾರ್ಯಾಲಯ, ರಾಮನಗರ ಜಿಲ್ಲೆ.
ಮೊ:– 9449843206 ಇ–ಮೇಲ್ : rchoramanagaram@gmail.com

ಸಂಖ್ಯೆ: ಎನ್.ಹೆಚ್.ಎಂ/ಆರ್.ಸಿ.ಹೆಚ್/ಡಿ.ಹೆಚ್.ಎಸ್/ವಾಹನ/18/2023–24
ದಿನಾಂಕ: 24–07–2023

ರಾಮನಗರ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ ಅಡಿಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವ್ಯಾಪ್ತಿಯಲ್ಲಿ ಬರುವ ವಿವಿಧ ಕಾರ್ಯಕ್ರಮಗಳಿಗೆ ಒಂದೇ ಏಜೆನ್ಸಿ ಮುಖಾಂತರ ಹೊರ ಸಂಪನ್ಮೂಲ ಸಂಸ್ಥೆಯಿಂದ ಒಟ್ಟು–15 (ಜಿಲ್ಲಾ ಮಟ್ಟಕ್ಕೆ 07+ ತಾಲ್ಲೂಕು ಮಟ್ಟಕ್ಕೆ 08) ಚಾಲಕ ಸಹಿತ ಹಳದಿ ಬೋರ್ಡ್‌ನ್ನು ಹೊಂದಿದ ನಾಲ್ಕು ಚಕ್ರದ ವಾಹನ ಸೇವೆಯನ್ನು ಪಡೆಯಲು ಕೆ.ಟಿ.ಪಿ.ಪಿ. ಕಾಯ್ದೆ 1999ರ ನಿಯಮಗಳು ಹಾಗೂ ಪ್ರಕಾರ 2000ರ ಮೇರೆಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ. 52,92,000/– ಹಾಗೂ ಇ.ಎಂ.ಡಿ ಮೊತ್ತ ರೂ. 1,32,200/– ಇರುತ್ತದೆ. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಳಾಸ http://eproc.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ–ಪೋರ್ಟಲ್‌ನಲ್ಲಿ ಕಾಣಿಸಿದ ಷರತ್ತು ಮತ್ತು ನಿಬಂಧನೆಗಳು ಹಾಗೂ ಇತರೆ ವಿವರಗಳನ್ನು ಗಮನಿಸಿ ಅರ್ಜಿ ಸಲ್ಲಿಸಬಹುದು. ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ವಿವರಗಳು	ದಿನಾಂಕ
1	ಟೆಂಡರ್ ಪ್ರಕಟಣೆಯ ದಿನಾಂಕ	24–07–2023
2	ಟೆಂಡರ್ ಪ್ರಾರಂಭದ ದಿನಾಂಕ (web portal)	24–7–2023 ಬೆಳಗ್ಗೆ: 11–00 ಗಂಟೆಗೆ
3	ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ	ದಿ: 9–8–2023 ರಂದು ಸಂಜೆ 5–00 ಗಂಟೆಗೆ
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	11–8–2023 ಬೆಳಗ್ಗೆ 11–00 ಗಂಟೆಗೆ
5	ಆರ್ಥಿಕ ಲಕೋಟೆ ತೆರೆಯುವ ದಿನಾಂಕ ಮತ್ತು ಸಮಯ	17–8–2023 ಮಧ್ಯಾಹ್ನ 2–00 ಗಂಟೆಗೆ
6	ಅಂದಾಜು ಟೆಂಡರ್ ಮೊತ್ತ	52,92,000/–
7	ಇ.ಎಂ.ಡಿ. ಮೊತ್ತ	1,32,200/–

ಸಹಿ/– ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು
ರಾಮನಗರ ಜಿಲ್ಲೆ.

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad-500 028
CIN : L13100TG1958GOI001674

CONTRACTS DEPARTMENT

Tender Enquiry No: HO(Contracts)/Civil/Architectural Consultancy/2023/181 Dated 27.07.2023 NMDC Limited, A "NAVARATNA" Public Sector Company under Ministry of Steel, Govt. of India, invites **online bids** through **MSTC Portal** from experienced **domestic** bidders for **"Engagement for Architectural Advisory/Consultancy Services on Retainership Basis for NMDC Limited"**. The detailed NIT and Bid documents can be viewed and/or downloaded from **27.07.2023 to 17.08.2023** from following website links:

1. NMDC website http://www.nmdc.co.in,
2. Central Public Procurement portal (CPP PORTAL) http://www.eprocure.gov.in/epublish/app and
3. MSTC portal -http://www.mstcecommerce.co.in/eprochome/nmdc/buyer_login.jsp and search the **Tender No. NMDC/HO/37/23-24/ET/352.** For further help refer to 'vendor guide' given in MSTC website **The bidders are requested to submit their bids online through MSTC Portal only.** The details of submission of bid through online are given in NIT. The Bidders on regular basis are required to visit the NMDC's website/CPP Portal/MSTC portal for corrigendum, if any, at a future date. For further clarification, CGM(Contracts), NMDC Limited, Hyderabad can be contacted through Fax No. +91-040-23534746, Tel No. +91-040-23532800, email: contracts@nmdc.co.in.

Executive Director (Works)

हर एक काम देश के नाम

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ:ಉನಸ:ಬಿ1:ಸಿಆರ್:03:2023–24 ದಿನಾಂಕ: 25.07.2023

ಟೆಂಡರು ಪ್ರಕಟಣೆ

2022–23ನೇ ಸಾಲಿನ ನಗರಸಭಾ ನಿಧಿಯಡಿ (ಮರು ಟೆಂಡರು) ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ **Standard Bid Document K.W-3** ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ **www.udupicity.mrc.gov.in** ನಿಂದ ಪಡೆದುಕೊಳ್ಳಬಹುದು.

(1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 08.08.2023 ಸಂಜೆ 5.00 ಗಂಟೆಗೆ** (2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ **ದಿನಾಂಕ: 09.08.2023 ಸಂಜೆ 5.01 ಗಂಟೆಗೆ** (3) ಆರ್ಥಿಕ ಬಿಡ್ಡು ತೆರೆಯುವ ದಿನಾಂಕ ಅರ್ಹ ಬಿಡ್ಡುದಾರರಿಗೆ ಪ್ರತ್ಯೇಕ ತಿಳಿಸಲಾಗುವುದು.

ಕಾಮಗಾರಿಗಳ ವಿವರ: ಉಡುಪಿ ನಗರಸಭಾ ವ್ಯಾಪ್ತಿಯ 35 ವಾರ್ಡ್‌ಗಳ ದಾರಿದೀಪಗಳ ವಾರ್ಷಿಕ ನಿರ್ವಹಣೆ ಕಾಮಗಾರಿ. DMA/2023-24/EL/WORK_INDENT2035, ಅಂದಾಜು ಮೊತ್ತ **ರೂ. 99,00,000.00,** ಇ.ಎಂ.ಡಿ **ರೂ. 1,48,500.00,** ಟ್ರಾನ್ಸಾಕ್ಷನ್ ಫೀ: **ಇ–ಪೋರ್ಟಲ್ ನಂತೆ,** ಕಾಮಗಾರಿ ಪೂರ್ತಿಗೊಳಿಸುವ ಅವಧಿ: **1 ವರ್ಷ**

ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ನಿಂದ ಟೆಂಡರು ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಇದಕ್ಕೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಪಟ್ಟವರಿಂದ ಪಡೆದುಕೊಳ್ಳಬಹುದು.

ಸಹಿ/– ಪೌರಾಯುಕ್ತರು,
ಉಡುಪಿ ನಗರಸಭೆ

ವಾಸಾಇ/ಸನಿಉ/ಕೆಎಸ್‌ಎಂಸಿಎ/138/23–24 ದಿ: 26.07.2023

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316
ದೂರವಾಣಿ :08226-234848 E-mail: purchamul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ)

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ವಿವಿಧ ವಸ್ತುಗಳನ್ನು ಖರೀದಿಸಲು ಹಾಗೂ ಸೇವೆಗಳನ್ನು ಪಡೆಯುವ ಸಂಬಂಧ ನಿಗದಿ ಪಡಿಸಲಾದ ಷರತ್ತುಗಳನೊಳಗೊಂಡ ಅರ್ಹಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖೇನ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **www.kppp.karnataka.gov.in** ಈ ವೆಬ್‌ಸೈಟ್‌ನಲ್ಲಿ ಪಡೆದು ಕೆಳಗಿನ ವಿವರದಂತೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರಸಂ	ಸರಕು / ಸೇವೆಗಳ ವಿವರ	ಟೆಂಡರ್ ಸಂಖ್ಯೆ	ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಕೊನೆಯ ದಿನಾಂಕ
01	Supply, Installation, Testing & Commissioning of Detachable Type Walk in Cold Stores of 2000 Ltrs Capacity	KMF/2023-24/IND0162	ದಿನಾಂಕ: 27.07.2023 ರಿಂದ 11.08.2023 ರವರೆಗೆ.
02	Supply, Installation & Commissioning of Electric Stacker – 1.5 Tons Capacity	KMF/2023-24/IND0163	
03	Supply, Installation & Commissioning of Compact TTO Online Printer	KMF/2023-24/IND0164	
04	Supply, Installation, Testing & Commissioning of Khoa Pan	KMF/2023-24/IND0165	
05	Supply, Installation, Testing & Commissioning of Air Circuit Breaker (ACB) -1600 AMPS & 3200 AMPS	KMF/2023-24/IND0166	
06	Biennial Maintenance Contract of Automatic Milk Collection Units in the limits of CHAMUL.	KMF/2023-24/SE0341	
07	Supply of CIP Chemical on Annual Rate Contract Basis	KMF/2023-24/IND0167	
08	Branding, Interior Design and Supply of Kitchen Equipments for Nandini Cafe Moo at Gundlupet Town	KMF/2023-24/SE0405	
09	Providing Transportation Services to Supply Sachet Milk In Insulated Vehicles From CHAMUL to Different Destinations Within Chamarajanagara District On Biennial Rate Contract Basis.	KMF/2023-24/SE0369	
10	Distribution Vehicle Tender to Supply WMP Under KBS On Biennial Rate On Contract Basis.	KMF/2023-24/SE0370	
11	Providing Transportation Services PTC & Car - Emergency and Procurement Route Officers on Biennial Rate On Contract Basis.	KMF/2023-24/SE0367	ದಿನಾಂಕ: 27.07.2023 ರಿಂದ 24.08.2023 ರವರೆಗೆ.

ಹೆಚ್ಚಿನ ಮಾಹಿತಿಗಾಗಿ ಕ್ರಸಂ 1 ರಿಂದ 7 ರವರೆಗೆ ವ್ಯವಸ್ಥಾಪಕರು (ಆಡಳಿತ/ಖರೀದಿ–ಮೊ.ಸಂ:7760968421), ಕ್ರಸ 8 ರಿಂದ 10 ರವರೆಗೆ ಪ್ರಧಾನ ವ್ಯವಸ್ಥಾಪಕರು (ಮಾರುಕಟ್ಟೆ–ಮೊ.ಸಂ:9606700123) ಮತ್ತು ಕ್ರಸಂ 11 ಕ್ಕೆ ವ್ಯವಸ್ಥಾಪಕರು (ಶೇ.ಪ–ಮೊ.ಸಂ:9741741046) ರವರುಗಳನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಜುಲೈ 26, ಮ್ಯಾಂಗ್ರೋವ್ ಪರಿಸರ ವ್ಯವಸ್ಥೆ ಸಂರಕ್ಷಣಾ ಅಂತರರಾಷ್ಟ್ರೀಯ ದಿನ

ವಿಷಯಗಳನ್ನು ನೆನಪಿಟ್ಟುಕೊಳ್ಳುವುದು ಅಧ್ಯಯನ, ಸ್ಪರ್ಧಾತ್ಮಕ ಪರೀಕ್ಷೆ, ವೃತ್ತಿಜೀವನದ ಯಶಸ್ಸಿಗಾಗಿ ಮಾತ್ರ ನಿರ್ಣಾಯಕವಾಗಿಲ್ಲ; ಅವು ದೈನಂದಿನ ಜೀವನಕ್ಕೆ ಕೂಡ ಅಷ್ಟೇ ಉಪಯುಕ್ತ.

ಕೈ ಕೊಡುವ ಸ್ಮರಣೆ ಸುಲಭ ನಿರ್ವಹಣೆ

ನಾಗೇಶ ಜಿ. ವೈದ್ಯ

ಅದೆಷ್ಟು ಚೆನ್ನಾಗಿ ತಯಾರಿ ಮಾಡಿಕೊಂಡಿದ್ದರೂ, ಪ್ರಶ್ನೆ ಪತ್ರಿಕೆ ಕೈಗೆ ಸಿಗುತ್ತಿದ್ದಂತೆ, ಉತ್ತರಗಳೇ ಮರೆತುಹೋಗುವುದುಂಟು. ಬಹು ಆಯ್ಕೆಯ ಪ್ರಶ್ನೆಗಳಿಗೆ ಯಾವ ಉತ್ತರವನ್ನು ಆಯ್ಕೆ ಮಾಡಬೇಕು ಎಂಬ ಬಗ್ಗೆ ಗೊಂದಲವಾಗುವುದೂ ಉಂಟು. ಬಾಲ್ಯದ ಘಟನೆಗಳನ್ನು, ಹತ್ತಾರು ವರ್ಷಗಳ ಹಿಂದೆ ಭೇಟಿ ಮಾಡಿದ್ದ ಸ್ಥಳಗಳನ್ನು, ದಶಕಗಳ ಹಿಂದಿನ ಹಳೆಯ ಹಾಡಿನ ಸಾಹಿತ್ಯವನ್ನು ಮರೆಯದ ನಮಗೆ ಹೀಗಾಗುವುದೇಕೆ? ವಿಷಯಗಳನ್ನು ನೆನಪಿಟ್ಟುಕೊಳ್ಳುವುದು ಅಧ್ಯಯನ, ಸ್ಪರ್ಧಾತ್ಮಕ ಪರೀಕ್ಷೆ, ವೃತ್ತಿಜೀವನದ ಯಶಸ್ಸಿಗಾಗಿ ಮಾತ್ರ ನಿರ್ಣಾಯಕವಾಗಿಲ್ಲ; ಅವು ದೈನಂದಿನ ಜೀವನಕ್ಕೆ ಕೂಡ ಅಷ್ಟೇ ಉಪಯುಕ್ತ.

ಯಾವುದೇ ಮಾಹಿತಿಯು ಸಂವೇದನಾ ಗ್ರಾಹಕಗಳ ಮೂಲಕ ಮಿದುಳನ್ನು ಪ್ರವೇಶಿಸುತ್ತದೆ, ಅದನ್ನು ಪ್ರಜ್ಞಾಪೂರ್ವಕವಾಗಿ ಗ್ರಹಿಸಿದಾಗ ಮಾತ್ರ ಮುಂದಿನ ಹಂತಕ್ಕೆ ಹೋಗುತ್ತದೆ. ಮಿದುಳು ಅಂತಹ ಮಾಹಿತಿಯನ್ನು ತನಗೆ ಬೇಕಾದ ರೂಪದಲ್ಲಿ ಪರಿವರ್ತಿಸಿಕೊಂಡು ಸಂಗ್ರಹಿಸಿಕೊಳ್ಳುತ್ತದೆ. ಹಾಗೆ ಸಂಗ್ರಹವಾದ ಮಾಹಿತಿಯನ್ನು ಯಾವಾಗ ಬೇಕಿದ್ದರೂ ಮರುಪಡೆಯಲು ಸಾಧ್ಯವಿದೆ. ಸ್ಮರಣೆಗಳಲ್ಲಿ (ನೆನಪು) ಕೆಲವು ಕ್ಷಣಿಕ ಅಥವಾ ಅಲ್ಪಾವಧಿಗಾದರೆ, ಉಳಿದವು ಜೀವಿತಾವಧಿಯಲ್ಲಿ ಉಳಿಯುವಂತಹ ದೀರ್ಘಾವಧಿ ಸ್ಮರಣೆಗಳು. 'ನಾಳೆ 10 ಗಂಟೆಗೆ ಪರೀಕ್ಷಾ ಕೇಂದ್ರವನ್ನು ತಲುಪಬೇಕು' ಎನ್ನುವುದು ಅಲ್ಪಾವಧಿಯದ್ದಾದರೆ, ಭಾರತದ ಮೊದಲ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಎನ್ನುವುದು ದೀರ್ಘಾವಧಿಯದ್ದು.

ಆದರೆ, ನಮ್ಮ ಮಿದುಳು ನಮ್ಮ ಜೀವನದ ಪ್ರತಿಯೊಂದು ಘಟನೆ, ಪದ ಅಥವಾ ಚಿತ್ರವನ್ನು ನೆನಪಿಟ್ಟುಕೊಳ್ಳಲು ವಿನ್ಯಾಸಗೊಳಿಸಲಾಗಿಲ್ಲ. ಹಾಗೆಯೇ ನೆನಪಿನೊಂದಿಗೆ ಹಸ್ತಕ್ಷೇಪವಾದಾಗ, ಮಿದುಳಿನಲ್ಲಿ ಸಂಗ್ರಹಣೆ ಅಥವಾ ಮರುಪಡೆಯುವಿಕೆ ವಿಫಲವಾದಾಗ ಹಾಗೂ ಮರೆಯುವ ಸ್ವ-ಪ್ರೇರಣೆಯಿಂದಾಗಿ ಕೆಲವೊಂದು ಮಾಹಿತಿಗಳು ಮರೆತುಹೋಗುತ್ತವೆ. ಹಾಗಾಗಿ, ಮಾಹಿತಿಯನ್ನು ಆಗಾಗ್ಗೆ ಪರಿಶೀಲಿಸುತ್ತಿರುವುದು ಅಗತ್ಯ. ಜೀವನದ ಪ್ರತಿಯೊಂದು ಹೆಜ್ಜೆಯಲ್ಲೂ ನಿರ್ಣಾಯಕವಾಗಿರುವ ಜ್ಞಾಪಕ ಶಕ್ತಿಯ ವರ್ಧನೆಗೆ ಕೆಲವು ಉಪಾಯಗಳಿವೆ.

ಪ್ರಜ್ಞಾಪೂರ್ವಕ ಓದು

ಯಾವುದೇ ಮಾಹಿತಿಯನ್ನು ನೆನಪಿಟ್ಟುಕೊಳ್ಳಲು ಅದನ್ನು ಅರ್ಥಮಾಡಿಕೊಳ್ಳಬೇಕು. ಏಕಾಗ್ರತೆಯಿಂದ, ಜೋರಾಗಿ ಓದುವುದು ನೆನಪಿಗೆ ಸಹಾಯಕವಾಗುವ ತಂತ್ರಗಳಲ್ಲೊಂದು. ಓದಿದ ನಂತರ, ಪುಸ್ತಕವನ್ನು ಮುಚ್ಚಿಟ್ಟು ಮಾಹಿತಿಯನ್ನು ನಿಮ್ಮದೇ ಆದ ಶಬ್ದಗಳಲ್ಲಿ ಪುನರಾವರ್ತಿಸಿ. ಮಾಹಿತಿ ನಿಮ್ಮ ನೆನಪಿನಲ್ಲಿ ಸ್ಥಿರವಾಗಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಇದು ಅನುವು ಮಾಡಿಕೊಡುತ್ತದೆ. ಆಗಿಲ್ಲವೆಂದರೆ, ಹೆಚ್ಚಿನ ಏಕಾಗ್ರತೆಯೊಂದಿಗೆ ಮತ್ತೆ ಓದಿ. ಓದಿಗೆ ಯಾವುದೇ ನಿಗದಿತ ಸಮಯವಿಲ್ಲದಿದ್ದರೂ, ನಿದ್ದೆಯಲ್ಲಿ ವಿಶ್ರಾಂತಿ ಪಡೆದು ತಾಜಾ ಸ್ಥಿತಿಯಲ್ಲಿರುವ ಮಿದುಳು, ಮುಂಜಾನೆಯ ಶಾಂತ ವಾತಾವರಣದಲ್ಲಿ ಬೇಗನೆ ಸಮೀಕರಿಸುತ್ತದೆ ಮತ್ತು ಹೆಚ್ಚಿನ ಮಾಹಿತಿಯನ್ನು ಉಳಿಸಿಕೊಳ್ಳುತ್ತದೆ. ಸಾಧ್ಯವಾದರೆ ಈ ಸಮಯವನ್ನೇ ಆಯ್ದುಕೊಳ್ಳಿ.

ಮೊದಲಕ್ಷರ ತಂತ್ರ

ನೆನಪಿಟ್ಟುಕೊಳ್ಳಬೇಕಾದ ಶಬ್ಧಗಳ ಪುಂಜವನ್ನು ಅದರ ಮೊದಲ ಅಕ್ಷರಗಳಿಗೆ ಸೀಮಿತಗೊಳಿಸಿಕೊಳ್ಳಿ. ಅದೇ ಹೊಸ ಶಬ್ದವಾಗಲಿ. ಶಾಲೆಯಲ್ಲಿ ದಿನವೂ ಏನಾದರೊಂದು ವಸ್ತುವನ್ನು ಬಿಟ್ಟು ಬರುತ್ತಿದ್ದ ಬಾಲಕಿಗೆ ಆಕೆಯ ಅಮ್ಮ 'ಪೆಪ್ಪರ್‌ಮಿಂಟ್' ಎಂಬ ಹೊಸ ಶಬ್ದವನ್ನು ಹೇಳಿಕೊಟ್ಟಳು. ಆಕೆ ಶಾಲೆ ಬಿಡುವಾಗ ದಿನವೂ ಅದನ್ನು ಪರಿಶೀಲಿಸಿಯೇ ಬರಬೇಕು. ಇಲ್ಲಿ ಪೆಪ್ಪರ್‌ಮಿಂಟ್ ಎನ್ನುವುದು ಎಲ್ಲ ವಸ್ತುಗಳ ಮೊದಲಕ್ಷರಗಳ ಸಂಕ್ಷಿಪ್ತ ರೂಪ. ಪೆನ್ಸಿಲ್, ಪೇಪರ್(ಪುಸ್ತಕ, ನೋಟ್‌ಬುಕ್), ರಬ್ಬರ್, ಮೆಂಡರ್ ಮತ್ತು ಥರ್ಮಾಸ್. ಅಂದಿನಿಂದ ಆಕೆ ಏನನ್ನೂ ಮರೆತು ಬರುತ್ತಿರಲಿಲ್ಲ. ಹೀಗೆ ಮೊದಲ ಅಕ್ಷರದ ಸಂಯೋಜನೆಯಿಂದ ಉತ್ಪತ್ತಿಯಾಗುವ ಪದಗುಚ್ಛವು ನೆನಪಿಟ್ಟುಕೊಳ್ಳುವ ಸಾಮರ್ಥ್ಯವನ್ನು ವರ್ಧಿಸುತ್ತದೆ. ಹಾಗೆಯೇ ದಕ್ಷಿಣದ ರಾಜ್ಯಗಳ ಹೆಸರನ್ನು ನೆನಪಿಸಿಕೊಳ್ಳಲು 'ಅಕಟಕಟಾ' ಎಂದೂ ನೆನಪಿಟ್ಟುಕೊಳ್ಳಬಹುದು. ಆಂಗ್ಲ ಮಾಲೆಯ ಈ ಅಕ್ಷರಗಳು ಆಂಧ್ರ, ಕರ್ನಾಟಕ, ತಮಿಳುನಾಡು, ಕೇರಳ ಮತ್ತು ತೆಲಾಂಗಣ ಸೂಚಕ.

ಟಿಪ್ಪಣಿ ಮಾಡಿಕೊಳ್ಳಿ

ಅಗತ್ಯವೆನಿಸುವ ಎಲ್ಲ ಮಾಹಿತಿಗಳನ್ನೂ ಬರೆದಿಟ್ಟುಕೊಳ್ಳಿ. ಬರೆಯುವ ಭೌತಿಕ ಕ್ರಿಯೆಯಲ್ಲಿ ನಿಮ್ಮ ಕೈ, ತೋಳು ಮತ್ತು ಬೆರಳುಗಳು ಸಕ್ರಿಯವಾಗುವುದರಿಂದ, ಗಮನ ಕೇಂದ್ರೀಕೃತವಾಗುತ್ತದೆ. ಇದು ಮೆದುಳಿನಲ್ಲಿ ಮಾಹಿತಿಯ ಸ್ಪಷ್ಟ ದಾಖಲಾತಿಗೆ ಸಹಕಾರಿ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ. ಕೆಲವು ಶಬ್ದಗಳನ್ನು ತಪ್ಪಾಗಿ ಬರೆಯುವ ವಿದ್ಯಾರ್ಥಿಗಳಿಗೆ, ಶಾಲೆಯಲ್ಲಿ ಹತ್ತು, ಇಪ್ಪತ್ತು ಸಲ ಬರೆಯಲು ಮೇಷ್ಟ್ರು ನೀಡುತ್ತಿದ್ದ ಹೋಂವರ್ಕ್ ನೆನಪಿಸಿಕೊಳ್ಳಿ.

ಕತೆಯಾಗಿಸಿ

ವಸ್ತು, ಘಟನೆಗಳ ದೀರ್ಘ ಪಟ್ಟಿ ಯನ್ನು ನೆನಪಿಟ್ಟುಕೊಳ್ಳಬೇಕಾದರೆ, ಅವುಗಳನ್ನು ಒಳಗೊಳ್ಳುವ ಕತೆಯನ್ನು ರಚಿಸಿಕೊಳ್ಳುವ ತಂತ್ರವು ಉತ್ತಮವಾಗಿದೆ. ನೀವು ರಚಿಸುವ ಕತೆಯಲ್ಲಿ ನೀವು ಈಗಾಗಲೇ ತಿಳಿದಿರುವ ಪಾತ್ರ, ವಸ್ತುಗಳಿದ್ದರೆ ನೆನಪಿಟ್ಟುಕೊಳ್ಳಲು ಸುಲಭ. 1919ರಲ್ಲಿ, ಅಮೃತಸರದ ಜಲಿಯನ್‌ವಾಲಾ ಬಾಗ್‌ನಲ್ಲಿ ಜನರಲ್ ಡಯರ್ 400 ಜನರ ಹತ್ಯೆಗೆ ಕಾರಣವಾದುದನ್ನು ಹೀಗೆ ಕತೆಯಾಗಿ ಹೆಣೆದುಕೊಳ್ಳಬಹುದು.

ಅಮೃತದಂತೆ ಸಿಹಿಯಿರುವ 19 ಅಂಜೂರ, 19 ದ್ರಾಕ್ಷಿ ಮಾರಲು ಬಂದಿದ್ದ ಜಾಲಿ ಮನುಷ್ಯ ಕಾಬೂಲಿವಾಲಾಗೆ ಡೈರಿಯೊಂದು ಸಿಕ್ಕಿತು. ಎತ್ತಿಕೊಳ್ಳಲು ಮುಂದಾದಾಗ 400 ಗುಂಡುಗಳು ಸಿಡಿದವು! ಈ ತರಹದ ಕಲ್ಪನೆಗಳಿಂದ ನೆನಪಿಟ್ಟುಕೊಳ್ಳಲು ಕಠಿಣವೆನಿಸುವ ಇಸವಿ, ಘಟನಾಸ್ಥಳ, ವ್ಯಕ್ತಿಗಳ ಹೆಸರನ್ನು ದೀರ್ಘಾವಧಿಯಲ್ಲಿ ಸಹಜವಾಗಿ ನೆನಪಿಟ್ಟುಕೊಳ್ಳಬಹುದು. ಅಗತ್ಯವೆನಿಸಿದರೆ ಮಾಹಿತಿಯನ್ನು ಫೋಟೊಗಳು, ನಕ್ಷೆಗಳು ಮತ್ತು ಚಿಹ್ನೆಗಳಾಗಿಯೂ ದೃಶ್ಯೀಕರಿಸಬಹುದು.

ಕಳೆದುಕೊಳ್ಳುವ ಮುನ್ನ ಬಳಸಿ

ಯಾವುದೇ ಮಾಹಿತಿಯನ್ನು ನಿಯಮಿತವಾಗಿ ಬಳಸದಿದ್ದರೆ, ಅದನ್ನು ಮರುಪಡೆಯಲು ಕಷ್ಟವಾಗುತ್ತದೆ. ಉದಾಹರಣೆಗೆ ಹತ್ತು ವರ್ಷಗಳ ಹಿಂದಿನ ನಿಮ್ಮ ಹಳೆಯ ಫೋನ್ ನಂಬರ್. ಒತ್ತಡ, ಖಿನ್ನತೆ, ದುಃಖ, ಆತಂಕಗಳಿಂದಲೂ ಸ್ಮರಣೆಯು ತಾತ್ಕಾಲಿಕವಾಗಿ ಹಾನಿಗೊಳಗಾಗಬಹುದು. ಹಾಗಾಗಿ, ಮಹತ್ವದ ಮಾಹಿತಿಯನ್ನು ಆಗಾಗ ಪುನರಾವರ್ತನೆಗೊಳಿಸುತ್ತಿರಿ. ಪುನರಾವರ್ತನೆಯು ನಿಮ್ಮ ಮಿದುಳಿನ ಮೂಲಕ ದೀರ್ಘಾವಧಿ ಸ್ಮರಣೆಯಲ್ಲಿ ಮಾಹಿತಿಯನ್ನು ಸಂಗ್ರಹಿಸುತ್ತದೆ.

ನಿಧಾನವೇ ಪ್ರಧಾನ

ಅಧ್ಯಯನವನ್ನು ಲಗುಬಗೆಯಲ್ಲಿ ಮುಗಿಸಬೇಡಿ. ನಿತ್ಯವೂ ನಿಯಮಿತವಾಗಿ ಭಾಗಗಳಲ್ಲಿ ಅಧ್ಯಯನ ಮಾಡುವುದರಿಂದ, ಮಾಹಿತಿಯು ದೀರ್ಘಾವಧಿಯ ಸ್ಮರಣೆಯಲ್ಲಿ ಶೇಖರಣೆಯಾಗಿ ಶಾಶ್ವತವಾಗಿ ಉಳಿದುಕೊಳ್ಳುತ್ತದೆ.

ಮಿದುಳಿನ ಕಾಳಜಿ

ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಲು ಮಿದುಳಿಗೂ ಸಾಕಷ್ಟು ವಿಶ್ರಾಂತಿ ಬೇಕು. ಹಾಗಾಗಿ ಸಾಕಷ್ಟು ನಿದ್ದೆ ಮಾಡಿ. ಹಾಗೆಯೇ ಜ್ಞಾಪಕ ಶಕ್ತಿ ವರ್ಧನೆಗೆ ಕಾರಣವಾಗಬಲ್ಲ ಮಾನಸಿಕ ವ್ಯಾಯಾಮ ಗಳತ್ತಲೂ ಗಮನ ನೀಡಿ. ಪದಬಂಧಗಳು, ಸುಡೊಕು, ಚೆಸ್ ಆಟಗಳು ಸ್ಮರಣೆಯನ್ನು ಸುಧಾರಿಸಲು ಉತ್ತಮ.

❖

ಮ್ಯಾಂಗ್ರೋವ್ ಪರಿಸರ ವ್ಯವಸ್ಥೆ

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ –ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ.

ಯು.ಟಿ. ಆಯಿಶ ಫರ್ಝಾನ

ಪ್ರತಿ ವರ್ಷ ಜುಲೈ 26 ರಂದು ಮ್ಯಾಂಗ್ರೋವ್ ಪರಿಸರ ವ್ಯವಸ್ಥೆ ಸಂರಕ್ಷಣಾ ಅಂತರರಾಷ್ಟ್ರೀಯ ದಿನವನ್ನು ಆಚರಿಸಲಾಗುತ್ತದೆ.

ಮ್ಯಾಂಗ್ರೋವ್ ಪರಿಸರ ವ್ಯವಸ್ಥೆ 'ವಿಶಿಷ್ಟ ಮತ್ತು ವಿಶೇಷ ಆದರೆ ದುರ್ಬಲ ಪರಿಸರ ವ್ಯವಸ್ಥೆ' ಎಂದು ಅರಿವು ಮೂಡಿಸಲು ಮತ್ತು ಅವುಗಳ ಸಮರ್ಪಕ ನಿರ್ವಹಣೆ, ಸಂರಕ್ಷಣೆ ಮತ್ತು ಪರಿಹಾರಗಳನ್ನು ಉತ್ತೇಜಿಸುವ ಉದ್ದೇಶದಿಂದ ಈ ದಿನವನ್ನು ಆಚರಿಸಲಾಗುತ್ತದೆ.

ಇತಿಹಾಸ

1998ರಲ್ಲಿ ಇದೇ ದಿನದಂದು, ಹೇಹೌ ಡೇನಿಯಲ್ ನ್ಯಾನೊಟೊ ಎಂಬ ಗ್ರೀನ್‌ಪೀಸ್ ಸಂಸ್ಥೆಯ ಕಾರ್ಯಕರ್ತ ಈಕ್ವೆಡಾರ್‌ನ ಮುಯಿಸ್ನೆಯಲ್ಲಿ ಮ್ಯಾಂಗ್ರೋವ್ ಜೌಗು ಪ್ರದೇಶಗಳ ಸಂರಕ್ಷಣಾ ಪ್ರದರ್ಶನದಲ್ಲಿ ಭಾಗವಹಿಸಿದ್ದಾಗ ಹೃದಯಾಘಾತದಿಂದ ನಿಧನರಾದರು. ಈ ಹಿನ್ನೆಲೆಯಲ್ಲಿ ಆ ಕಾರ್ಯಕರ್ತನ ಸ್ಮರಣೆಗಾಗಿ ಯುನೆಸ್ಕೊ ಸಾಮಾನ್ಯ ಸಮ್ಮೇಳನ 2015ರಲ್ಲಿ ಮ್ಯಾಂಗ್ರೋವ್ ಪರಿಸರ ವ್ಯವಸ್ಥೆಯ ಸಂರಕ್ಷಣಾ ಅಂತರರಾಷ್ಟ್ರೀಯ ದಿನವನ್ನು ಆಚರಿಸಲು ಘೋಷಿಸಲಾಯಿತು.

ಮ್ಯಾಂಗ್ರೋವ್ ಎಂದರೇನು?

'ಮ್ಯಾಂಗ್ರೋವ್' ಎಂಬುದು ಪೋರ್ಚುಗೀಸ್ ಪದ 'ಮ್ಯಾಂಗ್ಯೂ' ಮತ್ತು ಇಂಗ್ಲಿಷ್ ಪದ 'ಗ್ರೋವ್' ನ ಸಂಯೋಜನೆಯಾಗಿದೆ. ಮ್ಯಾಂಗ್ರೋವ್‌ಗಳು ಪ್ರಪಂಚದ ಉಷ್ಣವಲಯದ ಮತ್ತು ಉಪೋಷ್ಣವಲಯದ ಮಧ್ಯಂತರ ಪ್ರದೇಶಗಳ ಲವಣ ಸಹಿಷ್ಣು ಸಸ್ಯಗಳಾಗಿವೆ. ಲವಣಸಹಿಷ್ಣು ಸಸ್ಯಗಳನ್ನು 'ಹಾಲೋಫೈಟ್ಸ್'ಎನ್ನುತ್ತಾರೆ. ಸ್ಥಳೀಯವಾಗಿ ಕಾಂಡ್ಲಾ ಗಿಡಗಳು ಎಂದು ಕರೆಯುತ್ತಾರೆ

ಕಡಲ ತೀರದಲ್ಲಿ ಕಠಿಣ ಸ್ಥಿತಿಗಳಲ್ಲಿಯೂ ಬದುಕಬಲ್ಲ, ಲವಣದ ಅಂಶ ಹೆಚ್ಚಿದ್ದರೂ ಸಹಿಸಿಕೊಳ್ಳಬಲ್ಲ, ಒಟ್ಟಾಗಿ ದಟ್ಟವಾಗಿ ಬೆಳೆಯುವ ವಿಶೇಷ ರೀತಿಯ ಕಾಡುಗಳಿಗೆ ಮ್ಯಾಂಗ್ರೋವ್ ಕಾಡು ಎಂದು ಕರೆಯುತ್ತಾರೆ. ಎರಡೂವರೆ ಕೋಟಿ ವರ್ಷಗಳ ಹಿಂದೆ ಮ್ಯಾಂಗ್ರೋವ್ ಕಾಡುಗಳ ಮೊದಲ ಪಳೆಯುಳಿಕೆ ಸಿಕ್ಕಿತ್ತು ಎಂದು ದಾಖಲಿಸಲಾಗಿದೆ.

- ಈ ಸಸ್ಯಗಳು ಕಂಡುಬರುವ ನಿರ್ದಿಷ್ಟ ಪ್ರದೇಶಗಳನ್ನು 'ಮ್ಯಾಂಗ್ರೋವ್ ಪರಿಸರ ವ್ಯವಸ್ಥೆ' ಎಂದು ಕರೆಯಲಾಗುತ್ತದೆ. ಇವು ಹೆಚ್ಚು ಉತ್ಪಾದಕ ಪರಿಸರ ವ್ಯವಸ್ಥೆಗಳಾಗಿದ್ದರೂ ಅತ್ಯಂತ ಸೂಕ್ಷ್ಮ ಮತ್ತು ದುರ್ಬಲವಾಗಿರುತ್ತವೆ. ಮ್ಯಾಂಗ್ರೋವ್ ಸಸ್ಯಗಳಲ್ಲದೆ, ಈ ಪರಿಸರ ವ್ಯವಸ್ಥೆಯು ಇತರ ಸಸ್ಯ ಮತ್ತು ಪ್ರಾಣಿ ಪ್ರಭೇದಗಳಿಗೂ ಆಶ್ರಯ ನೀಡುತ್ತದೆ.
- ಇಲ್ಲಿನ ಮರಗಳು ಸಂಕೀರ್ಣ ಬೇರುಗಳನ್ನು ಹೊಂದಿವೆ. ಹೆಚ್ಚಿನ ತೇವಾಂಶವಿದ್ದು, ಲವಣದ ಅಂಶ ಹೆಚ್ಚಿರುವ ಮಣ್ಣಿನಲ್ಲಿ ಬದುಕುವ ಸಾಮರ್ಥ್ಯ ಹೊಂದಿರುತ್ತವೆ.
- ಮ್ಯಾಂಗ್ರೋವ್ ಕಾಡುಗಳು ಬಹುತೇಕ ನೀರಿನಲ್ಲಿ ಮುಳುಗಿರುವುದರಿಂದ, ಅವುಗಳ ಆವಾಸಸ್ಥಾನದಲ್ಲಿ ಆಮ್ಲಜನಕದ ಅಂಶ ಕಡಿಮೆಯಿರುತ್ತದೆ. ಹಾಗಾಗಿ ಹೊರಚಾಚಿದ ಬೇರುಗಳಿಂದಲೇ ಬದುಕಲು ಬೇಕಾಗುವ ಅನಿಲಗಳನ್ನು ಹೀರಿಕೊಳ್ಳುತ್ತವೆ. ಆ ಅನಿಲಗಳನ್ನು ಬೇರುಗಳಲ್ಲೇ ಹಿಡಿದಿಟ್ಟುಕೊಳ್ಳುವ ಈ ಮರಗಳು, ಪ್ರವಾಹದ ಸಮಯದಲ್ಲಿ ಮತ್ತೆ ಬಳಸಿಕೊಳ್ಳುತ್ತವೆ.

ಮ್ಯಾಂಗ್ರೋವ್‌ಗಳ ಪ್ರಾಮುಖ್ಯ

- ಮ್ಯಾಂಗ್ರೋವ್‌ಗಳು ಭೂಮಿ ಮತ್ತು ಸಮುದ್ರದ ನಡುವಿನ ಗಡಿಯಲ್ಲಿರುವ ಅಪರೂಪದ, ಅದ್ಭುತ ಮತ್ತು ಸಮೃದ್ಧ ಪರಿಸರ ವ್ಯವಸ್ಥೆಗಳಾಗಿವೆ.
- ಈ ಪರಿಸರ ವ್ಯವಸ್ಥೆಗಳು ವಿಶ್ವದಾದ್ಯಂತ ಕರಾವಳಿ ಸಮುದಾಯಗಳ ಯೋಗಕ್ಷೇಮ, ಆಹಾರ ಭದ್ರತೆ ಮತ್ತು ರಕ್ಷಣೆಗೆ ಕೊಡುಗೆ ನೀಡುತ್ತವೆ. ಸಮೃದ್ಧ ಜೀವವೈವಿಧ್ಯವನ್ನು ಬೆಂಬಲಿಸುತ್ತವೆ. ಮೀನು ಮತ್ತಿತರ ಜಲಚರಗಳಿಗೆ ಮತ್ತು ಇತರ ಪ್ರಾಣಿ ಪಕ್ಷಿಗಳಿಗೆ ಅಮೂಲ್ಯವಾದ ಆವಾಸಸ್ಥಾನವನ್ನು ಒದಗಿಸುತ್ತವೆ.
- ಮ್ಯಾಂಗ್ರೋವ್‌ಗಳು ಚಂಡಮಾರುತ, ಸುನಾಮಿಗಳು, ಹೆಚ್ಚುತ್ತಿರುವ ಸಮುದ್ರ ಮಟ್ಟ ಮತ್ತು ಕಡಲ ಸವೆತದ ವಿರುದ್ಧ ನೈಸರ್ಗಿಕ ರಕ್ಷಣೆಯಂತೆ ಕಾರ್ಯನಿರ್ವಹಿಸುತ್ತವೆ. ಅವುಗಳ ಮಣ್ಣು ಹೆಚ್ಚು ಪರಿಣಾಮಕಾರಿಯಾದ ಇಂಗಾಲದ ಸಿಂಕ್‌ಗಳಾಗಿ ಕಾರ್ಯನಿರ್ವಹಿಸುತ್ತವೆ. ಕಾಡುಗಳಿಗೆ ಹೋಲಿಸಿದರೆ ಇಲ್ಲಿನ ಗಿಡಗಳು 10 ಪಟ್ಟು ಹೆಚ್ಚು ಇಂಗಾಲವನ್ನು ಸಂಗ್ರಹಿಸಿಡಬಲ್ಲವು.
- ಆದರೂ ಮ್ಯಾಂಗ್ರೋವ್‌ಗಳು ಒಟ್ಟಾರೆ ಜಾಗತಿಕ ಅರಣ್ಯ ನಷ್ಟಕ್ಕಿಂತ ಮೂರರಿಂದ ಐದು ಪಟ್ಟು ವೇಗವಾಗಿ ಕಣ್ಮರೆಯಾಗುತ್ತಿವೆ. ಹೆಚ್ಚಿನ ಮಟ್ಟದಲ್ಲಿ ಅಸ್ತಿತ್ವ ಅಳಿಸಿ ಹೋಗುವ ಆತಂಕದಲ್ಲಿವೆ. ಒಂದೊಮ್ಮೆ ಕಾಂಡ್ಲಾ ಅಥವಾ ಮ್ಯಾಂಗ್ರೋವ್ ಕಾಡುಗಳು ಕಣ್ಮರೆಯಾಗುವುದರಿಂದ ಗಂಭೀರ ಪಾರಿಸರಿಕ ಮತ್ತು ಸಾಮಾಜಿಕ-ಆರ್ಥಿಕ ಪರಿಣಾಮಗಳು ಉಂಟಾಗುತ್ತದೆ.

ಭಾರತದಲ್ಲಿ ಮ್ಯಾಂಗ್ರೋವ್‌ಗಳು

- ಅರಣ್ಯ ಸಮೀಕ್ಷೆ ವರದಿ 2021ರ ಪ್ರಕಾರ, ದೇಶದ ಒಟ್ಟು ಮ್ಯಾಂಗ್ರೋವ್ ವ್ಯಾಪ್ತಿ 4,992 ಚದರ ಕಿ.ಮೀ. 2019 ರ ಮೌಲ್ಯಮಾಪನಕ್ಕೆ ಹೋಲಿಸಿದರೆ ಮ್ಯಾಂಗ್ರೋವ್ ಹೊದಿಕೆಯಲ್ಲಿ 17 ಚದರ ಕಿಮೀ ಹೆಚ್ಚಳವಾಗಿದೆ.
- ಮ್ಯಾಂಗ್ರೋವ್ ಹೊದಿಕೆಯಲ್ಲಿ ಹೆಚ್ಚಳವಾಗಿರುವ ಮೂರು ಅಗ್ರ ರಾಜ್ಯಗಳೆಂದರೆ ಒಡಿಶಾ (8 ಚದರ ಕಿಮೀ) ನಂತರ ಮಹಾರಾಷ್ಟ್ರ (4 ಚದರ ಕಿಮೀ) ಮತ್ತು ಕರ್ನಾಟಕ (3 ಚದರ ಕಿಮೀ).
- ಭಾರತದ ಪ್ರಮುಖ ಮ್ಯಾಂಗ್ರೋವ್‌ಗಳಲ್ಲಿ ಸುಂದರಬನ್ ತೋಪುಗಳು, ಮಹಾನದಿ ಮ್ಯಾಂಗ್ರೋವ್‌ಗಳು, ಗುಜರಾತ್‌ನ ಮ್ಯಾಂಗ್ರೋವ್‌ಗಳು, ರತ್ನಗಿರಿ ಮ್ಯಾಂಗ್ರೋವ್‌ಗಳು, ಗೋವಾ ಮ್ಯಾಂಗ್ರೋವ್‌ಗಳು, ಕಾವೇರಿ ಮ್ಯಾಂಗ್ರೋವ್‌ಗಳು, ಕೃಷ್ಣಾ-ಗೋದಾವರಿ ಮ್ಯಾಂಗ್ರೋವ್‌ಗಳು ಮತ್ತು ಅಂಡಮಾನ್ ನಿಕೋಬಾರ್ ಮ್ಯಾಂಗ್ರೋವ್‌ಗಳು ಮುಖ್ಯವಾಗಿವೆ.
- ಭಾರತದಲ್ಲಿ, ಮ್ಯಾಂಗ್ರೋವ್ ಅರಣ್ಯವು ಪಶ್ಚಿಮ ಬಂಗಾಳ, ಗುಜರಾತ್, ತಮಿಳುನಾಡು, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಆಂಧ್ರಪ್ರದೇಶ ಮತ್ತು ಇತರ ರಾಜ್ಯಗಳಲ್ಲಿ ಕಂಡುಬರುತ್ತದೆ. ಸುಂದರಬನ್ ಮ್ಯಾಂಗ್ರೋವ್ ಕಾಡುಗಳು ವಿಶ್ವದ ಅತಿದೊಡ್ಡ ಮ್ಯಾಂಗ್ರೋವ್ ಆಗಿದ್ದರೆ, ತಮಿಳುನಾಡಿನ ಪಿಚಾವರಂ ಮ್ಯಾಂಗ್ರೋವ್ ಕಾಡುಗಳು ವಿಶ್ವದಲ್ಲೇ ಎರಡನೇ ದೊಡ್ಡದಾಗಿದೆ.

ಇನ್ನಷ್ಟು ವಿವರಗಳಿಗಾಗಿ https://www.prajavani.net/education-career/education ಜಾಲತಾಣ ನೋಡಿ.

EXAM DH ಪ್ರಜಾವಾಣಿ MASTERMIND™

ಮತ್ತಷ್ಟು ಮಾಹಿತಿಗಾಗಿ

'ಮ್ಯಾಂಗ್ರೋವ್ ಪರಿಸರ ವ್ಯವಸ್ಥೆ' ಕುರಿತ ಇನ್ನಷ್ಟು ಮಾಹಿತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದ ಲೇಖನಗಳು, ಮಾದರಿ ಪ್ರಶ್ನೋತ್ತರಗಳು, ವಿಡಿಯೊಗಳಿಗಾಗಿ 'ಡೆಕ್ಕನ್‌ಹೆರಾಲ್ಡ್– ಪ್ರಜಾವಾಣಿ ಮಾಸ್ಟರ್‌ಮೈಂಡ್' ಇ–ಪೇಪರ್‌ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

www.exammastermind.com

ಬ್ಯಾಂಕ್ ಕ್ಲರ್ಕ್ ಹುದ್ದೆ: ಅರ್ಜಿ ಸಲ್ಲಿಕೆ 28ರವರೆಗೆ ವಿಸ್ತರಣೆ

ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆಯು (ಐಬಿಪಿಎಸ್) ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ 4,545 ಗುಮಾಸ್ತ(ಕ್ಲರ್ಕ್) ಹುದ್ದೆಗಳ ಭರ್ತಿಗಾಗಿ ಕರೆದಿದ್ದ ಅರ್ಜಿ ಸಲ್ಲಿಕೆ ದಿನಾಂಕವನ್ನು ಜುಲೈ 28ರವರೆಗೂ ವಿಸ್ತರಿಸಿದೆ.

ದೇಶದ 11 ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ 4,545 ಗುಮಾಸ್ತ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಕರೆಯಲಾಗಿತ್ತು. ಇದರಲ್ಲಿ ಕರ್ನಾಟಕದ ಭಾಗವಾಗಿ 253 ಹುದ್ದೆಗಳಿದ್ದು, ಅರ್ಜಿ ಸಲ್ಲಿಕೆಗೆ ಜುಲೈ 21 ಕೊನೆ ದಿನವಾಗಿತ್ತು. ಈಗ ಅರ್ಜಿ ಸಲ್ಲಿಕೆ ದಿನಾಂಕವನ್ನು ವಿಸ್ತರಿಸಿದೆ.

ಅರ್ಜಿ ಸಲ್ಲಿಸುವ ಕುರಿತು ಮತ್ತಷ್ಟು ವಿವರಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರಗಳು

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ –ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿಯನ್ನು ಗುರುಶಂಕರ್ ಅವರು ಇಲ್ಲಿ ನೀಡಿದ್ದಾರೆ.

1. ಭಾರತದಲ್ಲಿ ಬಡತನಕ್ಕೆ ಸಂಬಂಧಿಸಿದ ಸಮೀಕ್ಷೆಯನ್ನು ನಡೆಸುವ ಸಂಸ್ಥೆ ಯಾವುದು?

ಎ. ಎನ್‌ಎಸ್‌ಎಸ್‌ಒ ಬಿ. ಹಣಕಾಸು ಸಚಿವಾಲಯ.
ಸಿ. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ.
ಡಿ. ಕಾರ್ಮಿಕ ಇಲಾಖೆ.

ಉತ್ತರ: ಎ

2. ಫಾಕ್ಸ್ ಕಾನ್ ಕಂಪನಿಯು ಯಾವ ದೇಶಕ್ಕೆ ಸಂಬಂಧಿಸಿದೆ?

ಎ. ಚೀನಾ ಬಿ. ತೈವಾನ್
ಸಿ. ಹಾಂಕಾಂಗ್ ಡಿ. ದಕ್ಷಿಣ ಕೊರಿಯಾ

ಉತ್ತರ: ಬಿ.

3. ರಫ್ತು ಸಿದ್ಧತೆ ಸೂಚ್ಯಂಕದಲ್ಲಿ ಕೆಳಗಿನ ಯಾವ ರಾಜ್ಯ/ ಕೇಂದ್ರಾಡಳಿತ ಪ್ರದೇಶ ಕೊನೆಯ ಸ್ಥಾನ ಪಡೆದಿದೆ?

ಎ. ಲಕ್ಷದ್ವೀಪ ಬಿ. ಅಂಡಮಾನ್ ಮತ್ತು ನಿಕೋಬಾರ್
ಸಿ. ಕೇರಳ ಡಿ. ಮಧ್ಯಪ್ರದೇಶ

ಉತ್ತರ : ಎ

4. ಇತ್ತೀಚೆಗೆ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯಲ್ಲಿ ಯಾವ ಸಾಮ್ರಾಜ್ಯ ಕಾಲದ ಕಲಾಕೃತಿಗಳು ಕಂಡುಬಂದಿವೆ?

ಎ. ಶಾತವಾಹನ ಸಾಮ್ರಾಜ್ಯ ಬಿ. ಕಾಕತೀಯ ಸಾಮ್ರಾಜ್ಯ
ಸಿ. ಚಾಲುಕ್ಯ ಸಾಮ್ರಾಜ್ಯ ಡಿ. ಚೋಳ ಸಾಮ್ರಾಜ್ಯ

ಉತ್ತರ: ಬಿ

5. ಈ ಕೆಳಗೆ ಹೆಸರಿಸಿರುವ ಯಾರನ್ನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯ ಸ್ಥಾಪನೆಯ ಹಿಂದಿನ ಶಕ್ತಿ ಎಂದು ಕರೆಯಬಹುದು?

ಎ. ಜವಾಹರ್ ಲಾಲ್ ನೆಹರೂ
ಬಿ. ಸರ್ದಾರ್ ವಲ್ಲಭಭಾಯ್ ಪಟೇಲ್
ಸಿ. ಡಾ. ವರ್ಗೀಸ್ ಕುರಿಯನ್ ಡಿ. ಇಂದಿರಾಗಾಂಧಿ

ಉತ್ತರ: ಸಿ.

ಮತ್ತಷ್ಟು ಪ್ರಶ್ನೋತ್ತರಗಳಿಗಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

6. ಇತ್ತೀಚೆಗೆ ಕೆಳಗಿನ ಯಾವ ಸಂಸ್ಥೆ ಉಕ್ಕು ನಿರ್ಮಾಣದಲ್ಲಿ ಸೃಷ್ಟಿಯಾಗುವ ತ್ಯಾಜ್ಯವನ್ನು ಬಳಸಿಕೊಳ್ಳುವ ತಂತ್ರಜ್ಞಾನ ಕಂಡು ಹಿಡಿದಿದೆ?

ಎ. ಕೇಂದ್ರ ರಸ್ತೆ ಸಂಶೋಧನಾ ಸಂಸ್ಥೆ
ಬಿ. ಕೇಂದ್ರ ರೈಲು ಸಂಶೋಧನಾ ಸಂಸ್ಥೆ
ಸಿ. ಕೇಂದ್ರ ರಸ್ತೆ ಮತ್ತು ರೈಲು ಸಂಶೋಧನಾ ಸಂಸ್ಥೆ
ಡಿ. ಕೇಂದ್ರ ಹಡಗು ನಿರ್ಮಾಣ ಸಂಶೋಧನಾ ಸಂಸ್ಥೆ

ಉತ್ತರ: ಎ

7. ಇತ್ತೀಚೆಗೆ ಕೆಳಗಿನ ಯಾವ ಅರಬ್ ರಾಷ್ಟ್ರ ಮೊಟ್ಟಮೊದಲ ಬಾರಿಗೆ ಏಷ್ಯನ್-ಪೆಸಿಫಿಕ್ ಗ್ರೂಪ್ ಆನ್ ಮನಿ ಲಾಂಡರಿಂಗ್ ಸಂಸ್ಥೆಯ ವೀಕ್ಷಕ ಸ್ಥಾನಮಾನವನ್ನು ಪಡೆದಿದೆ?

ಎ. ಯುಎಇ ಬಿ. ಸೌದಿ ಅರೇಬಿಯಾ
ಸಿ. ಕತಾರ್ ಡಿ. ಲೆಬನಾನ್

ಉತ್ತರ : ಎ

9. ಇತ್ತೀಚೆಗೆ ಭಾರತ ಯಾವ ರಾಷ್ಟ್ರದೊಂದಿಗೆ ಸ್ಥಳೀಯ ನಗದಿನಲ್ಲಿ ವಹಿವಾಟು ನಡೆಸುವ ಒಪ್ಪಂದಕ್ಕೆ ಸಹಿ ಹಾಕಿದೆ?

ಎ. ಫ್ರಾನ್ಸ್ ಬಿ.ಯುಎಇ
ಸಿ. ಸೌದಿ ಅರೇಬಿಯಾ ಡಿ. ನಾರ್ವೆ

ಉತ್ತರ: ಬಿ



ಕಪಿಲಾ ನದಿ ಉಕ್ಕಿ ಹರಿಯುತ್ತಿದ್ದು, ಮೈಸೂರು ಜಿಲ್ಲೆಯ ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ಸ್ನಾನ ಘಟ್ಟದ ಹದಿನಾರು ಕಾಲು ಮಂಟಪ ಭಾಗಶಃ ಮುಳುಗಿತ್ತು –ಪ್ರಜಾವಾಣಿ ಚಿತ್ರ

ಕೊಪ್ಪಳದಲ್ಲಿ ಸುರಿದ ಜಡಿಮಳೆಯಲ್ಲಿಯೇ ಬೈಕ್ ಮೇಲೆ ಸಾಗಿದ ಕುಟುಂಬ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಮಂಗಳೂರು ತಾಲ್ಲೂಕಿನ ಆದ್ಯಪಾಡಿಯಲ್ಲಿ ಫಲ್ಗುಣಿ ನದಿ ಉಕ್ಕಿ ಹರಿಯುತ್ತಿದೆ. ತೋಟಗಳು ಜಲಾವೃತಗೊಂಡಿದ್ದು, ಸ್ಥಳೀಯರು ದೋಣಿಯ ಮೊರೆ ಹೋದರು – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಆಲಮಟ್ಟಿ: 1.25 ಲಕ್ಷ ಕ್ಯುಸೆಕ್ ನೀರು ಹೊರಕ್ಕೆ

ಮಲೆನಾಡು, ಕರಾವಳಿಯಲ್ಲಿ ಮುಂದುವರಿದ ಮಳೆ • ಕೆಲವೆಡೆ ಪ್ರವಾಹದ ಪರಿಸ್ಥಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು ಜಿಲ್ಲೆಗಳಲ್ಲಿ ಬುಧವಾರವೂ ಮಳೆ ಮುಂದುವರಿದಿದೆ. ನದಿಗಳಲ್ಲಿ ನೀರಿನ ಹರಿವು ಹೆಚ್ಚಿರುವ ಕಾರಣ ಕೆಲವೆಡೆ ಪ್ರವಾಹದ ಪರಿಸ್ಥಿತಿ ಮುಂದುವರಿದ್ದು, ಗುಡ್ಡ ಕುಸಿತಗಳೂ ಸಂಭವಿಸಿವೆ.

ಮಹಾರಾಷ್ಟ್ರದಲ್ಲಿ ಮಳೆಯ ಅಬ್ಬರ ಹೆಚ್ಚಿರುವ ಕಾರಣ ಬಾಗಲಕೋಟೆ ಜಿಲ್ಲೆಯ ಆಲಮಟ್ಟಿ ಜಲಾಶಯದ ಒಳಹರಿವು 1.75 ಲಕ್ಷ ಕ್ಯುಸೆಕ್‌ಗೆ ತಲುಪಿದೆ. ಹೀಗಾಗಿ ಜಲಾಶಯದ 26 ಗೇಟ್‌ಗಳನ್ನು ತೆರೆದು 1.25 ಲಕ್ಷ ಕ್ಯುಸೆಕ್ ನೀರನ್ನು ಬುಧವಾರ ಸಂಜೆಯಿಂದ ಬಿಡಲಾಗುತ್ತಿದೆ.

ಆಲಮಟ್ಟ ಜಲಾಶಯದ ಗರಿಷ್ಠ ಮಟ್ಟ 519.60 ಮೀಟರ್ ಆಗಿದ್ದು, ಬುಧವಾರ ನೀರಿನ ಮಟ್ಟ 516.84 ಮೀಟರ್‌ಗೆ ತಲುಪಿತ್ತು.

ಮಹಾರಾಷ್ಟ್ರದ ರಾಜಾಪುರ ಬ್ಯಾರೇಜ್‌ನಿಂದ 1,01,708 ಕ್ಯುಸೆಕ್, ದೂಧ್‌ಗಂಗಾ ನದಿಯಿಂದ 29,216 ಕ್ಯುಸೆಕ್ ಸೇರಿದಂತೆ 1.30 ಲಕ್ಷ ಕ್ಯುಸೆಕ್ ನೀರು ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಸೇತುವೆ ಬಳಿ ಕೃಷ್ಣಾ ನದಿ ಸೇರುತ್ತಿದೆ.

ಮುಂದುವರಿದ ಪ್ರವಾಹ ಪರಿಸ್ಥಿತಿ: ಕೊಡಗು ಜಿಲ್ಲೆಯಲ್ಲಿ ಅಲ್ಲಲ್ಲಿ ರಸ್ತೆಗಳಿಗೆ ಮಣ್ಣು ಕುಸಿದಿದ್ದು, ಪ್ರವಾಹ ಪರಿಸ್ಥಿತಿ ಮುಂದುವರಿದಿದೆ. ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ ಕಡಿಮೆ ಆಗಿರುವುದರಿಂದ ಸದ್ಯ ನದಿಗೆ 13 ಸಾವಿರ ಕ್ಯುಸೆಕ್ ನೀರನ್ನು ಹರಿಸಲಾಗುತ್ತಿದೆ. ಮಡಿಕೇರಿ ತಾಲ್ಲೂಕಿನ ನಾಪೋಕ್ಲು ಭಾಗದಲ್ಲಿ ಗದ್ದೆಗಳು, ಬಾಳೆತೋಟಗಳು ನೀರಿನಲ್ಲಿ ಮುಳುಗಿವೆ. ಹಲವು ರಸ್ತೆಗಳು ಜಲಾವೃತಗೊಂಡಿವೆ. ನಾಪೋಕ್ಲು- ಮೂರ್ನಾಡು ರಸ್ತೆಯಲ್ಲಿ ನೀರು ಹರಿಯುತ್ತಿದೆ. ಹಾಲೇರಿ- ಹಟ್ಟಿಹೊಳೆ ರಸ್ತೆ, ಮಡಿಕೇರಿ- ಕಡಮಕಲ್ ಸುಬ್ರಹ್ಮಣ್ಯ ರಸ್ತೆಯಲ್ಲಿ ಮಣ್ಣು ಕುಸಿದು ಆತಂಕ ಸೃಷ್ಟಿಸಿದೆ. ವಿರಾಜಪೇಟೆ ತಾಲ್ಲೂಕಿನ ಕೆದಮುಳ್ಳೂರು ಸಮೀಪ ಬೃಹತ್ ಗಾತ್ರದ ಮರವೊಂದು ಉರುಳಿ 11 ಕೆ.ವಿ ಸಾಮರ್ಥ್ಯದ ವಿದ್ಯುತ್ ತಂತಿ ತುಂಡಾಗಿ, ವಿದ್ಯುತ್ ವ್ಯತ್ಯಯ ಉಂಟಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಕುತ್ಲೂರಿನ ಕುಕ್ಕುಜೆಯಿಂದ ವಿವಿಧ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಕಾಡಬಾಗಿಲು ಸೇತುವೆ ಕುಸಿದಿದೆ. ಇದನ್ನು ಅವಲಂಬಿಸಿದ್ದ ಸುಮಾರು 30ರಷ್ಟು ಮಲೆಕುಡಿಯ ಮತ್ತು ಇತರ ಅರಣ್ಯವಾಸಿ ಕುಟುಂಬಗಳಿಗೆ ಸಮಸ್ಯೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿ ಭಾಗದಲ್ಲಿ ಅಲ್ಲಲ್ಲಿ ಸಣ್ಣ ಪ್ರಮಾಣದ ಭೂಕುಸಿತಗಳು ಉಂಟಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಗಿರಿಗೆ ಪ್ರವಾಸ ನಿಷೇಧಿಸಲಾಗಿದೆ.

ಅಘನಾಶಿನಿಯಲ್ಲಿ ಮುಂದುವರಿದ ನೆರೆ: ಉತ್ತರ ಕನ್ನಡ ಜಿಲ್ಲೆಯ ಅಘನಾಶಿನಿ ನದಿ ಪಾತ್ರಗಳಲ್ಲಿ ಪ್ರವಾಹ ಸ್ಥಿತಿ ಮುಂದುವರಿದಿದೆ. ಜೊಯಿಡಾದಲ್ಲಿ ನಿರಂತರ ಮಳೆ ಬೀಳುತ್ತಿದ್ದು ಉಳವಿ-ಗೋವಾ ನಡುವಿನ ರಸ್ತೆ ಡಿಗ್ಗಿ ಬಳಿ ಜಲಾವೃತಗೊಂಡಿದೆ. ಮುಂಡಗೋಡ ತಾಲ್ಲೂಕಿನ ಮಳಗಿ ಗ್ರಾಮದ ಧರ್ಮಾ ಜಲಾಶಯ ಕೋಡಿ ಬಿದ್ದಿದೆ. ಬೆಳಗಾವಿ ಜಿಲ್ಲೆಯ 21 ಸೇತುವೆಗಳು ಇನ್ನೂ ಸಂಚಾರಕ್ಕೆ ಮುಕ್ತವಾಗಿಲ್ಲ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ನವಿಲುತೀರ್ಥ ಜಲಾಶಯದಲ್ಲಿ ಮಲಪ್ರಭಾ ನದಿಯಲ್ಲಿ 16,872 ಕ್ಯುಸೆಕ್ ಒಳಹರಿವು ಇತ್ತು. ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಮುಂದುವರಿದಿದ್ದರಿಂದ ಘಟಪ್ರಭಾ ನದಿ ಉಕ್ಕಿ ಹರಿಯುತ್ತಿದೆ. ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯಕ್ಕೆ 33,250 ಕ್ಯುಸೆಕ್‌ಗೆ ನೀರು ಹರಿದು-ಬರುತ್ತಿದೆ.

ಕಲ್ಯಾಣ ಕರ್ನಾಟಕದಲ್ಲಿ ತಗ್ಗಿದ ಮಳೆ: ಕಲ್ಯಾಣ ಕರ್ನಾಟಕದ ಕಲಬರಗಿ, ಬೀದರ್, ಕೊಪ್ಪಳ, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ತಗ್ಗಿದೆ.

ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಕಾರಂಜಾ ಜಲಾಶಯಕ್ಕೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿರುವುದರಿಂದ ನದಿಗೆ 4,350 ಕ್ಯುಸೆಕ್ ನೀರು ಹರಿಸಲಾಗುತ್ತಿದೆ. ಮಳೆಯ ಮುನ್ಸೂಚನೆ ಹಿನ್ನೆಲೆಯಲ್ಲಿ 128 ಪ್ರವಾಹ ಪೀಡಿತ ಗ್ರಾಮ ಗುರುತಿಸಿರುವ ಕಲಬುರಗಿ ಜಿಲ್ಲಾಡಳಿತ, 31 ನೋಡಲ್ ಅಧಿಕಾರಿಗಳನ್ನು ನೇಮಿಸಿದೆ.

ಬೆಳಗಾವಿ ಗಡಿಗೆ ಹೊಂದಿಕೊಂಡ ಗೋವಾ ರಾಜ್ಯದ ದೂಧ್ ಸಾಗರ ಜಲಪಾತದ ರೈಲು ಹಳಿಗಳ ಬಳಿ ಮಂಗಳವಾರ ರಾತ್ರಿ ಭೂ ಕುಸಿತ ಉಂಟಾಗಿತ್ತು

ಬೆಳಗಾವಿ ನಗರದ ವಡಗಾವಿ ಸರಾಫ್ ಬಜಾರ್‌ನಲ್ಲಿರುವ ನೇಕಾರರ ಮನೆಯಲ್ಲಿ ನೀರು ನುಗ್ಗಿರುವುದು

ಆಗುಂಬೆ ಘಾಟಿ: ಸಂಚಾರ ನಿರ್ಬಂಧ

ಉಡುಪಿ: ಜಿಲ್ಲೆಯ ಆಗುಂಬೆ ಘಾಟಿಯ 6, 7 ಹಾಗೂ 11ನೇ ತಿರುವಿನಲ್ಲಿ ಸಣ್ಣ ಬಿರುಕುಗಳು ಮೂಡಿದ್ದು ಅಲ್ಲಲ್ಲಿ ರಸ್ತೆ ಕುಸಿತವಾಗಿದೆ. ಹೀಗಾಗಿ ಜುಲೈ 27ರಿಂದ ಆ.15ರವರೆಗೆ ಘಾಟಿಯಲ್ಲಿ ಭಾರಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ವಿದ್ಯಾ ಕುಮಾರಿ ತಿಳಿಸಿದ್ದಾರೆ.

ಉಡುಪಿಗೆ ವಾಹನದಲ್ಲಿ ಬರುವವರಿಗೆ ಜಿಲ್ಲಾಡಳಿತವು ಎರಡು ಪರ್ಯಾಯ ಮಾರ್ಗಗಳನ್ನು ಸೂಚಿಸಿದೆ. ತೀರ್ಥಹಳ್ಳಿಯಿಂದ ಆಗುಂಬೆ-ಶೃಂಗೇರಿ-ಮಾಳ ಘಾಟಿ-ಕಾರ್ಕಳ ಮಾರ್ಗವಾಗಿ ಉಡುಪಿಯನ್ನು ತಲುಪಬಹುದು. ತೀರ್ಥಹಳ್ಳಿಯಿಂದ ಮಾಸ್ತಿಕಟ್ಟೆ-ಸಿದ್ದಾಪುರ-ಕುಂದಾಪುರ ಮಾರ್ಗವಾಗಿ ಉಡುಪಿಗೆ ಬರಬಹುದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	106.50	40,917	5,238
ಹಾರಂಗಿ	2,859	2,853.58	17,426	13,000
ಕಬಿನಿ	2284.00	2,282.22	25,146	21,000
ಹೇಮಾವತಿ	2,922	2,909	23,281	200
ಲಿಂಗನಮಕ್ಕಿ	1,819	1,782.30	68,645	00
ಸೂಪಾ (ಮೀ)	564	541	44,581	00
ಮಾಣಿ	595	579.28	6,705	00
ತುಂಗಭದ್ರಾ	1,633	1,611.27	1,08,019	198
ಮಲಪ್ರಭಾ	2079.5	2,059.00	16,872	194
ಘಟಪ್ರಭಾ	2175	2,139.03	33,250	109
ಭದ್ರಾ	186	155.30	24,704	179
ಆಲಮಟ್ಟಿ (ಮೀ)	519.6	516.84	1,75,711	1,25,000
ನಾರಾಯಣಪುರ (ಮೀ)	492.25	488.34	20,041	00

* ನೆಲಮಟ್ಟದಿಂದ

ಆತ್ಕೂರು: ಮೊಸಳೆಗಳ ಹಿಂಡು ಪ್ರತ್ಯಕ್ಷ

ರಾಯಚೂರು: ತಾಲ್ಲೂಕಿನ ಆತ್ಕೂರು ಗ್ರಾಮದ ಕೃಷ್ಣಾ ನದಿ ಪಾತ್ರದಲ್ಲಿ ಮೊಸಳೆಗಳ ಹಿಂಡು ಕಂಡು ಬಂದಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ನಾಲ್ಕು ದಿನಗಳಿಂದ ಜಿಟಿ ಜಿಟಿ ಮಳೆಯಾಗುತ್ತಿದೆ. ತಾಲ್ಲೂಕಿನ ಯಾಪಲದಿನ್ನಿ ಆತ್ಕೂರು ಬಳಿ ಕೃಷ್ಣಾ ನದಿಯಲ್ಲಿ ಭಾರಿ ಸಂಖ್ಯೆಯಲ್ಲಿ ಮೊಸಳೆಗಳು ಕಾಣಿಸಿಕೊಂಡಿವೆ. ನದಿಗೆ ನೀರು ಹರಿದು ಬರುತ್ತಿರುವುದರಿಂದ ಸೆಳವಿನಲ್ಲಿ ಮೊಸಳೆಗಳು ಬಂದು ಪೊದೆ ಹಾಗೂ ಬಂಡೆಗಳ ಮೇಲೆ ಆಶ್ರಯ ಪಡೆದಿವೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸಂಸದ ಜಿ.ಎಂ.ಸಿದ್ದೇಶ್ವರಗೆ ಮಹಿಳೆಯಿಂದ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆಯ ಬಿಜೆಪಿ ಸಂಸದ ಜಿ.ಎಂ.ಸಿದ್ದೇಶ್ವರ ಅವರಿಗೆ ವಾಟ್ಸ್‌ಆ್ಯಪ್‌ನಲ್ಲಿ ಕರೆ ಮಾಡಿದ ಮಹಿಳೆಯೊಬ್ಬರು ಫೋಟೊ ಹಾಗೂ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಾಕುವುದಾಗಿ ಬೆದರಿಕೆಯೊಡ್ಡಿದ್ದು, ಈ ಸಂಬಂಧ ನಗರದ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜುಲೈ 21ರಂದು ಪ್ರಕರಣ ದಾಖಲಿಸಿಕೊಂಡು ಕರೆ ಮಾಡಿರುವ ಮೊಬೈಲ್ ಸಂಖ್ಯೆ ಆಧರಿಸಿ ತನಿಖೆ ಕೈಗೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಜುಲೈ 20ರಂದು ಬೆಂಗಳೂರಿನಲ್ಲಿರುವಾಗ ರಾತ್ರಿ 10.16ರ ಸುಮಾರಿಗೆ ಮಹಿಳೆಯೊಬ್ಬರು ವಾಟ್ಸ್‌ಆ್ಯಪ್‌ನಲ್ಲಿ ಹೇಗಿದ್ದೀರಾ ಎನ್ನುವ ಸಂದೇಶ ಕಳುಹಿಸಿದ್ದರು. ಇದಕ್ಕೆ ನಾನು ಯಾವುದೇ ರೀತಿಯಲ್ಲೂ ಪ್ರತಿಕ್ರಿಯೆ ನೀಡಿರಲಿಲ್ಲ. ನಂತರ, 10.22ಕ್ಕೆ ವಿಡಿಯೊ ಕರೆ ಮಾಡಿ ಹಿಂದಿ ಭಾಷೆಯಲ್ಲಿ ಮಾತನಾಡಲು ಆರಂಭಿಸಿದರು. ಕರೆ ಮಾಡುತ್ತಿರುವ ಉದ್ದೇಶದ ಬಗ್ಗೆ ಹಿಂದಿಯಲ್ಲೇ ಪ್ರಶ್ನಿಸಿದೆ. ಆಗ ಅಶ್ಲೀಲ ಪದ ಬಳಕೆ ಮಾಡಿದ್ದರು. ತಕ್ಷಣವೇ ಕರೆ ಕಡಿತಗೊಳಿಸಿದೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಮತ್ತೆ ವಿಡಿಯೊ ಕರೆ ಮಾಡಿ ಆಕೆಯ ಮುಖ ಹಾಗೂ ಖಾಸಗಿ ಅಂಗಾಂಗ ಪ್ರದರ್ಶನ ಮಾಡಲಾಯಿತು. ಅಸಭ್ಯವಾಗಿ ಮಾತನಾಡಿದರು. ಪಕ್ಕದಲ್ಲಿದ್ದ ಪತ್ನಿಗೆ ಮೊಬೈಲ್ ನೀಡಿದೆ. ಐದು ಬಾರಿ ಕರೆ ಮಾಡಿ, ಫೋಟೊ ಹಾಗೂ ವಿಡಿಯೊವನ್ನು ಫೇಸ್‌ಬುಕ್, ಯುಟ್ಯೂಬ್, ಗೂಗಲ್‌ಗೆ ಹಾಕಲಾಗುವುದೆಂದು ಬೆದರಿಕೆ ಹಾಕಿದರು' ಎಂದು ಸಂಸದ ಸಿದ್ದೇಶ್ವರ ದೂರಿನಲ್ಲಿ ತಿಳಿಸಿದ್ದಾರೆ.

'ನನಗೆ ಕೆಟ್ಟ ಹೆಸರು ತರುವ ಪ್ರಯತ್ನ'

ದಾವಣಗೆರೆ: 'ಲೋಕಸಭಾ ಚುನಾವಣೆ ಹತ್ತಿರ ಬರುತ್ತಿರುವುದರಿಂದ ನನಗೆ ಕೆಟ್ಟ ಹೆಸರು ತರಲು ಜಿಲ್ಲೆಯವರೇ ಈ ರೀತಿ ಮಾಡಿಸಿರಬಹುದು ಎಂಬ ಅನುಮಾನವಿದೆ' ಎಂದು ಸಂಸದ ಜಿ.ಎಂ.ಸಿದ್ದೇಶ್ವರ ಪ್ರತಿಕ್ರಿಯಿಸಿದ್ದಾರೆ.

'ಕರೆ ಬಂದ ನಂಬರ್ ಅನ್ನು ಬ್ಲಾಕ್ ಮಾಡಿದ ಮೇಲೆ ಯಾವುದೇ ಕರೆ ಬರುತ್ತಿಲ್ಲ. ಕರೆಗಳು ಎಲ್ಲಿಂದ ಬಂದಿವೆ ಎಂಬುದನ್ನು ಪೊಲೀಸರು ಪತ್ತೆ ಹಚ್ಚುತ್ತಿದ್ದಾರೆ. ದಾವಣಗೆರೆಯ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರೂ ತನಿಖೆ ಮಾಡುವ ಭರವಸೆ ನೀಡಿದ್ದಾರೆ' ಎಂದು ಹೇಳಿದರು.

ಮೂವರು ವಿದ್ಯಾರ್ಥಿನಿಯರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಣ

ಉಡುಪಿ: ನಗರದ ನೇತ್ರ ಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ವಿದ್ಯಾರ್ಥಿನಿಯ ವಿಡಿಯೊ ಚಿತ್ರೀಕರಣ ಮಾಡಿದ ಘಟನೆ ಸಂಬಂಧ ವಿದ್ಯಾರ್ಥಿನಿಯರಾದ ಶಬನಾಜ್, ಅಲ್ಫೀಯಾ, ಅಲಿಮಾ ಹಾಗೂ ಕಾಲೇಜಿನ ಆಡಳಿತ ಮಂಡಳಿಯ ವಿರುದ್ಧ ಮಲ್ಪೆ ಠಾಣೆ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಹಿಳೆಯ ಮಾನ ಮತ್ತು ಗೌರವಕ್ಕೆ ಧಕ್ಕೆ ತಂದ, ಮಹಿಳೆಯ ಖಾಸಗಿತನವನ್ನು ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಿದ ಆರೋಪದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮತ್ತೊಂದು ಪ್ರಕರಣ: ನೇತ್ರಜ್ಯೋತಿ ಕಾಲೇಜಿನ ಶೌಚಾಲಯದಲ್ಲಿ ಹಿಡನ್ ಕ್ಯಾಮೆರಾ ಮೂಲಕ ವಿಡಿಯೊ ಚಿತ್ರೀಕರಿಸಿ ಫಾರ್ವರ್ಡ್ ಮಾಡಲಾಗಿದೆ ಎಂಬ ಎಡಿಟೆಡ್ ವಿಡಿಯೊವನ್ನು ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡ ಆರೋಪದ ಮೇಲೆ ಕಾಲ್ ಸಿಂಗ್ ಚೌಹಾಣ್ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸಿ ಕೋಮುದ್ವೇಷ ಹರಡಿ ಸೌಹಾರ್ದಕ್ಕೆ ಧಕ್ಕೆ ತಂದ ಆರೋಪದ ಮೇಲೆ ಪ್ರಕರಣ ದಾಖಲಾಗಿದೆ.

ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ದೂರು: 'ನೇತ್ರಜ್ಯೋತಿ ಕಾಲೇಜಿನ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಬೇಕೆಂದು ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ದೂರು ನೀಡಲಾಗಿದೆ' ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಸದಸ್ಯೆ ಶ್ಯಾಮಲಾ ಕುಂದರ್ ತಿಳಿಸಿದರು.

'ಶೌಚಾಲಯದಲ್ಲಿ ಚಿತ್ರೀಕರಣ ಮಾಡಿರುವುದು ತಮಾಷೆಗಾಗಿ ಎಂದು ಕೆಲವರು ಹೇಳಿಕೆ ನೀಡಿರುವುದು ಬಾಲಿಶ ಹಾಗೂ ಕಳವಳಕಾರಿಯಾಗಿದ್ದು, ಮಹಿಳೆಯರ ಘನತೆಗೆ ಕುಂದು ತರಲಾಗುತ್ತಿದೆ' ಎಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

ದೂರಿಗೆ ಸ್ಪಂದಿಸಿರುವ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಪ್ರಕರಣದ ತನಿಖೆ ನಡೆಸಲು ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಹಾಗೂ ದಕ್ಷಿಣ ಭಾರತದ ಪ್ರತಿನಿಧಿಯೂ ಆಗಿರುವ ಖುಷ್ಬು ಸುಂದರ್ ಉಡುಪಿಗೆ ಭೇಟಿ ನೀಡಲಿದ್ದಾರೆ ಎಂದು ತಿಳಿಸಿದ್ದಾರೆ ಎಂದರು.

ಎಸ್‌ಐಟಿಯಿಂದ ತನಿಖೆ ನಡೆಸಿ: 'ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಿಸಿರುವುದು ಗಂಭೀರ ಪ್ರಕರಣವಾಗಿದ್ದು, ಅಂತರರಾಷ್ಟ್ರೀಯ ಹುನ್ನಾರದ ಶಂಕೆ ಇದೆ. ಎಸ್‌ಐಟಿ ತನಿಖೆ ನಡೆಸಬೇಕು' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಕುಯಿಲಾಡಿ ಸುರೇಶ್ ನಾಯಕ್ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

'ಪ್ರಕರಣದಲ್ಲಿ ಮೂವರು ಮುಸ್ಲಿಂ ವಿದ್ಯಾರ್ಥಿನಿಯರು ಹಾಗೂ ಇಬ್ಬರು ಯುವಕರು ಭಾಗಿಯಾಗಿರುವ ಬಗ್ಗೆ ಮಾಹಿತಿ ಇದ್ದು ಸಮಗ್ರ ತನಿಖೆ ನಡೆಯಬೇಕು. ವಿದ್ಯಾರ್ಥಿನಿಯರ ಮೊಬೈಲ್‌ನಿಂದ ಡಿಲೀಟ್ ಆಗಿರುವ ವಿಡಿಯೊವನ್ನು ಮರು ಪಡೆಯಲು ತಜ್ಞರ ನೆರವು ಪಡೆಯಬೇಕು. ತನಿಖೆಯಲ್ಲಿ ನಿರ್ಲಕ್ಷ್ಯ ತೋರಿದರೆ ರಾಜ್ಯದಾದ್ಯಂತ ತೀವ್ರ ಪ್ರತಿಭಟನೆ ನಡೆಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ವಿಚಾರಣೆ: ಖುಷ್ಬು ಸುಂದರ್ ಉಡುಪಿಗೆ

ಉಡುಪಿಯ ಕಾಲೇಜಿನ ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಣ ಮಾಡಿರುವ ಪ್ರಕರಣದ ಬಗ್ಗೆ ವಿಚಾರಣೆ ನಡೆಸಲು ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಖುಷ್ಬು ಸುಂದರ್ ಅವರು ಬುಧವಾರ ರಾತ್ರಿ ಉಡುಪಿಗೆ ಬಂದಿದ್ದಾರೆ.

'ವಿದ್ಯಾರ್ಥಿನಿಯ ಸಮಸ್ಯೆ ವಿಚಾರಣೆ ಮಾಡಲು ಬಂದಿದ್ದೇನೆ. ಗುರುವಾರ ಪೊಲೀಸ್ ಅಧಿಕಾರಿಗಳನ್ನು ಭೇಟಿಯಾಗಿ ಮಾಹಿತಿ ಪಡೆದು, ಬಳಿಕ ಕಾಲೇಜಿನ ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿಗಳನ್ನು ಭೇಟಿ ಮಾಡುತ್ತೇನೆ. ಪ್ರಕರಣದ ಸ್ವರೂಪವನ್ನು ಅರಿಯಬೇಕಾಗಿದ್ದು, ಎರಡು ದಿನ ಉಡುಪಿಯಲ್ಲಿದ್ದುಕೊಂಡು ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲರ ಜತೆ ಮಾತನಾಡುತ್ತೇನೆ' ಎಂದು ಖುಷ್ಬು ಮಾಧ್ಯಮದವರಿಗೆ ತಿಳಿಸಿದರು.

ಮಂಗಳೂರು ವಿಮಾನ ನಿಲ್ದಾಣದಲ್ಲಿ ಬುಧವಾರ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಖುಷ್ಬು ಸುಂದರ್ ಅವರು ಪೊಲೀಸ್ ಶ್ವಾನದೊಂದಿಗೆ ಕೆಲ ಕ್ಷಣ ಕಳೆದರು

ಪ್ರಕರಣ ಮುಚ್ಚಿ ಹಾಕಲು ಯತ್ನ: ಬೊಮ್ಮಾಯಿ

ಬೆಂಗಳೂರು: 'ಉಡುಪಿ ಕಾಲೇಜೊಂದರ ವಿದ್ಯಾರ್ಥಿನಿಯರ ಶೌಚಾಲಯದಲ್ಲಿ ರಹಸ್ಯ ಕ್ಯಾಮರಾ ಇಟ್ಟು ಚಿತ್ರಗಳನ್ನು ತೆಗೆಯುವುದು ಹೇಯ ಕೃತ್ಯ. ಈ ಪ್ರಕರಣವನ್ನು ಫೇಕ್ ನ್ಯೂಸ್ ಎಂದು ಪ್ರಕರಣ ಮುಚ್ಚಿ ಹಾಕುವ ಯತ್ನ ನಡೆದಿದೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಪ್ರಕರಣದ ಬಗ್ಗೆ ಟ್ವೀಟ್ ಮಾಡಿ ಬೆಳಕಿಗೆ ತಂದ ಯುವತಿಯ ವಿರುದ್ಧವೇ ತನಿಖೆ ಮಾಡುವ ರೀತಿ ಪೊಲೀಸರು ನಡೆದುಕೊಳ್ಳುತ್ತಿದ್ದು, ಅವರು ಯಾರ ಅಣತಿಯಂತೆ ನಡೆಯುತ್ತಿದ್ದಾರೆ' ಎಂದು ಪ್ರಶ್ನಿಸಿದರು.

ಇದು ಫೇಕ್ ನ್ಯೂಸ್ ಎಂದು ಗೃಹ ಸಚಿವರು ಹೇಳಿದ್ದಾರೆ. ಹಾಗಾದರೆ ಕಾಲೇಜಿನ ವಿದ್ಯಾರ್ಥಿಗಳು ತಪ್ಪೊಪ್ಪಿಗೆ ಯಾಕೆ ಕೊಟ್ಟಿದ್ದಾರೆ. ಅವರನ್ನು ಯಾಕೆ ಕಾಲೇಜಿನವರು ಅಮಾನತು ಮಾಡಿದರು. ಈ ಬಗ್ಗೆ ಗೃಹ ಸಚಿವರು ಸ್ಪಷ್ಟೀಕರಣ ನೀಡಬೇಕು ಎಂದರು.

> **ಕಾಂಗ್ರೆಸ್ ಸರ್ಕಾರ ಉಡುಪಿಯಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬದಲು ನ್ಯಾಯ ಕೇಳುವವರನ್ನೇ ಪ್ರಶ್ನಿಸುತ್ತಿದೆ. ಇದು ಮಹಿಳೆಯರ ಭದ್ರತೆಗೆ ಸಂಬಂಧಿಸಿದ ನಿಮ್ಮ ಹೊಸ ಗ್ಯಾರಂಟಿಯೇ?**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

> **ಇದು ಗಂಭೀರ ಪ್ರಕರಣವಲ್ಲ. ಕಾಲೇಜು ಆವರಣದಲ್ಲಿ, ಸ್ನೇಹಿತರ ಮಧ್ಯೆ ನಡೆದಿರುವ ಘಟನೆ. ಬೇರೆ ಕೆಲಸ ಇಲ್ಲದಿದ್ದುದಕ್ಕೆ ಬಿಜೆಪಿ ಇದಕ್ಕೆ ರಾಜಕೀಯದ ಬಣ್ಣ ನೀಡುತ್ತಿದೆ ಅಷ್ಟೇ. ದೂರು ನೀಡದೇ ಪೊಲೀಸರು ಹೇಗೆ ಕ್ರಮ ಕೈಗೊಳ್ಳುತ್ತಾರೆ?**
> **ಜಿ. ಪರಮೇಶ್ವರ,** ಗೃಹ ಸಚಿವ

ಜಿಲ್ಲಾಡಳಿತದ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ

'ಪ್ರವಾಹ ಪೀಡಿತ ಪ್ರದೇಶಗಳ ಜನರ ಸ್ಥಳಾಂತರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ, ಪ್ರವಾಹದಿಂದಾಗುವ ಜೀವಹಾನಿ ತಡೆಯಲು ಜಿಲ್ಲಾಡಳಿತಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಪ್ರವಾಹಪೀಡಿತ ಪ್ರದೇಶಗಳ ಜನರ ಮನವೊಲಿಸಿ, ಇಲ್ಲವೇ ಬಲವಂತವಾಗಿಯಾದರೂ ಸ್ಥಳಾಂತರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾಡಳಿತದ ಅಧಿಕಾರಿಗಳಿಗೆ ದೇಶಿಸಿದರು.

ರಾಜ್ಯದ ಹವಾಮಾನ ಪರಿಸ್ಥಿತಿ, ಮಳೆ ಹಾಗೂ ಕೃಷಿ ಚಟುವಟಿಕೆಗಳ ಪರಿಶೀಲನೆಗಾಗಿ ಬುಧವಾರ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಇಒಗಳ ಜತೆ ನಡೆಸಿದ ವಿಡಿಯೊ ಸಂವಾದದಲ್ಲಿ ಅವರು ಮಾತನಾಡಿದರು.

ಹಿಂದೆಲ್ಲ ಪ್ರವಾಹದಿಂದ ಮುಳುಗಡೆಯಾಗುತ್ತಿದ್ದ ಗ್ರಾಮಗಳ ಜನರಿಗೆ ಸಮೀಪದ ಎತ್ತರ ಪ್ರದೇಶಗಳಲ್ಲಿ ಪರ್ಯಾಯ ಮನೆಗಳನ್ನು ಕಟ್ಟಿಕೊಡಲಾಗಿದೆ. ಆದರೂ, ಬಹುತೇಕರು ಅಲ್ಲಿಗೆ ಸ್ಥಳಾಂತರಗೊಂಡಿಲ್ಲ. ಪ್ರವಾಹ ಇಳಿಯುತ್ತಿದ್ದಂತೆ ಮತ್ತೆ ಮೂಲ ಗ್ರಾಮಗಳಿಗೆ ಮರಳಿದ್ದಾರೆ. ಈ ಬಾರಿಯೂ ನಿರಂತರ ಮಳೆಯಾಗುತ್ತಿದ್ದು ಪ್ರವಾಹದ ಭೀತಿ ಎದುರಾಗಿದೆ. ಇಂತಹ ಸಮಯದಲ್ಲಿ ಜೀವಹಾನಿ, ಅನಾಹುತಗಳನ್ನು ತಡೆಯಬೇಕು. ಅದಕ್ಕಾಗಿ ತಗ್ಗಿನ ಪ್ರದೇಶಗಳು, ಮಣ್ಣು ಕುಸಿಯುವ ಸ್ಥಳಗಳ ಜನರ ಮನವೊಲಿಕೆ ಮಾಡಬೇಕು. ಒಪ್ಪದಿದ್ದರೆ ಬಲವಂತವಾಗಿಯಾದರೂ ಸ್ಥಳಾಂತರ ಮಾಡಬೇಕು. ಮಳೆಯಿಂದಾಗಿ ಉಡುಪಿಯಲ್ಲಿ 9 ಜನ ಸೇರಿದಂತೆ ರಾಜ್ಯದಲ್ಲಿ 64 ಜನರು ಮೃತಪಟ್ಟಿದ್ದಾರೆ. ಕಾಲು ಜಾರುವ ಕಡೆಗಳಲ್ಲಿ ಹೋಗದಂತೆ, ತುಂಬಿ ಹರಿವ ನದಿಗಳನ್ನು ದಾಟದಂತೆ ಜಾಗೃತಿ ಮೂಡಿಸಬೇಕು. ಶಿಥಿಲ ಶಾಲಾ, ಕಾಲೇಜು, ಅಂಗನವಾಡಿ ಕಟ್ಟಡಗಳಲ್ಲಿ ಮಕ್ಕಳ ಪ್ರವೇಶ ನಿರ್ಬಂಧಿಸಬೇಕು. ಸಮೀಪದ ಕಟ್ಟಡಗಳಿಗೆ ಸ್ಥಳಾಂತರಿಸಬೇಕು. ಲಭ್ಯವಿರುವ ಅನುದಾನ ಬಳಸಿಕೊಂಡು ದುರಸ್ತಿಗೆ ಕ್ರಮ ಕೈಗೊಳ್ಳಬೇಕು. ಆಯಾ ಜಿಲ್ಲೆಗಳ ಉಸ್ತುವಾರಿ ಸಚಿವರು ನಿಗಾವಹಿಸಬೇಕು ಎಂದರು.

ಹಿಂದಿನ ಪ್ರವಾಹದ ಅನುಭವದ ಆಧಾರದಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಪೊಲೀಸ್, ಕಂದಾಯ, ನೀರಾವರಿ, ಗ್ರಾಮೀಣಾಭಿವೃದ್ಧಿ ಇಲಾಖೆಗಳ ನಡುವೆ ಸಮನ್ವಯ ಅಗತ್ಯ. ಎಲ್ಲ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಿದರೆ ಜೀವಹಾನಿ ತಪ್ಪಿಸಬಹುದು. ಅಧಿಕಾರಿಗಳು ತಾವು ಕೆಲಸ ನಿರ್ವಹಿಸುವ ಕೇಂದ್ರಗಳಲ್ಲೇ ಉಳಿಯಬೇಕು. 'ವಾರ್ ರೂಂ' ತೆರೆಯಬೇಕು ಎಂದರು.

ಕಡಲು ಕೊರೆತ ತಡೆಯಲು ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ತಗ್ಗು ಪ್ರದೇಶಗಳಲ್ಲಿ ಶಾಶ್ವತ ಪರ್ಯಾಯ ರಸ್ತೆ ನಿರ್ಮಾಣ ಮಾಡಬೇಕು. ಜಲಾಶಯಗಳಿಂದ ನದಿಗೆ ನೀರು ಬಿಡುವ ಮೊದಲು ಜನರಿಗೆ ಮಾಹಿತಿ ನೀಡಬೇಕು ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಿ.ಪರಮೇಶ್ವರ, ಎನ್. ಚಲುವರಾಯಸ್ವಾಮಿ, ಕೃಷ್ಣಬೈರೇಗೌಡ, ಎಂ.ಸಿ. ಸುಧಾಕರ್, ಲಕ್ಷ್ಮಿ ಹೆಬ್ಬಾಳ್ಕರ್, ಪ್ರಿಯಾಂಕ್ ಖರ್ಗೆ, ಈಶ್ವರ ಖಂಡ್ರೆ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಕಂದಾಯ ಇಲಾಖೆ ವಿಪತ್ತು ನಿರ್ವಹಣೆ ಪ್ರಧಾನ ಕಾರ್ಯದರ್ಶಿ ವಿ. ರಶ್ಮಿ , ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಜೂನ್‌ನಲ್ಲಿ ಶೇ 56ರಷ್ಟು ಮಳೆ ಕೊರತೆ
- ಜುಲೈನಲ್ಲಿ 313 ಮಿ.ಮೀ ಮಳೆ (ವಾಡಿಕೆ 228 ಮಿ.ಮೀ)
- ರಾಜ್ಯದ 4 ಜಿಲ್ಲೆಗಳಲ್ಲಿ ಅಧಿಕ ಮಳೆ, 6 ಜಿಲ್ಲೆಗಳಲ್ಲಿ ಕೊರತೆ

ಮೇವಿಗೆ ಕೊರತೆ ಇಲ್ಲ: ಸಿ.ಎಂ

ರಾಜ್ಯದಲ್ಲಿ 156 ಲಕ್ಷ ಟನ್ ಮೇವು ದಾಸ್ತಾನು ಇದ್ದು, 29 ವಾರಗಳಿಗೆ ಸಾಕಾಗುತ್ತದೆ ಎಂದು ಮುಖ್ಯಮಂತ್ರಿ ಹೇಳಿದರು.

ಮಳೆಯಿಂದ ಹಾನಿಯಾದ ರೈತರಿಗೆ ಉಚಿತವಾಗಿ ಬಿತ್ತನೆ ಬೀಜ ಪೂರೈಸಬೇಕು. ಖಾಸಗಿ ಸಾಲವನ್ನು ರೈತರಿಂದ ಬಲವಂತವಾಗಿ ವಸೂಲಿ ಮಾಡದಂತೆ ತಡೆಯಬೇಕು ಎಂದು ಸೂಚಿಸಿದರು.

ಹಾನಿಯ ಅಂಕಿಅಂಶ

2,949 ಮನೆಗಳು	541.39 (ಹೆಕ್ಟೇರ್) ಬೆಳೆ	2109 (ಕಿ.ಮೀ) ರಸ್ತೆ
889 ಶಾಲಾ ಕೊಠಡಿಗಳು	189 ಸೇತುವೆಗಳು	269 ಅಂಗನವಾಡಿ ಕೇಂದ್ರಗಳು

ಒಂಟಿ ಎತ್ತು ₹9.20 ಲಕ್ಷಕ್ಕೆ ಮಾರಾಟ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ತಾಲ್ಲೂಕಿನ ಶ್ರೀನಿವಾಸ ಅಗ್ರಹಾರ ಗ್ರಾಮದ ಯುವ ರೈತ ನವೀನ್ ತಮ್ಮ ಒಂಟಿ ಎತ್ತನ್ನು ತಮಿಳುನಾಡಿನ ಕೊಯಮತ್ತೂರು ಸಮೀಪದ ಸರವಣಂಪಟ್ಟಿ ಗ್ರಾಮದ ಸಿರವೈ ತಂಬಿ ಅವರಿಗೆ ಬುಧವಾರ ₹ 9.20 ಲಕ್ಷಕ್ಕೆ ಮಾರಾಟ ಮಾಡಿದರು. ಊರಿನಲ್ಲಿ ಮೆರವಣಿಗೆ ಮಾಡಿ ಬೀಳ್ಕೊಟ್ಟರು.

ಎರಡು ಹಲ್ಲಿನ, ಎರಡೂವರೆ ವರ್ಷ ಪ್ರಾಯದ ಎತ್ತು ಎತ್ತಿನ ಗಾಡಿ ಓಟದ ಹತ್ತಾರು ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಪಡೆದಿದೆ. ಚಿರತೆ ವೇಗದಲ್ಲಿ ಓಡುತ್ತದೆಂದು ನವೀನ್ ಅವರು 'ಜಾಗ್ವಾರ್' ಎಂದು ಹೆಸರಿಟ್ಟಿದ್ದಾರೆ. ಅದೇ ಕಾರಣಕ್ಕೆ ಸುತ್ತಮುತ್ತಲಿನ ಗ್ರಾಮಗಳಲ್ಲಿ 'ಜಾಗ್ವಾರ್ ನವೀನ್' ಎಂದೇ ಹೆಸರಾಗಿದ್ದಾರೆ.

'ಒಂದೂವರೆ ವರ್ಷದ ಹಿಂದೆ ₹1.5 ಲಕ್ಷ ಕೊಟ್ಟು ಇಂಡುವಾಳು ಗ್ರಾಮದ ಅಜಿತ್ ಎಂಬವವರಿಂದ ಎತ್ತನ್ನು ಖರೀದಿಸಿದ್ದೆ. ಪೌಷ್ಟಿಕ ಆಹಾರ ಕೊಟ್ಟು ಎತ್ತಿನ ಗಾಡಿ ಓಟದ ಸ್ಪರ್ಧೆಗೆ ತರಬೇತಿ ನೀಡಿದ್ದೆ. ಹೊರ ರಾಜ್ಯದ ಸ್ಪರ್ಧೆಗಳಲ್ಲಿ ಕೂಡ ಬಹುಮಾನ ಗೆದ್ದು ಕೊಟ್ಟಿತ್ತು. ಭಾರವಾದ ಮನಸ್ಸಿನಿಂದಲೇ ಮಾರಾಟ ಮಾಡುತ್ತಿದ್ದೇನೆ' ಎಂದು ನವೀನ್ ಹೇಳಿದರು.

'ಎತ್ತಿನ ಗಾಡಿ ಓಟದ ಸ್ಪರ್ಧೆಯಲ್ಲಿ ಅದರ ವೇಗ ನೋಡಿ ಮೆಚ್ಚಿಕೊಂಡು ಖರೀದಿಸಿದೆ' ಎಂದು ಸಿರವೈ ತಂಬಿ ತಿಳಿಸಿದರು.

ತಮ್ಮ ಒಂಟಿ ಎತ್ತಿನೊಂದಿಗೆ ಶ್ರೀರಂಗಪಟ್ಟಣ ತಾಲ್ಲೂಕಿನ ಶ್ರೀನಿವಾಸ ಅಗ್ರಹಾರ ಗ್ರಾಮದ ನವೀನ್

ನಾಯಿಗೂ ಸೀಮಂತ ಭಾಗ್ಯ

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ (ಗದಗ ಜಿಲ್ಲೆ): ಗರ್ಭಿಣಿಯರಿಗೆ ಸೀಮಂತ ಮಾಡುವುದು ವಾಡಿಕೆ. ಲಕ್ಷ್ಮೇಶ್ವರದಲ್ಲಿ ಬುಧವಾರ ನಾಯಿಗೂ ನೆರವೇರಿಸಲಾಯಿತು.

ಪಟ್ಟಣದ ಶ್ವಾನಪ್ರಿಯರಾದ ಅಶೋಕ ಸೊರಟೂರ ದಂಪತಿ ತಮ್ಮ ಗರ್ಭಿಣಿ ನಾಯಿಗೆ ಬುಧವಾರ ಥೇಟ್ ಮಹಿಳೆಯರಿಗೆ ಮಾಡುವಂತೆಯೇ ಸೀಮಂತ ಕಾರ್ಯ ನೆರವೇರಿಸಿದರು.

ಓಣಿಯ ಮಹಿಳೆಯರನ್ನು ಆಮಂತ್ರಿಸಿ ಅವರಿಂದ ಸೋಬಾನೆ ಪದ ಹೇಳಿಸಿ ನಾಯಿಗೆ ಆರತಿ ಮಾಡಿಸಿದರು. ಸೀಮಂತ ಕಾರ್ಯ ಮಾಡಿದ ದಂಪತಿಯ ಸಂಭ್ರಮಕ್ಕೆ ನೆರೆಹೊರೆಯವರು ಜೊತೆಯಾದರು.

ಲಕ್ಷ್ಮೇಶ್ವರದಲ್ಲಿ ಬುಧವಾರ ಗರ್ಭಿಣಿ ನಾಯಿಗೆ ಸೀಮಂತ ಮಾಡಲಾಯಿತು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಈ ಪ್ರಪಂಚವು ಅಡಿಯಿಂದ ಮುಡಿಯವರೆಗೂ ಆಳವಾದ ಸಮಸ್ಯೆಗಳಲ್ಲಿ ಸಿಲುಕಿದೆ. ಆದರೆ ಅವನ್ನು ಪ್ರೀತಿಯೆಂಬ ಮುಲಾಮಿನಿಂದ ತಕ್ಷಣವೇ ಗುಣಪಡಿಸಲು ಸಾಧ್ಯ.

–ರೂಮಿ

ಹೆದ್ದಾರಿಯಲ್ಲಿ ಹೆಚ್ಚಿದ ಸಾವು–ನೋವು ಅಪಘಾತ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಿ

ಕೆಲವು ತಿಂಗಳುಗಳ ಹಿಂದೆಯಷ್ಟೇ ಉದ್ಘಾಟನೆಗೊಂಡಿರುವ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ಅಕ್ಷರಶಃ ಅಪಘಾತಗಳ ತಾಣವಾಗಿ ಪರಿಣಮಿಸಿದೆ. ಸಂಚಾರ ಹಾಗೂ ಸುರಕ್ಷತೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರು ನೀಡಿರುವ ವರದಿಯ ಪ್ರಕಾರ, ಪ್ರಸಕ್ತ ವರ್ಷದ ಜನವರಿಯಿಂದ ಜೂನ್‌ವರೆಗೆ ಈ ಹೆದ್ದಾರಿಯಲ್ಲಿ 136 ಜನ ಪ್ರಾಣ ಕಳೆದುಕೊಂಡಿದ್ದರೆ, 335 ಮಂದಿ ಗಾಯಗೊಂಡಿದ್ದಾರೆ. ಮಂಡ್ಯ ಮತ್ತು ರಾಮನಗರ ನಡುವಿನ ಮಾರ್ಗದಲ್ಲೇ ಹೆಚ್ಚು ಅಪಘಾತಗಳು ಸಂಭವಿಸಿರುವುದನ್ನೂ ವರದಿ ಎತ್ತಿ ತೋರಿದೆ. ಅದರಲ್ಲೂ ಹೆಚ್ಚು ತಿರುವುಗಳು ಹಾಗೂ ಏರಿಳಿತಗಳಿಂದ ಕೂಡಿರುವ ಚನ್ನಪಟ್ಟಣ ಮತ್ತು ಮಂಡ್ಯದ ನಡುವಿನ ಮಾರ್ಗವು ‘ಅಪಘಾತಗಳ ತಾಣ’ವಾಗಿ ಪರಿವರ್ತನೆ ಆಗಿರುವುದನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ. ‘ನಿರ್ಲಕ್ಷ್ಯ ಹಾಗೂ ಅತಿ ವೇಗದ ಚಾಲನೆಯೇ ಅಪಘಾತಗಳಿಗೆ ಕಾರಣ’ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ವಾದಿಸುತ್ತದೆ. ಆದರೆ, ಪ್ರಾಧಿಕಾರ ಹೇಳುತ್ತಿರುವುದು ಅರ್ಧಸತ್ಯವನ್ನು ಮಾತ್ರ. ಏಕೆಂದರೆ, ಹೆದ್ದಾರಿಯ ವಿನ್ಯಾಸದಲ್ಲಿಯೇ ಹಲವು ಲೋಪಗಳಿವೆ ಎಂಬ ದೂರುಗಳೂ ಇವೆ. ಗಂಟೆಗೆ ಗರಿಷ್ಠ 120 ಕಿ.ಮೀ. ವೇಗದ ಸಂಚಾರಕ್ಕೆ ಅನುಕೂಲವಾಗುವಂತೆ ಈ ಹೆದ್ದಾರಿಯನ್ನು ರೂಪಿಸಲಾಗಿದೆ. ಹಾಗೆಯೇ ಇಲ್ಲಿ, ಗಂಟೆಗೆ 100 ಕಿ.ಮೀ.ಗಿಂತ ಹೆಚ್ಚಿನ ವೇಗದಲ್ಲಿ ವಾಹನ ಚಲಾಯಿಸುವುದನ್ನು ನಿರ್ಬಂಧಿಸಲಾಗಿದೆ. ಆದರೆ, ನೂರಾರು ವಾಹನಗಳು ಗಂಟೆಗೆ 140 ಕಿ.ಮೀ.ಗಿಂತ ಹೆಚ್ಚಿನ ವೇಗದಲ್ಲಿ ಸಂಚರಿಸುತ್ತಿರುವುದು ಪೊಲೀಸರ ತಪಾಸಣೆಯಿಂದ ಕಂಡುಬಂದಿದೆ. ಸಣ್ಣ ಕಾರುಗಳು ಇಷ್ಟೊಂದು ವೇಗದಲ್ಲಿ ಸಂಚರಿಸುವಾಗ ತಕ್ಷಣ ನಿಯಂತ್ರಣ ಸಾಧಿಸುವುದು ಕಷ್ಟವಾಗಿ ಇಂತಹ ವಾಹನಗಳು ಮತ್ತು ವಾಹನಗಳಲ್ಲಿರುವ ಪ್ರಯಾಣಿಕರು ಗಂಡಾಂತರ ಎದುರಿಸಬೇಕಾಗುತ್ತದೆ. ಹಲವು ಚಾಲಕರು ಟೈರ್‌ಗಳ ಸ್ಥಿತಿಗತಿಯ ಕುರಿತು ಲಕ್ಷ್ಯವನ್ನೇ ಹರಿಸುವುದಿಲ್ಲ. ಹೆಚ್ಚಿನ ವೇಗದಲ್ಲಿ ವಾಹನ ಸಂಚರಿಸುತ್ತಿದ್ದಾಗ ಟೈರ್‌ಗಳು ಸ್ಫೋಟಗೊಂಡು ಅವಘಡಗಳು ಸಂಭವಿಸಿದ್ದೂ ಇದೆ. ಮಾರ್ಗ ಶಿಸ್ತು ಪಾಲನೆ ಮಾಡದೆ ಹೇಗೆಂದರೆ ಹಾಗೆ ವಾಹನ ನುಗ್ಗಿಸುವ ಪರಿಪಾಟವೂ ಅಪಘಾತಗಳಿಗೆ ಕಾರಣವಾಗಿದ್ದಿದೆ.

ಅಪಘಾತ ನಿಯಂತ್ರಣಕ್ಕೆ ಸಾಧ್ಯವಿರುವ ಎಲ್ಲ ಕ್ರಮಗಳನ್ನು ವಿಳಂಬವಿಲ್ಲದೆ ಕೈಗೊಳ್ಳಬೇಕು. ಹೆದ್ದಾರಿಗಳು ಜನರ ಪ್ರಾಣದೊಡನೆ ಚೆಲ್ಲಾಟವಾಡುವ ತಾಣಗಳಾಗದಂತೆ ಸರ್ಕಾರ ನೋಡಿಕೊಳ್ಳಬೇಕು

ಹೆದ್ದಾರಿಯಲ್ಲಿ ಅಪಘಾತಗಳು ಹೆಚ್ಚಾಗುತ್ತಿದ್ದಂತೆಯೇ ಜೂನ್ ತಿಂಗಳಲ್ಲಿ ಪರಿಶೀಲನೆ ನಡೆಸಿದ್ದ ಅಲೋಕ್ ಕುಮಾರ್, ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೂಚನೆ ನೀಡಿದ್ದರು. ಒಂದು ತಿಂಗಳ ಬಳಿಕ ಅವರು ಮತ್ತೆ ಪರಿಶೀಲನೆ ನಡೆಸಿ, ಪರಿಸ್ಥಿತಿಯನ್ನು ಅವಲೋಕಿಸಿದ್ದಾರೆ. ಬಹುತೇಕ ಸೂಚನೆಗಳನ್ನು ಪಾಲಿಸಲಾಗಿಲ್ಲ ಎಂದೂ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪೊಲೀಸರು ಗುರುತಿಸಿರುವ 18 ಅಪಘಾತ ಸ್ಥಳಗಳು ಮತ್ತು ಪ್ರವೇಶ–ನಿರ್ಗಮನ ಜಾಗಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಬೇಕು, ವಾಹನಗಳ ನಂಬರ್ ಪ್ಲೇಟ್ ಸೆರೆಹಿಡಿಯುವ ಸ್ವಯಂಚಾಲಿತ ಕ್ಯಾಮೆರಾ ಸಾಧನಗಳನ್ನು (ಎಎನ್‌ಪಿಆರ್) ಅಳವಡಿಸಬೇಕು, ಹೆದ್ದಾರಿ ಗಸ್ತು ಹೆಚ್ಚಿಸಬೇಕು ಮತ್ತು ತುರ್ತು ನೆರವಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಪ್ರಾಧಿಕಾರಕ್ಕೆ ಸೂಚನೆ ನೀಡಲಾಗಿತ್ತು. ಆದರೆ, ಒಂದೆಡೆ ಮಾತ್ರ ಎಎನ್‌ಪಿಆರ್ ಅಳವಡಿಸಿರುವ ಪ್ರಾಧಿಕಾರವು ಮಿಕ್ಕ ಸೂಚನೆಗಳ ಕುರಿತಂತೆ ಜಾಣ ಕಿವುಡು ಪ್ರದರ್ಶಿಸುತ್ತಿದೆ. ಪೊಲೀಸರಿಂದ ಒತ್ತಡ ಹೆಚ್ಚಾದ ಮೇಲೆ, ಇನ್ನು ಮೂರು ವಾರಗಳ ಒಳಗಾಗಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದೆ. ಸಾರ್ವಜನಿಕರು ರಸ್ತೆ ದಾಟಲು ಅಗತ್ಯವಾದ ಸ್ಕೈವಾಕ್‌ಗಳ ನಿರ್ಮಾಣಕ್ಕೆ ಇನ್ನಷ್ಟು ಕಾಲಾವಕಾಶವನ್ನೂ ಕೇಳಿದೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ನಿರಂತರವಾಗಿ ಭೀಕರ ಅಪಘಾತಗಳು ಸಂಭವಿಸುತ್ತಿದ್ದರೂ ನಿಯಂತ್ರಣಕ್ಕೆ ಕಾರ್ಯಪ್ರವೃತ್ತವಾಗದೆ ವೃಥಾ ಕಾಲಹರಣ ಮಾಡುತ್ತಿರುವುದು ಜನರ ಜೀವಕ್ಕೆ ಪ್ರಾಧಿಕಾರ ಬೆಲೆಯನ್ನೇ ನೀಡದಿರುವುದರ ಸಂಕೇತದಂತೆ ಕಾಣುತ್ತದೆ. ಈ ಮಧ್ಯೆ, ಎಚ್ಚೆತ್ತುಕೊಂಡಿರುವ ಪೊಲೀಸರು ವಾಹನಗಳ ವೇಗದ ಮೇಲೆ ಕಣ್ಣಿಡುವ ಇಂಟರ್‌ಸೆಪ್ಟರ್‌ಗಳನ್ನು ಹೆದ್ದಾರಿಯಲ್ಲಿ ನಿಯೋಜಿಸುವ ಮೂಲಕ ಅಪಘಾತಗಳನ್ನು ನಿಯಂತ್ರಿಸುವ ಪ್ರಯತ್ನ ಮಾಡಿದ್ದಾರೆ. ಅದರ ಫಲವೆಂಬಂತೆ ಜುಲೈ ತಿಂಗಳಿನಲ್ಲಿ ಕೇವಲ 27 ಅವಘಡಗಳು ಸಂಭವಿಸಿದ್ದು, ಸಾವಿನ ಸಂಖ್ಯೆ ಮೂರಕ್ಕೆ ಇಳಿದಿದೆ. ಆದರೆ, ಇಂಟರ್‌ಸೆಪ್ಟರ್‌ಗಳ ನಿಯೋಜನೆ ಮತ್ತು ಸ್ಥಳದಲ್ಲೇ ದಂಡ ಆಕರಣೆಯು ಹೆದ್ದಾರಿಯಲ್ಲಿ ಹೊಸದೊಂದು ಸಮಸ್ಯೆಯ ಸೃಷ್ಟಿಗೆ ಕಾರಣವಾಗಬಾರದು. ಅತಿಯಾದ ವೇಗದ ಚಾಲನೆ ಮೇಲೆ ಕಣ್ಣಿಡಲು ತಂತ್ರಜ್ಞಾನ ಆಧಾರಿತ ಆಧುನಿಕ ಸಾಧನಗಳು, ವಿಧಾನಗಳು ಹಲವು ಇವೆ. ಜಗತ್ತಿನ ಅತ್ಯುತ್ತಮ ಮಾದರಿಗಳನ್ನು ಪರಿಶೀಲಿಸಿ, ಅಂಥವನ್ನು ಇಲ್ಲೂ ಅಳವಡಿಸಿಕೊಳ್ಳುವತ್ತ ಗಮನಹರಿಸಬೇಕು. ಸಂಚಾರಕ್ಕೆ ಅಡಚಣೆ ಆಗಬಾರದು ಎಂಬ ಉದ್ದೇಶದಿಂದ ಹೆದ್ದಾರಿಯಲ್ಲಿ ಬೈಕ್, ಆಟೊ, ಟ್ರ್ಯಾಕ್ಟರ್‌ಗಳಿಗೆ ಆಗಸ್ಟ್ ಒಂದರಿಂದ ನಿಷೇಧ ವಿಧಿಸಲು ನಿರ್ಧರಿಸಲಾಗಿದೆ. ಅಪಘಾತ ನಿಯಂತ್ರಣಕ್ಕೆ ಇದೂ ಒಂದು ಕ್ರಮ ಎಂದು ಭಾವಿಸಬಹುದಾದರೂ ಸ್ಥಳೀಯರ ಮುಕ್ತ ಸಂಚಾರಕ್ಕೆ ಈ ಹೆದ್ದಾರಿಯೇ ಒಂದು ರೀತಿಯಲ್ಲಿ ತೊಡಕಾಗದಂತೆ ನೋಡಿಕೊಳ್ಳುವುದೂ ಅಗತ್ಯ. ಸ್ಥಳೀಯರ ಬಳಕೆಗಾಗಿ ಸರ್ವಿಸ್ ರಸ್ತೆಗಳು ಸದಾ ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು ಮತ್ತು ರಸ್ತೆ ದಾಟಲು ಅಲ್ಲಲ್ಲಿ ಸೂಕ್ತ ವ್ಯವಸ್ಥೆಯನ್ನೂ ಮಾಡಬೇಕು. ಈ ಹೆದ್ದಾರಿಯಲ್ಲಿ ಸಂಭವಿಸಿರುವ ಅಪಘಾತಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಕೇಂದ್ರ ಸಾರಿಗೆ ಇಲಾಖೆಯು ತಾಂತ್ರಿಕ ಸಮಿತಿಯೊಂದನ್ನು ನೇಮಿಸಿದೆ. ಕಾಲಮಿತಿಯಲ್ಲಿ ವರದಿ ನೀಡಲೂ ಸೂಚಿಸಲಾಗಿದೆ. ತಜ್ಞರ ವರದಿ ಆಧರಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಪಘಾತ ನಿಯಂತ್ರಣಕ್ಕೆ ಸಾಧ್ಯವಿರುವ ಎಲ್ಲ ಕ್ರಮಗಳನ್ನು ವಿಳಂಬವಿಲ್ಲದೆ ಕೈಗೊಳ್ಳಬೇಕು. ಹೆದ್ದಾರಿಗಳು ಜನರ ಪ್ರಾಣದೊಡನೆ ಚೆಲ್ಲಾಟವಾಡುವ ತಾಣಗಳಾಗದಂತೆ ನೋಡಿಕೊಳ್ಳುವುದು ಎರಡೂ ಸರ್ಕಾರಗಳ ಹೊಣೆಗಾರಿಕೆಯೂ ಹೌದು.

ದಿನದ ಟ್ವೀಟ್

ಮೂಲದಲ್ಲೇ ನಿರ್ಬಂಧಿಸಿ

ಮೊದಲಿಗೆ ಅವರು ಇಂತಹ ಹೆಲ್ಮೆಟ್‌ಗಳನ್ನು ತಯಾರಿಸಲು ಕಂಪನಿಗಳಿಗೆ ಅವಕಾಶ ಮಾಡಿಕೊಡುವುದೇಕೆ? ನಿರ್ಬಂಧ ಅವುಗಳ ತಯಾರಿಕೆಯ ಮೇಲೆ ಇರಬೇಕೇ ವಿನಾ ಗ್ರಾಹಕರ ಮೇಲಲ್ಲ.

(‘ಅರ್ಧ ಹೆಲ್ಮೆಟ್’ ಧರಿಸಿದ್ದ ವಾಹನ ಸಂಚಾರರ ವಿರುದ್ಧ ಬೆಂಗಳೂರು ಪೊಲೀಸರು ಕೈಗೊಂಡ ಕ್ರಮಕ್ಕೆ ಪ್ರತಿಕ್ರಿಯೆ)

ಹೇಮಂತ್ ಆಚಾರ್

ಕಿಡಿನುಡಿ



‘ಇಂಡಿಯಾ’ ಎಂಬ ಹೆಸರು ಮತ್ತು ಪ್ರಧಾನಿ ಇದಕ್ಕೆ ಭಯೋತ್ಪಾದಕ ಸಂಘಟನೆ ಹಾಗೂ ಈಸ್ಟ್ ಇಂಡಿಯಾ ಕಂಪನಿಯೊಂದಿಗೆ ನಂಟು ಕಲ್ಪಿಸಿ ಟೀಕಿಸಿರುವುದರ ಕುರಿತು ಟಿ.ವಿಯಲ್ಲಿ ನಡೆಯುವ ಚರ್ಚೆಯನ್ನು ನೋಡುವುದಕ್ಕೆ ತುಂಬಾ ದುಃಖವಾಗುತ್ತದೆ. ನಮ್ಮ ಮಾತುಕತೆ ಈ ಮಟ್ಟಕ್ಕೆ ಇಳಿದಿರುವುದು ರಾಷ್ಟ್ರೀಯ ಅವಮಾನ. ನಾವು ನಮ್ಮ ಮನಸ್ಸಿನ ಸ್ಥಿಮಿತವನ್ನು ಕಳೆದುಕೊಂಡಿದ್ದೇವೆಯೇ? ನಮಗೇನಾಗಿದೆ? ದಯಮಾಡಿ ಸ್ವಲ್ಪ ಗೌರವ ಮತ್ತು ಘನತೆಯನ್ನು ಕಾಯ್ದುಕೊಳ್ಳಿ.

ಸ್ಯಾಮ್ ಪಿತ್ರೋಡ, ಉದ್ಯಮಿ

25 ವರ್ಷಗಳ ಹಿಂದೆ

ಸೋಮವಾರ, 27-7-1998

- **ಉದ್ಯಮಗಳಿಗೆ ವರ: ಬಳಕೆದಾರರಿಗೆ ಬರೆ**

ಬೆಂಗಳೂರು, ಜುಲೈ 26– ವಿದ್ಯುತ್ ದರ ಏರಿಸುವ ಮೂಲಕ ಈ ವರ್ಷ 185 ಕೋಟಿ ರೂಪಾಯಿಗಳಷ್ಟು ಹೆಚ್ಚು ಆದಾಯ ಗಳಿಸಲು ಹೊರಟಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು (ಕೆಇಬಿ) ಖಾಸಗಿ ಕೈಗಾರಿಕೋದ್ಯಮಿಗಳಿಂದ ಬರಬೇಕಾಗಿದ್ದ 109.73 ಕೋಟಿ ರೂಪಾಯಿ ವಸೂಲು ಮಾಡದೆ ಜನಸಾಮಾನ್ಯರ ಮೇಲೆಯೇ ದರ ಏರಿಕೆಯ ಹೊರೆಯನ್ನು ಸದಾ ಹಾಕುತ್ತಿರುವುದು ಅಂಕಿ ಅಂಶಗಳಿಂದ ವ್ಯಕ್ತವಾಗಿದೆ.

ಜನಸಾಮಾನ್ಯರಿಗಾದರೆ 100 ರೂಪಾಯಿ ವಿದ್ಯುತ್ ಶುಲ್ಕ ಕಟ್ಟಲು 15 ದಿನಗಳು ತಡವಾದರೆ ಸಾಕು; ಅವರು ಪಡೆದಂಥ ವಿದ್ಯುತ್ ಸಂಪರ್ಕವನ್ನೇ ಕಡಿದುಹಾಕುವುದು ವಿದ್ಯುಚ್ಛಕ್ತಿ ಮಂಡಳಿಯ ಪದ್ಧತಿ. ಆದರೆ ರಾಜ್ಯದ ಒಟ್ಟು 9 ಬೃಹತ್ ಕೈಗಾರಿಕೋದ್ಯಮಿಗಳು ಹಲವು ವರ್ಷಗಳಿಂದ ಉಳಿಸಿಕೊಂಡಿರುವ ಭಾರಿ ಮೊತ್ತದ ಬಾಕಿಯನ್ನು ಸಹಿಸಿಕೊಂಡು, ವಿದ್ಯುತ್ ಸಂಪರ್ಕವನ್ನು ಅವರಿಗೆ ಕೊಡುತ್ತಿರುವ ಮಂಡಳಿಯ ಕಾರ್ಯವೈಖರಿ ಪ್ರಶ್ನಾರ್ಹವಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 27-7-1973

- **ಕಪಿಲಾ ಯೋಜನೆ ಅಕ್ರಮಗಳ ಬಗ್ಗೆ ಕ್ರಮ ವಿಳಂಬ**

ಬೆಂಗಳೂರು, ಜುಲೈ 26– ಕಪಿಲಾ ಯೋಜನೆಗೆ ಸೇರಿದ ನಾಲೆ ಕೆಲಸದಲ್ಲಿ ಕಂಡುಬಂದ ಕೆಲ ಅಕ್ರಮಗಳ ಬಗ್ಗೆ ವಿಚಾರಣೆ ನಡೆಯಬೇಕೆಂದು ಕಳೆದ ಫೆಬ್ರುವರಿಯಲ್ಲಿ ಸರ್ಕಾರದ ಆಜ್ಞೆಯಾಗಿದ್ದರೂ, ಈ ಬಗ್ಗೆ ಇನ್ನೂ ತೀವ್ರತರವಾದ ಯಾವ ಕ್ರಮವನ್ನೂ ಕೈಗೊಂಡಿಲ್ಲವೆಂದು ತಿಳಿದುಬಂದಿದೆ.

- **ಬಾಂಗ್ಲಾದೇಶಕ್ಕೆ ಮನ್ನಣೆ ನೀಡಲು ಭುಟ್ಟೊ ಸಿದ್ಧ: ಕಾಶ್ಮೀರದ ಬಗ್ಗೆ ರಾಜಿ ಇಲ್ಲ**

ಪ್ಯಾರಿಸ್, ಜುಲೈ 26– ಬಾಂಗ್ಲಾದೇಶಕ್ಕೆ ಮನ್ನಣೆ ನೀಡಲು ತಾವು ಸಿದ್ಧವಾಗಿರುವುದಾಗಿಯೂ, ಆದರೆ ಕಾಶ್ಮೀರದ ವಿಷಯದಲ್ಲಿ ತಾವು ಜಗ್ಗುವುದಿಲ್ಲವೆಂದೂ ಪಾಕಿಸ್ತಾನದ ಅಧ್ಯಕ್ಷ ಭುಟ್ಟೊ ಇಲ್ಲಿ ಘೋಷಿಸಿದರು.

ಹರ್ಮನ್‌ಪ್ರೀತ್ ಕೌರ್ ವರ್ತನೆಗೆ ತಲೆತಗ್ಗಿಸಿದ ಕ್ರಿಕೆಟ್ ಲೋಕ

ಸಭ್ಯತೆಯ ಎಲ್ಲೆ ಮೀರಿದಾಗ...

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಗುಂಡಪ್ಪ ವಿಶ್ವನಾಥ್ ಹೆಸರು ಕೇಳಿದಾಕ್ಷಣ ಕ್ರಿಕೆಟ್ ಪ್ರೇಮಿಗಳ ಮನಸ್ಸು ನಾಲ್ಕು ದಶಕಗಳ ಹಿಂದಿನ ನೆನಪಿನಂಗಳದಲ್ಲಿ ವಿಹರಿಸಲಾರಂಭಿಸುತ್ತದೆ.

1980ರಲ್ಲಿ ಮುಂಬೈನಲ್ಲಿ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಟೆಸ್ಟ್‌ನಲ್ಲಿ ಬಾಬ್ ಟೇಲರ್ ಔಟಾಗಿದ್ದಾರೆಂದು ಅಂಪೈರ್ ತೀರ್ಪು ನೀಡಿದ್ದರು. ಬಾಬ್ ವಿಕೆಟ್‌ಕೀಪರ್‌ಗೆ ಕ್ಯಾಚಿತ್ತಿದ್ದರು. ಆದರೆ ಚೆಂಡು ಟೇಲರ್ ಬ್ಯಾಟ್ ಸ್ಪರ್ಶಿಸದೇ ಹಿಂದೆ ಹೋಗಿತ್ತು ಎಂದು ಮನಗಂಡ ಭಾರತ ತಂಡದ ನಾಯಕ ವಿಶ್ವನಾಥ್ ತಮ್ಮ ಸಹ ಆಟಗಾರರೊಂದಿಗೆ ಮಾತನಾಡಿದರು. ಕೂಡಲೇ ಅಂಪೈರ್ ಬಳಿ ಸಾಗಿ, ‘ನನ್ನ ಮನವಿಯನ್ನು ವಾಪಸ್ ತೆಗೆದುಕೊಳ್ಳುತ್ತೇನೆ’ ಎಂದರು. ಟೇಲರ್ ಅವರನ್ನು ಮರಳಿ ಕ್ರೀಸ್‌ಗೆ ಕರೆಸಿದರು. ಟೇಲರ್ ಅಬ್ಬರದ ಬ್ಯಾಟಿಂಗ್‌ನಿಂದಾಗಿ ಇಂಗ್ಲೆಂಡ್ ಜಯಿಸಿತು. ಜಿಆರ್‌ವಿ ಕ್ರೀಡಾಸ್ಫೂರ್ತಿ ವಿಶ್ವವನ್ನೇ ಗೆದ್ದಿತು!

ಆದರೆ ಐದು ದಿನಗಳ ಹಿಂದೆ ಢಾಕಾದಲ್ಲಿ ಭಾರತ ಮಹಿಳಾ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ದುರ್ವರ್ತನೆಯಿಂದಾಗಿ ಕ್ರಿಕೆಟ್ ರಂಗವೇ ತಲೆತಗ್ಗಿಸುವಂತಾಯಿತು. ಬಾಂಗ್ಲಾ ವಿರುದ್ಧದ ಏಕದಿನ ಪಂದ್ಯದಲ್ಲಿ ಜಯಿಸಿದ್ದರೆ ಭಾರತಕ್ಕೆ ಸರಣಿ ಕಿರೀಟ ಒಲಿಯುತ್ತಿತ್ತು. ಈ ಪಂದ್ಯದಲ್ಲಿ ಹರ್ಮನ್‌ಪ್ರೀತ್ ತಮ್ಮನ್ನು ಔಟ್ ಎಂದು ಘೋಷಿಸಿದ ಅಂಪೈರ್ ವಿರುದ್ಧ ಸಿಟ್ಟಿಗೆದ್ದರು. ಬ್ಯಾಟ್‌ನಿಂದ ಸ್ಟಂಪ್ಸ್‌ಗೆ ಹೊಡೆದರು. ಪೆವಿಲಿಯನ್‌ಗೆ ಹೋಗುವ ಹಾದಿಯಲ್ಲಿ ಬೈಗುಳ ಉದುರಿಸಿದರು. ಪಂದ್ಯ ಟೈ ಆಯಿತು. ಬಾಂಗ್ಲಾದೇಶದ ನಾಯಕಿ ನಿಗರ್ ಸುಲ್ತಾನಾ ಅವರೊಂದಿಗೆ ಟ್ರೋಫಿ ಸ್ವೀಕರಿಸುವಾಗ ಹರ್ಮನ್, ‘ಅಂಪೈರ್‌ಗೆ ಪ್ರಶಸ್ತಿ ನೀಡಲು ಇಲ್ಲಿಗೆ ಕರೆಯಿರಿ’ ಎಂದು ಕೈಬೀಸಿ ಸುಲ್ತಾನಾ ಕೈಯಿಂದ ಟ್ರೋಫಿ ಸೆಳೆದುಕೊಂಡು ಹೋಗಿದ್ದರು. ಇದರಿಂದಾಗಿ ಅವಮಾನಿತರಾದ ಬಾಂಗ್ಲಾ ಆಟಗಾರ್ತಿಯರು ಫೋಟೊ ಸೆಷನ್‌ಗೆ ನಿಲ್ಲದೇ ಮೈದಾನವನ್ನು ತೊರೆದು ತಿರುಗೇಟು ನೀಡಿದ್ದರು.

ಕ್ರಿಕೆಟ್ ಎಂದರೆ ಸಭ್ಯರ ಆಟ. ಆದರೆ ಆ ಸಭ್ಯ ನಡವಳಿಕೆ ಮತ್ತು ಕ್ರೀಡಾ ಮನೋಭಾವವನ್ನು ಕಲಿಯದೇ ಹೋದರೆ ನೂರಾರು ಪಂದ್ಯಗಳನ್ನು ಆಡಿ, ಸಾವಿರಾರು ರನ್ ಗಳಿಸಿ, ವಿಕೆಟ್‌ಗಳ ರಾಶಿ ಒಟ್ಟಿದರೂ ಪ್ರಯೋಜನಕ್ಕೆ ಬರುವುದಿಲ್ಲ. ನಿಯಮಾವಳಿ ಮತ್ತು ಸಭ್ಯತೆಯ ಎಲ್ಲೆಯೊಳಗೆ ಆಡುವುದೇ ಕ್ರೀಡೆಯ ಮೂಲ ಉದ್ದೇಶ. ಇತಿಮಿತಿಯೊಳಗೆ ತಮ್ಮ ಸಾಮರ್ಥ್ಯ ಮೆರೆದು ತಂಡಕ್ಕೆ ಗೆಲುವು ತಂದುಕೊಡುವವರು ತಾರೆಗಳಾಗುತ್ತಾರೆ. ಜಿಆರ್‌ವಿ ಅವರ ಶತಕಗಳು, ಸ್ಕ್ವೇರ್ ಕಟ್‌ಗಳು ಅಮೋಘ. ಆದರೆ ಅವರು ಸದಾಕಾಲ ದಿಗ್ಗಜ ಎನಿಸಿಕೊಂಡಿದ್ದು ತಮ್ಮ ಕ್ರೀಡಾಸ್ಫೂರ್ತಿ ಹಾಗೂ ಸಭ್ಯ ವ್ಯಕ್ತಿತ್ವದಿಂದ. ಅವರೇ ಹೇಳಿಕೊಳ್ಳುವಂತೆ; ತಮ್ಮ ವೃತ್ತಿಜೀವನದಲ್ಲಿ ಹಲವು ಬಾರಿ ಅಂಪೈರ್‌ಗಳು ನೀಡಿದ್ದ ತೀರ್ಪುಗಳು ತಪ್ಪಿದ್ದರೂ ವಿರೋಧ ವ್ಯಕ್ತಪಡಿಸದೇ ಪೆವಿಲಿಯನ್‌ಗೆ ಮರಳಿದ್ದರಂತೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ನೂರು ಶತಕಗಳನ್ನು ಹೊಡೆದಿರುವ ಸಚಿನ್ ತೆಂಡೂಲ್ಕರ್ ಕೂಡ ಎಷ್ಟೋ ಪಂದ್ಯಗಳಲ್ಲಿ 80-90 ರನ್‌ಗಳನ್ನು ಗಳಿಸಿದ ಸಂದರ್ಭದಲ್ಲಿ ಅಂಪೈರ್‌ಗಳ ತಪ್ಪು ನಿರ್ಣಯಗಳಿಗೆ ಬಲಿಯಾಗಿದ್ದಾರೆ. ಆದರೆ ಯಾವತ್ತೂ ತೀರ್ಪುಗಳಿಗೆ ಎದುರಾಗಿ ವಾಗ್ವಾದ ಮಾಡಿಲ್ಲ.

‘ಆ ಕಾಲಘಟ್ಟದಲ್ಲಿ ಸಚಿನ್ ವರ್ಚಸ್ಸು ಹೇಗಿತ್ತೆಂದರೆ ಅಂಪೈರ್‌ಗಳು ಔಟ್ ನೀಡುವುದಕ್ಕೂ ಮುನ್ನ ಹತ್ತು ಬಾರಿ ಯೋಚಿಸಬೇಕಿತ್ತು. ತಪ್ಪಾಗಿ ಔಟ್ ನೀಡಿದರೆ ಪ್ರೇಕ್ಷಕರ ಆಕ್ರೋಶಕ್ಕೆ ತುತ್ತಾಗುವ ಭಯ ಕಾಡುತ್ತಿತ್ತು. ಅಂತಹ ಜನಬೆಂಬಲ ತಮ್ಮ ಹಿಂದೆ ಇದ್ದರೂ ಸಚಿನ್ ಯಾವತ್ತೂ ಶಿಸ್ತಿನ ಚೌಕಟ್ಟು ಮೀರಲಿಲ್ಲ’ ಎಂದು ಹಿರಿಯ ರೆಫರಿಯೊಬ್ಬರು ಹೇಳಿದ ಮಾತು ಈಗಲೂ ಪ್ರಸ್ತುತ.

ಇವತ್ತಿನ ಕ್ರಿಕೆಟ್‌ನಲ್ಲಿ ಹಣ ಹಾಗೂ ಹೆಸರು ಗಳಿಸಲು ಪೈಪೋಟಿ ಏರ್ಪಟ್ಟಿದೆ. ಅದಕ್ಕೆ ತಕ್ಕಂತೆ ಆಟಗಾರರಿಗೆ ಯಾವುದೇ ಹಂತದಲ್ಲಿಯೂ ಅನ್ಯಾಯ ಆಗದಂತೆ ಅಂಪೈರ್ ತೀರ್ಪು ಮರುಪರಿಶೀಲನೆ ವ್ಯವಸ್ಥೆ (ಯುಡಿಆರ್‌ಎಸ್) ಕೂಡ ಜಾರಿಯಲ್ಲಿದೆ. ಅಂಪೈರ್‌ಗಳಿಗೂ ಕಾಲಕ್ಕೆ ತಕ್ಕ ತರಬೇತಿ ನೀಡಲಾಗುತ್ತಿದೆ. ಆದರೂ ಇದೆಲ್ಲವನ್ನೂ ಮೀರಿ ತಪ್ಪುಗಳು ಘಟಿಸುತ್ತವೆ. ಅಂತಹ ಸಂದರ್ಭದಲ್ಲಿ ನಿಯಮದ ಚೌಕಟ್ಟಿನಲ್ಲಿಯೇ ಪ್ರತಿಭಟಿಸುವ ಹಕ್ಕು ಹಾಗೂ ಅವಕಾಶ ಆಟಗಾರರಿಗೆ ಇದೆ. ಇದ್ಯಾವುದನ್ನೂ ಮಾಡದೆ ಅನುಚಿತ ವರ್ತನೆಗೆ ಇಳಿಯುವುದು ಯಾರಿಗೂ ಶೋಭೆಯಲ್ಲ.

ಕ್ರೀಡಾಸ್ಫೂರ್ತಿಗೆ ಮಸಿ ಬಳಿಯುವ ಇಂತಹ ಘಟನೆಗಳು ಇದೇ ಮೊದಲೇನಲ್ಲ. ಇತ್ತೀಚೆಗಷ್ಟೇ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ ಹಾಗೂ ಲಖನೌ ಸೂಪರ್ ಜೈಂಟ್ಸ್ ತಂಡದ ಮೆಂಟರ್ ಗೌತಮ್ ಗಂಭೀರ್ ನಡುವಣ ಜಟಾಪಟಿ ದೊಡ್ಡ ಸುದ್ದಿಯಾಗಿತ್ತು.

ದಶಕದ ಹಿಂದೆ ವಿದೇಶದಲ್ಲಿ ನಡೆದ ಪಂದ್ಯದಲ್ಲಿ ಕೊಹ್ಲಿ, ಪ್ರೇಕ್ಷಕರಿಗೆ ಕೆಟ್ಟ ಸಂಜ್ಞೆ ತೋರಿ ಅವಮಾನಿಸಿದ್ದು ಹಾಗೂ ಇನ್ನೊಂದು ಪಂದ್ಯದಲ್ಲಿ ಪತ್ರಕರ್ತರೊಬ್ಬರೊಂದಿಗೆ ಜಗಳ ಕಾದಿದ್ದು ದೊಡ್ಡ ಸುದ್ದಿಯಾಗಿದ್ದವು. ಇತ್ತೀಚೆಗಷ್ಟೇ ಪಂದ್ಯವೊಂದರಲ್ಲಿ ಕೊಹ್ಲಿ ಅತಿರೇಕದ ಸಂಭ್ರಮ ತೋರಿ ಟೀಕೆಗೊಳಗಾಗಿದ್ದರು. ಅವರು ಅದ್ಭುತ ಆಟಗಾರನೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಅದಕ್ಕಾಗಿಯೇ ಅವರಿಗೆ ದೊಡ್ಡ ಅಭಿಮಾನಿ ಬಳಗವಿದೆ. ಅವರನ್ನು ಅನುಕರಿಸುವ ಎಳೆಯ ಆಟಗಾರರಿಗೂ ಅವರು ಆದರ್ಶಪ್ರಾಯರಾಗಬೇಕಲ್ಲವೇ?

ಹೋದ ವರ್ಷ ದಕ್ಷಿಣ ಆಫ್ರಿಕಾದಲ್ಲಿ ನಡೆದ ಟೆಸ್ಟ್ ಪಂದ್ಯವೊಂದರಲ್ಲಿ ‘11 ಆಟಗಾರರ ವಿರುದ್ಧ ಇಡೀ ದೇಶವೇ ಆಡುತ್ತಿದೆ’ ಎಂದು ಭಾರತದ ಕೆ.ಎಲ್. ರಾಹುಲ್ ಅವರು ಆತಿಥೇಯ ತಂಡವನ್ನು ವ್ಯಂಗ್ಯ ಮಾಡಿದ್ದು ಸ್ಟಂಪ್ ಮೈಕ್‌ನಲ್ಲಿ ಪ್ರತಿಧ್ವನಿಸಿತ್ತು. ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಕ್ರಿಕೆಟ್ ಬಾಂಧವ್ಯದ ಇತಿಹಾಸದ ಅರಿವು ಇಲ್ಲದಿದ್ದರೆ ಇಂತಹ ಅಪ್ರಬುದ್ಧ ನಡೆ ಖಚಿತ ಎಂದು ಹಲವು ಹಿರಿಯರು ಟೀಕಿಸಿದ್ದರು.

ಇಂತಹ ಪಿಡುಗು ಕ್ರಿಕೆಟ್‌ಗೆ ಮಾತ್ರ ಸೀಮಿತವಾಗಿಲ್ಲ. ಈಚೆಗೆ ಬೆಂಗಳೂರಿನಲ್ಲಿ ನಡೆದ ದಕ್ಷಿಣ ಏಷ್ಯಾ ಫುಟ್‌ಬಾಲ್ ಟೂರ್ನಿಯಲ್ಲಿ (ಸ್ಯಾಫ್) ಭಾರತ ತಂಡದ ಕೋಚ್ ಇಗೋರ್ ಸ್ಟಿಮ್ಯಾಚ್ ತಮ್ಮ ಅತಿರೇಕದ ವರ್ತನೆಗಳಿಂದ ಸುದ್ದಿಯಾದರು. ರೆಡ್ ಕಾರ್ಡ್ ಪಡೆದು ಫೈನಲ್ ಸೇರಿದಂತೆ ಮೂರು ಪಂದ್ಯಗಳಿಂದ ಅಮಾನತು ಆದರು. ಫ್ರಾನ್ಸ್ ಫುಟ್‌ಬಾಲ್ ತಾರೆ ಜಿನೆದಿನ್ ಜಿದಾನ್ ಅವರ ಕಾಲ್ಚಳಕ ಅದ್ಭುತವಾಗಿತ್ತು. ಆದರೆ 2006ರ ಫಿಫಾ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಜಿದಾನ್ ಇಟಲಿಯ ಮಾರ್ಟಿನೇಜ್ ಎದೆಗೆ ತಲೆಯಿಂದ ಗುದ್ದಿ ರೆಡ್ ಕಾರ್ಡ್ ಪಡೆದಿದ್ದನ್ನೇ ಈಗಲೂ ಬಹಳಷ್ಟು ಕ್ರೀಡಾಭಿಮಾನಿಗಳು ಮರೆತಿಲ್ಲ. ಬಾಕ್ಸಿಂಗ್ ದಿಗ್ಗಜ ಮೈಕ್ ಟೈಸನ್, ಫುಟ್‌ಬಾಲ್ ತಾರೆ ಡಿಯೆಗೊ ಮರಡೋನಾ ಸೇರಿದಂತೆ ಹಲವರು ನಿಯಮ ಮೀರಿದ ವರ್ತನೆಯಿಂದಲೂ ಸುದ್ದಿಯಾದವರು.

ಆದರೆ ಈಗ ಹರ್ಮನ್ ಅವರ ನಡವಳಿಕೆಯಿಂದಾಗಿ ಮಹಿಳಾ ಕ್ರಿಕೆಟ್ ಮೇಲೆ ಆಗುವ ದುಷ್ಪರಿಣಾಮದ ಬಗ್ಗೆಯೂ ಚರ್ಚೆಯಾಗುತ್ತಿದೆ. ಶಾಂತಾ ರಂಗಸ್ವಾಮಿ, ಮಿಥಾಲಿ ರಾಜ್ ಮತ್ತು ಜೂಲನ್ ಗೋಸ್ವಾಮಿ ಅವರ ನಂತರ ಭಾರತದ ವನಿತೆಯರ ಕ್ರಿಕೆಟ್ ರಂಗದ ತಾರೆಯಾಗಿ ಗುರುತಿಸಿಕೊಂಡವರು ಈ ಪಂಜಾಬಿ ಹುಡುಗಿ. ಪುರುಷರ ಕ್ರಿಕೆಟ್‌ಗೆ ಸಮನಾಗಿ ಬೆಳೆಯುವತ್ತ ಮುನ್ನುಗ್ಗುತ್ತಿರುವ ಮಹಿಳಾ ಕ್ರಿಕೆಟ್ ಅಭಿಯಾನಕ್ಕೆ ಅವರು ರಾಯಭಾರಿಯೂ ಹೌದು. ಆದರೆ ಇಂತಹ ಕೆಟ್ಟ ನಡವಳಿಕೆಯಿಂದಾಗಿ ಅಭಿಯಾನಕ್ಕೆ ಹಿನ್ನಡೆಯಾಗುವ ಆತಂಕವೂ ಇದೆ.

ಇವತ್ತಿನ ಡಿಜಿಟಲ್ ಯುಗದಲ್ಲಿ ‘ನಕಾರಾತ್ಮಕ ಪ್ರಚಾರ’ದಿಂದಲೂ ಲಾಭ ಗಿಟ್ಟಿಸುವ ಗೀಳು ಹೆಚ್ಚುತ್ತಿದೆ. ಆದರೆ ಇಂತಹ ಹಾದಿ ಕ್ರೀಡಾತಾರೆಗಳಿಗೆ ಶೋಭೆಯಲ್ಲ. ಆದ್ದರಿಂದ ಆಟದ ಜೊತೆಗೆ ಸಭ್ಯತೆಯ ಪಾಠವನ್ನೂ ಆಟಗಾರರಿಗೆ ಹೇಳಿಕೊಡುವ ಹೊಣೆ ಕೂಡ ಕ್ರಿಕೆಟ್ ಮತ್ತಿತರ ಕ್ರೀಡೆಗಳ ಆಡಳಿತ ಮಂಡಳಿಗಳಿಗೆ ಇದೆ. ಇಲ್ಲದಿದ್ದರೆ ಮುಂದೊಂದು ದಿನ ‘ಸಭ್ಯರ ಆಟ’ವೆಂಬ ಪಟ್ಟ ಕಳೆದುಕೊಳ್ಳುವ ಅಪಾಯವೂ ಇದೆ. ಕ್ರೀಡೆಗಿಂತ ಯಾರೂ ದೊಡ್ಡವರಲ್ಲ ಎಂಬ ಅರಿವು ಮೂಡಿಸುವುದೂ ತುರ್ತು ಅಗತ್ಯ.



ಚುರುಮುರಿ



ಮತ್ತೆ ಪ್ರಶಸ್ತಿ ವಾಪ್ಸಿ...

• ಆನಂದ

‘ಹಲೋ ಆನಂದ್, ಪೇಪರ್ ನೋಡಿದ್ರಾ?’ ಗೆಳೆಯ ಗೋಪಾಲ್‌ರ ಫೋನ್.

‘ಯಾಕೆ ಸಾರ್? ಟೊಮೆಟೊ ಬೆಲೆ ಕುಸಿತೇನು?’ ಎಂದೆ ಸಹಜ ಕುತೂಹಲದಿಂದ.

‘ಅದಲ್ಲಾ, ನಿಮಗೆ ಸಂಬಂಧಿಸಿದ್ದು’.

ಅರೆ ನನಗೆ! ಕುತೂಹಲ ಹೆಚ್ಚಾಯಿತು.

‘ಹೌದು. ನೀವು ಆಗಾಗ್ಗೆ ಪ್ರಶಸ್ತಿಗಳಿಗೆ ಅರ್ಜಿ ಹಾಕ್ತೀರಲ್ಲ...’

‘ಹೊಸ ಪ್ರಶಸ್ತಿ ಬಗ್ಗೆ ಪ್ರಕಟಣೆ ಇದೆಯೇನು? ನನಗೆ ಸೂಟ್ ಆಗುವಂತಹದ್ದು?’ ನಾನು ಮಧ್ಯದಲ್ಲೇ ಕೇಳಿದೆ.

‘ಅದೇನು ಟೆಂಡರ‍್ರೇ... ಮಂತ್ರಿಗಳ ಮಗನಿಗೆ ಮಾತ್ರ ದಕ್ಕುವಂತಹದ್ದು. ಅದಲ್ಲ ಸರ್ ಅವಾರ್ಡ್‌ಗಳಿಗೆ ಸಂಬಂಧಿಸಿದ್ದು’ ಎಂದಾಗ ಕುತೂಹಲ ಇಮ್ಮಡಿಸಿತು. ಆದರೆ ಈತ ವಿಷಯಕ್ಕೆ ಬರದೆ ಸತಾಯಿಸ್ತಾ ಇದಾರಲ್ಲ ಎಂದು ಖೇದವಾಯಿತು.

‘ಏನು ವಿಷಯ ತಿಳಿಸಿ ಸಾರ್’ ಎಂದೆ.

‘ಮುಂದಿನ ಸಲ ನೀವು ಪ್ರಶಸ್ತಿಗೆ ಅರ್ಜಿ ಹಾಕೋವಾಗ ಅದರ ಜತೆಗೆ ‘ನಾನು ಯಾವುದೇ ಕಾರಣಕ್ಕೆ ಪ್ರಶಸ್ತಿಯನ್ನು ವಾಪಸ್ ಮಾಡೊಲ್ಲ’ ಎಂದು ಪ್ರತ್ಯೇಕವಾಗಿ ಒಂದು ಹಾಳೇಲಿ ಬರೆದು ಜತೆಗೆ ಸೇರಿಸಿ’ ಎಂದರು. ನನಗೆ ಕುತೂಹಲದ ಬದಲು ಆಶ್ಚರ್ಯ ಆಗಲಿಕ್ಕೆ ಹತ್ತಿತು.

ಅಲ್ಲ, ನನಗೆ ಪ್ರಶಸ್ತಿ ಇನ್ನೂ ಬಂದೇ ಇಲ್ಲ, ಬರುವ ಗ್ಯಾರಂಟೀನೂ ಇಲ್ಲ. ಆದರೆ ಅದನ್ನು ವಾಪಸ್ ಮಾಡೋದಿಲ್ಲ ಅಂತ ಮುಚ್ಚಳಿಕೆ ಬರೆದು ಕೊಡಬೇಕೆ? ಗೋಪಾಲ್ ನನ್ನ ಕಾಲೆಳೆಯುತ್ತಿದ್ದಾರೆಯೆ? ಛೆ! ಅಂತಹ ವ್ಯಕ್ತಿ ಅಲ್ಲ ಅವರು. ಮತ್ತೆ ಈ ಸೂಚನೆ ಯಾಕೆ? ಕೇಳೇಬಿಟ್ಟೆ.

‘ಅದೇ ಸಾರ್, ಹೊಸ ನಿಯಮ ಬರಲಿದೆ. ಅದರ ಪ್ರಕಾರ, ಸರ್ಕಾರ ಕೊಟ್ಟ ಪ್ರಶಸ್ತಿ ವಾಪಸ್ ಮಾಡೋ ಹಾಗಿಲ್ಲ. ಪ್ರಶಸ್ತಿ ಬೇಡದಿದ್ದರೆ ಮೊದಲೇ ಹೇಳಬೇಕು. ಕೊಟ್ಟ ಮೇಲೆ ತಿರಸ್ಕರಿಸಿದರೆ ಮುಂದೆ ಯಾವುದೇ ಪ್ರಶಸ್ತಿಗೆ ನಿಮ್ಮ ಹೆಸರು ಪರಿಗಣಿಸುವುದಿಲ್ಲ. ಬ್ಲ್ಯಾಕ್ ಲಿಸ್ಟಿಗೆ ಸೇರಿಸುತ್ತಾರೆ. ಆದ್ದರಿಂದ ಅರ್ಜಿ ಸಲ್ಲಿಸುವಾಗ, ನಂತರ ತಿರಸ್ಕರಿಸುವುದಿಲ್ಲ ಎಂಬ ಕೇವಿಯಟ್ ಹಾಕಬೇಕಂತೆ’.

‘ಥ್ಯಾಂಕ್ಸ್ ಗೋಪಾಲ್ ಅಲರ್ಟ್ ಮಾಡಿದ್ದಕ್ಕೆ. ಆ ಅರ್ಜೀನ ತಯಾರು ಮಾಡ್ತೀನಿ’.

ಪ್ರಶಸ್ತೀನ ಯಾಕೆ ಬೇಡ ಅನ್ನಬೇಕು, ನನ್ನಂತಹವರಿಗೆ ಬರೋದೇ ಕಷ್ಟವಾಗಿರುವಾಗ?

ಸಂಗತ

ಸಂಕೀರ್ಣ ಸವಾಲು, ನಡುಮಾರ್ಗದ ನಿರೀಕ್ಷೆ

ಅರಣ್ಯ ಸಂರಕ್ಷಣೆ ಮತ್ತು ಬಡವರ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ನಡುಮಾರ್ಗವೊಂದನ್ನು ಕಂಡುಕೊಳ್ಳಬೇಕಾದ ತುರ್ತು ಅಗತ್ಯವಿದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಪರಿಸರ ಸಮತೋಲನ ಮತ್ತು ಜೈವಿಕ ಸಂಪತ್ತಿನ ಪೋಷಣೆಯ ದಿಸೆಯಲ್ಲಿ ಹೇಗಾದರೂ ಮಾಡಿ ಒಂದಷ್ಟು ಕಾಡನ್ನು ಉಳಿಸಿಕೊಳ್ಳಲೇಬೇಕಾದ ಒತ್ತಡದಲ್ಲಿದೆ ವರ್ತಮಾನ. ಆದರೆ ಒತ್ತುವರಿ ಸಮಸ್ಯೆಯಿಂದಾಗಿ ಮಲೆನಾಡ ಕಾಡು ಗೊಂದಲದ ಗೂಡು. ಲಾಗಾಯ್ತಿನಿಂದ ಉಳ್ಳವರು ಮತ್ತು ಇಲ್ಲದವರ ನಡುವೆ ದೊಡ್ಡ ಕಂದಕವೇ ಇದೆ. ಫಲವತ್ತಾದ ಹತ್ತಾರು ಎಕರೆ ತೋಟಗದ್ದೆಗಳ ಜಮೀನ್ದಾರರು ಕಾಡುಗುಡ್ಡಗಳಿಗೇ ಬೇಲಿ ಹಾಕಿ ಜೈಸಿಕೊಂಡ ಶಕ್ತರು. ಆದರೆ ಸಣ್ಣ, ಅತಿಸಣ್ಣ ಸಾಗುವಳಿದಾರರಿಗೆ ಕಣ್ಕಟ್ಟಿ ಬಿಟ್ಟಂತಹ ಪರಿಸ್ಥಿತಿ.

ನಾಡಿಗೆ ಬೆಳಕು ನೀಡಲು ಬದುಕು ಕಳೆದುಕೊಂಡ ಶರಾವತಿ ನಿರಾಶ್ರಿತರ ಬವಣೆ ಬಗೆಹರಿದಿಲ್ಲ. ವರಾಹಿ-ಚಕ್ರಾ, ತುಂಗಾ ಮತ್ತು ಭದ್ರಾ ನದಿ ಯೋಜನೆಗಳಲ್ಲಿ ನಿರಾಶ್ರಿತರಾದವರೂ ತಮ್ಮ ಮನೆ, ಊರು, ಜಾಗ, ಬದುಕು-ಬಾಂಧವ್ಯ, ಆಚರಣೆ-ಸಂಸ್ಕೃತಿಗಳನ್ನೆಲ್ಲ ಬಲಿ ಕೊಟ್ಟಾಗಿದೆ.

ಅರಣ್ಯ ಪ್ರದೇಶವಾದ ಪಶ್ಚಿಮಘಟ್ಟದ ತಪ್ಪಲಲ್ಲಿ ನೈಜ ಅರಣ್ಯ ರಕ್ಷಕರೆಂದರೆ ಸಣ್ಣ ರೈತರು ಹಾಗೂ ಬುಡಕಟ್ಟು ಜನಾಂಗದವರು. ಅವರದ್ದು ಕಾಡಿನೊಟ್ಟಿಗೆ ಹೊಕ್ಕುಬಳಕೆಯ ಸಂಬಂಧ. ಹಾಗಾಗಿ ಸದ್ಯ ಶುದ್ಧ ಪರಿಸರ ಅಂತ ಉಳಿದಿರುವುದು ಹಳ್ಳಿಗಳಲ್ಲಿ ಮಾತ್ರ. ಆದರೆ ಕಾಡುಪ್ರಾಣಿಗಳ ಉಪಟಳದಿಂದ ಪೈರು, ಫಸಲನ್ನು ಕಾಪಾಡಿಕೊಳ್ಳುವಲ್ಲಿ ಅವರದು ಮುಗಿಯದ ಗೋಳು, ಪಡಿಪಾಟಲು.

ಸಣ್ಣಪುಟ್ಟ ರೈತರಿಗೆ ಭತ್ತ ಬೆಳೆಯಲು ಅಲ್ಲಿ ಎಕರೆಗೆ ತಗಲುವ ವಾರ್ಷಿಕ ವೆಚ್ಚಕ್ಕಿಂತಲೂ ಆದಾಯ ಕಡಿಮೆ! ಅನಿಶ್ಚಿತ ಧಾರಣೆಯ ವಾಣಿಜ್ಯ ಬೆಳೆಯಾದ ಶುಂಠಿಯು ನಮ್ಮ ಕಾಡುಗುಡ್ಡಗಳನ್ನು ಬಯಲುಗೊಳಿಸಿ ನೆಲಕ್ಕೆ ವಿಷವಿಕ್ಕಿದೆ. ಎಂಪಿಎಂ ಕಾರ್ಖಾನೆಯ ಅಕೇಶಿಯ ಬೆಳೆಗೆ ಮಲೆನಾಡು ಬರಡಾಗಿದೆ. ಅಡಿಕೆಯೊಂದೇ ಮಲೆನಾಡಿನಲ್ಲಿ ಮರ್ಯಾದೆಯ ಬೆಳೆ! ಹಾಗೆಂದೇ ತುಂಡು ಜಮೀನಿನವರು ಕೂಡ ಅಷ್ಟಿಷ್ಟು ಒತ್ತುವರಿ ಮಾಡಿ ಅಡಿಕೆ ಗಿಡಗಳನ್ನು ಊರಲೇಬೇಕಾದ ಅನಿವಾರ್ಯ ಇಲ್ಲಿಯದು!

ಶತಮಾನಗಳ ಕಾಲ ಜಮೀನ್ದಾರರೆಂಬ ತುಂಡರಸರ ಮನೆಗಳಲ್ಲಿ ಜೀತಕ್ಕಿದ್ದ ತಲೆಮಾರುಗಳು ಇಲ್ಲೀಗ ಕಾಡಂಚಿನ ಸಣ್ಣ ಜಾಗದಲ್ಲಿ ಬೇಲಿ ಹಾಕಿಕೊಂಡು ಸ್ವತಂತ್ರ ಬದುಕಿಗೆ ಹಂಬಲಿಸುತ್ತಿವೆ. ಹೀಗೆಲ್ಲಾ ಪುನರ್ವಸತಿ ಕಂಡುಕೊಂಡವರ ಪಾಲಿಗೆ ವರ್ಗೀಕೃತ ವಿಭಜನೆ, ಡಿನೋಟಿಫಿಕೇಷನ್, ಭೂಒತ್ತುವರಿ ನಿರ್ಬಂಧ ಕಾಯ್ದೆಗಳು ಬದುಕು ಕಸಿಯುವ ಕರಾಳ ಶಾಸನವಾಗಿ ಪರಿಗಣಿತವಾಗುತ್ತಿವೆ.

ಭೂಕಬಳಿಕೆಗೆ ಕಡಿವಾಣ ಹಾಕಲು ರಚಿಸಲಾಗಿದ್ದ ಎ.ಟಿ.ರಾಮಸ್ವಾಮಿ ಮತ್ತು ವಿ. ಬಾಲಸುಬ್ರಮಣಿಯನ್ ಸಮಿತಿಯ ವರದಿಗಳ ಆಧಾರದ ಮೇಲೆ ಶಾಸನ ರಚಿಸಿ, ಸರ್ಕಾರಿ ಭೂಮಿ ಒತ್ತುವರಿಯನ್ನು ತೆರವುಗೊಳಿಸುವ ನಿಲುವಿಗೆ ಬಲ ತುಂಬಲಾಗಿತ್ತು. ಆದರೆ ಕರ್ನಾಟಕ ಭೂಕಬಳಿಕೆ ನಿಷೇಧ ಕಾಯ್ದೆಯ ಸೆಕ್ಷನ್ 192/ಎ ಅನ್ನು ಅವೈಜ್ಞಾನಿಕವಾಗಿ ಸಾಮಾನ್ಯೀಕರಿಸಿ ರಾಜ್ಯವ್ಯಾಪಿಯಾಗಿ ಅಳವಡಿಸಿಕೊಂಡದ್ದು, ವಿಶೇಷವಾಗಿ ಮಲೆನಾಡು ಭಾಗದ ಬಡಜನರ ನಿದ್ದೆಗೆಡಿಸಿತ್ತು.

ಹೀಗೆ ಅಮಾಯಕರ ಬದುಕುವ ಹಕ್ಕನ್ನೇ ಕಿತ್ತುಕೊಳ್ಳುವ ಕಾನೂನಿಗೆ ಇತ್ತೀಚೆಗೆ ತಂದ ತಿದ್ದುಪಡಿಯಿಂದ ಬಿಕ್ಕಟ್ಟು ಸದ್ಯ ಒಂದು ಹಂತಕ್ಕೆ ಇತ್ಯರ್ಥವಾಗಿದೆ. ಆದರೆ ದಿನಗೂಲಿಯನ್ನಷ್ಟೇ ನಂಬಿ ಬದುಕು ಕಟ್ಟಿಕೊಂಡಿದ್ದ ಬಡ ಕೂಲಿಕಾರ್ಮಿಕರನ್ನೂ ನೆಲದ ಮೂಲನಿವಾಸಿಗಳಾದ ಗಿರಿಜನರನ್ನೂ ನಾಡಿಗೆ ನೀರು, ಬೆಳಕು ನೀಡುವ ಯೋಜನೆಗಳಲ್ಲಿ ನಿರಾಶ್ರಿತರಾದ ಕೆಳವರ್ಗದ ಶ್ರಮಿಕರನ್ನೂ 1963ರ ಕರ್ನಾಟಕ ಅರಣ್ಯ ಕಾಯ್ದೆಯ ಸೆಕ್ಷನ್ 64/ಎ ಪ್ರಕಾರ ಅರಣ್ಯ ಒತ್ತುವರಿದಾರರು, ಭೂಕಬಳಿಕೆದಾರರು ಎಂದು ಆರೋಪಿಸಿ, ತಲೆಮಾರುಗಳಿಂದ ಸಾಗುವಳಿ ಮಾಡಿಕೊಂಡು ಬಂದ ತುಂಡುಭೂಮಿಯ ಗದ್ದೆ-ತೋಟಗಳನ್ನೇ ಅರಣ್ಯ ಇಲಾಖೆಯು ನಿರ್ದಯವಾಗಿ ಸವರಿಹಾಕಿದ ಉದಾಹರಣೆಗಳಿವೆ! ಅರಣ್ಯ ಸಂರಕ್ಷಣೆ ಮತ್ತು ಮಾನವೀಯ ನೆಲೆಯಲ್ಲಿ ಅರಣ್ಯವಾಸಿಗಳ ಹಕ್ಕು ರಕ್ಷಣೆಯ ಹೊಣೆಯನ್ನು ಆಳುವವರು ನಾಜೂಕಾಗಿ ನಿಭಾಯಿಸಬೇಕಿದೆ. ಒತ್ತುವರಿ, ಬಗರ್‌ಹುಕುಂ ಸಮಸ್ಯೆಗೆ ಶೀಘ್ರ ಪರಿಹಾರ ಹುಡುಕಲೇಬೇಕಿದೆ.

ಹೌದು, ಸರ್ಕಾರಿ ಭೂಮಿ ಮತ್ತು ಅರಣ್ಯ ಪ್ರದೇಶವನ್ನು ಉಳಿಸಬೇಕಾದ್ದು ಸರ್ಕಾರದ ಕರ್ತವ್ಯ. ಅರಣ್ಯ ಸಂರಕ್ಷಣೆ ಮತ್ತು ಒತ್ತುವರಿ ತೆರವು ಕುರಿತ ಅರಣ್ಯ ಸಚಿವರ ಇತ್ತೀಚಿನ ಹೇಳಿಕೆ ಹಾಗೂ ಅದೇ ಹೊತ್ತಿಗೆ ಬಗರ್‌ಹುಕುಂ ಸಮಸ್ಯೆಗೆ ಇತಿಶ್ರೀ ಹಾಡುವ ಮುಖ್ಯಮಂತ್ರಿಯವರ ಬದ್ಧತೆಯ ಮಾತಿಗೆ ಅರ್ಥ ಬರಬೇಕು. ಈ ದಿಸೆಯಲ್ಲಿ ಬಡವರ ಹಿತರಕ್ಷಣೆ ಮತ್ತು ಪರಿಸರ ರಕ್ಷಣೆಗೆ ನಡುಮಾರ್ಗವೊಂದನ್ನು ಕಂಡುಕೊಳ್ಳುವ ತುರ್ತು ಅಗತ್ಯವಿದೆ. ಬಗರ್‌ಹುಕುಂ ಸಾಗುವಳಿದಾರರ ಕುಟುಂಬಕ್ಕೆ ಗರಿಷ್ಠ ಜಮೀನು ಮಿತಿಗೊಳಿಸಿ ಹಕ್ಕುಪತ್ರ ನೀಡಿ, ಮಿಕ್ಕಿದ್ದನ್ನು ವಶಪಡಿಸಿಕೊಂಡು ಅರಣ್ಯೀಕರಣಕ್ಕೆ ಸರ್ಕಾರ ಮುಂದಾಗಬೇಕೆಂಬುದು ಬಹುಜನರ ಒತ್ತಾಯ. ಈ ಬಗ್ಗೆ ವ್ಯಾಪಕ ಚರ್ಚೆಯೊಂದಿಗೆ ಶೀಘ್ರ ನಿರ್ಧಾರ ತೆಗೆದುಕೊಂಡಲ್ಲಿ ಎಲ್ಲವೂ ಕ್ಷೇಮ.

‘ಅರಣ್ಯ ರಕ್ಷಣೆ’ ಎಂಬುದು ಹಗ್ಗದ ಮೇಲಿನ ನಡಿಗೆಯಂತಿರುವ ಶತಮಾನದ ಸಂಕೀರ್ಣ ಸವಾಲು. ಇದಕ್ಕೆ ಸ್ಥಳೀಯರನ್ನೂ ಒಳಗೊಂಡು ಸಂವೇದನಾಶೀಲ ಮನಃಸ್ಥಿತಿಯಲ್ಲಿ ಪರಿಹಾರ ಹುಡುಕಬೇಕಾದ ಇಚ್ಛಾಶಕ್ತಿಯನ್ನು ಸರ್ಕಾರ ತೋರಬೇಕು.

ವಾಚಕರ ವಾಣಿ

ಕನ್ನಡ ಕಲಿಕೆಗೆ ಬಲ ತುಂಬೋಣ

ಕಲಿಕೆಯಲ್ಲಿ ಕನ್ನಡ ಮಾಧ್ಯಮ ಕುರಿತ ವಸಂತ ಶೆಟ್ಟಿ ಅವರ ಲೇಖನ (ಪ್ರ.ವಾ., ಜುಲೈ 26) ಮನನೀಯವಾಗಿದೆ. ಕಲಿಕಾ ಮಾಧ್ಯಮ ಕುರಿತು 2014ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದ ನಂತರ ಸ್ವಲ್ಪ ಕಾಲ ಚರ್ಚೆ, ಚಿಂತನೆಗಳು ನಡೆದು ನಂತರ ಎಲ್ಲವೂ ತಣ್ಣಗಾದವು. ಈ ಮಧ್ಯೆ ಸರ್ಕಾರವೇ ಮುಂದಾಗಿ, ವಿವೇಚನೆ ಇಲ್ಲದೆ ಹಲವಾರು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆದು ಇಂಗ್ಲಿಷ್‌ಗೆ ಮಣೆ ಹಾಕಿತು. ಸರ್ಕಾರಗಳಿಗೆ ಭಾಷೆಗಳ ಅಳಿವು- ಉಳಿವು, ಆ ಮೂಲಕ ಒಂದು ನಾಡು, ಒಂದು ದೇಶವಾಗಿ ನಮ್ಮ ಒಟ್ಟಾರೆ ಅಸ್ಮಿತೆಯ ಅಳಿವು- ಉಳಿವು ಕುರಿತ ವಿಚಾರಗಳು ತಲೆಗೆ ಹೋಗುವುದೇ ಇಲ್ಲ. ಅವುಗಳದು ಯಾವಾಗಲೂ ವೋಟ್ ಆಧಾರಿತ ನಿಲುವು. ಕೋರ್ಟುಗಳದ್ದು ಒಮ್ಮೊಮ್ಮೆ ಒಂದೊಂದು ರೀತಿಯ ನಿಲುವು. ಮಕ್ಕಳನ್ನು ಹೇಗಾದರೂ ವಿದೇಶಕ್ಕೆ ಕಳಿಸಬೇಕು, ಅದಕ್ಕೆ ಆಂಗ್ಲ ಮಾಧ್ಯಮ ಕಲಿಕೆಯೇ ಸೋಪಾನ ಎಂಬ ಭ್ರಮೆ ಪಾಲಕರದು.

ಎನ್‌ಇಪಿ ಮೂಲಕ ದೇಸಿ ಭಾಷೆಗಳಿಗೆ ಬಲ ನೀಡಲಾಗುವುದು ಎಂದು ಹೇಳುತ್ತ ಬರಲಾಗಿದ್ದರೂ ವಾಸ್ತವದಲ್ಲಿ ಯಾವ ಬದಲಾವಣೆಯೂ ಆಗಿಲ್ಲ ಮತ್ತು ಆಗುವುದಿಲ್ಲ. ದೇಸಿ ಭಾಷೆಗಳಿಗೆ ಸಾಂವಿಧಾನಿಕ ಬಲ ನೀಡುವ ಅವಕಾಶ ಇದ್ದರೂ ಕೇಂದ್ರ ಸರ್ಕಾರ ಹಾಗೆ ಮಾಡದೇ ಸಂಸ್ಕೃತ, ಹಿಂದಿ ಭಾಷೆ ಹೇರುವ ದಿಸೆಯಲ್ಲಿಯೇ ಹೆಚ್ಚು ಉತ್ಸಾಹ ತೋರಿದೆ. ಈಗ ರಾಜ್ಯ ಸರ್ಕಾರವಾದರೂ ತನ್ನ ಜವಾಬ್ದಾರಿ ಅರಿತು ರಾಜ್ಯಭಾಷೆಗೆ ಆಗುತ್ತಿರುವ ಹಾನಿಯನ್ನು ತಪ್ಪಿಸಲು, ಕನ್ನಡ ಮಾಧ್ಯಮದಲ್ಲಿ ಕಲಿಕೆಗೆ ವಿವಿಧ ರೀತಿಯ ಉತ್ತೇಜನ ನೀಡಬೇಕು ಮತ್ತು ರಾಜ್ಯದ ಎಲ್ಲಾ ಕನ್ನಡೇತರ ಮಾಧ್ಯಮ ಶಾಲೆಗಳಲ್ಲಿ ಕನ್ನಡವನ್ನು ಪ್ರಥಮ ಭಾಷೆಯಾಗಿ ಬೋಧಿಸುವುದನ್ನು ಕಡ್ಡಾಯ ಮಾಡಬೇಕು. ಕನ್ನಡ ಕಲಿಕೆಯನ್ನು ಉಳಿಸಿಕೊಳ್ಳುವ ದಿಸೆಯಲ್ಲಿ ಈ ಬಗೆಯ ಗಂಭೀರ ಪ್ರಯತ್ನಗಳು ಆಗಬೇಕು.

ವೆಂಕಟೇಶ ಮಾಚಕನೂರ, ಧಾರವಾಡ

ದರ ಹೆಚ್ಚಳ ಮತ್ತು ರಸ್ತೆಬದಿ ಅಂಗಡಿ

ಹೋಟೆಲ್ ತಿನಿಸಿನ ದರಗಳು ಆಗಸ್ಟ್ ಒಂದರಿಂದ ಹೆಚ್ಚಲಿರುವುದರಿಂದ ದಿನನಿತ್ಯ ಹೋಟೆಲ್ ಅನ್ನೇ ಆಧರಿಸಿರುವವರಿಗೆ ತೊಂದರೆ ಆಗುವುದು ಸಹಜ. ಆದರೆ, ಇದರಿಂದ ರಸ್ತೆಬದಿ ತಿಂಡಿಯಂಗಡಿ ವ್ಯಾಪಾರಿಗಳಿಗೆ ಲಾಭವಾಗಬಹುದು. ದೊಡ್ಡ ಹೋಟೆಲ್‌ಗಳು ದರ ಹೆಚ್ಚಿಸುವಂತೆ ಅವರೇನೂ ಪ್ರತಿ ಸಲ ತಿನಿಸುಗಳ ದರ ಹೆಚ್ಚಿಸುವುದಿಲ್ಲ. ಜನಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ದೊರಕುವ ಈ ಆಹಾರವು ಪೌಷ್ಟಿಕಾಂಶದಲ್ಲಿಯೇ ಆಗಲಿ, ಶುಚಿತ್ವದಲ್ಲಿಯೇ ಆಗಲಿ ಹೋಟೆಲ್‌ಗಳ ಜೊತೆ ಹೋಲಿಸಿದಾಗ ಕಡಿಮೆಯೇನೂ ಇರದು. ರಸ್ತೆಬದಿಯ ಈ ಅಂಗಡಿಗಳು, ಹೋಟೆಲ್‌ಗಳ ದರ ಹೆಚ್ಚಳವನ್ನು ತಮಗೆ ಅನುಕೂಲಕರವಾಗಿ ಬಳಸಿಕೊಳ್ಳಬಹುದು. ಇದರಿಂದ ಜನರಿಗೂ ಉಪಯೋಗ ಆಗುವುದರಲ್ಲಿ ಸಂಶಯವಿಲ್ಲ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಫೋನ್ ಬ್ಯಾಂಕಿಂಗ್: ಉತ್ಪ್ರೇಕ್ಷಿತ ಹೇಳಿಕೆ

‘ಫೋನ್ ಬ್ಯಾಂಕಿಂಗ್’ ಹಿಂದಿನ ಸರ್ಕಾರದ ಅತಿದೊಡ್ಡ ಹಗರಣಗಳಲ್ಲಿ ಒಂದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರೋಜ್‌ಗಾರ್ ಮೇಳದಲ್ಲಿ ಇತ್ತೀಚೆಗೆ ಆರೋಪಿಸಿರುವುದು (ಪ್ರ.ವಾ., ಜುಲೈ 22) ಉತ್ಪ್ರೇಕ್ಷಿತ ಅರ್ಧಸತ್ಯ. ಫೋನ್ ಬ್ಯಾಂಕಿಂಗ್ ವ್ಯವಸ್ಥೆಯು ಯುಪಿಎ ಆಡಳಿತಕ್ಕೆ ಮೊದಲೂ ಇತ್ತು, ಈಗಲೂ ಬೇರೆ ರೂಪದಲ್ಲಿ ಕೆಲವು ಬ್ಯಾಂಕ್‌ಗಳಲ್ಲಿ ಉಳಿದುಕೊಂಡಿದೆ. ಉನ್ನತ ಅಧಿಕಾರಿಗಳು ಬಾಹ್ಯ ಒತ್ತಡ ಇರದೇ ಇದ್ದಾಗಲೂ ತಮಗೆ ಬೇಕಾದವರಿಗೆ ಭಾರಿ ಮೊತ್ತದ ಸಾಲ ನೀಡಿರುವ ಪ್ರಕರಣಗಳು ಆಮೇಲೆ ಪತ್ತೆಯಾಗಿವೆ. ‘ಅವರಿಂದಾಗಿ ನಾಶವಾಗಿತ್ತು, ನಾವು ಬಂದು ಲಾಭಕ್ಕೆ ತಂದಿದ್ದೇವೆ’ ಎಂಬ ಹೇಳಿಕೆಯು ಚುನಾವಣಾ ಪ್ರಚಾರಕ್ಕೆ ಸೂಕ್ತವಾದೀತು. ಆದರೆ ಬ್ಯಾಂಕಿಂಗ್ ಕುರಿತ ವಿಷಯಗಳನ್ನು ರಾಜಕೀಯಗೊಳಿಸಬಾರದು. ಬ್ಯಾಂಕುಗಳು ಉತ್ತಮ ಸ್ಥಿತಿಗೆ ಬಂದಿರುವುದಕ್ಕೆ ಅವುಗಳ ಶ್ರಮ ಹಾಗೂ ಆರ್‌ಬಿಐನ ಕೆಲ ಕ್ರಮಗಳು ಕಾರಣ. ಕೇಂದ್ರ ಸರ್ಕಾರವು ಬಂಡವಾಳದ ಬೆಂಬಲ ನೀಡಿದೆ, ನಿಜ. ಆದರೆ, ಅದು ಮಾಡಬೇಕಾದ ಕೆಲಸ ಇನ್ನೂ ಇದೆ. ಗರ್ವದಿಂದ ಬೀಗುವ ಹೇಳಿಕೆಗಳು ಅನಗತ್ಯ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಮಳೆ ಆರ್ಭಟ: ಇರಲಿ ಸನ್ನದ್ಧ ಸ್ಥಿತಿ

ರಾಜ್ಯದಲ್ಲಿ ಮಳೆಯ ಆರ್ಭಟದಿಂದಾಗಿ ನದಿಗಳು ಅಪಾಯದ ಮಟ್ಟ ಮೀರಿ ಅನಾಹುತ ಸೃಷ್ಟಿಸುವ ಮೊದಲೇ ಸರ್ಕಾರ ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ. ಕೆಲವೆಡೆ ಸರ್ಕಾರಿ ಶಾಲೆ, ಆಸ್ಪತ್ರೆ, ಕಚೇರಿ ಕಟ್ಟಡಗಳು ಮಳೆಯಿಂದ ಸೋರುತ್ತಿವೆ. ಅಲ್ಲಿ ಅವಘಡ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಬೇಕಿದೆ.

ರಾಜ್ಯದಲ್ಲಿ ಬಹುತೇಕ ಕೆರೆಗಳು ಖಾಲಿಯಾಗಿವೆ. ಏತ ನೀರಾವರಿ ಮೂಲಕ ನದಿಗಳಿಂದ ಕೆರೆ ತುಂಬಿಸುವ ಕಾರ್ಯ ಸಣ್ಣಪುಟ್ಟ ತಾಂತ್ರಿಕ ದೋಷಗಳಿಂದ ನನೆಗುದಿಗೆ ಬಿದ್ದಿದೆ. ಅವುಗಳ ಕಡೆ ಸ್ವಲ್ಪ ಗಮನಹರಿಸಿದರೆ ಮಳೆಗಾಲದಲ್ಲಿ ವ್ಯರ್ಥವಾಗಿ ಹರಿದುಹೋಗುವ ನದಿ ನೀರನ್ನು ಏತ ನೀರಾವರಿ ಮೂಲಕ ಕೆರೆಗಳಿಗೆ ತುಂಬಿಸಬಹುದು. ಆಗ ಅಂತರ್ಜಲ ಸಮೃದ್ಧಿಯಾಗುತ್ತದೆ. ರೈತರ ಬದುಕು ಹಸನಾಗುತ್ತದೆ. ಸರ್ಕಾರವು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಆಯಾ ಶಾಸಕರ ಮುಖಾಂತರ ಅಧಿಕಾರಿಗಳನ್ನು ಈ ತುರ್ತು ಕಾರ್ಯಗಳಿಗೆ ಸನ್ನದ್ಧರಾಗಿರುವಂತೆ ಸೂಚಿಸುವುದು ಅವಶ್ಯವಾಗಿದೆ.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ಜೆಡಿಎಸ್ ಏಕಾಂಗಿ ಹೋರಾಟ: ಅಸ್ಮಿತೆಯ ಸವಾಲು

2024ರ ಲೋಕಸಭಾ ಚುನಾವಣೆಯಲ್ಲಿ ತಮ್ಮ ಪಕ್ಷವನ್ನು ಯಾವ ಮೈತ್ರಿಕೂಟಕ್ಕೂ ಸೇರಿಸದೆ ಏಕಾಂಗಿಯಾಗಿ ಹೋರಾಟ ಮಾಡಲು ನಿರ್ಧರಿಸಿರುವ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರ ನಿಲುವು ಸ್ವಾಗತಾರ್ಹ. ಇದು, ಜೆಡಿಎಸ್ ಪಕ್ಷದ ಜಾತ್ಯತೀತ ಅಸ್ಮಿತೆಯನ್ನು ಎತ್ತಿ ತೋರಿಸುತ್ತದೆ ಹಾಗೂ ಕನ್ನಡಿಗರ ಸ್ವಾಭಿಮಾನದ ಪ್ರತೀಕವೂ ಆಗಿದೆ. ಜೊತೆಗೆ, ಉತ್ತರ ಭಾರತದವರಿಗೆ ನಮ್ಮ ರಾಜ್ಯದ ಸವಾಲು ಕೂಡ!

ಪ್ರೊ. ಶಿವರಾಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಏಕರೂಪ ನಾಗರಿಕ ಸಂಹಿತೆ ಚರ್ಚೆ

ವಾರಸುದಾರಿಕೆ ಮತ್ತು ಉತ್ತರಾಧಿಕಾರ ಹಕ್ಕುಗಳಿಗೆ ಏಕರೂಪ...

• ಜಯಸಿಂಹ ಆರ್.

ಲಿಂಗಭೇದವಿಲ್ಲದೇ ದೇಶದ ಎಲ್ಲಾ ನಾಗರಿಕರಿಗೆ ಏಕರೂಪದ ಹಕ್ಕು ಮತ್ತು ಅವಕಾಶಗಳನ್ನು ನೀಡುವುದು ಏಕರೂಪ ನಾಗರಿಕ ಸಂಹಿತೆಯ ಉದ್ದೇಶ ಎಂದು ಸಂವಿಧಾನ ರಚನಾಕಾರರು, ಸಂವಿಧಾನ ರಚನಾ ಸಭೆಯಲ್ಲಿ ಹಲವು ಬಾರಿ ಹೇಳಿದ್ದಾರೆ. ಏಕರೂಪದ ಕಾನೂನು ಅಗತ್ಯವಿಲ್ಲ ಎಂದು ಸಂಸತ್ತಿನ ಕೆಲವು ಸದಸ್ಯರು ಒತ್ತಾಯಿಸಿದರೂ, ಮಹಿಳೆಯರಿಗೆ ಸಮಾನ ಅವಕಾಶ ನೀಡುವ ಉದ್ದೇಶದಿಂದ ಏಕರೂಪ ನಾಗರಿಕ ಸಂಹಿತೆ ಅತ್ಯಗತ್ಯ ಎಂದು ಕೆ.ಎಂ.ಮುನ್ಷಿ ಅವರು 1948ರ ನವೆಂಬರ್ 23ರಂದು ನಡೆದಿದ್ದ ಚರ್ಚೆಯ ವೇಳೆ ಹೇಳಿದ್ದರು.

ಏಕರೂಪ ನಾಗರಿಕ ಸಂಹಿತೆಯು ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆ ಎಂದು ಸಂವಿಧಾನ ರಚನಾ ಸಭೆಯಲ್ಲಿ ಕೆಲವು ಮುಸ್ಲಿಂ ಪ್ರತಿನಿಧಿಗಳು ಪ್ರತಿಪಾದಿಸಿದ್ದರು. ಈ ಪ್ರತಿಪಾದನೆಯನ್ನು ನಿರಾಕರಿಸಿದ್ದ ಮುನ್ಷಿ ಅವರು, 'ಕೆಲವು ಹಿಂದೂಗಳಿಗೂ ಈ ಏಕರೂಪ ನಾಗರಿಕ ಕಾನೂನು ಇಷ್ಟವಿಲ್ಲ ಎಂದು ನನಗೆ ತಿಳಿದಿದೆ. ಯಾಕೆಂದರೆ, ಅವರು ಸಹ ನಮ್ಮ ಮುಸ್ಲಿಂ ಸದಸ್ಯರಂತೆಯೇ ಯೋಚಿಸುತ್ತಿದ್ದಾರೆ. ವಾರಸುದಾರಿಕೆ, ಉತ್ತರಾಧಿಕಾರದ ಕಾನೂನುಗಳು ಧಾರ್ಮಿಕತೆಯ ಭಾಗ ಎಂದು ಹಿಂದೂಗಳೂ ಅಂದುಕೊಂಡಿದ್ದಾರೆ. ಒಂದು ವೇಳೆ ವಾರಸುದಾರಿಕೆ, ಉತ್ತರಾಧಿಕಾರ ಮೊದಲಾದ ಕಾನೂನುಗಳು ಧರ್ಮದ ಭಾಗವೇ ಆಗಿದೆ ಎಂದಾದರೆ, ನೀವು ಎಂದಿಗೂ ಮಹಿಳೆಯರಿಗೆ ಸಮಾನ ಹಕ್ಕು ನೀಡಲಾರಿರಿ' ಎಂದು ಹೇಳಿದ್ದರು.

ಏಕರೂಪ ನಾಗರಿಕ ಸಂಹಿತೆ ಅಗತ್ಯ ಎಂದು ಹೇಳುವಾಗ ಮುನ್ಷಿ ಅವರು, ಮಹಿಳೆಯರಿಗೆ ಸಮಾನ ಅವಕಾಶ ದೊರೆಯಬೇಕು ಎಂದೇ ಪ್ರತಿಪಾದಿಸಿದ್ದರು. ಬಿ.ಆರ್. ಅಂಬೇಡ್ಕರ್ ಅವರೂ ಸಹ ಇದೇ ಮಾತನ್ನು ಹೇಳಿದ್ದರು.

ವಾರಸುದಾರಿಕೆ ಮತ್ತು ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ದೇಶದಲ್ಲಿ ಈಗ ಜಾರಿಯಲ್ಲಿರುವ ವೈಯಕ್ತಿಕ ಕಾನೂನುಗಳು ಪರಸ್ಪರ ಸಂಪೂರ್ಣ ಭಿನ್ನವಾಗಿವೆ. ಹಿಂದೂ ಉತ್ತರಾಧಿಕಾರ ಕಾಯ್ದೆಯಲ್ಲಿ ಹೆಣ್ಣುಮಕ್ಕಳನ್ನು ಉತ್ತರಾಧಿಕಾರಿ ಎಂದು ಪರಿಗಣಿಸುವಲ್ಲಿ ಮತ್ತು ಅವರಿಗೆ ಆಸ್ತಿ ಹಂಚಿಕೆ ಮಾಡುವಲ್ಲಿ ಅನ್ವಯವಾಗುವ ನಿಯಮಗಳು ಬೇರೆ. ಮುಸ್ಲಿಮರಲ್ಲಿ ಉತ್ತರಾಧಿಕಾರದ ಸಂಬಂಧ ಮಹಿಳೆಯರಿಗೆ ಅನ್ವಯವಾಗುವ ನಿಯಮಗಳೇ ಬೇರೆ. ಷಿಯಾ ಮುಸ್ಲಿಮರಿಗೆ ಅನ್ವಯವಾಗುವ ನಿಯಮಗಳಿಗೂ, ಸುನ್ನಿ ಮುಸ್ಲಿಮರಿಗೆ ಅನ್ವಯವಾಗುವ ನಿಯಮಗಳ ಮಧ್ಯೆ ತೀರಾ ವ್ಯತ್ಯಾಸವಿದೆ. ಕ್ರೈಸ್ತ ಮತ್ತು ಪಾರ್ಸಿ ಉತ್ತರಾಧಿಕಾರದ ನಿಯಮಗಳೂ ಮಹಿಳೆಯರ ಹಕ್ಕು ಮತ್ತು ಅಧಿಕಾರಗಳನ್ನು ಭಿನ್ನವಾಗಿಯೇ ನೋಡುತ್ತವೆ. ಈ ಎಲ್ಲಾ ಕಾನೂನುಗಳಲ್ಲಿ ಪುರುಷರಿಗೆ ನೀಡಲಾಗುವಷ್ಟು ಹಕ್ಕು, ಅಧಿಕಾರಗಳು ಮಹಿಳೆಯರಿಗೆ ಲಭ್ಯವಿಲ್ಲ. ಮಹಿಳೆಯರನ್ನು ಸಮಾನರು ಎಂದು ಹೇಳಿದರೂ, ವಿವಾಹಿತ ಮಹಿಳೆಗೆ, ಅವಿವಾಹಿತ ಮಹಿಳೆಗೆ ಮತ್ತು ವಿಧವೆಗೆ ಅನ್ವಯವಾಗುವ ನಿಯಮಗಳಲ್ಲಿ ಬಹಳ ವ್ಯತ್ಯಾಸವಿದೆ.

ಹಿಂದೂಗಳಲ್ಲಿ ದಯಾಭಾಗ್ ಮತ್ತು ಮಿತಾಕ್ಷರ ಎಂಬ ಉತ್ತಾರಾಧಿಕಾರ ಪದ್ಧತಿಗಳು ಜಾರಿಯಲ್ಲಿವೆ. ಜತೆಗೆ ಪಿತೃಪ್ರಧಾನ ಮತ್ತು ಮಾತೃಪ್ರಧಾನ ಉತ್ತರಾಧಿಕಾರ ವ್ಯವಸ್ಥೆಗಳೂ ಜಾರಿಯಲ್ಲಿವೆ. ದೇಶದ ಹಲವು ಭಾಗಗಳಲ್ಲಿ ಈಗಲೂ ಈ ಪದ್ಧತಿಗಳನ್ನು ಅನುಸರಿಸಿಕೊಂಡು ಬರಲಾಗುತ್ತಿದೆ. ತಂದೆಯ/ಕುಟುಂಬದ ಮುಖ್ಯಸ್ಥನ ಮರಣಾನಂತರವೇ ವಾರಸುದಾರಿಕೆ ಮತ್ತು ಉತ್ತರಾಧಿಕಾರ ಹಸ್ತಾಂತರವಾಗುವ ದಯಾಭಾಗ್ ವ್ಯವಸ್ಥೆ ಪಶ್ಚಿಮ ಬಂಗಾಳ ಮತ್ತು ಅಸ್ಸಾಂನ ಹಲವು ಸಮುದಾಯಗಳಲ್ಲಿ ಜಾರಿಯಲ್ಲಿವೆ. ಮಧ್ಯಭಾರತ ಮತ್ತು ದಕ್ಷಿಣ ಭಾರತದ ಕೆಲವು ಸಮುದಾಯಗಳಲ್ಲೂ ಈ ಪದ್ಧತಿ ಜಾರಿಯಲ್ಲಿದೆ. ಜನನದ ತಕ್ಷಣವೇ ವಾರಸುದಾರಿಕೆ ಮತ್ತು ಉತ್ತರಾಧಿಕಾರದ ಹಕ್ಕುಗಳು ಲಭ್ಯವಾಗುವ ಮಿತಾಕ್ಷರ ಪದ್ಧತಿ ದೇಶದ ಹಲವೆಡೆ ಜಾರಿಯಲ್ಲಿದೆ.

ಈ ಎರಡೂ ಪದ್ಧತಿಗಳಲ್ಲಿ ಹೆಣ್ಣುಮಕ್ಕಳಿಗೆ ವಾರಸುದಾರಿಕೆ ಮತ್ತು ಉತ್ತರಾಧಿಕಾರದ ಮೇಲೆ ಹಕ್ಕು ಇರಲಿಲ್ಲ. ಹಿಂದೂ ಉತ್ತರಾಧಿಕಾರ ಕಾಯ್ದೆಯನ್ನು ಜಾರಿಗೆ ತಂದಾಗ ಈ ಪದ್ಧತಿಗಳ ಕೆಲವು ಅಂಶಗಳನ್ನು ಉಳಿಸಿಕೊಳ್ಳಲಾಗಿತ್ತು. ಆದರೆ, ನಂತರದ ವರ್ಷಗಳಲ್ಲಿ ಹೆಣ್ಣುಮಕ್ಕಳಿಗೂ ಸಮಾನ ಹಕ್ಕು ಮತ್ತು ಅಧಿಕಾರ ನೀಡುವ ವ್ಯವಸ್ಥೆಗಳನ್ನು 2005ರಲ್ಲಿ ಜಾರಿಗೆ ತರಲಾಗಿತ್ತು. ಹೀಗಿದ್ದೂ, ಮಹಿಳೆಯರನ್ನು ಪುರುಷರಷ್ಟೇ ಸಮಾನವಾಗಿ ಈ ನಿಯಮಗಳು ಪರಿಗಣಿಸುವುದಿಲ್ಲ ಎಂದು ಕಾನೂನು ಆಯೋಗವು ತನ್ನ ಸಮಾಲೋಚನಾ ವರದಿಯಲ್ಲಿ ಅಭಿಪ್ರಾಯಪಟ್ಟಿದೆ.

ಭಾರತೀಯ ಉತ್ತರಾಧಿಕಾರ ಕಾಯ್ದೆಯು, ಈ ಎಲ್ಲಾ ವೈಯಕ್ತಿಕ ಕಾನೂನುಗಳಿಗೆ ಪರ್ಯಾಯವಾಗಬಲ್ಲದು ಎಂದು ಕಾನೂನು ಆಯೋಗವು 2018ರಲ್ಲಿ ಸಲ್ಲಿಸಿದ್ದ ಕೌಟುಂಬಿಕ ಕಾನೂನುಗಳ ಸುಧಾರಣೆ ಸಮಾಲೋಚನಾ ವರದಿಯಲ್ಲಿ ಅಭಿಪ್ರಾಯಪಟ್ಟಿದೆ. ದೇಶದ ಎಲ್ಲಾ ಜನರಿಗೆ ಏಕಪ್ರಕಾರವಾಗಿ ಅನ್ವಯವಾಗುವ ಎಲ್ಲಾ ಲಕ್ಷಣಗಳನ್ನು ಭಾರತೀಯ ಉತ್ತರಾಧಿಕಾರ ಕಾಯ್ದೆ–1925 ಹೊಂದಿದೆ. ಕಾಲಕಾಲಕ್ಕೆ ಹಲವು ತಿದ್ದುಪಡಿಗಳನ್ನು ತರುವ ಮೂಲಕ ಈ ಕಾಯ್ದೆಯಲ್ಲಿದ್ದ ಕೆಲವು ಕೊರತೆಗಳನ್ನು ನೀಗಿಸಲಾಗಿದೆ. ಹೀಗಿದ್ದೂ ಕೆಲವು ಕೊರತೆಗಳು ಇನ್ನೂ ಈ ಕಾಯ್ದೆಯಲ್ಲಿ ಇವೆ. ಅವನ್ನು ತಿದ್ದುಪಡಿಗಳ ಮೂಲಕ ನೀಗಿಸಬಹುದು. ದೇಶದ ಎಲ್ಲಾ ಹಿಂದೂಗಳು, ಮುಸ್ಲಿಮರು, ಕ್ರೈಸ್ತರು, ಬೌದ್ಧ, ಜೈನ ಮತ್ತು ಪಾರ್ಸಿ ಧರ್ಮೀಯರಿಗೆ ಏಕಪ್ರಕಾರವಾಗಿ ಅನ್ವಯವಾಗುವಂತೆ ಈ ಕಾಯ್ದೆಯನ್ನು ರೂಪಿಸಬಹುದು ಎಂದು ಆಯೋಗವು ತನ್ನ ವರದಿಯಲ್ಲಿ ಶಿಫಾರಸು ಮಾಡಿತ್ತು.

ಭಾರತೀಯ ಉತ್ತರಾಧಿಕಾರ ಕಾಯ್ದೆಯಲ್ಲಿ ಏಕರೂಪ: ಜಾತಿ, ಧರ್ಮ ಮತ್ತು ಲಿಂಗಭೇದವಿಲ್ಲದೆ ದೇಶದ ಎಲ್ಲಾ ನಾಗರಿಕರನ್ನು ಏಕಪ್ರಕಾರವಾಗಿ ಕಾಣುವ ಹಲವು ಅಂಶಗಳು ಈ ಕಾಯ್ದೆಯಲ್ಲಿ ಇದೆ ಎಂದು ಕಾನೂನು ಆಯೋಗವು ಅಭಿಪ್ರಾಯಪಟ್ಟಿದೆ. ದೇಶದಲ್ಲಿ ಈಗ ಜಾರಿಯಲ್ಲಿರುವ ಕೆಲವು ವೈಯಕ್ತಿಕ ಕಾನೂನುಗಳು ಮತ್ತು ಭಾರತೀಯ ಉತ್ತರಾಧಿಕಾರ ಕಾಯ್ದೆ–1925 ನಡುವಣ ಹೋಲಿಕೆ ಇಂತಿದೆ

ಹಿಂದೂ ಉತ್ತರಾಧಿಕಾರ ಕಾಯ್ದೆ

- ಈ ಕಾಯ್ದೆಯ ಅಡಿಯಲ್ಲಿ ಹೆಣ್ಣು ಮಕ್ಕಳಿಗೂ ವಾರಸುದಾರಿಕೆಯ ಹಕ್ಕನ್ನು ನೀಡಲಾಗಿದೆ. ಮೊದಲು ತಂದೆಯ ಸ್ವಂತ ಆಸ್ತಿಯ ಮೇಲೆ ಮಾತ್ರ ಮಗಳಿಗೆ ಹಕ್ಕು ನೀಡಲಾಗಿತ್ತು. ಕಾಯ್ದೆಗೆ ತಿದ್ದುಪಡಿ ತಂದು ತಂದೆಯ ಕುಟುಂಬದ ಜಂಟಿ ವಾರಸುದಾರಿಕೆಯ ಆಸ್ತಿಯ ಮೇಲೂ ಮಗಳಿಗೆ ಹಕ್ಕು ನೀಡಲಾಗಿದೆ
- ಮೃತ ಪುರುಷನ ಮಗಳು ಮತ್ತು ಮಗ ಇಬ್ಬರಿಗೂ, ಆತನ ಆಸ್ತಿಯಲ್ಲಿ ಸಮಾನ ಹಕ್ಕು ಇದೆ ಎಂದು ಕಾಯ್ದೆ ಹೇಳುತ್ತದೆ. ಆದರೆ, ಮೃತ ಪುರುಷನ ಪತ್ನಿ ಮತ್ತು ತಾಯಿಗೆ ಇದ್ದ ಸಮಾನ ಹಕ್ಕಿಗೆ ಇದು ಧಕ್ಕೆ ತರುತ್ತದೆ. ಒಟ್ಟು ಆಸ್ತಿಯಲ್ಲಿ ಮೃತ ಪುರುಷನ ಪತ್ನಿ ಮತ್ತು ತಾಯಿಯ ಹಕ್ಕನ್ನು ಕಡಿಮೆ ಮಾಡಿ, ಮಗ ಮತ್ತು ಮಗಳಿಗೆ ಸಮಾನ ಆಸ್ತಿಯನ್ನು ಹಂಚಿಕೆ ಮಾಡುವಂತೆ ಈ ಕಾಯ್ದೆ ಹೇಳುತ್ತದೆ. ಹೀಗಾಗಿ ಮೃತ ವ್ಯಕ್ತಿಯ ಕುಟುಂಬದ ಎಲ್ಲಾ ಸದಸ್ಯರನ್ನು ಈ ಕಾಯ್ದೆ ಸಮಾನವಾಗಿ ಕಾಣುವುದಿಲ್ಲ ಎಂದು ಕಾನೂನು ಆಯೋಗವು ಅಭಿಪ್ರಾಯಪಟ್ಟಿದೆ
- ಎಲ್ಲಾ ಹಿಂದೂ ಕುಟುಂಬದ ಉಯಿಲುರಹಿತ ವಾರಸುದಾರಿಕೆ ಮತ್ತು ಉತ್ತರಾಧಿಕಾರದ ಹಕ್ಕುಗಳಿಗೆ ಈ ಕಾಯ್ದೆಯೇ ಅನ್ವಯವಾಗುತ್ತದೆ
- ಚಿರಾಸ್ತಿ ಮತ್ತು ಚರಾಸ್ತಿಗಳ ಮೇಲಿನ ಹಕ್ಕು ಏಕಪ್ರಕಾರವಾಗಿ ಇಲ್ಲ
- ಹಿಂದೂ, ಬೌದ್ಧ, ಜೈನ ಮತ್ತು ಪಾರ್ಸಿ ಧರ್ಮದವರಿಗೆ ಈ ಕಾಯ್ದೆ ಅನ್ವಯವಾಗುತ್ತದೆ
- ಕ್ರೈಸ್ತ ಧರ್ಮಕ್ಕೆ ಮತಾಂತರವಾದ ಹಿಂದೂಗಳು, ಇನ್ನೂ ಹಿಂದೂ ಪದ್ಧತಿಗಳನ್ನು ಅನುಸರಿಸುತ್ತಿದ್ದರೆ (ಹಿಂದೂಕ್ರೈಸ್ತ) ಅವರಿಗೂ ಈ ಕಾಯ್ದೆ ಅನ್ವಯವಾಗುತ್ತದೆ

ಮುಸ್ಲಿಂ ವಾರಸುದಾರಿಕೆ ಮತ್ತು ಉತ್ತರಾಧಿಕಾರ ಕಾನೂನು

- ಮುಸ್ಲಿಂ ಕುಟುಂಬವೊಂದರಲ್ಲಿ ಮುಖ್ಯಸ್ಥ ಇರುವಾಗ, ಕುಟುಂಬದ ಇತರ ಸದಸ್ಯರು ವಾರಸುದಾರಿಕೆ ಮತ್ತು ಉತ್ತರಾಧಿಕಾರದ ಮೇಲೆ ಹಕ್ಕು ಸಾಧಿಸಲಾಗದು. ಕುಟುಂಬದ ಮುಖ್ಯಸ್ಥನ ಮರಣಾನಂತರವಷ್ಟೇ ಹಕ್ಕುದಾರರಿಗೆ ವಾರಸುದಾರಿಕೆ ಮತ್ತು ಉತ್ತರಾಧಿಕಾರ ದತ್ತವಾಗುತ್ತದೆ
- ವಾರಸುದಾರಿಕೆ ಮತ್ತು ಉತ್ತರಾಧಿಕಾರದ ವಿಚಾರದಲ್ಲಿ ಚರಾಸ್ತಿ ಮತ್ತು ಸ್ಥಿರಾಸ್ತಿ ಎಂಬ ವರ್ಗೀಕರಣ ಇಲ್ಲ
- ಕುಟುಂಬದ ಮುಖ್ಯಸ್ಥನ ಸ್ವಯಾರ್ಜಿತ ಆಸ್ತಿ ಮತ್ತು ಪಿತ್ರಾರ್ಜಿತ ಆಸ್ತಿ ಎಂಬ ವರ್ಗೀಕರಣವೂ ಇಲ್ಲ

ಭಾರತೀಯ ಉತ್ತರಾಧಿಕಾರ ಕಾಯ್ದೆ–1925

- ಭಾರತದಲ್ಲಿದ್ದ ಆಂಗ್ಲೊ–ಇಂಡಿಯನ್ ಸಮುದಾಯದವರಿಗೆಂದು 1865ರಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲಾಗಿತ್ತಾದರೂ, 1925ರಲ್ಲಿ ಅದರ ವ್ಯಾಪ್ತಿಯನ್ನು ಹೆಚ್ಚಿಸಲಾಯಿತು. ಆ ಮೂಲಕ ಭಾರತೀಯರಿಗೂ ಈ ಕಾಯ್ದೆ ಅನ್ವಯವಾಗುವಂತೆ ಮಾಡಲಾಯಿತು
- ಹಿಂದೂ ಕುಟುಂಬದಲ್ಲಿ ಉಯಿಲುಸಹಿತ ವಾರಸುದಾರಿಕೆ ಮತ್ತು ಉತ್ತರಾಧಿಕಾರದ ಹಕ್ಕುಗಳಿಗೆ ಹಿಂದೂ ಉತ್ತಾರಾಧಿಕಾರ ಕಾಯ್ದೆ ಅನ್ವಯವಾಗುವುದಿಲ್ಲ. ಬದಲಿಗೆ ಭಾರತೀಯ ಉತ್ತರಾಧಿಕಾರ ಕಾಯ್ದೆಯ ಅಡಿಯಲ್ಲೇ ಈ ಹಕ್ಕುಗಳು ದತ್ತವಾಗುತ್ತವೆ
- ಮುಸ್ಲಿಮರು ಮತ್ತು ಹಿಂದೂಗಳಲ್ಲಿ ಉಯಿಲುರಹಿತ ವಾರಸುದಾರಿಕೆ ಹಾಗೂ ಉತ್ತರಾಧಿಕಾರ ಹೊರತುಪಡಿಸಿ ಈ ಕಾಯ್ದೆಯ ಹಲವು ಅಂಶಗಳು ದೇಶದ ಪ್ರತಿಯೊಬ್ಬ ನಾಗರಿಕರಿಗೂ ಅನ್ವಯವಾಗುತ್ತವೆ
- ಈ ಕಾಯ್ದೆಯ ಕೆಲವು ಅಂಶಗಳು ಪಾರ್ಸಿಗಳಿಗೆ ಮತ್ತು ಹಿಂದೂಕ್ರೈಸ್ತರಿಗೆ ಅನ್ವಯವಾಗುವುದಿಲ್ಲ. ಈ ತೊಡಕುಗಳನ್ನು ನಿವಾರಿಸಬಹುದು ಎಂದು ಕಾನೂನು ಆಯೋಗವು ಅಭಿಪ್ರಾಯಪಟ್ಟಿದೆ
- ಈ ಕಾಯ್ದೆಯು ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳನ್ನು ಸಮಾನವಾಗಿ ಕಾಣುತ್ತದೆ. ಎಲ್ಲರಿಗೂ ವಾರಸುದಾರಿಕೆ ಮತ್ತು ಉತ್ತರಾಧಿಕಾರದ ಮೇಲೆ ಸಮಾನ ಹಕ್ಕನ್ನು ನೀಡುತ್ತದೆ
- ಮೃತವ್ಯಕ್ತಿಯ ಪತಿ/ಪತ್ನಿ, ತಾಯಿ/ತಂದೆಗೂ ಸಮಾನವಾದ ಹಕ್ಕನ್ನು ಈ ಕಾಯ್ದೆ ನೀಡುತ್ತದೆ
- ಪಿತೃಪ್ರಧಾನ ಮತ್ತು ಮಾತೃಪ್ರಧಾನ ಕುಟುಂಬಗಳಿಗೂ ಈ ಕಾಯ್ದೆ ಸಮಾನವಾಗಿ ಅನ್ವಯವಾಗುತ್ತದೆ
- ಈ ಕಾಯ್ದೆಯು ಚಿರಾಸ್ತಿ ಮತ್ತು ಚರಾಸ್ತಿಗಳನ್ನು ಸಮಾನವಾಗಿ ಪರಿಗಣಿಸುತ್ತದೆ. ಎಲ್ಲಾ ವಾರಸುದಾರರಿಗೆ ಚಿರಾಸ್ತಿ ಮತ್ತು ಸ್ಥಿರಾಸ್ತಿಯ ಮೇಲೆ ಸಮಾನವಾದ ಹಕ್ಕನ್ನು ನೀಡುತ್ತದೆ

ಆಧಾರ: ಕಾನೂನು ಆಯೋಗದ 'ಕೌಟುಂಬಿಕ ಕಾನೂನುಗಳ ಸುಧಾರಣೆ ಸಮಾಲೋಚನಾ ವರದಿ–2018', ಸಂವಿಧಾನ ರಚನಾ ಸಭೆಯ 'ಸಂಸದೀಯ ಚರ್ಚೆಗಳು'

ಪಾರ್ವತಮ್ಮ ಹಾದಿಯಲ್ಲಿ ಅಶ್ವಿನಿ

'ಸಿನಿಮಾ ಬಿಡುಗಡೆ ಅಂದರೆ ಒಂಥರಾ ಭಯವಾಗುತ್ತೆ' ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಹೀಗೆಂದರು. 'ಆಚಾರ್ & ಕೋ.' ಸಿನಿಮಾ ತೆರೆಕಾಣುತ್ತಿರುವ(ಜುಲೈ 28) ಸಂದರ್ಭದ ಸಹಜ ದುಗುಡ ಇದು. 'ಮಾಯಾಬಜಾರ್' ಸಿನಿಮಾ ಆದಮೇಲೆ ಚಿತ್ರಮಂದಿರದಲ್ಲಿ ಬಿಡುಗಡೆಯಾಗುತ್ತಿರುವ, ಪಿಆರ್‌ಕೆ ನಿರ್ಮಾಣದಲ್ಲಿ ತಯಾರಾದ ಚಿತ್ರವಿದು. ಪುನೀತ್ ಅವರಿಗೂ ತಮ್ಮ ಸಿನಿಮಾ ಬಿಡುಗಡೆಯಾಗುವ ಒಂದು ವಾರ ಮೊದಲಿನಿಂದ ಇಂತಹ ದುಗುಡ ಇರುತ್ತಿತ್ತಂತೆ. ಆಗೆಲ್ಲ ಅವರು ಹೆಚ್ಚು ಮೌನ ತುಳುಕಿಸುತ್ತಿದ್ದುದನ್ನು ಅಶ್ವಿನಿ ನೆನಪಿಸಿಕೊಂಡರು.

ಪುನೀತ್ ಅವರೇ ಹಸಿರು ನಿಶಾನೆ ತೋರಿ ಹೋಗಿದ್ದ ಸ್ಕ್ರಿಪ್ಟ್ 'ಆಚಾರ್ & ಕೋ.'. ಅದಲ್ಲದೆ 'ಒ2' ಸಿನಿಮಾಗೂ ಅವರು ಅಸ್ತು ಹೇಳಿದ್ದರು. ಮೆಡಿಕಲ್ ಥ್ರಿಲ್ಲರ್ ಕಥಾಹಂದರದ 'ಒ2' ಕೂಡ ಇದೇ ವರ್ಷ ತೆರೆಕಾಣಲಿದೆ. ಆಶಿಕಾ ರಂಗನಾಥ್ ನಟಿಸಿರುವ ಆ ಸಿನಿಮಾ ಬಗೆಗೆ ಅಶ್ವಿನಿ ಅವರಿಗೆ ನಿರೀಕ್ಷೆ ಮೂಡಿದೆ. ಅವರು ಖುದ್ದು ಥ್ರಿಲ್ಲರ್‌ಮೋಹಿ. ಅವರೀಗ ಮೂರು ಕಾದಂಬರಿಗಳನ್ನು ಓದುತ್ತಿದ್ದಾರೆ. ಅವುಗಳಲ್ಲಿ ಯಾವುದಾದರೊಂದು ಸಿನಿಮಾಗೆ ಹೊಂದಬಹುದೆ ಎನ್ನುವುದು ಅವರಿಗಿರುವ ಕುತೂಹಲ. ಆ ಕಾದಂಬರಿಗಳು ಯಾರವು ಎನ್ನುವುದು ಸದ್ಯಕ್ಕೆ ಗುಟ್ಟು. ಮಹಿಳೆ ಬರೆದಿದ್ದಾರೆಂದು ಸಣ್ಣ ಸುಳಿವು ಕೊಟ್ಟರು. ಪಾರ್ವತಮ್ಮ ರಾಜ್‌ಕುಮಾರ್ ಹೀಗೆ ಕೃತಿಗಳನ್ನು ಓದಿ, ಸಿನಿಮಾ ಮಾಡುತ್ತಿದ್ದ ದಿನಗಳನ್ನು ಅವರ ಈ ಧೋರಣೆ ನೆನಪಿಸಿತು.

ಚಿತ್ರಕಥೆ, ಚಿತ್ರೀಕರಿಸುವ ಕ್ರಮ ಇವಿಷ್ಟೂ ಪಕ್ಕಾ ಇದ್ದು, ತಮಗೆ ಹಿಡಿಸಿದಲ್ಲಿ ಹೊಸಬರಾದರೂ ಸಿನಿಮಾ ನಿರ್ಮಿಸಲು ಮುಂದಾಗುವುದು ಅಶ್ವಿನಿ ಅವರ ಜಾಯಮಾನ. ಅವರ ಪಿಆರ್‌ಕೆ ವೆಬ್‌ಸೈಟ್ ಮೂಲಕ ಆಸಕ್ತರು ಸಣ್ಣ ವಿಡಿಯೊ ಮಾಡಿ ಕಳುಹಿಸಿದರೂ ಗಮನಿಸುವ ವ್ಯವಸ್ಥೆಯನ್ನು ಅವರು ಮಾಡಿದ್ದಾರೆ. ಸಿನಿಮಾ ಆಯ್ಕೆಯಲ್ಲಿ ಅವರಿಗೆ ಮೂವರು ನಿರ್ದೇಶಕರು ನೆರವಾಗುತ್ತಾರೆ. ಅವರು ಯಾರು ಯಾರು ಎನ್ನುವುದನ್ನು ಕೂಡ ಅಶ್ವಿನಿ ಹೇಳಲು ನಿರಾಕರಿಸಿದರು. ದೊಡ್ಡ ನಿರ್ಮಾಣ ಸಂಸ್ಥೆಗಳು ಸಹಯೋಗ ಬಯಸಿದರೆ ಅದಕ್ಕೂ ತಾವು ಮುಕ್ತ ಮುಕ್ತ ಎಂದರು.

ದೊಡ್ಡ ಮಗಳು ಧೃತಿ ಕಲೆ–ವಿನ್ಯಾಸದ ಸೂಕ್ಷ್ಮಗಳ ಕೋರ್ಸ್ ಒಂದನ್ನು ಮಾಡುತ್ತಿದ್ದಾರೆ. ಚಿಕ್ಕಮಗಳು ವಂದಿತಾ ಪಿಯು ವಿದ್ಯಾರ್ಥಿನಿ. ಸಿನಿಮಾದ ತಾಂತ್ರಿಕ ಸೂಕ್ಷ್ಮಗಳನ್ನು ಅಣ್ಣಂದಿರಾದ ವಿನಯ್ ಹಾಗೂ ಯುವ ರಾಜ್‌ಕುಮಾರ್ ಜತೆಯಲ್ಲಿ ವಂದಿತಾ ಈಗಾಗಲೇ ಚರ್ಚಿಸುತ್ತಿರುವುದು ಅಶ್ವಿನಿ ಅವರ ಗಮನಕ್ಕೆ ಬಂದಿದೆ. ಸಿನಿಮಾ ಉತ್ಕಟತೆ ಇಟ್ಟುಕೊಂಡ ಕುಟುಂಬದವರೇ ತಾವಾಗಿರುವುದರಿಂದ ಅದರಿಂದ ದೂರ ಉಳಿಯುವುದಂತೂ ಅಸಾಧ್ಯ ಎಂದಾಗ ಅವರ ಕಣ್ಣಲ್ಲಿ ಆತ್ಮವಿಶ್ವಾಸದ ಹೊಳಪು. ❖

ಅಪೂರ್ವ ಭಾರದ್ವಾಜ್ ಪ್ರೀತಿಯ ಪ್ರತಿನಿಧಿ

ಇತ್ತೀಚೆಗೆ ತೆರೆಕಂಡ 'ನಾನು, ಅದು ಮತ್ತು ಸರೋಜ' ಚಿತ್ರದಲ್ಲಿ ಅಭಿನಯಿಸಿರುವ ನಟಿ ಅಪೂರ್ವ ಭಾರದ್ವಾಜ್, ಪಿ.ಸಿ.ಶೇಖರ್ ನಿರ್ದೇಶನದ 'BAD' ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ.

'ಈ ಚಿತ್ರದಲ್ಲಿ ಕಾಮ, ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ಪ್ರತಿನಿಧಿಸುವ ಆರು ಪಾತ್ರಗಳಿವೆ. ಅದರಲ್ಲಿ ಕಾಮವನ್ನು ಅನು ಎಂಬ ಪಾತ್ರದ ಮೂಲಕ ತೋರಿಸಲಾಗುತ್ತಿದೆ. ಆ ಪಾತ್ರದಲ್ಲಿ ಅಪೂರ್ವ ಭಾರದ್ವಾಜ್ ಕಾಣಿಸಿಕೊಳ್ಳುತ್ತಿದ್ದಾರೆ. ನಮ್ಮ ಚಿತ್ರದಲ್ಲಿ ಕಾಮವನ್ನು ಪ್ರೀತಿಗೆ ಬದಲಾಯಿಸಿ ತೋರಿಸಲಾಗುತ್ತಿದೆ.

ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡು, ತಂದೆಯ ಆಸರೆಯಲ್ಲಿ ಬೆಳೆದ ಹುಡುಗಿ ಅನು. ತಾಯಿ ಪ್ರೀತಿ ಕಾಣದ ಈ ಹುಡುಗಿಗೆ ಯಾರ ಬಳಿ ಹೇಗೆ ಪ್ರೀತಿ ವ್ಯಕ್ತಪಡಿಸಬೇಕೆಂದು ತಿಳಿದಿರುವುದಿಲ್ಲ. ಈ ಪಾತ್ರಕ್ಕೆ ಮಾತು ಕಡಿಮೆ. ಕಣ್ಣಿನಲ್ಲೇ ಭಾವನೆಗಳನ್ನು ಹೇಳುವ ಹಾಗೂ ಗುಂಗುರು ಕೂದಲುಳ್ಳ ಸಹಜ ಸುಂದರಿಯಂತೆ ಕಾಣುವ ಪಾತ್ರವಿದು. ಈ ಪಾತ್ರಕ್ಕೆ ಅಪೂರ್ವ ಅವರೇ ಸೂಕ್ತ ಎಂದು ಆಯ್ಕೆ ಮಾಡಿಕೊಳ್ಳಲಾಗಿದೆ' ಎನ್ನುತ್ತಾರೆ ನಿರ್ದೇಶಕ ಪಿ.ಸಿ.ಶೇಖರ್. ❖



ಅಪೂರ್ವ ಭಾರದ್ವಾಜ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬೈಕ್‌ನಲ್ಲಿ ಹಿಂದಿನ ಸೀಟಿನಲ್ಲಿ ಕುಳಿತು ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರಿಗೆ ಹುಡುಗರು ಮೈದಡವಿ, ಲೈಂಗಿಕ ಕಿರುಕುಳ ನೀಡಿದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹರಿದಾಡುತ್ತಿದೆ. ಮಣಿಪುರದಲ್ಲಿ ಕುಕಿ ಬುಡಕಟ್ಟು ಹೆಣ್ಣುಮಕ್ಕಳನ್ನು ಬೆತ್ತಲೆಗೊಳಿಸಿ, ಮೆರವಣಿಗೆ ನಡೆಸಿದ ಘಟನೆ ನಡೆದ ಬಳಿಕ ಈ ವಿಡಿಯೊವನ್ನು ಹಂಚಿಕೆ ಮಾಡಲಾಗುತ್ತಿದೆ. ಈ ವಿಡಿಯೊವನ್ನು ಹಂಚಿಕೊಂಡಿರುವ ಬಿಜೆಪಿ ನಾಯಕರು, 'ಈ ಘಟನೆಯು ಮಣಿಪುರದಲ್ಲಾದ ಘಟನೆಗಿಂತ ಭಿನ್ನವೇನಿಲ್ಲ. ಬಿಹಾರದಲ್ಲಿ ಜಂಗಲ್‌ರಾಜ್ ಮತ್ತೊಮ್ಮೆ ಮೈಗೊಡವಿ ನಿಂತಿದೆ' ಎಂದು ಆರೋಪಿಸಿದ್ದಾರೆ. ಆದರೆ, ಇದು ತಿರುಚಿದ ಸುದ್ದಿಯಾಗಿದೆ.

ಈ ಘಟನೆಯು ಬಿಹಾರದ ಸರಣ್ ಜಿಲ್ಲೆಯಲ್ಲಿ 2021ರಲ್ಲಿ ನಡೆದಿದೆ. 2021ರ ಸೆ. 5ರಂದು ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಮೊದಲ ಬಾರಿಗೆ ಹಂಚಿಕೆಯಾಗಿದೆ. ಈ ಘಟನೆ ಕುರಿತು 'ದೈನಿಕ್ ಭಾಸ್ಕರ್' ಪತ್ರಿಕೆಯಲ್ಲಿಯೂ ವರದಿ ಪ್ರಕಟವಾಗಿದೆ. ಸರಣ್ ಜಿಲ್ಲೆಯ ಪೊಲೀಸರು ಈ ಘಟನೆಯ ಸಂಬಂಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದರು. ಆರು ಮಂದಿ ಆರೋಪಿಗಳಲ್ಲಿ ನಾಲ್ವರನ್ನು ಪೊಲೀಸರು ಬಂಧಿಸಿದ್ದರು. ಈ ಬಗ್ಗೆ ಪೊಲೀಸರು ಟ್ವೀಟ್ ಮಾಡಿದ್ದರು. ಈ ಘಟನೆ ನಡೆದಾಗ ಬಿಹಾರದಲ್ಲಿ ಜೆಡಿಯು–ಬಿಜೆಪಿ ನೇತೃತ್ವದ ಸರ್ಕಾರವಿತ್ತು. ಆಗ ನಡೆದ ಘಟನೆಯನ್ನು ಈಗಿನ ಜೆಡಿಯು–ಆರ್‌ಜೆಡಿ–ಕಾಂಗ್ರೆಸ್ ನೇತೃತ್ವದ ಮಹಾ ಮೈತ್ರಿಕೂಟದ ಸರ್ಕಾರದ ಅವಧಿಯಲ್ಲಿ ನಡೆದದ್ದು ಎಂದು ಬಿಜೆಪಿ ಆರೋಪಿಸುತ್ತಿದೆ ಎಂದು 'ಬೂಮ್‌ಲೈವ್' ಹಾಗೂ 'ದಿ ಕ್ವಿಂಟ್' ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

'ಕಗ್ಗ' ಸೃಷ್ಟಿ

ವಿಶದಮಾದೊಂದು ಜೀವನಧರ್ಮ ದರ್ಶನವ |
ನುಸುರಿಕೊಳೆ ತನ್ನ ಮನಸಿಗೆ ತಾನೆ ಬಗೆದು ||
ನಿಸದವಂ ಗ್ರಂಥಾನುಭವಗಳಿಂದಾರಿಸುತ |
ಹೊಸೆದ ನೀ ಕಗ್ಗವನು – ಮಂಕುತಿಮ್ಮ || 936 ||

ಪದ-ಅರ್ಥ: ವಿಶದಮ್ (ಸ್ಪಷ್ಟವಾದ) + ಆ-ದ + ಒಂದು, ದರ್ಶನವನುಸುರಿಕೊಳೆ = ದರ್ಶನವನು + ಉಸುರಿಕೊಳೆ, ನಿಸದವಂ(ನಿಶ್ಚಯವಾದದ್ದು), ಗ್ರಂಥಾನುಭವಗಳಿಂದಾರಿಸುತ = ಗ್ರಂಥ + ಅನುಭವಗಳಿಂದ + ಆರಿಸುತ, ಹೊಸೆದನೀ = ಹೊಸೆದನು + ಈ.

ವಾಚ್ಯಾರ್ಥ: ಸ್ಪಷ್ಟವಾದ ಒಂದು ಜೀವನ ಧರ್ಮ-ದರ್ಶನವನ್ನುತನ್ನಷ್ಟಕ್ಕೆ ತಾನೇ ಉಸುರಿಕೊಳ್ಳಲು, ನಿಶ್ಚಿತವಾದ ಗ್ರಂಥ ಮತ್ತು ಅನುಭವಗಳಿಂದ ಆರಿಸುತ್ತ ಹೊಸೆದನು, ಈ ಹಗ್ಗವನ್ನು.

ವಿವರಣೆ: ನಮ್ಮೆಲ್ಲರ ಬದುಕಿನಲ್ಲಿ ಚಿಂತೆ, ಸಂತಾಪಗಳು ಅನೇಕ ಬಾರಿ ಬರುತ್ತವೆ. ಜೀವನದ ಯಾವುದೋ ಹಂತದಲ್ಲಿ ಪ್ರತಿಯೊಬ್ಬ ಮನುಷ್ಯನನ್ನು ಕೆಲವು ಪ್ರಶ್ನೆಗಳು ಕಾಡುತ್ತವೆ. ನಾನುಯಾರು? ಎಲ್ಲಿಂದ ಬಂದೆ? ಏಕೆ ಬಂದೆ? ಈ ಬದುಕಿಗೊಂದು ಏನಾದರೂ ಉದ್ದೇಶವಿದೆಯೆ? ಈ ಪ್ರಪಂಚವನ್ನು ನಿರ್ವಹಿಸುವ ಶಕ್ತಿಯೊಂದು ನಿಜವಾಗಿಯೂ ಇದೆಯೆ? ಅದು ಕಾಣುವುದಿಲ್ಲವೇಕೆ? ಇಂಥ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯಲು ತಡಕಾಡುತ್ತೇವೆ. ಡಿ.ವಿ.ಜಿ, ಕಗ್ಗ ನಿರ್ಮಾಣವಾದ ಬಗೆಯನ್ನು ಈ ಕಗ್ಗದಲ್ಲಿ ಹೇಳುತ್ತಾರೆ. ನನಗೆ ಸ್ಪಷ್ಟವಾದ ಒಂದು ಜೀವನಧರ್ಮದ ದರ್ಶನ ಬೇಕಾಗಿತ್ತು. ಅದು ಮತ್ತೊಬ್ಬರಿಗೆ ಬೋಧನೆಯ ಸಲುವಾಗಿ ಅಲ್ಲ, ನನ್ನ ಮನಸ್ಸಿಗೇ ಹೇಳಿಕೊಳ್ಳುವದಕ್ಕೆ, ಅದಕ್ಕೆ ಸಮಧಾನ ಕೊಡುವುದಕ್ಕೆ. ಅದನ್ನು ಪಡೆಯುವುದು ಎಲ್ಲಿಂದ? ಅದಕ್ಕಾಗಿ ನಿಶ್ಚಿತವಾದ ಗ್ರಂಥಗಳಿಂದ ಮತ್ತು ನನ್ನ ಬದುಕಿನ ಅನುಭವಗಳಿಂದ ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಿದೆ ಎಂದಿದ್ದಾರೆ. ಅವೆಲ್ಲ ಚಿಂತನೆ, ಅನುಭವಗಳ ಸಾರವೇ ಅವರ ಜೀವನಧರ್ಮ ದರ್ಶನ. ಇದೇ ಸರ್ವಜ್ಞತೆಯ ದಾರಿ. "ಸರ್ವಜ್ಞನೆಂಬುವನು ಗರ್ವದಿಂದಾದವನೆ ? ಸರ್ವರೊಳಗೊಂದೊಂದು ನುಡಿಗಲಿತು, ವಿದ್ಯೆಯ ಪರ್ವತವೇ ಆದ ಸರ್ವಜ್ಞ", ಹಾಗೆ ಕಂಡುಕೊಂಡ ದರ್ಶನವನ್ನು ನಮಗೆ ಕಗ್ಗದ ರೂಪದಲ್ಲಿ ನೀಡಿದ್ದಾರೆ. ಕಗ್ಗಕ್ಕೆ ಪೀಠಿಕಾ ರೂಪದಲ್ಲಿ ಬಂದಿರುವ 'ಕಗ್ಗದ ಕಥೆ' ಯಲ್ಲಿ 'ಮಂಕುತಿಮ್ಮನ ಕಂತೆ' ಯಲ್ಲಿ ಏನಿದೆ ಎಂಬುದನ್ನು ಹೇಳುತ್ತಾರೆ.

"ಕಂಡನದರೊಳಿನಿತು ಬಾಳ್ಗೆ ಸಲುವ ತತ್ತ್ವ ಮಥಿತವ. ಸಖರ ತೃಪ್ತಿಗೆಂದು ಸೋಮಿಯಾಯ್ದು ಹಲವು ಬಂತಿಯ ಲಿಖಿಸಿದ ಪಡಿಯೊತ್ತಗೆಯಿದು ಮಂಕುತಿಮ್ಮ ಕಂತೆಯ".

ಕಗ್ಗ ಬಾಳಿಗೆ ಸಲ್ಲುವ ತತ್ವದಸಾರ. ಈ ದರ್ಶನವನ್ನು ಡಿ.ವಿ.ಜಿ 'ಕಗ್ಗ' ಎಂದು ಕರೆದಿದ್ದಾರೆ. ಇಂದು 'ಕಗ್ಗ' ಎಂದರೆ ಪ್ರಯೋಜನವಿಲ್ಲದ್ದು, ಸತ್ವಹೀನವಾದದ್ದು. ಇದು ಅವರ ವಿನಯವಂತಿಕೆ. ಕಗ್ಗ ಪದಕ್ಕೆ ಕಥನ, ಗೀತೆ, ಹಾಡು ಎಂಬ ಅರ್ಥಗಳೂ ಇವೆ. ಡಿ.ವಿ.ಜಿಯವರು ಅದನ್ನು 'ಕಗ್ಗ' ಎಂದರೂ ಲೌಕಿಕರಿಗೆ, ಚಿಂತಕರಿಗೆ ಇದು 'ಸಗ್ಗ' ವೇ ಸರಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಗುರುವಾರ ಜುಲೈ 27, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧ ನವಮಿ ಗಂ. 15-48 ನಕ್ಷತ್ರ: ವಿಶಾಖಾ ಗಂ. 25-28 ಯೋಗ: ಶುಭ ಗಂ. 13-38 ಕರಣ: ಕೌಲವ ಗಂ. 15-48, ಕರ್ಕಾಟಕ ಮಾಸದ 10 ನೇ ದಿನ, ಮಳೆನಕ್ಷತ್ರ: ಪುಷ್ಯ 3.
ರಾಹುಕಾಲ : ಮಧ್ಯಾಹ್ನ 01-30 - 03-00
ಸೂರ್ಯೋದಯ : 06-18 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 08 ಮೊಹರಮ್
ದಿನ ವಿಶೇಷ : ತೀಶಾಬೀಬ್ (ಜ್ಯೂಯಿಷ್), ಅದೃಷ್ಟ ಸಂಖ್ಯೆ : 12, 11

ಮೇಷ: ಹೆಚ್ಚಿನ ವಿದ್ಯಾಭ್ಯಾಸದ ಬಗ್ಗೆ ಚಿಂತನೆ ನಡೆಯುವುದು. ಆರೋಗ್ಯದಲ್ಲಿ ಏರುಪೇರಾಗುವ ಲಕ್ಷಣ ಇರುವುದು, ಯಾವುದೇ ರೀತಿಯ ಆತಂಕಕ್ಕೆ ಒಳಗಾಗಬೇಡಿ. ಹೊಸದನ್ನು ಕಲಿಯುವುದಕ್ಕೆ ಬಹಳ ಉತ್ಸುಕರಾಗಿದ್ದೀರಿ.

ವೃಷಭ: ಆರ್ಥಿಕ ಸ್ಥಿತಿಯಲ್ಲಿ ಯಾವುದೇ ತಾಪತ್ರಯಗಳಿಲ್ಲದೆ ವ್ಯಾಪಾರ ವ್ಯವಹಾರ ಹಂತ ಹಂತವಾಗಿ ಅಭಿವೃದ್ಧಿಯಾಗಲಿದೆ. ಇದೇ ಪ್ರೇರಣೆಯೊಂದಿಗೆ ಮುಂದುವರಿಯಿರಿ. ಹೊಂದಿಕೊಳ್ಳಲು ಸಮಯ ತೆಗೆದು ಕೊಳ್ಳುವಿರಿ.

ಮಿಥುನ: ಪ್ರವಾಸದಿಂದ ಅನಿರೀಕ್ಷಿತ ಲಾಭದ ಅನುಭವ ಉಂಟಾಗುವುದು. ಅವಿವಾಹಿತರಿಗೆ ವಿವಾಹ ಯೋಗವು ಇದೆ. ಇಂದಿನ ಅಪರೂಪದ ಮೃದು ಧೋರಣೆ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯ ಹಾಗೂ ಸಂತೋಷವೆನಿಸುವುದು.

ಕರ್ಕಾಟಕ: ಮನೆಯವರ ಅಥವಾ ಹಿರಿಯರ ಮಾತಿನಂತೆ ಕೆಲಸ ಕೈಗೊಳ್ಳುವುದು ಉತ್ತಮ. ಈ ದಿನ ಹೆಂಡತಿಯ ಆರೋಗ್ಯ ಸುಧಾರಿಸುತ್ತದೆ. ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡಿ ಅಪೇಕ್ಷಿತ ಜಯ ಹೊಂದುವಿರಿ.

ಸಿಂಹ: ನಿಮ್ಮ ಆಶಾವಾದ ಮತ್ತು ಧನಾತ್ಮಕ ವರ್ತನೆ, ಅಭಿವೃದ್ಧಿಯ ಹೆಜ್ಜೆಗಳು ನಿಮ್ಮ ಸುತ್ತಮುತ್ತಲಿನ ಜನರ ಕಣ್ಣನ್ನು ಕೆಂಪಾಗಿಸುತ್ತದೆ. ಈ ದಿನ ನಿಮ್ಮ ಕೋಪದ ಮೇಲೆ ನಿಯಂತ್ರಣವಿರಲಿ. ಗೃಹದಲ್ಲಿ ಶುಭ ಸಮಾರಂಭಗಳು ನಡೆಯುವುದು.

ಕನ್ಯಾ: ಮನೆ ಜಾಗದ, ಪಿತ್ರಾರ್ಜಿತ ಆಸ್ತಿಯ ಹಂಚಿಕೆಯ ವಿಷಯದಲ್ಲಿ ಕೆಲ ಬದಲಾವಣೆ ಮಾಡಿಕೊಳ್ಳ ಬೇಕಾಗುವ ಪರಿಸ್ಥಿತಿ ಬರುವುದು. ಹಿರಿಯರ ಆರೋಗ್ಯದಲ್ಲಿ ಸುಧಾರಣೆ ಕಾಣಲಿದೆ.

ತುಲಾ: ರಾಜಕೀಯವಾಗಿ ಪ್ರಬಲಗೊಳ್ಳುವ ಅವಕಾಶಗಳು ಈ ದಿನದಂದು ಹೆಚ್ಚಲಿದೆ. ಸಾಮಾಜಿಕ ವಲಯದಲ್ಲಿ ನಿಮ್ಮ ವರ್ಚಸ್ಸು ಬೆಳೆಯಲಿದೆ ಅತಿ ಹಣಕಾಸಿನ ವ್ಯಾಮೋಹದಿಂದ ಪಶ್ಚಾತಾಪಕ್ಕೆ ಕಾರಣವಾಗದಂತೆ ನೋಡಿಕೊಳ್ಳಿ.

ವೃಶ್ಚಿಕ: ಇಂದಿನ ಪರಿಸ್ಥಿತಿ ಮನದ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವಂತೆ ಪ್ರೇರೇಪಿಸುತ್ತದೆ. ವೃತ್ತಿ ಬದುಕಿನ ಗುರಿಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಪಡೆಯುವಿರಿ. ವೃಥಾ ಅಲೆದಾಟದಿಂದ ಆಯಾಸ ಆಗುವುದು.

ಧನು: ಕಾನೂನು ಸಮಸ್ಯೆಗಳೆಲ್ಲಾ ಸುಸೂತ್ರವಾಗಿ ಬಗೆ ಹರಿಯಲಿದೆ. ಅನವಶ್ಯಕ ಚಿಂತೆ ಬೇಡ. ಮನೆಯಲ್ಲಿ ಪತ್ನಿ, ಮಕ್ಕಳ ಆರೋಗ್ಯದ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಸಾಮಾಜಿಕವಾಗಿ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ.

ಮಕರ: ಲೇವಾದೇವಿ ವ್ಯವಹಾರ ನಡೆಸುವವರು ವ್ಯವಹಾರದಲ್ಲಿ ಸ್ವಲ್ಪ ಪ್ರಮಾಣದ ನಷ್ಟ ಸಂಭವಿಸಿ ಹಿನ್ನಡೆ ಕಾಣುವಂತಾಗಲಿದೆ. ದೇಹಾಯಾಸ ತೋರಿಬಂದು ತಪ್ಪು ನಿರ್ಧಾರ ತೆಗೆದುಕೊಳ್ಳುವ ಸ್ಥಿತಿ ಎದುರಾಗಬಹುದು.

ಕುಂಭ: ಮಗಳಿಗೆ ತಾಯಿಯ ಅಥವಾ ಹತ್ತಿರದ ಸಂಬಧಿಕರಲ್ಲಿಯೇ ವರ ನಿಶ್ಚಯವಾಗುವುದು. ಈ ದಿನ ನಿಮ್ಮ ಮುಖ್ಯ ಕೆಲಸಗಳತ್ತ ಮಾತ್ರ ಗಮನ ಹರಿಸಿ. ಸಿನಿಮಾ ನಟ ನಟಿಯರುಗಳಿಗೆ ಹೆಚ್ಚಿನ ಅವಕಾಶಗಳು ದೊರೆಯಲಿವೆ.

ಮೀನ: ಆಹಾರದ ಪದ್ಧತಿಯನ್ನು ನಿಯಂತ್ರಿಸಿಕೊಂಡು ರಕ್ತದೊತ್ತಡ ಸ್ಥಿತಿ ಸಮತೋಲನಕ್ಕೆ ಬರುವಂತೆ ಮಾಡಿಕೊಳ್ಳಿ. ಪ್ರಭಾವಿ ವ್ಯಕ್ತಿಗಳ ಒಡನಾಟ ಹೆಚ್ಚಿನ ಸ್ಥಾನಮಾನವನ್ನು ಜೊತೆಯಲ್ಲಿ ಆಯಾಸವನ್ನು ತಂದು ಕೊಡಲಿದೆ.

ಪದಬಂಧ 5392

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಾದದಲ್ಲಿ ಮುಕ್ತಾಯವಾಗಿರುವ ಸಂಭಾಷಣೆ (3)
4.ನಗದಲ್ಲಿ ಹಸನ್ಮುಖ ವದನ! (4)
6.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
8.ಹಿಂಜರಿಯದೇ ಹೇಳಿದ್ದು,ಮುಸಲ್ಮಾನರ ಕಾಲಗಣನೆ (3)
11.ಒಲುಮೆಯಿಂದ ಮಾಡಿದ ಒತ್ತಾಯ(3)
13.ಮಣಿ ಧರಿಸಿರುವ ಚಕ್ರವರ್ತಿನಿ (4)
17.ಆನೆಯ ಮೊಗದವನು (4)
18.ತುರಂಗದ ಹತ್ತಿರವಿರುವ ಅಶ್ವ (3)

ಮೇಲಿಂದ ಕೆಳಕ್ಕೆ
1.ದಣಿಯ ಹತ್ತಿರ ನೆರೆದ ಗುಂಪು (3)
2.ಪಶುಗಳನ್ನು ಕಾಯುವವನು (4)
3.ಕಾವ್ಯದ ನವರಸಗಳಲ್ಲಿ ಇದೊಂದು (3)
5.ಪಗಡೆಯಾಟದಲ್ಲಿ ದಾಳದಿಂದ ಸೂಚಿತವಾಗುವ ಸಂಖ್ಯೆ (2)
7.ವಂತಿಗೆ ಕೊಡುವಾಗ ಹಬ್ಬಿದ ಗಾಳಿ ಸುದ್ದಿ(3)
9.ರೀತಿಯೊಡನೆ ಬರುವ ಜೋಡುನುಡಿ (3)
10.ಮಲಗುವಾಗ ಬಂದಿರುವ ಸೇವಕ (3)
12.ಹಿಂದಿಯವನ ಪರಿಶ್ರಮ (4)
14.ಹಾವನ್ನು ನೋಡಿದ ಜಾಗದಲ್ಲಿರುವ ಪಾಚಿ(3)
15.ಆಶ್ರಯ ಸ್ಥಾನವು ಉಲ್ಟಾಕಾಣುತ್ತಿದೆಯಲ್ಲಾ? (2)
16.ಸೂಕ್ಷ್ಮ ದೃಷ್ಟಿಯುಳ್ಳ ಮಾಂಸಾಹಾರಿ ಪಕ್ಷಿ(3)

1		2	■	■	■	■	3	■
	■	4			5	■		■
	■		■	■	6			7
■	■	8		9	■	■	■	
10	■	■	■		■	■	■	
	■	■	■	11		12	■	■
13	14		15	■	■		■	16
■		■	17				■	
■		■	■	■	■	18		

5391ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಸ್ತಸಾಮುದ್ರಿಕೆ
4.ರಣರಂಪ 5.ರಕುತ
7.ಕಮರಿ 10.ರಿಕಾಪು
11.ತಿರುಕ 13.ಬಾಲರವಿ
15.ಪ್ರಣಯಕಲಹ

ಮೇಲಿಂದ ಕೆಳಕ್ಕೆ:
1.ಹತ್ತಿರ 2.ಕೆರ
3.ತಪಸ್ವಿನಿ 6.ತಲೋದರಿ
7.ಕದಪು 8.ರಿಯಾಯಿತಿ
9.ಆಜುಬಾಜು
12.ಕಲಹ 14.ವಿಪ್ರ

ಸುಡೊಕು 5778

	6				7		1	
8		7	6		4			
	2			8			5	6
	4			1		9		
		1	8	4	5		7	
7	5			9		3		
	8			7		4		3
			4		8		9	
9		4			2		6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5777 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಮುಂಬೈ ಧಾರಣೆ

ಶೇಂಗಾ

26-7-2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	12100-12200
ದಪ್ಪ ಗುಜರಾತ್(ಹೊಸ)	12900-13000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1875 (1875)
ಒಂದು ವಾರದ ಡೆಲಿವರಿ	1870 (1870)
ಸೋಯಾ ಕಚ್ಚಾ	945 (950)
ಪಾಮ್ ವಾರದ ಡೆಲಿವರಿ	895 (888)
ಸೂರ್ಯಕಾಂತಿ ಎಣ್ಣೆ ಕಚ್ಚಾ	940 (940)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,350 (58850)
ಬೆಳ್ಳಿ ಕೆ.ಜಿ 74,450 (73,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು 351



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,680
ಇಂದಿನ ಅಂತ್ಯ	19,778
▲	97
ದಿನದ ಕನಿಷ್ಠ	19,825

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹455
12 ಮೊಟ್ಟೆಗೆ ₹62
ಮೈಸೂರು
100 ಮೊಟ್ಟೆಗೆ ₹455

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1865 (1865)
ಸೋಯಾ (ರಿಫೈನ್ಡ್)	₹985 (985)
ಸೂರ್ಯಕಾಂತಿ (ರಿಫೈನ್ಡ್)	₹980 (980)
ಪಾಮೋಲಿನ್	₹897 (890)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹223-462
ದ್ವಿತಳಿ (ಬಿ.ವಿ) ₹260-612

ಕೊಬ್ಬರಿ ಧಾರಣೆ

ತಿಪಟೂರು	₹7500-10206
ಪುತ್ತೂರು (ಇತರ)	₹4500-7300
ತುರುವೇಕೆರೆ	₹9900-10200

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹150
ಆರ್‌ಎಸ್‌ಎಸ್-5 ₹145
ಗುಡ್ ಲಾಟ್ ₹128
(ಪ್ರತಿ ಕೆ.ಜಿಗೆ)

ಲೋಕಸಭೆಗೆ ವಿವರಣೆ ನೀಡಿದ ಕೇಂದ್ರ ಸರ್ಕಾರ

₹10 ಲಕ್ಷ ಕೋಟಿಗೂ ಹೆಚ್ಚಿನ ಅನುತ್ಪಾದಕ ಸಾಲ ವಸೂಲಿ

ನವದೆಹಲಿ (ಪಿಟಿಐ): ಎನ್‌ಪಿಎ ಎಂದು ವರ್ಗೀಕೃತ ಆಗಿದ್ದ ಒಟ್ಟು ₹10 ಲಕ್ಷ ಕೋಟಿಗೂ ಹೆಚ್ಚಿನ ಮೊತ್ತದ ಸಾಲವನ್ನು ಕಳೆದ ಒಂಬತ್ತು ವರ್ಷಗಳಲ್ಲಿ ವಸೂಲು ಮಾಡಲು ಬ್ಯಾಂಕುಗಳಿಗೆ ಸಾಧ್ಯವಾಗಿದೆ. ಅನುತ್ಪಾದಕ ಸಾಲದ ಪ್ರಮಾಣವನ್ನು ತಗ್ಗಿಸಲು ಕೇಂದ್ರ ಸರ್ಕಾರ ಹಾಗೂ ಆರ್‌ಬಿಐ ಕೈಗೊಂಡ ಕ್ರಮಗಳು ಬ್ಯಾಂಕುಗಳ ನೆರವಿಗೆ ಬಂದಿವೆ.

ಆರ್‌ಬಿಐ ನೀಡಿರುವ ಮಾಹಿತಿ ಪ್ರಕಾರ ವಾಣಿಜ್ಯ ಬ್ಯಾಂಕುಗಳು, ಅನುತ್ಪಾದಕ ಎಂದು ಪರಿಗಣಿತವಾಗಿದ್ದ ಒಟ್ಟು ₹10.16 ಲಕ್ಷ ಕೋಟಿ ಮೊತ್ತದ ಸಾಲವನ್ನು ಕಳೆದ ಒಂಬತ್ತು ಹಣಕಾಸು ವರ್ಷಗಳಲ್ಲಿ ವಸೂಲು ಮಾಡಿವೆ.

ವಾಣಿಜ್ಯ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳು ನೀಡಿರುವ, ₹20 ಕೋಟಿಗಿಂತ ಹೆಚ್ಚಿನ ಮೊತ್ತದ ಅನುತ್ಪಾದಕ ಸಾಲಗಳ ಪ್ರಮಾಣವು ಕಳೆದ ಐದು ವರ್ಷಗಳಲ್ಲಿ ಕಡಿಮೆ ಆಗಿದೆ ಎಂದು ಆರ್‌ಬಿಐ ನೀಡಿರುವ ಅಂಕಿ–ಅಂಶಗಳು ಹೇಳಿವೆ.

2018–19ರ ಕೊನೆಯಲ್ಲಿ ಎನ್‌ಪಿಎ ಮೊತ್ತವು ₹7.09 ಲಕ್ಷ ಕೋಟಿ ಆಗಿತ್ತು. ಇದು ಈ ವರ್ಷದ ಮಾರ್ಚ್ ಅಂತ್ಯಕ್ಕೆ ₹2.66 ಲಕ್ಷ ಕೋಟಿಗೆ ಇಳಿಕೆಯಾಗಿದೆ.

ಎನ್‌ಪಿಎ ಪ್ರಮಾಣ ತಗ್ಗಿಸಲು ಕೇಂದ್ರ ಹಾಗೂ ಆರ್‌ಬಿಐ ವ್ಯಾಪಕ ಕ್ರಮಗಳನ್ನು ಕೈಗೊಂಡಿವೆ ಎಂದು ಈ ವಾರದ ಆರಂಭದಲ್ಲಿ ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕರಾಡ್ ಅವರು ವಿವರಿಸಿದ್ದಾರೆ.

ಸಾಲ ವಸೂಲಿ ನ್ಯಾಯಮಂಡಳಿಗಳ (ಡಿಆರ್‌ಟಿ) ವ್ಯಾಪ್ತಿಯನ್ನು ಹಿಗ್ಗಿಸಿ, ಅವು ಹೆಚ್ಚಿನ ಮೊತ್ತದ ಸಾಲಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ನಿಭಾಯಿಸಲು ಸಾಧ್ಯವಾಗುವಂತೆ ಮಾಡಲಾಗಿದೆ. ಇದರ ಪರಿಣಾಮವಾಗಿ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಹೆಚ್ಚಿನ ಪ್ರಮಾಣದಲ್ಲಿ ಸಾಲವನ್ನು ವಸೂಲು ಮಾಡಲು ಸಾಧ್ಯವಾಗಿದೆ ಎಂದು ಅವರು ವಿವರಿಸಿದ್ದಾರೆ.

ಉದ್ದೇಶಪೂರ್ವಕ ಸುಸ್ತಿದಾರರಿಗೆ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಹೊಸ ಸಾಲ ನೀಡುತ್ತಿಲ್ಲ. ಅಲ್ಲದೆ, ಉದ್ದೇಶಪೂರ್ವಕ ಸುಸ್ತಿದಾರರು ಐದು ವರ್ಷಗಳವರೆಗೆ ಯಾವುದೇ ಹೊಸ ಕಂಪನಿ ಆರಂಭಿಸದಂತೆ ನಿರ್ಬಂಧಿಸಲಾಗುತ್ತದೆ. ಉದ್ದೇಶಪೂರ್ವಕ ಸುಸ್ತಿದಾರರು ಹಾಗೂ ಅವರನ್ನು ಆಡಳಿತ ಮಂಡಳಿಯಲ್ಲಿ ಹೊಂದಿರುವ ಕಂಪನಿಗಳು ಬಂಡವಾಳ ಸಂಗ್ರಹಿಸಲು ಬಂಡವಾಳ ಮಾರುಕಟ್ಟೆಯನ್ನು ಕೂಡ ಬಳಸಲು ಅವಕಾಶ ನೀಡುತ್ತಿಲ್ಲ ಎಂದು ಅವರು ತಿಳಿಸಿದ್ದಾರೆ.

ಚೀನಾ ವಿರುದ್ಧ ಡೊಭಾಲ್ ಪರೋಕ್ಷ ವಾಗ್ದಾಳಿ

ಜೊಹಾನಸ್‌ಬರ್ಗ್ (ಪಿಟಿಐ): ವಿಶ್ವಸಂಸ್ಥೆಯ ಭಯೋತ್ಪಾದನೆ ನಿಗ್ರಹ ವ್ಯವಸ್ಥೆಯಡಿ ಭಯೋತ್ಪಾದಕರನ್ನು ಪಟ್ಟಿ ಮಾಡಲು ಬ್ರಿಕ್ಸ್ ದೇಶಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಆದರೆ ಆ ಪ್ರಕ್ರಿಯೆಯು ರಾಜಕೀಯ ಮತ್ತು ದ್ವಿಮುಖ ನೀತಿಗಳಿಂದ ಮುಕ್ತವಾಗಿರಬೇಕು ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರು ಚೀನಾ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ಮಂಗಳವಾರ ಬ್ರಿಕ್ಸ್ (ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ) ದೇಶಗಳ ರಾಷ್ಟ್ರೀಯ ಭದ್ರತಾ ಸಲಹೆಗಾರರ ಸಭೆಯಲ್ಲಿ ಅವರು ಮಾತನಾಡಿದರು. ಈ ವೇಳೆ ಚೀನಾದ ಉನ್ನತ ರಾಜತಾಂತ್ರಿಕ ಅಧಿಕಾರಿ ವಾಂಗ್ ಯಿ ಇದ್ದರು. ವಾಂಗ್ ಯಿ ಅವರು 2013ರಿಂದ 2022ರ ವರೆಗೆ ದೇಶದ ವಿದೇಶಾಂಗ ಸಚಿವರಾಗಿದ್ದರು.

ಅಜಿತ್ ಡೊಭಾಲ್

‘ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ಭಯೋತ್ಪಾದನೆ ಬಹು ದೊಡ್ಡ ಸವಾಲಾಗಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಭಯೋತ್ಪಾದನೆ ನಿಗ್ರಹ ಸಮಿತಿಯ ನಿರ್ಧಾರವು ರಾಜಕೀಯ ಮತ್ತು ದ್ವಿಮುಖ ನೀತಿಗಳಿಂದ ಮುಕ್ತವಾಗಿರುವುದು ಅವಶ್ಯಕ’ ಎಂದು ಯಾವುದೇ ದೇಶದ ಹೆಸರನ್ನು ಉಲ್ಲೇಖಿಸದೆ ಡೊಭಾಲ್ ಹೇಳಿದರು.

ಲಷ್ಕರ್–ಎ–ತಯಬಾ ಮತ್ತು ಪಾಕಿಸ್ತಾನ ಮೂಲದ ಇತರ ಅಂತರರಾಷ್ಟ್ರೀಯ ಉಗ್ರ ಸಂಘಟನೆಗಳನ್ನು ಹೆಡೆಮುರಿಕಟ್ಟುವ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿಲುವಿಗೆ ಪಾಕಿಸ್ತಾನದೊಂದಿಗೆ ಅಪರಿಮಿತ ಮಿತ್ರತ್ವ ಹೊಂದಿರುವ ಚೀನಾ ಪದೇ ಪದೇ ಅಡ್ಡಗಾಲು ಹಾಕುತ್ತಿದೆ.

‘ಜಲಸಂಪನ್ಮೂಲ ಮಾಹಿತಿ ಪಾರದರ್ಶಕವಾಗಿರಲಿ’: ಗಡಿಗಳ ನಡುವೆ ಹಾದುಹೋಗುವ ಜಲ ಸಂಪನ್ಮೂಲದ ಕುರಿತು ಹಂಚಿಕೆಯಾಗುವ ಮಾಹಿತಿಯಲ್ಲಿ ಪಾರದರ್ಶಕತೆ ಇರಬೇಕು. ನೀರಿನ ವಿಷಯದಲ್ಲಿ ರಾಜಕೀಯ ಮತ್ತು ಶಸ್ತ್ರಾಸ್ತ್ರಗಳ ಬಳಕೆಗೆ ಕಡಿವಾಣ ಹಾಕಬೇಕು ಎಂದೂ ಡೊಭಾಲ್ ಅವರು ಬಲವಾಗಿ ಪ್ರತಿಪಾದಿಸಿದರು.

ಜಲ ಸಂಪನ್ಮೂಲದ ರಕ್ಷಣೆ ಪ್ರಮುಖ ಜಾಗತಿಕ ವಿಷಯ. ಜಾಗರೂಕ ಬಳಕೆ ಮತ್ತು ಸಂರಕ್ಷಣೆ ಎಲ್ಲರ ಹೊಣೆ ಎಂದರು.

ಭಾರತದ ಮೂಲಕ ಹರಿಯುವ ನದಿಗಳ ನೀರಿನ ಪ್ರಮಾಣದ ಅಂಕಿಅಂಶ ನೀಡುವುದನ್ನು ಚೀನಾ 2017ರಲ್ಲಿ ನಿಲ್ಲಿಸಿದ್ದು, ಕಳೆದ ವರ್ಷದಿಂದ ಮತ್ತೆ ಆರಂಭಿಸಿದೆ.

ಇಮ್ರಾನ್ ಖಾನ್ ಮನವಿ ತಿರಸ್ಕಾರ

ಇಸ್ಲಾಮಾಬಾದ್ (ಪಿಟಿಐ): ತೋಶಾಖಾನಾ ಭ್ರಷ್ಟಾಚಾರ ಪ್ರಕರಣದಲ್ಲಿ ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕ್ರಿಯೆಗೆ ತಡೆ ನೀಡುವಂತೆ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮಾಡಿದ ಮನವಿಯನ್ನು ಪಾಕ್ ಸುಪ್ರೀಂ ಕೋರ್ಟ್ ಬುಧವಾರ ತಿರಸ್ಕರಿಸಿದೆ.

ತೋಶಾಖಾನಾ ಪ್ರಕರಣದ ವಿಚಾರಣಾ ನ್ಯಾಯಾ ಲಯದ ತೀರ್ಪಿಗೆ ಸಂಬಂಧಿಸಿದಂತೆ ಈ ಕೋರ್ಟ್ ಮಧ್ಯಪ್ರವೇಶಿಸುವುದಿಲ್ಲ ಎಂದು ಬುಧವಾರ ವಿಚಾರಣೆ ವೇಳೆ ದ್ವಿಸದಸ್ಯ ಪೀಠದ ನ್ಯಾಯಮೂರ್ತಿ ಯಹ್ಯಾ ಅಫ್ರಿದಿ ಹೇಳಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪಿಎನ್‌ಬಿ, ಎಕ್ಸಿಸ್ ಬ್ಯಾಂಕ್ ಲಾಭ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ (ಪಿಎನ್‌ಬಿ) ಜೂನ್ ತ್ರೈಮಾಸಿಕದ ಲಾಭವು ನಾಲ್ಕು ಪಟ್ಟು ಹೆಚ್ಚಾಗಿದ್ದು, ₹1,255 ಕೋಟಿಗೆ ತಲುಪಿದೆ. ಅನುತ್ಪಾದಕ ಸಾಲದ ಪ್ರಮಾಣ ಕಡಿಮೆ ಆಗಿದ್ದು, ಬಡ್ಡಿ ವರಮಾನ ಜಾಸ್ತಿ ಆಗಿದ್ದು ಲಾಭ ಏರಿಕೆಗೆ ಪ್ರಮುಖ ಕಾರಣಗಳು.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ಲಾಭವು ₹308 ಕೋಟಿ ಆಗಿತ್ತು. ಜೂನ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಒಟ್ಟು ವರಮಾನವು ₹28,579 ಕೋಟಿಗೆ ಏರಿಕೆ ಆಗಿದೆ. ಈ ಬಾರಿ ಬ್ಯಾಂಕ್ ಪಡೆದಿರುವ ಲಾಭವು 12 ತ್ರೈಮಾಸಿಕಗಳಲ್ಲಿನ ಗರಿಷ್ಠ ಎಂದು ವ್ಯವಸ್ಥಾಪಕ ನಿರ್ದೇಶಕ ಅತುಲ್ ಕುಮಾರ್ ಗೋಯಲ್ ಹೇಳಿದ್ದಾರೆ.

ಬ್ಯಾಂಕ್‌ನ ನಿವ್ವಳ ಎನ್‌ಪಿಎ ಪ್ರಮಾಣವು ಶೇ 1.98ಕ್ಕೆ ಇಳಿಕೆಯಾಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 4.26ರಷ್ಟು ಇತ್ತು.

ಎಕ್ಸಿಸ್ ಬ್ಯಾಂಕ್ ಲಾಭ ಶೇ 40 ಹೆಚ್ಚಳ: ಖಾಸಗಿ ಸ್ವಾಮ್ಯದ ಎಕ್ಸಿಸ್ ಬ್ಯಾಂಕ್‌ನ ಜೂನ್ ತ್ರೈಮಾಸಿಕದ ಲಾಭವು ಶೇ 40.5ರಷ್ಟು ಹೆಚ್ಚಾಗಿದ್ದು, ₹5,797 ಕೋಟಿಗೆ ತಲುಪಿದೆ. ಬ್ಯಾಂಕ್‌ನ ಎನ್‌ಪಿಎ ಪ್ರಮಾಣ ತಗ್ಗಿದೆ, ಬಡ್ಡಿ ವರಮಾನವು ಹೆಚ್ಚಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಎಕ್ಸಿಸ್ ಬ್ಯಾಂಕ್ ₹4,125 ಕೋಟಿ ಲಾಭ ಗಳಿಸಿತ್ತು.

ಜೂನ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಒಟ್ಟು ವರಮಾನವು ₹30,644 ಕೋಟಿಗೆ ಹೆಚ್ಚಾಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹21,657 ಕೋಟಿ ಆಗಿತ್ತು. ಬ್ಯಾಂಕ್‌ನ ನಿವ್ವಳ ಎನ್‌ಪಿಎ ಪ್ರಮಾಣವು ಶೇ 0.41ಕ್ಕೆ ಇಳಿಕೆಯಾಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 0.64ರಷ್ಟು ಇತ್ತು.

ಎಂಆರ್‌ಪಿಎಲ್ ಅತಿದೊಡ್ಡ ರಿಫೈನರಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) ಕಂಪನಿಯು 2022-23ನೇ ಸಾಲಿನಲ್ಲಿ, ಒಂದೇ ಸ್ಥಳದಲ್ಲಿ ತೈಲ ಸಂಸ್ಕರಣೆ ಮಾಡುವ ದೇಶದ ಸರ್ಕಾರಿ ಸ್ವಾಮ್ಯದ ರಿಫೈನರಿಗಳ ಪೈಕಿ ಅತಿದೊಡ್ಡ ರಿಫೈನರಿ ಎಂಬ ಹೆಗ್ಗಳಿಕೆ ಪಡೆದಿದೆ.

ಕಳೆದ ಹಣಕಾಸು ವರ್ಷದಲ್ಲಿ 1.71 ಕೋಟಿ ಮೆಟ್ರಿಕ್ ಟನ್ ಕಚ್ಚಾತೈಲವನ್ನು ಸಂಸ್ಕರಿಸುವ ಮೂಲಕ ಎಂಆರ್‌ಪಿಎಲ್ ಈ ಸಾಧನೆ ಮಾಡಿದೆ. ರಾಷ್ಟ್ರದ ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣಾ ಘಟಕಗಳು ಸಂಸ್ಕರಿಸುವ ಕಚ್ಚಾತೈಲದಲ್ಲಿ ಶೇ10ರಷ್ಟನ್ನು ಎಂಆರ್‌ಪಿಎಲ್ ಸಂಸ್ಕರಿಸುತ್ತದೆ.

ಜಗತ್ತಿನ 250ಕ್ಕೂ ಹೆಚ್ಚು ಬಗೆಯ ಕಚ್ಚಾತೈಲಗಳನ್ನು ಸಂಸ್ಕರಿಸುವ ಸಾಮರ್ಥ್ಯವನ್ನು ಎಂಆರ್‌ಪಿಎಲ್ ಹೊಂದಿದ್ದು, ಮಧ್ಯಪ್ರಾಚ್ಯ, ರಷ್ಯಾ, ಆಫ್ರಿಕಾ, ದಕ್ಷಿಣ ಅಮೆರಿಕ, ಯುರೋಪ್‌ನ ಕಚ್ಚಾತೈಲವನ್ನು ಇಲ್ಲಿ ಸಂಸ್ಕರಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಹಿಮಾಚಲಪ್ರದೇಶದಲ್ಲಿ ಮತ್ತೆ ಮೇಘಸ್ಫೋಟ

ಕೊಚ್ಚಿಹೋದ ಮನೆಗಳು

ಶಿಮ್ಲಾ/ರಾಮಪುರ (ಪಿಟಿಐ): ಶಿಮ್ಲಾ ಜಿಲ್ಲೆಯ ರಾಮಪುರ ಉಪವಿಭಾಗದಲ್ಲಿ ಮೇಘಸ್ಫೋಟದಿಂದ ಶಾಲೆ, ಐದು ಮನೆಗಳು ಮತ್ತು ಕೃಷಿ ಭೂಮಿ ಕೊಚ್ಚಿಕೊಂಡು ಹೋಗಿವೆ. ಭೂಕುಸಿತದಿಂದ ಜಕ್ರಿ ಮತ್ತು ಜೋರಿ ಪ್ರದೇಶಗಳ ಬಳಿ ರಾಷ್ಟ್ರೀಯ ಹೆದ್ದಾರಿ 5 ಬಂದ್ ಆಗಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಸರಪಾರಾ ಪಂಚಾಯಿತಿ ವ್ಯಾಪ್ತಿಯ ಕಂಧಾರ್ ಗ್ರಾಮದಲ್ಲಿ ಮಂಗಳವಾರ ಮೇಘಸ್ಫೋಟದಿಂದ ಸುಮಾರು 20 ಕುರಿಗಳು ಮತ್ತು ಜಾನುವಾರುಗಳು ನೀರಿನ ರಭಸಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋಗಿವೆ.

ಭೂಕುಸಿತದಿಂದ ಶಿಮ್ಲಾ- ಕಣ್ಣೂರ್ ರಸ್ತೆ ಬಂದ್ ಆಗಿದೆ ಎಂದು ರಾಮಪುರ ಉಪ ವಿಭಾಗದ ಮ್ಯಾಜಿಸ್ಟ್ರೇಟ್ ನಿಶಾಂತ್ ತೋಮರ್ ತಿಳಿಸಿದ್ದಾರೆ.

ಐದು ಮನೆಗಳು ಸಂಪೂರ್ಣ ಹಾನಿ ಗೀಡಾಗಿವೆ. ಸುಂದಾ ಗ್ರಾಮದ ಸಮೀಪ ಕಲ್ಲು ಉರುಳಿ ಎರಡು ವಾಹನಗಳು ಸಂಪೂರ್ಣ ಜಖಂಗೊಂಡಿವೆ. ವಾಹನ ಗಳ ಚಾಲಕರು ಮತ್ತು ಪ್ರಯಾಣಿಕರನ್ನು ಪಾರುಮಾಡಲಾಗಿದೆ.

ಹಿಮಾಚಲ ಪ್ರದೇಶದ ಕುಲ್ಲು–ಮನಾಲಿ ಹೆದ್ದಾರಿಯಲ್ಲಿ ಮಳೆಯಿಂದಾಗಿ ರಸ್ತೆಗಳು ಬಿರುಕುಬಿಟ್ಟಿವೆ –ಪಿಟಿಐ ಚಿತ್ರ

ಮಹಾರಾಷ್ಟ್ರದಲ್ಲಿ ಐವರ ಸಾವು

ಚಂದ್ರಾಪುರ (ಪಿಟಿಐ): ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆಯ ನಾಲ್ಕು ಸ್ಥಳಗಳಲ್ಲಿ ಕಳೆದ 24 ಗಂಟೆಗಳಲ್ಲಿ ಸಿಡಿಲು ಬಡಿದು ನಾಲ್ವರು ಮಹಿಳೆಯರು ಸೇರಿ ಐವರು ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ತೈಲ ಮಾರಾಟ ಕಂಪನಿಗಳಿಗೆ ದಾಖಲೆ ಲಾಭ ನಿರೀಕ್ಷೆ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳ ತೆರಿಗೆ ಪೂರ್ವದ ಲಾಭವು ಈ ವರ್ಷದಲ್ಲಿ ದಾಖಲೆಯ ₹1 ಲಕ್ಷ ಕೋಟಿಯನ್ನು ತಲುಪುವ ನಿರೀಕ್ಷೆ ಇದೆ. ದೇಶಿ ಮಾರು ಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಿನ ಮಟ್ಟದಲ್ಲಿ ಇರುವುದು ಹಾಗೂ ಆಮದು ಕಚ್ಚಾ ತೈಲದ ಬೆಲೆಯು ಸ್ಥಿರವಾಗಿ, ಕಡಿಮೆ ಮಟ್ಟದಲ್ಲಿ ಇರುವುದು ಈ ಲಾಭಕ್ಕೆ ಕಾರಣ ಎಂದು ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್ ಸಿದ್ಧಪಡಿಸಿರುವ ವರದಿ ಹೇಳಿದೆ.

ಕಚ್ಚಾ ತೈಲದ ಬೆಲೆಯು ಈ ಹಣ ಕಾಸು ವರ್ಷದಲ್ಲಿ ಶೇಕಡ 30ರಷ್ಟಕ್ಕಿಂತ ಕಡಿಮೆ ಆಗಿದೆ. ಹೀಗಿದ್ದರೂ 2022ರ ಮೇ ತಿಂಗಳ ನಂತರದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯನ್ನು ತೈಲ ಮಾರಾಟ ಕಂಪನಿ ಗಳು ಪರಿಷ್ಕರಿಸಿಲ್ಲ.

2017ರಿಂದ 2022ರ ನಡುವಿನ ಅವಧಿಯಲ್ಲಿ ತೈಲ ಮಾರಾಟ ಕಂಪನಿ ಗಳ ಕಾರ್ಯಾಚರಣೆ ಲಾಭವು ಸರಾ ಸರಿ ₹60 ಸಾವಿರ ಕೋಟಿ ಇದೆ. ಇದು ಈ ವರ್ಷದಲ್ಲಿ ₹1 ಲಕ್ಷಕ್ಕೆ ತಲುಪಬಹುದು ಎಂದು ಕ್ರಿಸಿಲ್ ಅಂದಾಜು ಮಾಡಿದೆ.

ಚಿರಸ್ಮರಣೆ

ಎಂ. ಸುಶೀಲಾ
W/o. ದಿವಂಗತ ಜಿ. ಮುನಿಯಪ್ಪ, IAS (Retd.)
27-07-1990
ಎಂ.ಕವಿತ, ಎಂ. ರೇಖ, ಹೇಮಲತಾ ಎಲ್. ಹಾಗೂ ಕುಟುಂಬ ವರ್ಗದವರು

ಕಲ್ಲಿದ್ದಲು ಹಗರಣ: ದರ್ದಾ, ಪುತ್ರನಿಗೆ 4 ವರ್ಷ ಜೈಲು

ನವದೆಹಲಿ (ಪಿಟಿಐ): ಛತ್ತೀಸ ಗಢದ ಕಲ್ಲಿದ್ದಲು ನಿಕ್ಷೇಪ ಹಂಚಿಕೆಯಲ್ಲಿನ ಭಾರಿ ಅಕ್ರಮಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ರಾಜ್ಯಸಭೆಯ ಮಾಜಿ ಸದಸ್ಯ ವಿಜಯ್ ದರ್ದಾ ಮತ್ತು ಅವರ ಮಗ ದೇವೇಂದ್ರ ದರ್ದಾ ಹಾಗೂ ಉದ್ಯಮಿ ಮನೋಜ್ ಕುಮಾರ್ ಜೈಸ್ವಾಲ್ ಅವರಿಗೆ ದೆಹಲಿ ನ್ಯಾಯಾಲಯವು 4 ವರ್ಷಗಳ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ವಿಶೇಷ ನ್ಯಾಯಾಧೀಶ ಸಂಜಯ್ ಬನ್ಸಾಲ್ ಅವರು ತೀರ್ಪು ಪ್ರಕಟಿಸಿದ ನಂತರ ಎಲ್ಲಾ ಮೂವರು ಅಪರಾಧಿಗಳನ್ನು ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ.

ಇದೇ ಪ್ರಕರಣದಲ್ಲಿ ಕಲ್ಲಿದ್ದಲು ಇಲಾಖೆಯ ಮಾಜಿ ಕಾರ್ಯದರ್ಶಿ ಎಚ್.ಸಿ. ಗುಪ್ತಾ ಮತ್ತು ಇಬ್ಬರು ಮಾಜಿ ಅಧಿಕಾರಿಗಳಾದ ಕೆ.ಎಸ್. ಕ್ರೋಫಾ ಮತ್ತು ಕೆ.ಸಿ. ಸಮ್ರಿಯಾ ಅವರಿಗೆ ತಲಾ ಮೂರು ವರ್ಷ ಜೈಲು ಶಿಕ್ಷೆ ವಿಧಿಸಿದ್ದಾರೆ. ಈ ಮೂವರು ಅಪರಾಧಿಗಳಿಗೆ ನ್ಯಾಯಾಲಯವು ವೈಯಕ್ತಿಕ ಬಾಂಡ್ ಆಧರಿಸಿ ಜಾಮೀನು ನೀಡಿದೆ.

ಪ್ರಕರಣದಲ್ಲಿ ದೋಷಿ ಎಂದು ದೃಢಪಟ್ಟಿರುವ ಜೆಎಲ್‌ಡಿ ಯವತ್ಮಾಳ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ₹50 ಲಕ್ಷ ದಂಡ ವಿಧಿಸಲಾಗಿದೆ. ಜತೆಗೆ, ವಿಜಯ್ ದರ್ದಾ, ದೇವೇಂದ್ರ ದರ್ದಾ ಹಾಗೂ ಜೈಸ್ವಾಲ್ ಅವರಿಗೆ ತಲಾ ₹15 ಲಕ್ಷ ಹಾಗೂ ಇತರ ಮೂವರು ಅಪರಾಧಿಗಳಿಗೆ ತಲಾ ₹20 ಸಾವಿರ ದಂಡ ವಿಧಿಸಿದೆ.

ಸಂಕ್ಷಿಪ್ತ ಸುದ್ದಿ

ಲೈಂಗಿಕ ದೌರ್ಜನ್ಯ ಪ್ರಕರಣ: ನಟ ಕೆವಿನ್ ಸ್ಪೇಸಿ ದೋಷಮುಕ್ತ

ಲಂಡನ್ (ಎಪಿಎಫ್): ಲೈಂಗಿಕ ದೌರ್ಜನ್ಯ ಮೊಕದ್ದಮೆಯೊಂದರಲ್ಲಿ ಅಮೆರಿಕ ನಟ ಕೆವಿನ್ ಸ್ಪೇಸಿ ಅವರನ್ನು ಬ್ರಿಟನ್‌ನ ನ್ಯಾಯಾಲಯವೊಂದು ಬುಧವಾರ ದೋಷಮುಕ್ತಗೊಳಿಸಿತು.

ಆಸ್ಕರ್ ಪ್ರಶಸ್ತಿ ಪುರಸ್ಕೃತ ನಟ ಕೆವಿನ್ ಅವರು 2001ರಿಂದ 2013ರ ಅವಧಿಯಲ್ಲಿ ನಾಲ್ವರು ಪುರುಷರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಒಂಬತ್ತು ಪ್ರಕರಣಗಳು ದಾಖಲಾಗಿದ್ದವು.

ಪಾಕ್‌ಗೆ ಕೊಚ್ಚಿಹೋದ ಭಾರತೀಯ

ಲಾಹೋರ್ (ಪಿಟಿಐ): ‘ಕಿವಿ ಕೇಳಿಸದ ಭಾರತದ ಪ್ರಜೆಯೊಬ್ಬ ಸಟ್ಲೆಜ್ ನದಿಯಲ್ಲಿ ಉಂಟಾದ ಪ್ರವಾಹದಿಂದಾಗಿ ದೇಶಕ್ಕೆ ಕೊಚ್ಚಿಕೊಂಡು ಬಂದಿದ್ದು, ಆತನನ್ನು ಗುಪ್ತಚರ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ’ ಎಂದು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

‘ಸುಮಾರು 50 ವರ್ಷದ ಈ ವ್ಯಕ್ತಿ ಪಂಜಾಬ್ ಪ್ರಾಂತ್ಯದ ಕಸೂರ್ ಜಿಲ್ಲೆಯ ಗಂಡಾ ಸಿಂಗ್ ವಾಲಾ ಎಂಬ ಹಳ್ಳಿಯಲ್ಲಿ ಮಂಗಳವಾರ ಪತ್ತೆಯಾಗಿದ್ದಾರೆ. ಸಂಕೇತ ಭಾಷೆಯ ಮೂಲಕ ಮಾತ್ರವೇ ಆತನೊಂದಿಗೆ ಸಂವಹಿಸಬಹುದಾಗಿದೆ. ತಾನೊಬ್ಬ ಹಿಂದೂ ಹಾಗೂ ಪ್ರವಾಹವು ತನ್ನನ್ನು ಇಲ್ಲಿಯವರೆಗೆ ಸೆಳೆದುಕೊಂಡು ಬಂದಿತು ಎಂದು ಆತ ಹೇಳಿದ್ದಾನೆ’ ಎಂದು ರಕ್ಷಣಾ ವಕ್ತಾರರೊಬ್ಬರು ಮಾಹಿತಿ ನೀಡಿದರು.

ಜಪಾನ್‌ನಲ್ಲಿ ಜನಸಂಖ್ಯೆ ಕುಸಿತ

ಟೋಕಿಯೊ (ಜಪಾನ್) (ಎಪಿ): ಜಪಾನ್‌ನ ಎಲ್ಲ 47 ಪ್ರಾಂತ್ಯಗಳ ಜನಸಂಖ್ಯೆಯಲ್ಲಿ ದಾಖಲೆಯ ಇಳಿಕೆ ಕಂಡುಬಂದಿದೆ. ಇನ್ನೊಂದೆಡೆ ದೇಶದಲ್ಲಿ ನೆಲೆ ಕಂಡುಕೊಂಡಿರುವ ವಿದೇಶಿಯರ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ.

ಸರ್ಕಾರ ಬುಧವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಅಂಶಗಳನ್ನು ವಿವರಿಸಲಾಗಿದ್ದು, ದೇಶದಲ್ಲಿ ನೆಲೆಸಿರುವ ವಿದೇಶಿಯರ ಸಂಖ್ಯೆ 30 ಲಕ್ಷದ ಗಡಿ ತಲುಪಿದೆ ಎಂದು ಹೇಳಲಾಗಿದೆ.

ಪ್ರಬಲ ಚಂಡಮಾರುತ ಇಬ್ಬರು ಸಾವು

ಮನಿಲಾ (ಎಎಫ್‌ಪಿ): ಉತ್ತರ ಫಿಲಿಪೀನ್ಸ್‌ಗೆ ಬುಧವಾರ ಅಪ್ಪಳಿಸಿದ ಪ್ರಬಲ ಚಂಡಮಾರುತ ‘ದೊಕ್ಸುರಿ’ ಗೆ ಇಬ್ಬರು ಬಲಿಯಾಗಿದ್ದಾರೆ. ಸಾವಿರಾರು ಜನರು ಆಶ್ರಯ ಕಳೆದುಕೊಂಡಿದ್ದು, ನಿರಾಶ್ರಿತರ ಕೇಂದ್ರದಲ್ಲಿ ಆಶ್ರಯ ಪಡೆದಿದ್ದಾರೆ.

ಇಸಾಬೆಲಾ ಉತ್ತರ ಪ್ರಾಂತ್ಯದ ರಾಮನ್ ಪುರಸಭೆಯಲ್ಲಿ ಬುಧವಾರ ಚಂಡಮಾರುತದ ಗಾಳಿಗೆ ತೆಂಗಿನ ಮರ ಬಿದ್ದು ಸೈಕಲ್‌ನಲ್ಲಿ ಬ್ರೆಡ್ ಮಾರುತ್ತಿದ್ದ ಮಹಿಳೆ ಮೃತರಾಗಿದ್ದಾರೆ. ಬಾಗುಯೋ ನಗರದಲ್ಲಿ ಮನೆಯ ಮೇಲೆ ಬೆಟ್ಟ ಕುಸಿದಿದ್ದರಿಂದ 17 ವರ್ಷದ ಯುವಕ ಮೃತನಾಗಿದ್ದಾನೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	900-950
ಜರಡಿ	1000 - 1050
ಹೆರಕಿದ್ದು	1300-1400
ಹಸಿರು ಸಾಧಾರಣ	1000-1100
ಹಸಿರು ಉತ್ತಮ	1250-1350
ಹಸಿರು ಅತಿ ಉತ್ತಮ	1600-1800
ಕಾಳುಮೆಣಸು -	580

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-43200
ಹಳತು	46000-48000
ಕಾರ್ಕಳ	
ಹೊಸತು	30000-43200
ಹಳತು	40000-48000
ಕುಮಟಾ	
ಚಿಪ್ಪು	31019-34309
ಕೋಕ	23069-34099
ಫ್ಯಾಕ್ಟರಿ	14269-22279
ಹಳೆಚಾಲಿ	38969-41272
ಹೊಸಚಾಲಿ	38069-41299
ಪುತ್ತೂರು	
ಕೋಕ	11000-25000
ಹೊಸತು	34000-42500
ಶಿವಮೊಗ್ಗ	
ಬೆಟ್ಟೆ	49099-54599
ಗೊರಬಲು	17116-43250
ರಾಶಿ	43333-56212
ಸರಕು	45533-78119
ಸಿದ್ದಾಪುರ	
ಬಿಳಿಗೋಟು	31819-34899
ಚಾಲಿ	38369-41600
ಕೋಕ	31019-34819
ಕೆಂಪುಗೋಟು	34299-36089
ರಾಶಿ	48909-52159
ತಟ್ಟಿಬೆಟ್ಟೆ	43099-51009
ಶಿರಸಿ	
ಬೆಟ್ಟೆ	38199-48599
ಬಿಳಿಗೋಟು	27191-37399
ಚಾಲಿ	37699-42018
ಕೆಂಪುಗೋಟು	28299-38899
ರಾಶಿ	44599-52199
ಸೊರಬ	
ಗೊರಬಲು	35099-35099
ರಾಶಿ	48599-54099

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14000	14200	14000	161.85 ಸೆಂಟ್ಸ್
ಎಸಿ	7140	7100	7000	
ಆರ್‌ಪಿ	10100	10300	5900	ಲಂಡನ್
ಆರ್‌ಸಿ	6225	---	4125	2628 ಡಾಲರ್ಸ್

ಮಹದಾಯಿ ನ್ಯಾಯಮಂಡಳಿ ಅವಧಿ ವಿಸ್ತರಣೆ

ನವದೆಹಲಿ: ಮಹದಾಯಿ ಜಲ ವಿವಾದ ನ್ಯಾಯಮಂಡಳಿಯು ಹೆಚ್ಚಿನ ವರದಿ ಸಲ್ಲಿಸುವ ಅವಧಿಯನ್ನು ಆಗಸ್ಟ್ 20ರಿಂದ ಅನ್ವಯವಾಗುವಂತೆ ಒಂದು ವರ್ಷ ವಿಸ್ತರಿಸಲಾಗಿದೆ.

ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ನಡುವಿನ ನೀರು ಹಂಚಿಕೆ ವಿವಾದಗಳನ್ನು ಪರಿಹರಿಸಲು ಸ್ಥಾಪಿಸಲಾದ ನ್ಯಾಯಮಂಡಳಿಯು ಹೆಚ್ಚಿನ ವರದಿ ನೀಡಲು ಇನ್ನಷ್ಟು ಕಾಲಾವಕಾಶ ನೀಡಬೇಕು ಎಂದು ಜಲಶಕ್ತಿ ಸಚಿವಾಲಯಕ್ಕೆ ಕೋರಿತ್ತು.

ವರದಿ ನೀಡುವ ಅವಧಿಯನ್ನು ವಿಸ್ತರಿಸಿ ಸಚಿವಾಲಯ ಸೋಮವಾರ ಅಧಿಸೂಚನೆ ಹೊರಡಿಸಿದೆ.

ಮಹದಾಯಿ ನದಿ ನೀರು ವಿವಾದ ಬಗೆಹರಿಸಲು ಅಂತರ ರಾಜ್ಯ ನದಿ ನೀರು ವಿವಾದ ಕಾಯ್ದೆ 1956ರ ಸೆಕ್ಷನ್ 4ರ ಅನ್ವಯ ಮಹದಾಯಿ ನ್ಯಾಯಮಂಡಳಿ ಸ್ಥಾಪಿಸಲಾಗಿತ್ತು

ಗುಂಡಿಟ್ಟು ದಲಿತ ವ್ಯಕ್ತಿ ಕೊಲೆ

ಗೋರಖ್‌ಪುರ (ಉತ್ತರಪ್ರದೇಶ), (ಪಿಟಿಐ): ಉತ್ತರ ಪ್ರದೇಶದ ಗೋರಖ್‌ಪುರ ಜಿಲ್ಲೆಯ ಬಧಾಲ್‌ಗಂಜ್ ಪೊಲೀಸ್ ಠಾಣೆ ವ್ಯಾಪ್ತಿಯ ರುದೌಲಿ ಗ್ರಾಮದಲ್ಲಿ ಬುಧವಾರ ಕೀಳು ಅಭಿರುಚಿಯ ಸಂಗೀತ ಜೋರಾಗಿ ಕೇಳಿಸುತ್ತಿದ್ದ ವಿಚಾರದಲ್ಲಿ ವಾಗ್ವಾದ ನಡೆದು, ದಲಿತ ವ್ಯಕ್ತಿಯೊಬ್ಬರನ್ನು ಗುಂಡಿಟ್ಟು ಹತ್ಯೆ ಮಾಡಿದ ಘಟನೆ ನಡೆದಿದೆ.

ಗ್ರಾಮದ ನಿವಾಸಿ ರಾಜ್ ಕಿಶೋರ್ (45) ಕೊಲೆಯಾದ ವ್ಯಕ್ತಿ. ಬುಧವಾರ ನಸುಕಿನಲ್ಲಿ ಕಿಶೋರ್ ಅವರನ್ನು ಸುನಿಲ್ ಯಾದವ್ ಗುಂಡಿಕ್ಕಿ ಕೊಂದಿದ್ದಾನೆ.

ಕಿಶೋರ್ ಕುಟುಂಬದ ಮೂವರು ಸದಸ್ಯರು ಗಾಯಗೊಂಡಿದ್ದಾರೆ. ಆರೋಪಿಗಳು ಪರಾರಿಯಾಗಿದ್ದು, ಬಂಧಿಸಲು ಪೊಲೀಸ್ ತಂಡಗಳು ಪ್ರಯತ್ನಿಸುತ್ತಿವೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಗೌರವ್ ಗ್ರೋವರ್ ಹೇಳಿದ್ದಾರೆ.

ಕಿಶೋರ್ ಅವರ ಮನೆಯ ಬಳಿ ಸುನೀಲ್ ಯಾದವ್ ಎಂಬಾತ ತನ್ನ ಟ್ರ್ಯಾಕ್ಟರ್‌ನಲ್ಲಿ ಅಶ್ಲೀಲ ಸಂಗೀತವನ್ನು ಜೋರಾಗಿ ಹಾಕಿಕೊಂಡು ಕೇಳುತ್ತಿದ್ದ. ಇದಕ್ಕೆ ಕಿಶೋರ್ ಆಕ್ಷೇಪ ವ್ಯಕ್ತಪಡಿಸಿದಾಗ, ಸುನಿಲ್ ಯಾದವ್ ಸ್ಥಳಕ್ಕೆ ತನ್ನ ಬೆಂಬಲಿಗರನ್ನು ಕರೆಸಿಕೊಂಡು ಕಿಶೋರ್ ಮತ್ತು ಅವರ ಕುಟುಂಬ ಸದಸ್ಯರ ಮೇಲೆ ದಾಳಿ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಲಿಂಗ ಪರಿವರ್ತಿತರಿಗೂ ಹಾಲಿವರ್ಗದಡಿ ಮೀಸಲಾತಿ’

ನವದೆಹಲಿ: ಶಿಕ್ಷಣ ಮತ್ತು ಉದ್ಯೋಗ ವಿಚಾರವಾಗಿ ಪ್ರಸ್ತುತ ಎಸ್‌ಸಿ, ಎಸ್‌ಟಿ, ಎಸ್‌ಇಬಿಸಿ ಹಾಗೂ ಆರ್ಥಿಕವಾಗಿ ದುರ್ಬಲ ವರ್ಗ (ಇಡಬ್ಲ್ಯುಎಸ್)ಅಡಿಯಲ್ಲಿ ಸಿಗುತ್ತಿರುವ ಮೀಸಲಾತಿಯ ಪ್ರಯೋಜನವನ್ನೇ ಲಿಂಗಪರಿವರ್ತಿತರು ಪಡೆಯಬಹುದು ಎಂದು ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ತಿಳಿಸಿದೆ.

ಲಿಂಗಪರಿವರ್ತಿತರು ಸೇರಿದಂತೆ ಸಮಾಜದ ಅಂಚಿನಲ್ಲಿರುವ ಮತ್ತು ಅರ್ಹತೆ ಹೊಂದಿರುವವರಿಗೆ ಪ್ರಸ್ತುತ ಈ ನಾಲ್ಕು ವರ್ಗಗಳ ಪೈಕಿ ಒಂದರಡಿ ಮೀಸಲಾತಿ ಲಾಭ ನೀಡಲಾಗುತ್ತಿದೆ ಎಂದು ಕೇಂದ್ರ ತಿಳಿಸಿದೆ.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದಪ್ರಕರಣದಲ್ಲಿ 2014ರಲ್ಲಿ ನೀಡಿದ್ದ ತೀರ್ಪಿಗೆ ಅನುಸಾರ ಕ್ರಮ ಕೈಗೊಂಡಿಲ್ಲ ಎಂದು ದೂರಿ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಗೆ ಸಂಬಂಧಿಸಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಈ ವಿಷಯ ತಿಳಿಸಲಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

100% ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿಮೋಸ ಹೋದವರಿಗೆ ಕಲ್ಕತ್ತಾ ಕೊಳ್ಳೇಗಾಲದ ಪೂಜೆಯಿಂದ, ಗಂಡಹೆಂಡತಿ ಸಮಸ್ಯೆಗಳಿಗೆ 3ಗಂಟೆಗಳಲ್ಲಿ ಶೀಘ್ರ ಪರಿಹಾರ. 9448687421

ಪ್ರವಾಸ

Travel

31.9.2023 ಪ್ರಯಾಗ್‌ರಾಜ್, ಅಯೋಧ್ಯಾ,ಮುಕ್ತಿನಾಥ,ಪೋಕ್ರಾ, ಕಠ್ಮಂಡು,ಕಾಶಿ 4.9.2023ಕಾಶಿ,ಗಯಾ, ಪ್ರಯಾಗ್‌ರಾಜ್,ಅಯೋಧ್ಯಾ23. 9.2023,24.10.2023 ಯಮುನೋತ್ರಿ,ಗಂಗೋತ್ರಿ,ಕೇದಾರ ನಾಥ್,ಬದ್ರಿನಾಥ್23.9.2023, ಮಧ್ಯಪ್ರದೇಶ್,ಗುಜರಾತ್ ಪ್ರವಾಸಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ)9482435755,9845035349

ಏಷ್ಯನ್ ಟ್ರಾವಲ್ ಏಜೆನ್ಸಿ ಮಿನರ್ವ ಸರ್ಕಲ್ ಬೆಂಗಳೂರು ವತಿಯಿಂದ ವಿಮಾನ/ A/C ಬಸ್ ರೂಮ್ ಸೌಲಭ್ಯದೊಂದಿಗೆ 06.09.2023 04.10.2023 ಕಾಶಿ,ಗಯಾ,ಪ್ರಯಾಗ. 20.09.2023 16.10.2023 26.10.2023 ಚಾರ್‌ಧಾಮ್ ರಾಮೇಶ್ವರ,ಕನ್ಯಾಕುಮಾರಿ ಯಾತ್ರೆಗಳಿಗೆ ಸಂಪರ್ಕಿಸಿ: 26574131, 7204173686 9686708171

12.8.2023 ರಿಂದ ರಾಮೇಶ್ವರ-ಕನ್ಯಾಕುಮಾರಿ, ತಿವೇಂಡ್ರಂ-ಅಲಪಿ ಬೋಟಿಂಗ್, ಕೊವಲಂಬೀಚ್-ಗುರುವಾಯೂರು. 12.8.2023 ರಿಂದ 9ನವಗ್ರಹ ದೇವಾಲಯಗಳ ದರ್ಶನ ಮತ್ತು ಶ್ರೀರಂಗ-ತಾಜಾವೂರು ಕುಂಭಕೋಣಂ-ಚಿದಂಬರಂ. 14.8.2023ರಿಂದ ಕಾಶಿ-ಗಯಾ, ಅಲಹಾಬಾದ್-ಅಯೋಧ್ಯ, ಬುದ್ಧಗಯಾ. 25.9.2023 ರಿಂದ ಚಾರ್ಧಾಮ್ ಪ್ರವಾಸ ಕೇದಾರನಾಥ- ಗಂಗೋತ್ರಿ-ಬದರಿನಾಥ-ಯಮುನೋತ್ರಿ, ದೆಹಲಿ, ಹರಿದ್ವಾರ. 8.10.2023 ರಿಂದ ವೈಷ್ಣೋದೇವಿ. ವಾಘಬಾರ್ಡರ್, ದೆಹಲಿ, ಅಮೃತ್ಸರ್, ಧರ್ಮಶಾಲಾ, ಹರಿದ್ವಾರ-ಆಗ್ರಾ.ಶ್ರೀಗುರುರಾಜ ಟ್ರಾವಲ್ಸ್, ಕೋಲಾರ್- 9449652555, 9611082432, 8123099913

8ದಿನಗಳ ಸೌತ್ ಆಫ್ರಿಕಾ, 7ದಿನಗಳ ಬಾಕು, 7/11ದಿನಗಳ ಸಿಂಗಾಪುರ, ಮಲೇಶಿಯಾ, ಥೈಲ್ಯಾಂಡ್, 6ದಿನಗಳ ಬಾಲಿ, 7ದಿನಗಳ ಶ್ರೀಲಂಕಾ. ಭಟ್ ಟ್ರಾವೆಲ್ ಅಂಡ್ ಟೂರ್ಸ್, ಚಾಮರಾಜಪೇಟೆ, ಬೆಂಗಳೂರು. 9844037295 / 9844166555

ಉದ್ಯೋಗಾವಕಾಶ

Drivers

ನಾವು ಆಟೋ ಡ್ರೈವರ್‌ಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಫುಲ್ ಟೈಮ್ ಮತ್ತು ಪಾರ್ಟ್ ಟೈಮ್ ಗಳ ಸಂಬಳ ರೂ. 25000/-. ರೆಫರಲ್ ಬೋನಸ್ ರೂ. 10000/-. ಸೇರುವ ಬೋನಸ್ ರೂ.6000/-. ಆಸಕ್ತಿಯುಳ್ಳವರು ನಮ್ಮನ್ನು ಸಂಪರ್ಕಿಸಿ: 080-68507441

General

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Marketing & Sales

ಮಹಿಳೆಯರಿಗೆ ರೇಷ್ಮೆ ಸೀರೆಗಳು, ಬನಾರಸ್ ಸೀರೆಗಳು ಕಾಟನ್ ಸೀರೆಗಳು ಎಲ್ಲಾ ತರಹದ ಸೀರೆಗಳು, ಚೂಡಿದಾರಗಳು ಕಂತಿನ ಮೇಲೆ ಮಾರಾಟ ಮಾಡಲು ಮಹಿಳೆಯರಿಗೆ ಸಿಗುತ್ತದೆ: 8892501007/ 9606701007

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

DH DECCAN HERALD ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
*conditions apply
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮತ್ತೆ ಭುಗಿಲೆದ್ದ ಹಿಂಸಾಚಾರ • ಭದ್ರತಾ ಪಡೆ, ದುಷ್ಕರ್ಮಿಗಳ ನಡುವೆ ಗುಂಡಿನ ಚಕಮಕಿ

ಮಣಿಪುರ: ಮನೆ, ಬಸ್‌ಗಳಿಗೆ ಬೆಂಕಿ

ಇಂಫಾಲ್ (ಪಿಟಿಐ): ಸಂಘರ್ಷಪೀಡಿತ ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ದುಷ್ಕರ್ಮಿಗಳು ಮೊರೆಹ್ ಜಿಲ್ಲೆಯಲ್ಲಿ ಕನಿಷ್ಠ 30 ಮನೆಗಳಿಗೆ ಮತ್ತು ಕಾಂಗ್ಪೊಕ್ಪಿಯಲ್ಲಿ ಎರಡು ಬಸ್‌ಗಳಿಗೆ ಬೆಂಕಿ ಹಚ್ಚಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೊರೆಹ್ ಬಜಾರ್‌ನಲ್ಲಿರುವ ಖಾಲಿ ಮನೆಗಳು ಮ್ಯಾನ್ಮಾರ್ ಗಡಿಗೆ ಹತ್ತಿರದಲ್ಲಿವೆ.

ಗುಂಡಿನ ಚಕಮಕಿ: 'ಮನೆಗಳಿಗೆ ಬೆಂಕಿ ಹಚ್ಚಿದ ನಂತರ ದುಷ್ಕರ್ಮಿಗಳು ಮತ್ತು ಭದ್ರತಾ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆದಿದೆ. ಈ ವೇಳೆ ಯಾರಿಗಾದರೂ ಹಾನಿಯಾಗಿದೆಯೇ ಎಂದು ತಕ್ಷಣಕ್ಕೆ ತಿಳಿದುಬಂದಿಲ್ಲ' ಎಂದು ತಿಳಿಸಿದ್ದಾರೆ.

ಭದ್ರತಾ ಪಡೆಯ ಸಿಬ್ಬಂದಿಯನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕರೆದುಕೊಂಡು ಹೋಗಲು ಬಳಸುತ್ತಿದ್ದ ಎರಡು ಬಸ್‌ಗಳಿಗೆ ಕಾಂಗ್ಪೊಕ್ಪಿಯಲ್ಲಿ ದುಷ್ಕರ್ಮಿಗಳು ಬೆಂಕಿ ಹಚ್ಚಿದ ಬೆನ್ನಲ್ಲೇ ಮೊರೆಹ್‌ನಲ್ಲಿ ಮನೆಗಳಿಗೆ ಬೆಂಕಿ ಇಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

'ಮಂಗಳವಾರ ಸಂಜೆ ಬಸ್‌ಗಳು ದಿಮಾಪುರದಿಂದ ಸಪೋರ್‌ಮೆನಿಯಗೆ ಬಂದಾಗ ಸ್ಥಳೀಯರು ಬಸ್‌ಗಳನ್ನು ತಡೆದು ಬೇರೆ ಗುಂಪಿನ ಜನರು ಇದ್ದಾರೆಯೇ ಎಂದು ಪರಿಶೀಲನೆ ನಡೆಸಿದರು. ಇದೇ ವೇಳೆ ಕೆಲವರು ಬಸ್‌ಗಳಿಗೆ ಬೆಂಕಿ ಇಟ್ಟರು. ಈ ವೇಳೆ ಯಾರಿಗೂ ಹಾನಿಯಾಗಿಲ್ಲ' ಎಂದು ತಿಳಿಸಿದರು.

'ತಾತ್ಕಾಲಿಕ ಮನೆಗಳ ಕಾಮಗಾರಿ ಬಹುತೇಕ ಪೂರ್ಣ': ಈ ಮಧ್ಯೆ ಮುಖ್ಯಮಂತ್ರಿ ಬಿರೇನ್ ಸಿಂಗ್, ಇಂಫಾಲ್ ಜಿಲ್ಲೆಯ ಸಜೀವ ಮತ್ತು ಥೌಬಲ್ ಜಿಲ್ಲೆಯ ಯೈಥಿಬಿ ಲೌಕೋಲ್‌ನಲ್ಲಿ ತಾತ್ಕಾಲಿಕ ಮನೆಗಳ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ ಎಂದು ತಿಳಿಸಿದ್ದಾರೆ.

'ಪರಿಹಾರ ಶಿಬಿರಗಳಲ್ಲಿರುವ ಕುಟುಂಬಗಳು ಶೀಘ್ರವೇ ಈ ಮನೆಗಳಿಗೆ ಹೋಗಬಹುದು. ಹಿಂಸಾಚಾರದಿಂದ ನಲುಗಿದ ಜನರ ಪುನರ್‌ವಸತಿಗೆ ಸರ್ಕಾರ ಎಲ್ಲಾ ರೀತಿಯ ಕ್ರಮ ಕೈಗೊಳ್ಳುತ್ತಿದೆ' ಎಂದು ಹೇಳಿದ್ದಾರೆ.

ಸಂಘರ್ಷದಿಂದ ನಲುಗಿ ಮನೆ ಬಿಟ್ಟು ಬಂದ ಜನರಿಗಾಗಿ ಸರ್ಕಾರ 3–4 ಸಾವಿರ ತಾತ್ಕಾಲಿಕ ಮನೆಗಳನ್ನು ನಿರ್ಮಿಸುತ್ತಿದೆ ಎಂದು ಸಿಂಗ್ ತಿಳಿಸಿದ್ದರು.

ಅಮೆರಿಕ ಕಳವಳ: ಮಣಿಪುರದಲ್ಲಿ ನಡೆದ ಮಹಿಳೆಯರ ಬೆತ್ತಲೆ ಮೆರವಣಿಗೆ ಕೃತ್ಯದ ಬಗ್ಗೆ ಅಮೆರಿಕ ಕಳವಳ ವ್ಯಕ್ತಪಡಿಸಿದೆ. 'ದೌರ್ಜನ್ಯದ ವಿಡಿಯೊ ನೋಡಿ ಆಘಾತವಾಗಿದೆ. ಭಾರತ ಸರ್ಕಾರ ಸಂತ್ರಸ್ತ ಮಹಿಳೆಯರಿಗೆ ನ್ಯಾಯ ಒದಗಿಸಲು ಯತ್ನಿಸಿರುವುದಕ್ಕೆ ನಮ್ಮ ಬೆಂಬಲವಿದೆ' ಎಂದು ಅಧ್ಯಕ್ಷ ಜೋ ಬೈಡನ್ ಸರ್ಕಾರದ ಉಪ ವಕ್ತಾರ ವೇದಾಂತ್ ಪಟೇಲ್ ಒತ್ತಾಯಿಸಿದ್ದಾರೆ.

ಮಣಿಪುರದಲ್ಲಿನ ಹಿಂಸಾಚಾರ ಖಂಡಿಸಿ ಗುವಾಹಟಿಯಲ್ಲಿ ಬುಧವಾರ ನಾಗರಿಕರು ಕಪ್ಪುಪಟ್ಟಿ ಧರಿಸಿ ಮೊಂಬತ್ತಿ ಹಿಡಿದು ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಶಾಂತಿ ಸ್ಥಾಪನೆಗೆ ಅಸ್ಸಾಂ ರೈಫಲ್ಸ್ ಹೋರಾಟ

ಒಂದೆಡೆ ರಾಜ್ಯ ಸರ್ಕಾರದ ಅಸಹಕಾರ, ಮತ್ತೊಂದೆಡೆ ಉದ್ರಿಕ್ತ ಜನಸಮೂಹ– ಇಂಥ ಸಂದಿಗ್ಧ ಪರಿಸ್ಥಿತಿಯಲ್ಲೂ ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವೆ ಶಾಂತಿ, ವಿಶ್ವಾಸ ಮೂಡಿಸಲು ಅಸ್ಸಾಂ ರೈಫಲ್ಸ್ ಯತ್ನಿಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ದೇಶದ ಅತಿ ಹಳೆಯ ಅರೆಸೇನಾಪಡೆಯಾದ ಅಸ್ಸಾಂ ರೈಫಲ್ಸ್, ಸೇನೆ ಮತ್ತು ಇತರ ಅರೆಸೇನಾಪಡೆಗಳ ಸೈನಿಕರು ಮೇ 3ರಿಂದಲೂ ಈಶಾನ್ಯ ರಾಜ್ಯದಲ್ಲಿ ಶಾಂತಿ ಪುನರ್ ಸ್ಥಾಪನೆಗೆ ಅವಿರತ ಶ್ರಮ ವಹಿಸುತ್ತಿದ್ದಾರೆ. ಆದರೆ ಎಲ್ಲಾ ಕಡೆಗಳಿಂದ ನಮ್ಮ ವಿರುದ್ಧ ಟೀಕೆ ಕೇಳಿಬರುತ್ತಿದೆ' ಎಂದು ಹೆಸರು ಹೇಳಲು ಇಚ್ಛಿಸದ ಅಧಿಕಾರಿ ತಿಳಿಸಿದ್ದಾರೆ.

ಮೋದಿ ಹೇಳಿಕೆಗೆ ನಿತೀಶ್ ಒತ್ತಾಯ

ಪಟ್ನಾ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರ ವಿಚಾರವಾಗಿ ಸಂಸತ್ತಿನಲ್ಲಿ ಮೌನ ವಹಿಸಿರುವುದನ್ನು ಪ್ರಶ್ನಿಸಿರುವ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಈಶಾನ್ಯ ರಾಜ್ಯದ ಸ್ಥಿತಿಗತಿ ಕುರಿತು ಹೇಳಿಕೆ ನೀಡುವಂತೆ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿರೋಧ ಪಕ್ಷಗಳು ಪ್ರಧಾನಿ ಮೋದಿ ಅವರ ಹೇಳಿಕೆಗೆ ಒತ್ತಾಯಿಸುತ್ತಿರುವುದು 'ಸಮರ್ಥನೀಯ'. ಸಂಘರ್ಷಪೀಡಿತ ಮಣಿಪುರ ಕುರಿತು ಸಂಸತ್ತಿನಲ್ಲಿ ಅವರು ಹೇಳಿಕೆ ನೀಡಲೇಬೇಕು. ಅಲ್ಲಿ ಹಿಂಸಾಚಾರ ಕೊನೆಗೊಳ್ಳುವ ಸೂಚನೆಯೇ ಕಾಣುತ್ತಿಲ್ಲ. ಮುಗ್ಧ ಜನರನ್ನು ಕೊಲ್ಲಲಾಗುತ್ತಿದೆ, ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿದೆ' ಎಂದರು.

ಪಾಠ ಕಲಿಸಲು ಗಡಿ ದಾಟಲು ಸಿದ್ಧ

ಪಾಕಿಸ್ತಾನಕ್ಕೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಶ್ರೀನಗರ: 'ಉಗ್ರರು ಹಾಗೂ ಅವರ ಪೋಷಕರಿಗೆ ತಕ್ಕ ಪಾಠ ಕಲಿಸಲು ಭಾರತೀಯ ಸೇನೆಯು ಗಡಿ ನಿಯಂತ್ರಣ ರೇಖೆಯನ್ನು (ಎಲ್‌ಒಸಿ) ದಾಟಲು ಹಿಂಜರಿಯುವುದಿಲ್ಲ'

–ಇದು ಪದೇ ಪದೇ ಗಡಿ ದಾಟಿ ಭಾರತದ ನೆಲದಲ್ಲಿ ಅಸ್ಥಿರತೆ ಹಾಗೂ ಅಶಾಂತಿ ಸೃಷ್ಟಿಸಲು ಯತ್ನಿಸುತ್ತಿರುವ ನೆರೆಯ ಪಾಕಿಸ್ತಾನಕ್ಕೆ, ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ರವಾನಿಸಿದ ಎಚ್ಚರಿಕೆಯ ಸಂದೇಶ.

24ನೇ ವರ್ಷದ ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ಬುಧವಾರ ಲಡಾಕ್‌ನಲ್ಲಿ ನಡೆದ ಹುತಾತ್ಮ ಯೋಧರಿಗೆ ಗೌರವ ಸಮರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪಾಕಿಸ್ತಾನಕ್ಕೆ ಪಾಠ ಕಲಿಸಲು ಸೇನೆಯು ಹಿಂಜರಿಕೆ ತೋರುವುದಿಲ್ಲ' ಎಂದು ಘೋಷಿಸಿದರು.

1999ರ ಕಾರ್ಗಿಲ್ ಯುದ್ಧದ ಮೂಲಕ ಪಾಕಿಸ್ತಾನ, ಭಾರತದ ಬೆನ್ನಿಗೆ ಚೂರಿ ಹಾಕಲು ಯತ್ನಿಸಿತು. ಇದಕ್ಕೆ ಭಾರತೀಯ ಯೋಧರು ತಕ್ಕ ಪ್ರತ್ಯುತ್ತರ ನೀಡಿದರು. ದೇಶದ ಗಡಿ ರಕ್ಷಣೆಗೆ ಅವರು ತೋರಿದ ಈ ಧೀರೋದಾತ್ತ ಹೋರಾಟ ಸ್ಮರಣೀಯವಾದುದು ಎಂದರು.

'ನಾವು ಗಡಿ ನಿಯಮಾವಳಿ ಉಲ್ಲಂಘನೆಯನ್ನು ಸಹಿಸುವುದಿಲ್ಲ. ಈ ಸಂಬಂಧ ಕೇಂದ್ರ ಸರ್ಕಾರವು ರಕ್ಷಣಾ ಪಡೆಗಳಿಗೆ ಮುಕ್ತ ಅಧಿಕಾರ ನೀಡಿದೆ. ಕಾರ್ಗಿಲ್ ಯುದ್ಧದ ವೇಳೆಯೂ ನಾವು ಗಡಿ ನಿಯಂತ್ರಣ ರೇಖೆ ದಾಟಲಿಲ್ಲ. ಹಾಗೆಂದು ನಮಗೆ ಸಾಮರ್ಥ್ಯ ಇಲ್ಲ ಎಂದರ್ಥವಲ್ಲ. ಅಗತ್ಯ ಬಿದ್ದರೆ ದಾಟಲು ಹಿಂಜರಿಯುವುದಿಲ್ಲ' ಎಂದು ಗುಡುಗಿದರು.

'ನಮ್ಮೊಟ್ಟಿಗೆ ಗಡಿ ಹಂಚಿಕೊಂಡಿರುವ ರಾಷ್ಟ್ರಗಳಿಗೆ ಗೌರವ ಕೊಡುತ್ತೇವೆ. ಅಂತರರಾಷ್ಟ್ರೀಯ ಕಟ್ಟುಪಾಡುಗಳನ್ನು ಪಾಲಿಸುತ್ತೇವೆ. ಈ ಉದಾರತೆಯೇ ನಮ್ಮ ಬಲಹೀನತೆಯೆಂದು ಪರಿಗಣಿಸಬಾರದು' ಎಂದು ಎಚ್ಚರಿಕೆ ನೀಡಿದರು.

ಗಡಿ ರಕ್ಷಣೆಯಲ್ಲಿ ಸೈನಿಕರ ಸೇವೆ ಅನನ್ಯವಾದುದು. ದೇಶ ಸ್ವಾತಂತ್ರ್ಯ ಪಡೆದ ದಿನದಿಂದ ಹಿಡಿದು ಕಾರ್ಗಿಲ್ ಯುದ್ಧದವರೆಗೂ ನೆರೆಹೊರೆಯವರು ಭಾರತದತ್ತ ಕಣ್ಣೆತ್ತಿಯೂ ನೋಡುತ್ತಿಲ್ಲ. ಇದಕ್ಕೆ ಯೋಧರ ದಿಟ್ಟ ಹೋರಾಟವೇ ಸಾಕ್ಷಿಯಾಗಿದೆ. ನಿಮ್ಮ ಈ ಧೈರ್ಯವೇ ಭಾರತದ ಹೆಮ್ಮೆಯಾಗಿದೆ ಎಂದು ಗುಣಗಾನ ಮಾಡಿದರು.

ಸೇನಾ ಪಡೆಗಳ ಮುಖ್ಯಸ್ಥ ಅನಿಲ್ ಚೌಹಾಣ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಲಡಾಕ್‌ನ ಯುದ್ಧ ಸ್ಮಾರಕ ಸ್ಥಳದಲ್ಲಿ ಬುಧವಾರ ನಡೆದ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮದಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು, ಹುತಾತ್ಮ ಯೋಧರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು —ಪಿಟಿಐ ಚಿತ್ರ

'ಅಪಾಯ ಮೆಟ್ಟನಿಲ್ಲಲು ಸಜ್ಜಾಗಿ'

'ಈಗಾಗಲೇ, ದೇಶದ ಮುಂದೆ ಸಾಕಷ್ಟು ಅಪಾಯ ಮತ್ತು ಸವಾಲುಗಳಿವೆ. ಭವಿಷ್ಯದಲ್ಲಿ ಇವುಗಳು ಮತ್ತಷ್ಟು ಸಂಕೀರ್ಣಗೊಳ್ಳುವ ಸಾಧ್ಯತೆ ಇದೆ. ಹಾಗಾಗಿ, ಇದನ್ನು ಸಮರ್ಥವಾಗಿ ಮೆಟ್ಟಿ ನಿಲ್ಲಲು ನಾವು ಈಗಲೇ ಸಿದ್ಧರಾಗಬೇಕಿದೆ' ಎಂದು ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಹೇಳಿದ್ದಾರೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮುಂದಿನ ದಿನಗಳಲ್ಲಿ ಸಾಕಷ್ಟು ಸವಾಲುಗಳು ಎದುರಾಗುತ್ತವೆ. ಇವುಗಳನ್ನು ಸಮರ್ಥವಾಗಿ ನಿಭಾಯಿಸಲು ಭಾರತೀಯ ಸೈನ್ಯ ಸಜ್ಜಾಗಬೇಕಿದೆ' ಎಂದರು.

'ಸೇನೆಯ ಕೆಲಸದಲ್ಲಿ ಹೊಂದಾಣಿಕೆ, ಚೇತರಿಕೆ ಹಾಗೂ ಸ್ಪಂದಿಸುವ ಗುಣ ಮಿಳಿತವಾಗಿದೆ. ಭಾರತೀಯ ಸೇನೆ ತಾಂತ್ರಿಕವಾಗಿಯೂ ಸದೃಢಗೊಂಡಿದೆ. ಹಾಗಾಗಿ, ಭವಿಷ್ಯದಲ್ಲಿ ಎದುರಾಗುವ ರಕ್ಷಣಾ ಸವಾಲುಗಳನ್ನು ದಿಟ್ಟವಾಗಿ ಎದುರಿಸಲಿದೆ' ಎಂದು ಆಶಿಸಿದರು.

ಅರಣ್ಯ ಸಂರಕ್ಷಣೆ ತಿದ್ದುಪಡಿ ಮಸೂದೆ ಅಂಗೀಕಾರ

ನವದೆಹಲಿ (ಪಿಟಿಐ): ರಕ್ಷಣಾ ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ಕೆಲ ನಿರ್ದಿಷ್ಟ ಯೋಜನೆಗಳಿಗೆ ವಿನಾಯಿತಿ ನೀಡುವ ಅಂಶಗಳನ್ನು ಒಳಗೊಂಡಿರುವ ಅರಣ್ಯ (ಸಂರಕ್ಷಣೆ) ತಿದ್ದುಪಡಿ ಮಸೂದೆ–2023 ಅನ್ನು ಲೋಕಸಭೆಯಲ್ಲಿ ಬುಧವಾರ ಅಂಗೀಕರಿಸಲಾಯಿತು.

ಈ ಕುರಿತ ಚರ್ಚೆ ವೇಳೆ, ಪರಿಸರ ಸಚಿವ ಭೂಪೇಂದ್ರ ಯಾದವ್ ಅವರು ವಿರೋಧ ಪಕ್ಷಗಳ ಸಂಸದರ ಪ್ರಶ್ನೆಗಳಿಗೆ ಉತ್ತರಿಸಿದ ಬಳಿಕ ಮಸೂದೆಯನ್ನು ಅಂಗೀಕರಿಸಲಾಯಿತು. ನಂತರ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ದೇಶದ ಗಡಿಗಳಿಂದ 100 ಕಿ.ಮೀ ಒಳಗಿನ ಪ್ರದೇಶಕ್ಕೆ ಅರಣ್ಯ ಸಂರಕ್ಷಣಾ ಕಾಯ್ದೆಯಿಂದ ವಿನಾಯಿತಿ ನೀಡುವ ಅಂಶಗಳನ್ನು ಈ ಮಸೂದೆ ಒಳಗೊಂಡಿದೆ.

ಎಸ್‌ಸಿ ಉಪ ವರ್ಗೀಕರಣಕ್ಕೆ ಅವಕಾಶ ಇಲ್ಲ

ಭಾರತೀಯ ಸಂವಿಧಾನದ ಈಗಿನ ವಿಧಿಗಳ ಅನ್ವಯ, ಪರಿಶಿಷ್ಟ ಜಾತಿಗಳ (ಎಸ್‌ಸಿ) ಉಪ ವರ್ಗೀಕರಣಕ್ಕೆ ಅನುಮತಿ ಇಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ನೀಡಲು ಸಂವಿಧಾನ ಅವಕಾಶ ನೀಡಿದೆಯೇ ಎಂದು ಬಿಜೆಪಿಯ ಜಿ.ವಿ.ಎಲ್.ನರಸಿಂಹ ರಾವ್ ಅವರು ಲೋಕಸಭೆಯಲ್ಲಿ ಪ್ರಶ್ನೆ ಕೇಳಿದ್ದರು. ಇದಕ್ಕೆ ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಲಿಖಿತ ಉತ್ತರ ನೀಡಿದ್ದಾರೆ.

ಜನನ ಪ್ರಮಾಣಪತ್ರವೇ ಎಲ್ಲಕ್ಕೂ ಆಧಾರ

ಒಂದನೇ ಪುಟದಿಂದ...

'ತಿದ್ದುಪಡಿ ಮೂಲಕ ಕಾಯ್ದೆಯನ್ನು ಮತ್ತಷ್ಟು ನಾಗರಿಕಸ್ನೇಹಿಯಾಗಿಸುವ ಉದ್ದೇಶ ಹೊಂದಲಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರಗಳು, ಸಾರ್ವಜನಿಕರು ಹಾಗೂ ಇತರ ಭಾಗೀದಾರರೊಂದಿಗೆ ವ್ಯಾಪಕ ಸಮಾಲೋಚನೆ ನಡೆಸಲಾಗಿದೆ' ಎಂದು ಸಚಿವ ರಾಯ್ ಸದನಕ್ಕೆ ವಿವರಿಸಿದರು.

ಮಸೂದೆಗೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಸಂಸದ ಮನೀಷ್ ತಿವಾರಿ, 'ಈ ಮಸೂದೆಯು ವ್ಯಕ್ತಿಯ ಖಾಸಗಿತನ ಹಕ್ಕು, ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ ವಿಂಗಡಣೆಯ ಉಲ್ಲಂಘನೆಯಾಗಲಿದೆ' ಎಂದು ಹೇಳಿದರು.

ತಿದ್ದುಪಡಿ ಮಸೂದೆಯಲ್ಲಿನ ಪ್ರಮುಖ ಅಂಶಗಳು:

- ಜನನ ಪ್ರಮಾಣಪತ್ರವನ್ನು ಜನಿಸಿದ ದಿನಾಂಕ ಮತ್ತು ಸ್ಥಳದ ಪುರಾವೆಯ ದಾಖಲೆಯಂತೆ ಬಳಸಬಹುದು
- ಜನಸಂಖ್ಯಾ ರಿಜಿಸ್ಟ್ರಾರ್, ಮತದಾರರ ಪಟ್ಟಿ, ಆಧಾರ್ ಸಂಖ್ಯೆ, ಪಡಿತರ ಚೀಟಿ, ಪಾಸ್‌ಪೋರ್ಟ್, ಆಸ್ತಿ ನೋಂದಣಿ ಹಾಗೂ ಕೇಂದ್ರ ಸರ್ಕಾರದಿಂದ ಅಧಿಸೂಚಿತ ಇತರ ಡೇಟಾಬೇಸ್‌ಗಳನ್ನು ನಿರ್ವಹಿಸುವ ಪ್ರಾಧಿಕಾರಗಳಿಗೆ ಜನನ ಮತ್ತು ಮರಣಗಳ ಡೇಟಾಬೇಸ್ ಒದಗಿಸುವುದು
- ದತ್ತು ಪಡೆದ ಮಗು, ಅನಾಥ, ಪರಿತ್ಯಕ್ತ, ಬಾಡಿಗೆ ತಾಯ್ತನದಿಂದ ಪಡೆದ ಮಗು, ಒಬ್ಬರೇ ಪಾಲಕರಿರುವ ಅಥವಾ ಅವಿವಾಹಿತ ತಾಯಿಯ ಮಗುವಿನ ನೋಂದಣಿಗೆ ತಿದ್ದುಪಡಿ ನೆರವಾಗಲಿದೆ
- ವಿಪತ್ತು ಅಥವಾ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡ ಸಂದರ್ಭದಲ್ಲಿ ಮರಣಗಳ ನೋಂದಣಿ ಹಾಗೂ ಮರಣ ಪ್ರಮಾಣಪತ್ರ ವಿತರಣೆ ಪ್ರಕ್ರಿಯೆಗೆ ವೇಗ ನೀಡುವುದಕ್ಕಾಗಿ ವಿಶೇಷ ಸಬ್‌ರಿಜಿಸ್ಟ್ರಾರ್‌ಗಳ ನೇಮಕಕ್ಕೆ ಅವಕಾಶ

ಅವಿಶ್ವಾಸ ನಿರ್ಣಯ ಮಂಡನೆ

ಒಂದನೇ ಪುಟದಿಂದ...

ಹಾಗಾಗಿ, ಮಣಿಪುರ ವಿಷಯದ ಬಗ್ಗೆ ಸದನದೊಳಗೆ ಅವರಿಂದ ಹೇಳಿಕೆ ಪಡೆಯಲು ವಿರೋಧ ಪಕ್ಷಗಳು, ಈ ಅಸ್ತ್ರ ಪ್ರಯೋಗಿಸಿವೆ. ನಿಯಮದ ಅನ್ವಯ ಸ್ಪೀಕರ್ ಅವರು ಸದನದ ಎಲ್ಲಾ ನಾಯಕರ ಜೊತೆಗೆ ಸಮಾಲೋಚನೆ ನಡೆಸಿ, 10 ದಿನದೊಳಗೆ ಈ ಕುರಿತ ಚರ್ಚೆಗೆ ದಿನಾಂಕ ನಿಗದಿಪಡಿಸಬೇಕಿದೆ.

ಸದನದಲ್ಲಿ ನಡೆದಿದ್ದೇನು?: ಬೆಳಿಗ್ಗೆ 9.20ಗಂಟೆಗೆ ಕಾಂಗ್ರೆಸ್‌ನ ಉಪ ನಾಯಕ ಗೌರವ್ ಗೊಗೊಯ್ ಅವರು, 'ಇಂಡಿಯಾ' ಪರವಾಗಿ ಸ್ಪೀಕರ್‌ಗೆ ಅವಿಶ್ವಾಸ ನಿರ್ಣಯ ಕುರಿತ ನೋಟಿಸ್ ಸಲ್ಲಿಸಿದರು. ಮಧ್ಯಾಹ್ನ 12 ಗಂಟೆಗೆ ಮತ್ತೆ ಕಲಾಪ ಶುರುವಾದಾಗ ಈ ಬಗ್ಗೆ ಬಿರ್ಲಾ ಅವರು, 'ನಿಯಮ 198ರ ಅಡಿ ಅವಿಶ್ವಾಸ ನಿರ್ಣಯ ಮಂಡಿಸಲಾಗಿದೆ' ಎಂದು ಲೋಕಸಭೆಯಲ್ಲಿ ಪ್ರಕಟಿಸಿದರು.

ಎನ್‌ಡಿಎ ಹಾಗೂ 'ಇಂಡಿಯಾ' ಸೇರದೆ ತಟಸ್ಥವಾಗಿರುವ ಬಿಆರ್‌ಎಸ್ ಕೂಡ ಅವಿಶ್ವಾಸ ನಿರ್ಣಯ ಮಂಡಿಸಿದೆ. ಆ ಪಕ್ಷದ ಸಂಸದ ನಾಮ ನಾಗೇಶ್ವರ ರಾವ್ ಅವರು, ನೋಟಿಸ್ ಸಲ್ಲಿಸಿದ್ದಾರೆ. ಆದರೆ, ಇದನ್ನು ಸ್ಪೀಕರ್ ಪರಿಗಣಿಸಿಲ್ಲ ಎಂದು ಮೂಲಗಳು ತಿಳಿಸಿವೆ. ಬಿಆರ್‌ಎಸ್ ನಿರ್ಣಯಕ್ಕೆ ಎಐಎಂಐಎಂ ಬೆಂಬಲ ಘೋಷಿಸಿದೆ.

ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎ ಸರ್ಕಾರವು 2018ರಲ್ಲಿ ಮೊದಲ ಬಾರಿಗೆ ಅವಿಶ್ವಾಸ ನಿರ್ಣಯದ ಸವಾಲು ಎದುರಿಸಿತ್ತು. ಆದರೆ, ಸಂಖ್ಯಾಬಲ ಇದ್ದ ಕಾರಣ ಸರ್ಕಾರಕ್ಕೆ ಯಾವುದೇ ರೀತಿಯ ಧಕ್ಕೆಯಾಗಿರಲಿಲ್ಲ.

'ಕೈ' ಏಕಪಕ್ಷೀಯ ನಡೆಗೆ ಅಪಸ್ವರ?

ಅವಿಶ್ವಾಸ ನಿರ್ಣಯ ಮಂಡನೆ ಸಂಬಂಧ ಕಾಂಗ್ರೆಸ್ ಏಕಪಕ್ಷೀಯವಾಗಿ ತೀರ್ಮಾನ ಕೈಗೊಂಡಿದೆ ಎಂದು 'ಇಂಡಿಯಾ'ದಲ್ಲಿನ ಕೆಲವು ಪಕ್ಷಗಳ ನಾಯಕರು ಅಪಸ್ವರ ಎತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಂಗಳವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಲವು ಪಕ್ಷಗಳ ನಾಯಕರಿಗೆ ಆಹ್ವಾನ ನೀಡಿರಲಿಲ್ಲ. ಇದು ಅವರಲ್ಲಿ ಅತೃಪ್ತಿಗೆ ಕಾರಣವಾಗಿದೆ ಎನ್ನಲಾಗಿದೆ.

ಮೋದಿ ಭವಿಷ್ಯ: ವಿರೋಧ ಪಕ್ಷಗಳು ಮಂಡಿಸಿರುವ ಅವಿಶ್ವಾಸ ನಿರ್ಣಯ ಕುರಿತಂತೆ ನಾಲ್ಕು ವರ್ಷಗಳ ಹಿಂದೆ ಪ್ರಧಾನಿ ಮೋದಿ ನುಡಿದಿದ್ದ 'ಭವಿಷ್ಯ' ನಿಜವಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

2019ರ ಫೆಬ್ರುವರಿಯಲ್ಲಿ ರಾಷ್ಟ್ರಪತಿ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಮೋದಿ, 'ಮತ್ತೆ 2023ರಲ್ಲಿಯೂ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಸಜ್ಜಾಗಿ' ಎಂದು ವ್ಯಂಗ್ಯವಾಡಿದರು.

ಸಚಿವ ಅಮಿತ್ ಶಾ ಪತ್ರಕ್ಕೆ ಖರ್ಗೆ ಪ್ರತ್ಯುತ್ತರ

'ನಿರಂಕುಶ ವರ್ತನೆ ಹೊಸದೇನಲ್ಲ'

ನವದೆಹಲಿ (ಪಿಟಿಐ): ಸಂಸತ್‌ನಲ್ಲಿ ಸುಗಮ ಕಲಾಪಕ್ಕೆ ಸಹಕರಿಸುವಂತೆ ಕೋರಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಬರೆದಿರುವ ಭಾವನಾತ್ಮಕ ಪತ್ರಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡ ಪತ್ರದ ಮೂಲಕವೇ ತೀಕ್ಷ್ಣಭಾವದಲ್ಲಿ ಪ್ರತ್ಯುತ್ತರ ನೀಡಿದ್ದಾರೆ.

ಮಣಿಪುರ ಸಂಘರ್ಷದಿಂದ ಮುಂಗಾರು ಅಧಿವೇಶನ ಹಳಿ ತಪ್ಪಿರುವುದರಿಂದ ಉಭಯ ಸದನಗಳಲ್ಲಿ ಪ್ರತಿಪಕ್ಷಗಳ ನಾಯಕರಾದ ಖರ್ಗೆ ಹಾಗೂ ಅಧೀರ್ ರಂಜನ್ ಚೌಧರಿ ಅವರಿಗೆ ಶಾ ಅವರು ಮಂಗಳವಾರ ಪತ್ರ ಬರೆದಿದ್ದರು. 'ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆಗೆ 'ನಿಮ್ಮ ಅಮೂಲ್ಯ ಸಹಕಾರ ಅತ್ಯಗತ್ಯ' ಎಂದು ಕೋರಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಖರ್ಗೆ, 'ಇಂಡಿಯಾ' ಬಗ್ಗೆ 'ಪದ ಪ್ರಯೋಗ' ಹಾಗೂ ಪ್ರತಿಪಕ್ಷಗಳನ್ನು ನಡೆಸಿಕೊಳ್ಳುತ್ತಿರುವ ಸರ್ಕಾರದ ನಡೆಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ ಎಂದು ಪತ್ರದಲ್ಲಿ ಹೇಳಿದ್ದಾರೆ.

'ಸಂಸತ್‌ನ ಮಹತ್ವದ ಬಗ್ಗೆ ಪತ್ರದಲ್ಲಿ ನೀವು ಭಾವನಾತ್ಮಕವಾಗಿ ಪ್ರಸ್ತಾಪಿಸಿದ್ದೀರಿ. ಆದರೆ, ಸರ್ಕಾರವು ಸಂವೇದನಾರಹಿತ ಹಾಗೂ ನಿರಂಕುಶವಾಗಿ ವರ್ತಿಸುತ್ತಿದೆ. ಈ ವರ್ತನೆ ಹೊಸದೇನಲ್ಲ. ಹಲವು ಅಧಿವೇಶನಗಳಲ್ಲಿ ಇದೇ ಧೋರಣೆ ತಳೆದಿದೆ' ಎಂದು ಹೇಳಿದ್ದಾರೆ.

ಪ್ರಧಾನಿ ಮೋದಿ ಅವರು 'ಇಂಡಿಯಾ'ವನ್ನು ಬ್ರಿಟಿಷರ ಆಳ್ವಿಕೆ ಮತ್ತು ಭಯೋತ್ಪಾದನೆ ಸಂಘಟನೆಗಳ ಜೊತೆಗೆ ಸಮೀಕರಿಸಿದ್ದಾರೆ. ಅದೇ ದಿನದಂದು ನೀವು ಸಹಕಾರ ಕೋರಿ ಪತ್ರ ಬರೆದು ಸಕಾರಾತ್ಮಕ ಪ್ರತಿಕ್ರಿಯೆಯನ್ನು ನಿರೀಕ್ಷಿಸಿದ್ದೀರಿ. ಒಂದೇ ದಿನದಲ್ಲಿ ಇಂತಹ ವೈರುಧ್ಯ ಮನಸ್ಥಿತಿ ಏಕೆ ಎಂದು ಪ್ರಶ್ನಿಸಿದ್ದಾರೆ.

'ಹಲವು ವರ್ಷಗಳಿಂದ ಆಡಳಿತಾರೂಢ ಪಕ್ಷ ಮತ್ತು ಪ್ರತಿಪಕ್ಷಗಳ ನಡುವೆ ಸಹಕಾರದ ಕೊರತೆ ಇದೆ. ಮೋದಿ ಸರ್ಕಾರವು ಇದೇ ಅಂತರ ಕಾಯ್ದುಕೊಂಡಿದೆ. ಪ್ರಧಾನಿ ಅವರೇ ವಿಪಕ್ಷಗಳನ್ನು ಅಸಂಬದ್ಧವಾಗಿ ಟೀಕಿಸಿರುವುದು ದುರದೃಷ್ಟಕರ' ಎಂದಿದ್ದಾರೆ.

ಕಣಿವೆ ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ತಲೆದೋರಿ 84 ದಿನಗಳು ಉರುಳಿವೆ. ಎಲ್ಲಾ ಪಕ್ಷಗಳು ಅಲ್ಲಿ ಶಾಂತಿ ಪುನರ್ ಸ್ಥಾಪಿಸಲು ಒಟ್ಟಾಗಿ ಕೆಲಸ ಮಾಡುತ್ತಿವೆ. ಸಂಸತ್ ಮೂಲಕ ದೇಶದ ಜನರಿಗೆ ಈ ಸಂದೇಶ ತಲುಪಿಸಬೇಕಿದೆ. ಅದಕ್ಕಾಗಿಯೇ ಮೋದಿ ಹೇಳಿಕೆ ನೀಡುವಂತೆ ಆಗ್ರಹಿಸುತ್ತಿದ್ದೇವೆ ಎಂದು ಹೇಳಿದ್ದಾರೆ. ಸಣ್ಣ ತಪ್ಪಿಗಾಗಿ ರಾಜ್ಯಸಭೆಯಲ್ಲಿ ಎಎಪಿ ಸಂಸದ ಸಂಜಯ್ ಸಿಂಗ್ ಅವರನ್ನು ಅಧಿವೇಶನ ಮುಗಿಯುವವರೆಗೂ ಅಮಾನತುಗೊಳಿಸಲಾಗಿದೆ. ಪತ್ರದ ಮೂಲಕ ಸದಸ್ಯರ ಭಾವನೆಗಳನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದಿದ್ದಾರೆ.

ಸಂಸತ್‌ನಲ್ಲಿ ದಿನದ ಬೆಳವಣಿಗೆ

- ಮಣಿಪುರ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ಮತ್ತು ಬಿಜೆಪಿ ನಡುವಿನ ವಾಕ್ಸಮರ ಬುಧವಾರವೂ ಮುಂದುವರಿದಿದ್ದರಿಂದ ಉಭಯ ಸದನಗಳ ಕಲಾಪವನ್ನು ಗುರುವಾರಕ್ಕೆ ಮುಂದೂಡಲಾಯಿತು
- ಲೋಕಸಭೆಯಲ್ಲಿ ಪ್ರತಿಪಕ್ಷಗಳ ಸದಸ್ಯರು ಕಪ್ಪುಪಟ್ಟಿ ಧರಿಸಿ ಸರ್ಕಾರದ ವಿರುದ್ಧ ಹೋರಾಟ ಮುಂದುವರಿಸಿದರು
- ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತು ಕೇಂದ್ರವು ಹೊರಡಿಸಿರುವ ಸುಗ್ರೀವಾಜ್ಞೆಗೆ ಸಂಬಂಧಿಸಿದಂತೆ ಮಸೂದೆ ಮಂಡಿಸುವ ಸಾಧ್ಯತೆ ಇದೆ. ಹಾಗಾಗಿ, ರಾಜ್ಯಸಭೆಯಲ್ಲಿ ಗುರುವಾರ ಹಾಜರಾಗದಂತೆ ತನ್ನ ಸದಸ್ಯರಿಗೆ ಕಾಂಗ್ರೆಸ್ ವಿಪ್ ಜಾರಿಗೊಳಿಸಿದೆ
- ರಾಜ್ಯಸಭೆಯ ಕಲಾಪದಿಂದ ಅಮಾನತುಗೊಂಡಿರುವ ಎಎಪಿ ಸಂಸದ ಸಂಜಯ್ ಸಿಂಗ್ ಅವರಿಗೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಬೆಂಬಲ ಘೋಷಿಸಿದರು

ಸಂಕ್ಷಿಪ್ತ ಸುದ್ದಿ

ನರ್ಸಿಂಗ್: ಲಿಂಗತ್ವ ಅಲ್ಪಸಂಖ್ಯಾತರಿಗೆ ಮೀಸಲಾತಿ

ತಿರುವನಂತಪುರ (ಪಿಟಿಐ): ರಾಜ್ಯದ ನರ್ಸಿಂಗ್ ಕೋರ್ಸ್‌ಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಮೀಸಲಾತಿ ನೀಡುವುದಾಗಿ ಕೇರಳ ಸರ್ಕಾರ ಬುಧವಾರ ಘೋಷಿಸಿದೆ.

ಆರೋಗ್ಯ ಸಚಿವೆ ವೀಣಾ ಜಾರ್ಜ್, 'ಬಿಎಸ್‌ಸಿ ನರ್ಸಿಂಗ್ ಮತ್ತು ಸಾಮಾನ್ಯ ನರ್ಸಿಂಗ್ ಕೋರ್ಸ್‌ಗೆ ಸೇರುವ ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರತಿ ಕಾಲೇಜಿನಲ್ಲಿ ಒಂದು ಸೀಟು ಮೀಸಲಿಡಲಾಗುವುದು' ಎಂದಿದ್ದಾರೆ. 'ರಾಜ್ಯದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ನರ್ಸಿಂಗ್ ಕ್ಷೇತ್ರದಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಮೀಸಲಾತಿ ನೀಡಲಾಗುತ್ತಿದೆ' ಎಂದಿದ್ದಾರೆ.

ಸಿಕ್ಕಿಂ: ಸರ್ಕಾರಿ ನೌಕರರಿಗೆ ಒಂದು ವರ್ಷ ಹೆರಿಗೆ ರಜೆ

ಗ್ಯಾಂಗ್ಟಕ್(ಪಿಟಿಐ): ಸಿಕ್ಕಿಂನ ಸರ್ಕಾರಿ ನೌಕರರಿಗೆ ಒಂದು ವರ್ಷ ಹೆರಿಗೆ ರಜೆ, ಪುರುಷರಿಗೆ ಒಂದು ತಿಂಗಳು ಪಿತೃತ್ವ ರಜೆ ನೀಡಲಾಗುವುದು ಎಂದು ಸಿಕ್ಕಿಂ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಂಗ್ ಬುಧವಾರ ತಿಳಿಸಿದ್ದಾರೆ.

ಸಿಕ್ಕಿಂನ ರಾಜ್ಯ ಸೇವಾ ಅಧಿಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, 'ಈ ಯೋಜನೆಯಿಂದ ಸರ್ಕಾರಿ ನೌಕರರು ತಮ್ಮ ಮಕ್ಕಳು ಹಾಗೂ ಕುಟುಂಬದ ಬಗ್ಗೆ ಕಾಳಜಿ ವಹಿಸಲು ಸಹಕಾರಿಯಾಗಲಿದೆ. ಈ ಯೋಜನೆ ಕುರಿತು ಶೀಘ್ರದಲ್ಲೇ ವಿವರ ಪ್ರಕಟಿಸಲಾಗುವುದು' ಎಂದು ಹೇಳಿದರು.

ವಿಚಾರಣೆ ಕಾಲದ ಅರ್ಜಿ ಬದಲು ಮುಖ್ಯ ಅರ್ಜಿ ವಿಲೇವಾರಿ

ಜ್ಞಾನವಾಪಿ ಮಸೀದಿ ಅರ್ಜಿ ಪುನಃ ಊರ್ಜಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ವಾರಾಣಸಿಯ ಜ್ಞಾನವಾಪಿ ಮಸೀದಿ ಸಮಿತಿ (ಅಂಜುಮಾನ್ ಇಂತೆಜಾಮಿಯಾ ಸಮಿತಿ) ಸಲ್ಲಿಸಿದ್ದ ಅರ್ಜಿ ವಿಲೇವಾರಿ ಮಾಡಿ ಜುಲೈ 24ರಂದು ಹೊರಡಿಸಿದ್ದ ತನ್ನ ಆದೇಶದಲ್ಲಿ ಪ್ರಮಾದವಶಾತ್ ಆಗಿದ್ದ ದೋಷವನ್ನು ಬುಧವಾರ ಸರಿಪಡಿಸಿದ ಸುಪ್ರೀಂಕೋರ್ಟ್, ಅರ್ಜಿಯನ್ನು ಪುನಃ ಊರ್ಜಿತಗೊಳಿಸಿತು.

ಸಿಜೆಐ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ವಿಚಾರಣೆ ನಡೆಸಿತು.

'ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ)ಯಿಂದ ಮಸೀದಿಯ ಸಮೀಕ್ಷೆಗೆ ತಡೆ ನೀಡುವಂತೆ ಕೋರಿ ಸಲ್ಲಿಸಿದ್ದ ವಿಚಾರಣೆ ಕಾಲದ ಅರ್ಜಿಯ ಬದಲಾಗಿ, ಮುಖ್ಯ ಅರ್ಜಿಯನ್ನು ವಿಲೇವಾರಿ ಮಾಡಿ ನ್ಯಾಯಪೀಠ ಜುಲೈ 24ರಂದು ಆದೇಶಿಸಿತ್ತು' ಎಂದು ಸಮಿತಿ ಪರ ವಕೀಲ ಹುಜೇಫಾ ಅಹ್ಮದಿ, ನ್ಯಾಯಪೀಠಕ್ಕೆ ತಿಳಿಸಿದರು.

'ಸೋಮವಾರ ನೀಡಿದ್ದ ಆದೇಶವನ್ನು ಸರಿಪಡಿಸುವ ಅಗತ್ಯವಿದೆ' ಎಂಬ ಅಹ್ಮದಿ ಅವರ ಮನವಿಯನ್ನು ನ್ಯಾಯಪೀಠ ಪರಿಗಣಿಸಿತು.

ಎಎಸ್‌ಐ ಮತ್ತು ಉತ್ತರ ಪ್ರದೇಶ ಸರ್ಕಾರ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಮಸೀದಿ ಸಮಿತಿಯ ರಜಾಕಾಲದ ವಿಶೇಷ ಅರ್ಜಿಯನ್ನು ಮತ್ತೆ ಊರ್ಜಿತಗೊಳಿಸುವುದಕ್ಕೆ ನನ್ನ ಆಕ್ಷೇಪ ಇಲ್ಲ' ಎಂದರು.

ಸಮೀಕ್ಷೆಗೆ ನೀಡಿದ್ದ ತಡೆ ವಿಸ್ತರಣೆ

ಲಖನೌ: ಜ್ಞಾನವಾಪಿ ಮಸೀದಿ ಆವರಣ ಕುರಿತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ)ಯಿಂದ ವೈಜ್ಞಾನಿಕ ಸಮೀಕ್ಷೆ ನಡೆಸುವಂತೆ ವಾರಾಣಸಿ ಜಿಲ್ಲಾ ನ್ಯಾಯಾಲಯ ನೀಡಿದ್ದ ಆದೇಶಕ್ಕೆ ನೀಡಿದ್ದ ತಡೆಯನ್ನು ಅಲಹಾಬಾದ್ ಹೈಕೋರ್ಟ್ ಗುರುವಾರದ ವರೆಗೆ ವಿಸ್ತರಿಸಿದೆ.

ಹಿಂದೂಗಳು, ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿ ಹಾಗೂ ಎಎಸ್‌ಐ ಪರ ವಕೀಲರ ವಾದಗಳನ್ನು ಬುಧವಾರ ಆಲಿಸಿದ ನ್ಯಾಯಾಲಯ, ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿತು.

ಹಸಿರುಮನೆ ಅನಿಲಗಳ ಹೊರಸೂಸುವಿಕೆ ತಡೆಯುವುದೇ ಪರಿಹಾರ

'2057ರ ವೇಳೆಗೆ ಸಾಗರ ಪ್ರವಾಹಗಳ ಕುಸಿತ'

ನವದೆಹಲಿ(ಪಿಟಿಐ): ಹಸಿರುಮನೆ ಅನಿಲಗಳು ಪರಿಸರ ಸೇರುವುದನ್ನು ತಡೆಗಟ್ಟದಿದ್ದಲ್ಲಿ ಈ ಶತಮಾನದ ಮಧ್ಯಭಾಗದ ಹೊತ್ತಿಗೆ ಸಾಗರ ಪ್ರವಾಹಗಳು ಕುಸಿದು, ಸಂಕಷ್ಟ ಎದುರಾಗಲಿದೆ ಎಂದು ಹೊಸ ಸಂಶೋಧನೆ ಎಚ್ಚರಿಸಿದೆ.

ತಾಪಮಾನದ ಮರುವಿತರಣೆ, ಉಷ್ಣವಲಯ ಮತ್ತು ಉತ್ತರ ಅಟ್ಲಾಂಟಿಕ್ ಪ್ರದೇಶಗಳ ನಡುವೆ ಆವಿಯ ಸಾಂದ್ರೀಕರಣದಲ್ಲಿ ಸಾಗರ ಪ್ರವಾಹಗಳು ಮಹತ್ವದ ಪಾತ್ರ ವಹಿಸುತ್ತವೆ. ಒಂದು ವೇಳೆ ಈ ಪ್ರವಾಹಗಳು ಕುಸಿದಲ್ಲಿ ಹವಾಮಾನದ ಮೇಲೆ ಭಾರಿ ದುಷ್ಪರಿಣಾಮ ಉಂಟಾಗಲಿದೆ ಎಂದು 'ನೇಚರ್ ಕಮ್ಯುನಿಕೇಷನ್ಸ್' ನಿಯತಕಾಲಿಕದಲ್ಲಿ ಪ್ರಕಟವಾಗಿರುವ ಸಂಶೋಧನಾ ವರದಿ ಹೇಳಿದೆ.

ಡೆನ್ಮಾರ್ಕ್‌ನ ಕೋಪನ್‌ಹೆಗನ್ ವಿಶ್ವವಿದ್ಯಾಲಯದ ಸಂಶೋಧಕರು ಈ ಕುರಿತು ಅಧ್ಯಯನ ನಡೆಸಿದ್ದು, 2057ರ ಹೊತ್ತಿಗೆ ಸಾಗರ ಪ್ರವಾಹಗಳು ಕುಸಿಯುವ ಸಾಧ್ಯತೆ ಹೆಚ್ಚು ಎಂದು ಅಂದಾಜಿಸಿದ್ದಾರೆ.

ಈ ವಿದ್ಯಮಾನದಿಂದಾಗಿ ಭವಿಷ್ಯದಲ್ಲಿ ಯುರೋಪ್‌ನಲ್ಲಿ ತಾಪಮಾನ ಗಣನೀಯವಾಗಿ ಕುಸಿಯುವ ಸಾಧ್ಯತೆ ಇದೆ. ಉತ್ತರ ಅಟ್ಲಾಂಟಿಕ್‌ನ ವಾತಾವರಣ ಪ್ರಕ್ಷುಬ್ಧಗೊಳ್ಳಲಿದ್ದರೆ, ಉಷ್ಣವಲಯದಲ್ಲಿ ಬಿಸಿಲ ಧಗೆ ಮತ್ತಷ್ಟು ಹೆಚ್ಚಲಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

'ಹಸಿರುಮನೆ ಅನಿಲಗಳ ಹೊರಸೂಸುವಿಕೆಯನ್ನು ಆದಷ್ಟು ಬೇಗನೆ ತಗ್ಗಿಸುವ ಅಗತ್ಯವನ್ನು ನಮ್ಮ ಅಧ್ಯಯನದಿಂದ ಪ್ರತಿಪಾದಿಸುತ್ತದೆ' ಎಂದು ಸಂಶೋಧನಾ ತಂಡದಲ್ಲಿದ್ದ ವಿಜ್ಞಾನಿ ಪೀಟರ್ ಡಿಟ್ಲೆವ್‌ಸೆನ್ ಹೇಳಿದ್ದಾರೆ.

'ಉತ್ತರ ಅಟ್ಲಾಂಟಿಕ್‌ನ ನಿರ್ದಿಷ್ಟ ಪ್ರದೇಶದಲ್ಲಿ 1870ರಿಂದ ಈ ವರೆಗೆ ದಾಖಲಾಗಿರುವ ತಾಪಮಾನಕ್ಕೆ ಸಂಬಂಧಿಸಿದ ಅಂಕಿ–ಅಂಶಗಳನ್ನು ವಿಶ್ಲೇಷಿಸುವ ಜೊತೆಗೆ, ಭಿನ್ನ ಮಾನದಂಡಗಳನ್ನು ಆಧರಿಸಿ ನಡೆಸಿದ ಅಧ್ಯಯನದಿಂದ ಈ ನಿರ್ಧಾರಕ್ಕೆ ಬರಲಾಗಿದೆ' ಎಂದು ಹೇಳಿದ್ದಾರೆ.

ಈ ಶತಮಾನದಲ್ಲಿ ಸಾಗರ ಪ್ರವಾಹಗಳಲ್ಲಿ ಹಠಾತ್ ಬದಲಾವಣೆ ಕಂಡುಬರುವುದಿಲ್ಲ ಎಂದು ಹವಾಮಾನ ಬದಲಾವಣೆ ಕುರಿತ ವಿಶ್ವಸಂಸ್ಥೆಯ ಸಮಿತಿ (ಐಪಿಸಿಸಿ) ಇತ್ತೀಚೆಗೆ ತನ್ನ ವರದಿಯಲ್ಲಿ ಹೇಳಿತ್ತು. ಆದರೆ, ಡೆನ್ಮಾರ್ಕ್‌ನ ಸಂಶೋಧಕರ ತಂಡದ ವಿಶ್ಲೇಷಣೆಯು ಐಪಿಸಿಸಿ ವರದಿಗೆ ವಿರುದ್ಧವಾಗಿರುವುದು ಗಮನಾರ್ಹ.

ಮುಖ್ಯಾಂಶಗಳು

- 150 ವರ್ಷಗಳಲ್ಲಿ ದಾಖಲಾದ ತಾಪಮಾನಗಳ ವಿಶ್ಲೇಷಣೆ
- ಹವಾಮಾನದ ಮೇಲೆ ಗಂಭೀರ ಪರಿಣಾಮ ಸಾಧ್ಯತೆ
- ಭೂಮಿಯ ಕೆಲವೆಡೆ ತಾಪಮಾನದಲ್ಲಿ ಏರಿಳಿತ

ಇ.ಡಿ ಮುಖ್ಯಸ್ಥರ ಸೇವಾವಧಿ ವಿಸ್ತರಣೆ 'ಸುಪ್ರೀಂ'ಗೆ ಮೊರೆ

ನವದೆಹಲಿ: ನಿರ್ಣಾಯಕ ಹಂತದಲ್ಲಿರುವ ಆರ್ಥಿಕ ಕ್ರಿಯಾಯೋಜನೆ ಕಾರ್ಯಪಡೆಯ (ಎಫ್‌ಎಟಿಎಫ್) ದೃಷ್ಟಿಯಿಂದ ಜಾರಿ ನಿರ್ದೇಶನಾಲಯದ (ಇ.ಡಿ) ಮುಖ್ಯಸ್ಥ ಸಂಜಯ್ ಕುಮಾರ್ ಮಿಶ್ರಾ ಅವರ ಸೇವಾವಧಿಯನ್ನು ಅ.15ರವರೆಗೂ ಮುಂದುವರಿಸಲು ಅನುಮತಿ ನೀಡುವಂತೆ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

2020ರಿಂದಲೂ ಎಫ್‌ಎಟಿಎಫ್ ಪರಾಮರ್ಶೆಯಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಯ ಅಗತ್ಯವಿರುವುದರಿಂದ, ಮಿಶ್ರಾ ಅವರ ಸೇವಾವಧಿ ವಿಸ್ತರಿಸುವುದು ಅನಿವಾರ್ಯವಾಗಿದೆ ಎಂದು ಸರ್ಕಾರ ಹೇಳಿದೆ. ಈ ಪ್ರಕರಣ ಗುರುವಾರ ವಿಚಾರಣೆಗೆ ಬರಲಿದೆ.

ಕ್ರಿಕೆಟ್: ಭಾರತ–ವೆಸ್ಟ್ ಇಂಡೀಸ್ ನಡುವಣ ಮೊದಲ ಏಕದಿನ ಪಂದ್ಯ ಇಂದು

ಲಯಕ್ಕೆ ಮರಳುವತ್ತ ಸೂರ್ಯ ಚಿತ್ತ

ಬ್ರಿಜ್‌ಟೌನ್, ಬಾರ್ಬೆಡೋಸ್ (ಪಿಟಿಐ): ಟೆಸ್ಟ್ ಸರಣಿಯ ಜಯ ಸಾಧಿಸಿ ಆತ್ಮವಿಶ್ವಾಸದಲ್ಲಿರುವ ಭಾರತ ತಂಡವು ಗುರುವಾರ ನಡೆಯಲಿರುವ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ವೆಸ್ಟ್‌ಇಂಡೀಸ್ ತಂಡವನ್ನು ಎದುರಿಸಲಿದೆ.

ಈ ಪಂದ್ಯದಲ್ಲಿ ಕಣಕ್ಕಿಳಿಯಲಿರುವ ಸೂರ್ಯಕುಮಾರ್ ಯಾದವ್ ಅವರು ಲಯಕ್ಕೆ ಮರಳುವ ತವಕದಲ್ಲಿದ್ದಾರೆ. ಅಲ್ಲದೇ ವಿಕೆಟ್‌ಕೀಪರ್ ಸ್ಥಾನ ಗಿಟ್ಟಿಸಲು ಇಶಾನ್ ಕಿಶನ್ ಮತ್ತು ಅನುಭವಿ ಸಂಜು ಸ್ಯಾಮ್ಸನ್ ನಡುವೆ ಪೈಪೋಟಿಯೂ ಏರ್ಪಟ್ಟಿದೆ.

ಈ ಮೂರು ಪಂದ್ಯಗಳ ಸರಣಿಯನ್ನು ಮುಂಬರುವ ಏಷ್ಯಾ ಕಪ್ ಟೂರ್ನಿಯ ಸಿದ್ಧತೆಯ ವೇದಿಕೆಯನ್ನಾಗಿ ಬಳಸಿಕೊಳ್ಳುವತ್ತ ರೋಹಿತ್ ಶರ್ಮಾ ಬಳಗ ಚಿತ್ತ ನೆಟ್ಟಿದೆ. ರೋಹಿತ್, ವಿರಾಟ್ ಕೊಹ್ಲಿ ಮತ್ತು ಶುಭಮನ್ ಗಿಲ್ ಅವರು ಕೂಡ ಉತ್ತಮ ಲಯದಲ್ಲಿದ್ದಾರೆ.

ಬೌಲಿಂಗ್ ವಿಭಾಗದ ಹೊಣೆಯು ಮೊಹಮ್ಮದ್ ಸಿರಾಜ್ ಮೇಲೆ ಹೆಚ್ಚು ಬೀಳಲಿದೆ. ಅವರಿಗೆ ಯುವ ಆಟಗಾರರಾದ ಉಮ್ರಾನ್ ಮಲಿಕ್,

ಬಲಾಬಲ	
ಪಂದ್ಯಗಳು	139
ಭಾರತ ಜಯ	70
ವಿಂಡೀಸ್ ಜಯ	63
ಟೈ	2
ಫಲಿತಾಂಶವಿಲ್ಲ	4

ಮುಕೇಶ್ ಕುಮಾರ್ ಜೊತೆಗಿದ್ದಾರೆ. ಸ್ಪಿನ್ ವಿಭಾಗವು ಬಲಿಷ್ಠವಾಗಿದೆ. ಹೆಚ್ಚು ಆಯ್ಕೆಗಳೂ ಇವೆ. ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಯಜುವೇಂದ್ರ ಚಾಹಲ್ ಮತ್ತು ಕುಲದೀಪ್ ಯಾದವ್ ತಂಡದಲ್ಲಿದ್ದಾರೆ. ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ನಡೆಯಲಿರುವ ವಿಶ್ವಕಪ್ ಸಿದ್ಧತೆಗೂ ಭಾರತಕ್ಕೆ ಈ ಸರಣಿಯುವ ಅಭ್ಯಾಸದ ಭಾಗವಾಗಲಿದೆ.

ಆದರೆ ವೆಸ್ಟ್ ಇಂಡೀಸ್ ತಂಡಕ್ಕೆ ಏಕದಿನ ಮಾದರಿಯಲ್ಲಿ ಪುನರುತ್ಥಾನದ ಆರಂಭಿಕ ಸರಣಿ ಇದಾಗಲಿದೆ. ಏಕೆಂದರೆ ಈ ಸಲದ ವಿಶ್ವಕಪ್ ಟೂರ್ನಿಗೆ ಆಯ್ಕೆಯಾಗಲು ತಂಡಕ್ಕೆ ಸಾಧ್ಯವಾಗಿಲ್ಲ. ಎರಡು ಬಾರಿ ವಿಶ್ವಕಪ್ ಜಯಿಸಿರುವ ವಿಂಡೀಸ್ ಇದೇ ಮೊದಲ ಸಲ ಅನರ್ಹವಾಗಿದೆ.

ಶಾಯ್ ಹೋಪ್ ತಂಡವನ್ನು ಮುನ್ನಡೆಸಲಿದ್ದಾರೆ. ಶಿಮ್ರೊನ್

ವೆಸ್ಟ್ ಇಂಡೀಸ್ ತಂಡದ ನಾಯಕ ಶಾಯ್ ಹೋಪ್

ಹೆಟ್ಮೆಯರ್ ಮತ್ತು ರೋವ್ಮನ್ ಪೊವೆಲ್ ಬಿಟ್ಟರೆ ಉಳಿದ ಬಹುತೇಕರು ಯುವ ಆಟಗಾರರಿದ್ದಾರೆ. ಭಾರತದ ಬಲಿಷ್ಠ ಬೌಲಿಂಗ್ ಪಡೆಯನ್ನು ಎದುರಿಸುವ ಸವಾಲು ಅವರ ಮುಂದಿದೆ.

ತಂಡಗಳು: ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ (ಉಪನಾಯಕ), ಶುಭಮನ್ ಗಿಲ್, ಋತುರಾಜ್ ಗಾಯಕವಾಡ, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಇಶಾನ್ ಕಿಶನ್ (ವಿಕೆಟ್‌ಕೀಪರ್), ಶಾರ್ದೂಲ್ ಠಾಕೂರ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಜಯದೇವ್ ಉನದ್ಕತ್, ಮೊಹಮ್ಮದ್ ಸಿರಾಜ್, ಉಮ್ರಾನ್ ಮಲಿಕ್, ಮುಕೇಶ್ ಕುಮಾರ್.

ವೆಸ್ಟ್ ಇಂಡೀಸ್: ಶಾಯ್ ಹೋಪ್ (ನಾಯಕ), ರೋವ್ಮನ್ ಪೊವೆಲ್ (ಉಪ ನಾಯಕ), ಅಲಿಕ್ ಅಥನೇಝ್, ಯಾನಿಕ್ ಕರೈ, ಕೀಸಿ ಕಾರ್ಟಿ, ಡಾಮ್ನಿಕ್ ಡ್ರೇಕ್ಸ್, ಶಿಮ್ರೊನ್ ಹೆಟ್ಮೆಯರ್, ಅಲ್ಜಾರಿ ಜೋಸೆಫ್, ಬ್ರೆಂಡನ್ ಕಿಂಗ್, ಕೈಲ್ ಮೇಯರ್ಸ್, ಗುಡಕೇಶ್ ಮೋಟೀ, ಜೇಡನ್ ಸೀಲ್ಸ್, ರೊಮೆರಿಯೊ ಶೆಫರ್ಡ್, ಕೆವಿನ್ ಸಿಂಕ್ಲೆರ್, ಒಷೇನ್ ಥಾಮಸ್.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಡಿಡಿ ಸ್ಪೋರ್ಟ್ಸ್

ಸೂರ್ಯಕುಮಾರ್ ಯಾದವ್

11 ಸ್ಥಾನ ಬಡ್ತಿ ಪಡೆದ ಜೈಸ್ವಾಲ್

ದುಬೈ (ಪಿಟಿಐ): ಉತ್ತಮ ಲಯದಲ್ಲಿರುವ ಭಾರತ ತಂಡದ ಯುವ ಆಟಗಾರ ಯಶಸ್ವಿ ಜೈಸ್ವಾಲ್, ಬುಧವಾರ ಬಿಡುಗಡೆಯಾದ ಐಸಿಸಿ ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ 11 ಸ್ಥಾನ ಬಡ್ತಿ ಪಡೆದಿದ್ದು 63ನೇ ಸ್ಥಾನಕ್ಕೆ ಏರಿದ್ದಾರೆ. ಬ್ಯಾಟರ್‌ಗಳ ಈ ವಿಭಾಗದಲ್ಲಿ ತಂಡದ ನಾಯಕ ರೋಹಿತ್ ಶರ್ಮಾ 9ನೇ ಸ್ಥಾನದಲ್ಲಿದ್ದಾರೆ.

ಟ್ವಿಟ್ಟರ್‌ನ ಹೊಸ ಲೋಗೋ!

ದೇವಧರ್ ಟ್ರೋಫಿ: ದಕ್ಷಿಣ ವಲಯಕ್ಕೆ ಗೆಲುವು

ಮಯಂಕ್ ಚೆಂದದ ಬ್ಯಾಟಿಂಗ್

ಪುದುಚೇರಿ: ಬೌಲರ್‌ಗಳಿಗೆ ಉತ್ತಮ ನೆರವು ನೀಡುತ್ತಿದ್ದ ಪಿಚ್‌ನಲ್ಲಿಯೂ ಮಯಂಕ್ ಅಗರವಾಲ್ ಚೆಂದದ ಬ್ಯಾಟಿಂಗ್ ಮಾಡಿದರು. ಆದರೆ ಕೇವಲ ಎರಡು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರು.

ಮಯಂಕ್ (98; 115ಎ, 4X9) ಆಟದ ಬಲದಿಂದ ದಕ್ಷಿಣ ವಲಯ ತಂಡವು ದೇವಧರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಎರಡನೇ ಪಂದ್ಯದಲ್ಲಿ 12 ರನ್‌ಗಳಿಂದ ಪಶ್ಚಿಮ ವಲಯವನ್ನು ಸೋಲಿಸಿತು.

ಟಾಸ್ ಗೆದ್ದ ಪಶ್ಚಿಮ ವಲಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಯಂಕ್ ಏಕಾಂಗಿ ಹೋರಾಟದ ಬಲದಿಂದ ದಕ್ಷಿಣ ವಲಯವು 46.4 ಓವರ್‌ಗಳಲ್ಲಿ 206 ರನ್ ಗಳಿಸಿತು. ಅದಕ್ಕುತ್ತರವಾಗಿ ಪಶ್ಚಿಮ ವಲಯವು 36.2 ಓವರ್‌ಗಳಲ್ಲಿ 194 ರನ್ ಗಳಿಸಿ ಕುಸಿಯಿತು. ದಕ್ಷಿಣ ತಂಡದ ರವಿಶ್ರೀನಿವಾಸನ್ ಸಾಯಿಕಿಶೋರ್ (44ಕ್ಕೆ3) ಮತ್ತು ವಾಷಿಂಗ್ಟನ್ ಸುಂದರ್ (34ಕ್ಕೆ2) ಅವರ ದಾಳಿ ಪರಿಣಾಮಕಾರಿಯಾಗಿತ್ತು.

ಮಯಂಕ್ ಮಿಂಚು: ಇನಿಂಗ್ಸ್ ಆರಂಭಿಸಿದ ದಕ್ಷಿಣ ವಲಯ ತಂಡವು 16 ಓವರ್‌ಗಳಲ್ಲಿ 75 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತು. ದೇವದತ್ತ ಪಡಿಕ್ಕಲ್ ಸೇರಿದಂತೆ ಆರು ಬ್ಯಾಟರ್‌ಗಳು ಒಂದಂಕಿ ಮಾತ್ರ ದಾಖಲಿಸಿದರು.

ಆದರೆ ತಾಳ್ಮೆ ಮತ್ತು ಕೌಶಲಪೂರ್ಣ ಬ್ಯಾಟಿಂಗ್ ಮಾಡಿದ ಮಯಂಕ್ ಬೌಲರ್‌ಗಳಿಗೆ ದಿಟ್ಟ ಉತ್ತರ ನೀಡಿದರು. 36ನೇ ಓವರ್‌ನಲ್ಲಿ ಮಯಂಕ್ ವಿಕೆಟ್ ಗಳಿಸಿದ ಪಾರ್ಥ್ ಭೂತ್ ಸಂಭ್ರಮಿಸಿದರು. ಆದರೆ ಶತಕದಂಚಿನಲ್ಲಿ ಮಯಂಕ್ ನಿರಾಶೆಗೊಂಡರು.

ಮಯಂಕ್ ಆಗರ್‌ವಾಲ್

ಸಂಕ್ಷಿಪ್ತ ಸ್ಕೋರು: ದಕ್ಷಿಣ ವಲಯ: 46.4 ಓವರ್‌ಗಳಲ್ಲಿ206 (ಮಯಂಕ್ ಅಗರವಾಲ್ 98, ಅರುಣ ಕಾರ್ತಿಕ್ 23, ವೈಶಾಖ ವಿಜಯಕುಮಾರ್ ಔಟಾಗದೆ 20, ವಿದ್ವತ್ ಕಾವೇರಪ್ಪ 19, ರಾಜವರ್ಧನ್ ಹಂಗರಗೇಕರ್ 47ಕ್ಕೆ2, ಶಮ್ಸ್ ಮುಲಾನಿ 42ಕ್ಕೆ2, ಪಾರ್ಥ್ ಭಟ್ 25ಕ್ಕೆ3) ಪಶ್ಚಿಮ ವಲಯ: 36.2ಓವರ್‌ಗಳಲ್ಲಿ 194 (ಸರ್ಫರಾಜ್ ಖಾನ್ 42, ಶಿವಂ ದುಬೆ 29, ಅತಿಥ್ ಶೇಟ್ 40, ರವಿಶ್ರೀನಿವಾಸನ್ ಸಾಯಿಕಿಶೋರ್ 44ಕ್ಕೆ3, ವಾಷಿಂಗ್ಟನ್ ಸುಂದರ್ 34ಕ್ಕೆ2, ವೈಶಾಖ ವಿಜಯಕುಮಾರ್ 49ಕ್ಕೆ1, ವಿ.ಕೌಶಿಕ್ 19ಕ್ಕೆ1, ವಿದ್ವತ್ ಕಾವೇರಪ್ಪ 44ಕ್ಕೆ1) ಫಲಿತಾಂಶ: ದಕ್ಷಿಣ ವಲಯ ತಂಡಕ್ಕೆ 12 ರನ್ ಜಯ.

ಉತ್ತರ ವಲಯ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 307 (ಪ್ರಭಸಿಮ್ರನ್ 121, ನಿತೀಶ್ ರಾಣಾ 51, ಮನದೀಪ್ ಸಿಂಗ್ 43, ವೆಂಕಟೇಶ್ ಅಯ್ಯರ್ 50ಕ್ಕೆ2) ಕೇಂದ್ರ ವಲಯ: 47.4 ಓವರ್‌ಗಳಲ್ಲಿ 259 (ಶಿವಂ ಚೌಧರಿ 51, ಯಶ್ ದುಬೆ 78, ಉಪೇಂದ್ರ ಯಾದವ್ 52, ಮಯಂಕ್ ಯಾದವ್ 47ಕ್ಕೆ3, ನಿತೀಶ್ ರಾಣಾ 48ಕ್ಕೆ4) ಫಲಿತಾಂಶ; ಉತ್ತರ ವಲಯಕ್ಕೆ 48 ರನ್ ಜಯ.

ಸ್ಪೇನ್ ತಂಡದ ಅಲ್ಬಾ ರೆಡೊಂಡೊ (ಮಧ್ಯದಲ್ಲಿ) ಅವರು ಸಹ ಆಟಗಾರ್ತಿಯರ ಜತೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

16ರ ಘಟ್ಟಕ್ಕೆ ಜಪಾನ್, ಸ್ಪೇನ್

ಆಕ್ಲೆಂಡ್ (ಎಎಫ್‌ಪಿ): ಪ್ರಶಸ್ತಿಗೆ ನೆಚ್ಚಿನ ತಂಡಗಳಾಗಿರುವ ಆಕ್ರಮಣಕಾರಿ ಸ್ಪೇನ್ ಮತ್ತು ಮಾಜಿ ಚಾಂಪಿಯನ್ ಜಪಾನ್, ವಿಶ್ವಕಪ್ ಮಹಿಳಾ ಫುಟ್‌ಬಾಲ್ ಟೂರ್ನಿಯ ಅಂತಿಮ 16ಕ್ಕೆ ಲಗ್ಗೆಯಿಟ್ಟವು. ಬುಧವಾರ ನಡೆದ 'ಸಿ' ಗುಂಪಿನ ಪಂದ್ಯಗಳಲ್ಲಿ ಈ ತಂಡಗಳು ಎದುರಾಳಿಗಳ ವಿರುದ್ಧ ಸುಲಭ ಜಯ ದಾಖಲಿಸಿದವು.

ಎರಡು ಬಾರಿಯ ಬ್ಯಾಲನ್ ಡಿಓರ್ ವಿಜೇತೆ ಅಲೆಕ್ಸಿಯಾ ಪುಟೆಲ್ಲಾಸ್ ಅವರು ಗೋಲು ಹೊಡೆಯದಿದ್ದರೂ ಸ್ಪೇನ್ ತಂಡದ ಪರ ಉತ್ತಮ ಪ್ರದರ್ಶನ ನೀಡಿ 5–0 ಗೋಲುಗಳಿಂದ ಜಾಂಬಿಯಾ ತಂಡವನ್ನು ಸೋಲಿಸಲು ನೆರವಾದರು.

ಜಪಾನ್ ಇದಕ್ಕೆ ಮೊದಲು 2–0 ಗೋಲುಗಳಿಂದ ಕೋಸ್ಟರಿಕಾ ಮೇಲೆ ಜಯಗಳಿಸಿ ನಾಕೌಟ್ ಹಂತದತ್ತ ಕಾಲಿಟ್ಟಿತ್ತು. ಆದರೆ ಸ್ಪೇನ್‌ನ ನಿರೀಕ್ಷಿತ ಗೆಲುವು ಅದರ ಪ್ರವೇಶವನ್ನು ಖಚಿತಪಡಿಸಿತು.

ಸೋಮವಾರ ಜಪಾನ್ ಮತ್ತು ಸ್ಪೇನ್ ಮುಖಾಮುಖಿ ಆಗಲಿದ್ದು, 'ಸಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ತಂಡ ಯಾವುದೆಂದು ನಿರ್ಧಾರ ಆಗಲಿದೆ. ಎರಡೂ ತಂಡಗಳು ಆಡಿದ ಎರಡೂ ಪಂದ್ಯಗಳಲ್ಲಿ ಜಯಗಳಿಸಿದ್ದು ಆರು ಪಾಯಿಂಟ್ಸ್ ಸಂಗ್ರಹಿಸಿವೆ. ಕೋಸ್ಟರಿಕಾ ಮತ್ತು ಜಾಂಬಿಯಾ ತಂಡಗಳು ಎದುರಾಗಲಿದ್ದು, ಗುಂಪಿನಲ್ಲಿ ಕೊನೆಯ ಸ್ಥಾನ ತಪ್ಪಿಸಲು ಹೋರಾಡಲಿವೆ.

ಪುಟೆಲ್ಲಾಸ್, ಮಧ್ಯಂತರದ ವೇಳೆಗೆ ಮೈದಾನದಿಂದ ನಿರ್ಗಮಿಸಿದರೂ, ಅಷ್ಟರಲ್ಲಿ ಸ್ಪೇನ್ 2–0 ಮುಂದಿದ್ದು, ಜಾಂಬಿಯಾ ತಂಡ ಹಣ್ಣುಗಾಯಿ-ನೀರುಗಾಯಿ ಆಗಿತ್ತು. ಸ್ಪೇನ್ ಪರ ಟೆರೆಸಾ ಅಬೆಲಿಯಾರಾ (9ನೇ ನಿಮಿಷ), ಜೆನಿಫರ್ ಹರ್ಮೊಸೊ (13 ಮತ್ತು 70ನೇ) ಮತ್ತು ಅಲ್ಬಾ ರೆಡೊಂಡೊ (69 ಮತ್ತು 85ನೇ ನಿಮಿಷ) ಗೋಲುಗಳನ್ನು ಗಳಿಸಿದರು.

2011ರ ಚಾಂಪಿಯನ್ ಜಪಾನ್, ಹಲವು ಲೋಪಗಳನ್ನು ಎಸಗಿದ ಕೋಸ್ಟರಿಕಾ ತಂಡದ ಮೇಲೆ ಜಯಗಳಿಸಿತು.

ನಿಯಮ ಮಾರ್ಪಾಡು ಮಾಡಿದ ಕ್ರೀಡಾ ಸಚಿವಾಲಯ

ಏಷ್ಯಾಡ್‌ಗೆ ಫುಟ್‌ಬಾಲ್ ತಂಡಗಳು

ನವದೆಹಲಿ (ಪಿಟಿಐ): ಕೇಂದ್ರ ಕ್ರೀಡಾ ಸಚಿವಾಲಯ ಈಗಿರುವ ಮಾನದಂಡಗಳನ್ನು ಸಡಿಲಿಸಲು ನಿರ್ಧರಿಸಿದ ಕಾರಣ, ಭಾರತದ ಪುರುಷರ ಮತ್ತು ಮಹಿಳಾ ಫುಟ್‌ಬಾಲ್ ತಂಡಗಳು ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸುವ ಅವಕಾಶ ಪಡೆದಿವೆ.

ಏಷ್ಯಾದಲ್ಲಿ ಅಗ್ರ ಎಂಟರೊಳಗೆ ಸ್ಥಾನ ಪಡೆದಿಲ್ಲದ ಕಾರಣ ಭಾರತದ ಫುಟ್‌ಬಾಲ್ ತಂಡಗಳಿಗೆ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವುದಕ್ಕೆ ಒಪ್ಪಿಗೆ ನೀಡಲು ಈ ಮೊದಲು ಭಾರತ ಒಲಿಂಪಿಕ್ ಸಂಸ್ಥೆ ನಿರಾಕರಿಸಿತ್ತು. ಈ ಪ್ರತಿಷ್ಠಿತ ಕೂಟದಲ್ಲಿ ಪಾಲ್ಗೊಳ್ಳಲು ಭಾರತ ತಂಡಗಳಿಗೆ ಅನುಮತಿ ನೀಡುವಂತೆಅಖಿಲಭಾರತಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್), ಕ್ರೀಡಾ ಸಚಿವಾಲಯಕ್ಕೆ ಮನವಿ ಮಾಡಿತ್ತು. ಈ ವಿಷಯದಲ್ಲಿ ಮಧ್ಯಪ್ರವೇಶಿಸುವಂತೆ ಜಾಲತಾಣದ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೀನಿಯರ್ ತಂಡದ ಮುಖ್ಯ ಕೋಚ್ ಇಗೊರ್ ಸ್ಟಿಮಾಚ್ ಅವರೂ ಮನವಿ ಮಾಡಿದ್ದರು.

'ಫುಟ್‌ಬಾಲ್ ಪ್ರೇಮಿಗಳಿಗೆ ಶುಭ ಸುದ್ದಿ. ನಮ್ಮ ಪುರುಷರ ಮತ್ತು ಮಹಿಳಾ ರಾಷ್ಟ್ರೀಯ ಫುಟ್‌ಬಾಲ್ ತಂಡಗಳು ಮುಂಬರುವ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲು ಸಜ್ಜಾಗಿವೆ' ಎಂದು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಬುಧವಾರ ಟ್ವೀಟ್ ಮಾಡಿದ್ದಾರೆ.

'ಎರಡೂ ತಂಡಗಳಿಗೆ ಭಾಗವಹಿಸಲು ಅನುಕೂಲವಾಗುವಂತೆ ಕ್ರೀಡಾ ಸಚಿವಾಲಯವು ನಿಯಮಗಳನ್ನು ಸಡಿಲಿಸಲು ನಿರ್ಧರಿಸಿದೆ. ಹಾಲಿ ನಿಯಮಗಳ ಪ್ರಕಾರ ಅವುಗಳಿಗೆ ಅರ್ಹತೆ ಸಿಗುತ್ತಿರಲಿಲ್ಲ.'

'ತಂಡಗಳ ಇತ್ತೀಚಿನ ಸಾಧನೆಗಳನ್ನು ಗಮನದಲ್ಲಿಟ್ಟುಕೊಂಡು ಸಚಿವಾಲಯವು ನಿಯಮ ಸಡಿಲಿಸಲು ತೀರ್ಮಾನಿಸಿದೆ. ಏಷ್ಯನ್ ಕ್ರೀಡಾಕೂಟದಲ್ಲಿ ತಂಡಗಳು ಉತ್ತಮ ಸಾಧನೆ ತೋರಲಿದ್ದು, ದೇಶ ಹೆಮ್ಮೆಪಡುವಂತೆ ಮಾಡಲಿದೆ ಎಂಬ ವಿಶ್ವಾಸವಿದೆ' ಎಂದು ಟ್ವೀಟ್ ಬರೆದಿದ್ದಾರೆ.

2002 ರಿಂದೀಚೆ ಏಷ್ಯನ್ ಗೇಮ್ಸ್‌ನಲ್ಲಿ ಹೆಚ್ಚುಕಮ್ಮಿ 23 ವರ್ಷದೊಳಗಿನವರ ತಂಡವೇ ಪಾಲ್ಗೊಳ್ಳುತ್ತಿವೆ. ತಂಡದಲ್ಲಿ ಇದಕ್ಕಿಂತ ಹೆಚ್ಚು ವಯಸ್ಸಿನ ಮೂವರಿಗೆ ಮಾತ್ರ ಆಡಲು ಅನುಮತಿಯಿದೆ.

ವಿಶ್ವಕಪ್: ಭಾರತ–ಪಾಕಿಸ್ತಾನ ಪಂದ್ಯದ ದಿನಾಂಕ ಬದಲು?

ನವದೆಹಲಿ (ಪಿಟಿಐ): ಅಹಮದಾಬಾದಿನಲ್ಲಿ ಆಯೋಜಿಸಲಾಗಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯದ ದಿನಾಂಕ ಬದಲಾಗುವ ಸಾಧ್ಯತೆ ಇದೆ.

ಈ ಮೊದಲು ವೇಳಾಪಟ್ಟಿಯಲ್ಲಿ ಪ್ರಕಟವಾದಂತೆ ಭಾರತ ಮತ್ತು ಪಾಕ್ ಅಕ್ಟೋಬರ್ 15ರಂದು ಮುಖಾಮುಖಿಯಾಗಲಿವೆ. ಆದರೆ ಇದೀಗ ಅ.14ರಂದೇ ಪಂದ್ಯ ನಡೆಯುವ ಸಾಧ್ಯತೆ ಇದೆ.

ಈ ಬದಲಾವಣೆಯಿಂದಾಗಿ ಪಂದ್ಯ ನೋಡಲು ದೇಶ, ವಿದೇಶಗಳಿಂದ ಬರುತ್ತಿರುವ ಅಭಿಮಾನಿಗಳು ತೊಂದರೆಗೊಳಗಾಗುವ ಆತಂಕದಲ್ಲಿದ್ದಾರೆ. ವಿಶ್ವಕಪ್ ವೇಳಾಪಟ್ಟಿ ಪ್ರಕಟವಾದ ದಿನದಿಂದಲೇ ಅಹಮದಾಬಾದಿನ ಹೋಟೆಲ್ ಕೋಣೆಗಳ ದರ ಹಾಗೂ ವಿಮಾನ ಪ್ರಯಾಣದ ದರಗಳು ಗಗನಕ್ಕೇರಿವೆ.

'ಅ. 15ರಂದು ನವರಾತ್ರಿ ಆರಂಭವಾಗುತ್ತಿದೆ. ಆದ್ದರಿಂದ ಸ್ಥಳೀಯ ಭದ್ರತಾ ಇಲಾಖೆಗಳು ಈ ಪಂದ್ಯದ ದಿನಾಂಕ ಬದಲಾವಣೆ ಮಾಡಲು ಕೇಳಿದ್ದವು. ನವರಾತ್ರಿ ಹಾಗೂ ಪಂದ್ಯಕ್ಕೆ ಭದ್ರತಾ ಸಿಬ್ಬಂದಿ ನಿಯೋಜನೆ ಕಷ್ಟವಾಗುವುದರಿಂದ ಪಂದ್ಯದ ದಿನಾಂಕ ಬದಲಿಸುವ ಪ್ರಯತ್ನಗಳು ನಡೆದಿವೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಅಂಪೈರ್ ಪ್ಯಾನೆಲ್‌ಗೆ ಭೂಲೆ ಸಹೋದರಿಯರು

ನವದೆಹಲಿ (ಪಿಟಿಐ): ಇಂದೋರ್ ಮೂಲದ ಸಹೋದರಿಯರಾದ ನಿಧಿ ಭೂಲೆ ಮತ್ತು ರಿತಿಕಾ ಭೂಲೆ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಂಪೈರ್‌ಗಳ ಪ್ಯಾನೆಲ್‌ನಲ್ಲಿ ಸ್ಥಾನ ಪಡೆದಿದ್ದಾರೆ.

2006ರಲ್ಲಿ ನಿಧಿ ಭಾರತ ಮಹಿಳಾ ತಂಡವನ್ನು ಒಂದು ಟೆಸ್ಟ್ ಮತ್ತು ಏಕದಿನ ಪಂದ್ಯದಲ್ಲಿ ಪ್ರತಿನಿಧಿಸಿದ್ದರು. ಅವರ ತಂಗಿ ರಿತಿಕಾ ಮಧ್ಯಪ್ರದೇಶ ತಂಡದಲ್ಲಿ 31 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದರು.

ನಿಧಿ ಭೂಲೆ ಮತ್ತು ರಿತಿಕಾ ಭೂಲೆ

ಹೋದ ಜೂನ್ 10ರಿಂದ 13ರವರೆಗೆ ನಿವೃತ್ತ ಕ್ರಿಕೆಟಿಗರಿಗೆ ಅಂಪೈರಿಂಗ್ ಪರೀಕ್ಷೆಯನ್ನು ಬಿಸಿಸಿಐ ಆಯೋಜಿಸಿತ್ತು. ಒಟ್ಟು 150 ಅಂಕಗಳಿಗೆ 120ಕ್ಕಿಂತ ಹೆಚ್ಚು ಅಂಕ ಗಳಿಸುವುದು ಕಡ್ಡಾಯವಾಗಿತ್ತು. ನಿಧಿ ಮತ್ತು ರಿತಿಕಾ ಅವರು ಕ್ರಮವಾಗಿ 133.5 ಮತ್ತು 133 ಅಂಕಗಳನ್ನು ಗಳಿಸಿದ್ದರು.

ತಮಿಳುನಾಡಿನ ವಿ. ಕೃತಿಕಾ ಮತ್ತು ವಿದರ್ಭದ ಅಂಕಿತಾ ಗುಹಾ ಅವರೂ ಬಿಸಿಸಿಐ ರೆಫರಿ ಪ್ಯಾನೆಲ್‌ನಲ್ಲಿ ಸ್ಥಾನ ಗಳಿಸಿದ್ದಾರೆ. ಇದರೊಂದಿಗೆ ಬಿಸಿಸಿಐನಲ್ಲಿ ಮಹಿಳಾ ಅಂಪೈರ್‌ಗಳ ಸಂಖ್ಯೆಯು ಏಳಕ್ಕೇರಿದೆ.

ಟಿ20: ಸಿರಾಜುಲ್ ಶ್ರೇಷ್ಠ ಬೌಲಿಂಗ್

ಕ್ವಾಲಾಲಂಪುರ (ಪಿಟಿಐ): ಮಲೇಷ್ಯಾದ ವೇಗಿ ಸಿರಾಜುಲ್ ಇದ್ರಸ್ ಅವರು ಟಿ20 ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲಿ ಏಳು ವಿಕೆಟ್ ಪಡೆದ ಮೊದಲ ಬೌಲರ್ ಎನಿಸಿಕೊಂಡರು.

ಟಿ20 ವಿಶ್ವಕಪ್ ಏಷ್ಯಾ ಬಿ ಕ್ವಾಲಿಫಯರ್ ಪಂದ್ಯದಲ್ಲಿ ಅವರು ಚೀನಾ ವಿರುದ್ಧ 8 ರನ್‌ಗಳಿಗೆ 7 ವಿಕೆಟ್ ಪಡೆದರು. ಈ ಪಂದ್ಯವನ್ನು ಮಲೇಷ್ಯಾ 8 ವಿಕೆಟ್‌ಗಳಿಂದ ಗೆದ್ದುಕೊಂಡಿತು.

ಟಿ20 ಯಲ್ಲಿ ಶ್ರೇಷ್ಠ ಬೌಲಿಂಗ್ ದಾಖಲೆ ನೈಜೀರಿಯಾದ ಪೀಟರ್ ಅಹೊ (5 ರನ್‌ಗಳಿಗೆ 6 ವಿಕೆಟ್, 2021 ರಲ್ಲಿ ಸಿಯೆರಾ ಲಿಯೊನ್ ವಿರುದ್ಧ) ಹೆಸರಿನಲ್ಲಿತ್ತು.

ಇಂಗ್ಲೆಂಡ್‌ಗೆ ಸರಣಿ ಸಮಬಲದ ಗುರಿ

ಲಂಡನ್ (ಎಎಫ್‌ಪಿ): ಆ್ಯಷಸ್ ಸರಣಿಯ ಐದನೇ ಹಾಗೂ ಅಂತಿಮ ಟೆಸ್ಟ್ ಗುರುವಾರ 'ದಿ ಓವಲ್' ಕ್ರೀಡಾಂಗಣದಲ್ಲಿ ಆರಂಭವಾಗಲಿದ್ದು, ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ಅವರು ತಂಡದ 'ಹಿರಿಯಣ್ಣ' ಜೇಮ್ಸ್ ಆ್ಯಂಡರ್ಸನ್ ಮೇಲೆ ಭರವಸೆಯಿಟ್ಟಿದ್ದಾರೆ. 'ಅವರು ಈ ಆಟ ಕಂಡ ಶ್ರೇಷ್ಠ ವೇಗದ ಬೌಲರ್' ಎಂದು ಬಣ್ಣಿಸಿದ್ದಾರೆ.

ಓಲ್ಡ್ ಟ್ರಾಫರ್ಡ್‌ನಲ್ಲಿ ಕಳೆದ ವಾರ ನಡೆದ ನಾಲ್ಕನೇ ಟೆಸ್ಟ್ ಮಳೆಯಿಂದಾಗಿ ಡ್ರಾ ಆಗಿದ್ದು, ಆಸ್ಟ್ರೇಲಿಯಾ ಈಗಾಗಲೇ ಆ್ಯಷಸ್ ಟ್ರೋಫಿ ಉಳಿಸಿಕೊಂಡಿದೆ. ಆದರೆ ಈ ಟೆಸ್ಟ್ ಪಂದ್ಯವನ್ನು ಗೆದ್ದು ಸರಣಿಯನ್ನು 2–2 ಸಮಬಲ ಮಾಡಿಕೊಳ್ಳುವ ಇರಾದೆಯಲ್ಲಿ ಇಂಗ್ಲೆಂಡ್ ಇದೆ. ನಾಲ್ಕನೇ ಪಂದ್ಯದಲ್ಲಿ ಆಡಿದ ತಂಡವನ್ನೇ ಉಳಿಸಿಕೊಳ್ಳಲು ಇಂಗ್ಲೆಂಡ್ ನಿರ್ಧರಿಸಿದೆ. ಆ ಪಂದ್ಯದಲ್ಲಿ ಮಳೆಯಿಂದ ಇಂಗ್ಲೆಂಡ್ ಗೆಲುವಿನ ಕನಸು ಕರಗಿಹೋಗಿತ್ತು.

ಭಾನುವಾರ 41ನೇ ವಸಂತಕ್ಕೆ ಕಾಲಿಡಲಿರುವ ಆ್ಯಂಡರ್ಸನ್, ಈ ಸರಣಿಯಲ್ಲಿ ಬರೇ ನಾಲ್ಕು ವಿಕೆಟ್ ಮಾತ್ರ ಪಡೆದಿದ್ದಾರೆ. ಅದೂ 76.75ರ ಸರಾಸರಿಯಲ್ಲಿ. ಸದ್ಯೋಭವಿಷ್ಯದಲ್ಲಿ ನಿವೃತ್ತಿಯಾಗುವ ಯೋಚನೆ ತಮಗೆ ಇಲ್ಲ ಎಂದು ಅವರು ಇತ್ತೀಚೆಗೆ ಪತ್ರಿಕೆಯೊಂದರ ಅಂಕಣದಲ್ಲಿ ಬರೆದಿದ್ದಾರೆ. ಎರಡು ದಶಕಗಳ ದೀರ್ಘ ವೃತ್ತಿ ಜೀವನದಲ್ಲಿ 689 ವಿಕೆಟ್ ಗಳಿಸಿದ್ದಾರೆ. ಅತ್ಯಧಿಕ ವಿಕೆಟ್ ಪಡೆದಿರುವ ವೇಗದ ಬೌಲರ್ ಆಗಿದ್ದಾರೆ.

ಸ್ಟೋಕ್ಸ್ ಅವರು, ಆ್ಯಂಡರ್ಸನ್ ಅವರ ದೀರ್ಘಕಾಲದ ಸಹ ಬೌಲರ್ ಸ್ಟುವರ್ಟ್ ಬ್ರಾಡ್ ಬಗ್ಗೆಯೂ ಮೆಚ್ಚುಗೆಯ ನುಡಿಗಳನ್ನಾಡಿದ್ದಾರೆ. 37 ವರ್ಷದ ಬ್ರಾಡ್, ಆ್ಯಷಸ್ ಸರಣಿಯಲ್ಲಿ 18 ವಿಕೆಟ್‌ಗಳೊಡನೆ ಯಶಸ್ವಿ ಬೌಲರ್ ಆಗಿದ್ದಾರೆ.

ಸದ್ಯ ನಿವೃತ್ತಿ ಇಲ್ಲ–ವಾರ್ನರ್: ಆ್ಯಷಸ್ ಸರಣಿಯ ನಂತರ ತಾವು ಮತ್ತು ಸ್ಟೀವ್ ಸ್ಮಿತ್ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಬಹುದೆಂಬ ಮಾತುಗಳನ್ನು ಆಸ್ಟ್ರೇಲಿಯಾದ ಆರಂಭ ಆಟಗಾರ ಡೇವಿಡ್ ವಾರ್ನರ್ ತಳ್ಳಿಹಾಕಿದ್ದಾರೆ.

ಜೇಮ್ಸ್ ಆ್ಯಂಡರ್ಸನ್

ಸಂಕ್ಷಿಪ್ತ ಸುದ್ದಿ

ಹಾಕಿ: ಸ್ಪೇನ್‌ಗೆ ಮಣಿದ ಭಾರತ

ಟೆರಾಸಾ, ಸ್ಪೇನ್ (ಪಿಟಿಐ): ಭಾರತ ತಂಡದವರು ಸ್ಪ್ಯಾನಿಷ್ ಹಾಕಿ ಫೆಡರೇಷನ್‌ನ 100ನೇ ವರ್ಷದ ಅಂಗವಾಗಿ ಆಯೋಜಿಸಿರುವ ಅಂತರರಾಷ್ಟ್ರೀಯ ಹಾಕಿ ಟೂರ್ನಿಯ ಮೊದಲ ಪಂದ್ಯದಲ್ಲಿ 1–2 ರಿಂದ ಆತಿಥೇಯ ತಂಡಕ್ಕೆ ಶರಣಾದರು.

ಮಂಗಳವಾರ ನಡೆದ ಪಂದ್ಯದಲ್ಲಿ ನಾಯಕ ಹರ್ಮನ್‌ಪ್ರೀತ್ ಸಿಂಗ್ (59ನೇ ನಿ.) ಅವರು ಭಾರತದ ಪರ ಗೋಲು ಗಳಿಸಿದರೆ, ಸ್ಪೇನ್ ತಂಡಕ್ಕೆ ಪಾವ್ ಕುನಿಲ್ (11) ಮತ್ತು ಜೋಕಿನ್ ಮೆನೀನಿ ಅವರು ಚೆಂಡನ್ನು ಗುರಿ ಸೇರಿಸಿದರು.

ಡ್ರಾ ಪಂದ್ಯದಲ್ಲಿ ಮಹಿಳಾ ತಂಡ: ಭಾರತ ಮಹಿಳಾ ತಂಡದವರು ಒಂದು ಗೋಲಿನ ಹಿನ್ನಡೆ ಅನುಭವಿಸಿದರೂ, ಮರುಹೋರಾಟ ನಡೆಸಿ ಇಂಗ್ಲೆಂಡ್ ಜತೆ 1–1 ಗೋಲುಗಳ ಡ್ರಾ ಸಾಧಿಸಲು ಯಶಸ್ವಿಯಾದರು.

ಹೋಲಿ ಹಂಟ್ ಅವರು 7ನೇ ನಿಮಿಷದಲ್ಲಿ ಇಂಗ್ಲೆಂಡ್ ತಂಡಕ್ಕೆ ಮುನ್ನಡೆ ತಂದಿತ್ತರು. ಲಾಲ್‌ರೆಮ್‌ಸಿಯಾಮಿ ಅವರು 41ನೇ ನಿಮಿಷದಲ್ಲಿ ಗೋಲು ಗಳಿಸಿ, ಭಾರತ ತಂಡ ಪಂದ್ಯವನ್ನು ಡ್ರಾ ಮಾಡಿಕೊಳ್ಳಲು ನೆರವಾದರು.

ಆದಿತ್ಯ 83ನೇ ಗ್ರ್ಯಾಂಡ್‌ಮಾಸ್ಟರ್

ಚೆನ್ನೈ (ಪಿಟಿಐ): ಯುವ ಚೆಸ್ ಪ್ರತಿಭೆ ಆದಿತ್ಯ ಎಸ್.ಸಾಮಂತ್ ಅವರು ಭಾರತದ 83ನೇ ಗ್ರ್ಯಾಂಡ್‌ಮಾಸ್ಟರ್ ಎನಿಸಿಕೊಂಡರು. ಮಹಾರಾಷ್ಟ್ರದ 17 ವರ್ಷದ ಅವರು ಸ್ವಿಟ್ಜರ್‌ಲೆಂಡ್‌ನಲ್ಲಿ ನಡೆಯುತ್ತಿರುವ ಬಿಯೆಲ್‌ಚೆಸ್ ಟೂರ್ನಿಯ ಒಂಬತ್ತನೇ ಸುತ್ತಿನ ಪಂದ್ಯ ಆಡುವ ಮೂಲಕ ಈ ಸಾಧನೆ ಮಾಡಿದರು.

ಆದಿತ್ಯ ಅವರು ಎಂಟನೇ ಸುತ್ತಿನಲ್ಲಿ ಚೀನಾದ ಬು ಕ್ಸಿಯಾಂಗ್‌ಝಿ ಜತೆ ಡ್ರಾ ಮಾಡಿಕೊಂಡಿದ್ದರು. ಮೂರನೇ ಜಿಎಂ ನಾರ್ಮ್ ಗಳಿಸಲು ಅವರು ಇನ್ನೊಂದು ಪಂದ್ಯ ಆಡಬೇಕಿತ್ತು. ಒಂಬತ್ತನೇ ಸುತ್ತಿನಲ್ಲಿ ಅವರು ಭಾರತದ ಆರ್ಯನ್ ಚೋಪ್ರಾ ಅವರನ್ನು ಎದುರಿಸಿದರು.

ಆದಿತ್ಯ, ಈ ಮೊದಲೇ 2,500 ಎಲೊ ಪಾಯಿಂಟ್ಸ್ ಹೊಂದಿದ್ದರಲ್ಲದೆ ಎರಡು ಜಿಎಂ ನಾರ್ಮ್‌ಗಳನ್ನು ಗಳಿಸಿದ್ದರು. ಚೆಸ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ಪಟ್ಟ ಲಭಿಸಬೇಕಾದರೆ, ಮೂರು ಜಿಎಂ ನಾರ್ಮ್‌ಗಳನ್ನು ಪಡೆಯುವ ಜತೆಯಲ್ಲೇ 2,500 ಎಲೊ ಪಾಯಿಂಟ್ಸ್ ಹೊಂದಬೇಕು.

ಸಲ್ಮಾನ್ ಶತಕ: ಪಾಕ್ ಮುನ್ನಡೆ

ಕೊಲಂಬೊ (ಪಿಟಿಐ/ಎಎಫ್‌ಪಿ): ಆಘಾ ಸಲ್ಮಾನ್ ಅವರ ಸುಂದರ ಶತಕದ ಬಲದಿಂದ ಪಾಕಿಸ್ತಾನ ತಂಡವು ಇಲ್ಲಿ ಶ್ರೀಲಂಕಾ ಎದುರು ನಡೆಯುತ್ತಿರುವ ಟೆಸ್ಟ್ ಕ್ರಿಕೆಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಬೃಹತ್ ಮುನ್ನಡೆ ಸಾಧಿಸಿದೆ.

ಪಂದ್ಯದ ಮೂರನೇ ದಿನವಾದ ಬುಧವಾರ ಸಲ್ಮಾನ್ (ಬ್ಯಾಟಿಂಗ್ 132; 148ಎ, 4X15, 6X1) ಅವರ ಆಟದಿಂದ ತಂಡವು 132 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 563 ರನ್ ಗಳಿಸಿದೆ. ಒಟ್ಟು 397 ರನ್‌ಗಳ ಮುನ್ನಡೆ ಸಾಧಿಸಿದೆ.

ಲಕ್ಷ್ಯ ಸೇನ್ ಆಟದ ವೈಖರಿ –ಎಎಫ್‌ಪಿ ಚಿತ್ರ

ಸಿಂಧುಗೆ ನಿರಾಸೆ

ಟೋಕಿಯೊ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಅವರ ನೀರಸ ಆಟ ಮುಂದುವರಿದಿದ್ದು, ಜಪಾನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಮೊದಲ ಸುತ್ತಿನಲ್ಲೇ ಮುಗ್ಗರಿಸಿದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಭಾರತದವರೇ ಆದ ಪ್ರಿಯಾಂಶು ರಾಜಾವತ್ ಒಡ್ಡಿದ ಪ್ರಬಲ ಸವಾಲನ್ನು ಬದಿಗೊತ್ತಿದ ಲಕ್ಷ್ಯ ಸೇನ್ ಎರಡನೇ ಸುತ್ತಿಗೆ ಮುನ್ನಡೆದರು.

ಬುಧವಾರ ನಡೆದ ಪಂದ್ಯದಲ್ಲಿ ಸಿಂಧು 12–21, 13–21 ರಿಂದ ಜಪಾನ್‌ನ ಝಾಂಗ್ ಯಿ ಮಾನ್ ಎದುರು ಪರಾಭವಗೊಂಡರು. ಸಿಂಧು ಈ ವರ್ಷ ಆಡಿದ 13 ಬಿಡಬ್ಲ್ಯುಎಫ್ ವಿಶ್ವ ಟೂರ್ ಟೂರ್ನಿಗಳಲ್ಲಿ ಏಳರಲ್ಲೂ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದಾರೆ.

ಸೇನ್, ಒಂದು ಗಂಟೆಗೂ ಹೆಚ್ಚು ಸಮಯ ನಡೆದ ಜಿದ್ದಾಜಿದ್ದಿನ ಸೆಣಸಾಟದಲ್ಲಿ 21-15, 12-21, 24-22 ರಿಂದ ರಾಜಾವತ್ ಅವರನ್ನು ಮಣಿಸಿದರು.

ಸಾತ್ವಿಕ್ ಸಾಯಿರಾಜ್ – ಚಿರಾಗ್ ಶೆಟ್ಟಿ ಜೋಡಿ 21-16, 11-21, 21-13 ರಿಂದ ಇಂಡೊನೇಷ್ಯಾದ ಲಿಯೊ ರಾಲಿ ಕರ್ನಾಂಡೊ ಮತ್ತು ಡೇನಿಯಲ್ ಮಾರ್ಟಿನ್ ಅವರನ್ನು ಮಣಿಸಿತು.

ಮಿಥುನ್ ಮಂಜುನಾಥ್ 21-13, 22-24, 18-21 ರಿಂದ ಚೀನಾದ ವೆಂಗ್ ಹಾಂಗ್ ಎದುರು ಮಣಿದರು.

ಬ್ಯಾಡ್ಮಿಂಟನ್: ಅವಿ, ಅನಿಲ್‌ಗೆ ಸಿಂಗಲ್ಸ್ ಪ್ರಶಸ್ತಿ

ಬಳ್ಳಾರಿ: ಬೆಂಗಳೂರಿನ ಅವಿ ಬಸಕ್ ಮತ್ತು ಮೈಸೂರಿನ ಜೇಡ್ ಅನಿಲ್, ಮಂಗಳವಾರ ನಗರದ ಜಿಲ್ಲಾ ಕ್ರೀಡಾ ಸಮುಚ್ಚಯದಲ್ಲಿ ನಡೆದ ಯೋನೆಕ್ಸ್ ಸನ್‌ರೈಸ್ ರಾಜ್ಯ ಸಬ್ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ 17 ವರ್ಷದೊಳಗಿನವರ ವಿಭಾಗದಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿಗಳನ್ನು ಗೆದ್ದುಕೊಂಡರು.

ಅವಿ ಬಸಕ್ ಬಾಲಕರ ವಿಭಾಗದ ಫೈನಲ್‌ನಲ್ಲಿ 21–17, 21–13 ರಿಂದ ಪ್ರತೀಕ್ ಕೌಂಡಿಲ್ಯ ಅವರನ್ನು ಪರಾಭವಗೊಳಿಸಿದರು. ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಮೈಸೂರಿನ ಜೇಡ್ ಅನಿಲ್ 21–18, 21–15ರಲ್ಲಿ ನೇರ ಆಟಗಳಿಂದ ಬೆಂಗಳೂರಿನ ಸುಹೀನಾ ರಾಯ್ ಅವರನ್ನು ಸೋಲಿಸಿದರು.

15 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಬೆಂಗಳೂರಿನ ಪ್ರತೀಕ್ ಕೌಂಡಿಲ್ಯ 18–21, 21–14, 21–16 ರಲ್ಲಿ 2–1 ರಿಂದ ಪ್ರಣವ್ ಎಂ. ಅವರನ್ನು ಮಣಿಸಿ ಚಾಂಪಿಯನ್ ಆದರು. ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಸುಹೀನಾ ರಾಯ್ 21–13, 23–21 ರಲ್ಲಿ ನೇರ ಗೇಮ್‌ಗಳಿಂದ ಅದಿತಿ ದೀಪಕ್ ರಾಜ್ ವಿರುದ್ಧ ಗೆದ್ದರು.

ವಿಶ್ವ ಜೂನಿಯರ್ ಸ್ನೂಕರ್ ಪ್ರಶಸ್ತಿ: ತರಬೇತಿಗೆ ನಿತ್ಯ ಕೆಜಿಎಫ್‌ನಿಂದ ರಾಜಧಾನಿಗೆ ಪಯಣ!

ಚಾಂಪಿಯನ್ ಆದರೂ ಗುರುತಿಸದ ಸರ್ಕಾರ

• ಕೆ.ಓಂಕಾರ ಮೂರ್ತಿ

ಕೋಲಾರ: ಅರವಿಂದ ಸವೂರ್, ಎಂ.ಜಿ.ಜಯರಾಂ, ಬಿ.ಭಾಸ್ಕರ್, ಟಿ.ಎ. ಸೆಲ್ವರಾಜ್, ಬಿ.ವಿ.ಎಸ್.ಮೂರ್ತಿ, ಪಂಕಜ್ ಅಡ್ವಾಣಿ, ವಿದ್ಯಾ ಪಿಳ್ಳೈ, ಚಿತ್ರಾ ಮಗಿಮೈರಾಜ್, ಉಷಾ ರಾವ್, ಜೂಡಿ ವಾಲಿಯಾ, ಉಮಾದೇವಿ, ವರ್ಷಾ ಸಂಜೀವ್ ಸೇರಿದಂತೆ ಹಲವಾರು ಹೆಸರಾಂತ ಬಿಲಿಯರ್ಡ್ಸ್ ಹಾಗೂ ಸ್ನೂಕರ್ ಆಟಗಾರರನ್ನು ಕಂಡಿದ್ದರೂ ರಾಜ್ಯದಲ್ಲಿ ಈ ಕ್ರೀಡೆ ಹಾಗೂ ಆಟಗಾರರತ್ತ ನಿರ್ಲಕ್ಷ್ಯ ಧೋರಣೆ ಮುಂದುವರಿದಿದೆ.

10 ದಿನಗಳ ಹಿಂದೆ ಸೌದಿ ಅರೇಬಿಯಾದ ರಿಯಾದ್‌ನಲ್ಲಿ ನಡೆದ ವಿಶ್ವ 21 ವರ್ಷದೊಳಗಿನವರ ಸ್ನೂಕರ್ ಟೂರ್ನಿಯಲ್ಲಿ ಚಾಂಪಿಯನ್ ಆಗಿರುವ ಕೆಜಿಎಫ್‌ನ ಕೀರ್ತನಾ ಪಾಂಡಿಯನ್ ಅವರ ಸಾಧನೆಯನ್ನೂ ರಾಜ್ಯ ಸರ್ಕಾರ ಗುರುತಿಸಿಲ್ಲ. ಇದು ಸಹಜವಾಗಿಯೇ ಕೀರ್ತನಾ ಹಾಗೂ ಅವರ ತಂದೆ ಪಾಂಡಿಯನ್ ಅವರಲ್ಲಿ ಬೇಸರ ಉಂಟು ಮಾಡಿದೆ.

'ಒಂದು ಅಭಿನಂದನೆ, ಸನ್ಮಾನವೂ ಮಗಳಿಗೆ ಮತ್ತಷ್ಟು ಸ್ಫೂರ್ತಿ ತುಂಬಬಲ್ಲದು. ಆದರೆ, ಸರ್ಕಾರದ ಪ್ರತಿನಿಧಿಗಳಾಗಲಿ, ಕ್ರೀಡಾ ಇಲಾಖೆಯಾಗಲಿ ಕೀರ್ತನಾಳ ಸಾಧನೆ ಗುರುತಿಸಿಲ್ಲ' ಎಂದು ಪಾಂಡಿಯನ್ ಬೇಸರ ವ್ಯಕ್ತಪಡಿಸಿದರು.

'ಚಾಂಪಿಯನ್‌ಷಿಪ್ ಸವಾಲಿನಿಂದ ಕೂಡಿತ್ತು. ಕಳೆದ ಬಾರಿ ಕಂಚಿನ ಪದಕ ಗೆದ್ದಿದ್ದೆ. ಮತ್ತಷ್ಟು ಪರಿಶ್ರಮ ಹಾಕಿ ಈ ಬಾರಿ ಮೊದಲ ಸ್ಥಾನ ಗಳಿಸಿದ್ದೇನೆ. ಆದರೆ, ರಾಜ್ಯ ಸರ್ಕಾರ ಅಥವಾ ಕ್ರೀಡಾ ಇಲಾಖೆಯಿಂದ ಒಬ್ಬರೂ ಮಾತನಾಡಿಸಿಲ್ಲ. ಅಭಿನಂದನೆ ಸಲ್ಲಿಸಿಲ್ಲ' ಎಂದು ಕೀರ್ತನಾ 'ಪ್ರಜಾವಾಣಿ'ಗೆ ತಿಳಿಸಿದರು.

ಪಾಂಡಿಯನ್ ಕೆಜಿಎಫ್‌ನ ಬೆಮಲ್‌ನಲ್ಲಿ ಡೆಪ್ಯುಟಿ ಜನರಲ್ ಮ್ಯಾನೇಜರ್ (ಡಿಜಿಎಂ) ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೆಜಿಎಫ್‌ನ ಮಹಾವೀರ ಜೈನ್ ಕಾಲೇಜಿನಲ್ಲಿ ತೃತೀಯ ಬಿ.ಕಾಂ ಓದುತ್ತಿರುವ ಕೀರ್ತನಾ ಅಭ್ಯಾಸಕ್ಕೆಂದು ನಿತ್ಯ ಬೆಂಗಳೂರಿನ ವಸಂತನಗರದಲ್ಲಿರುವ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಗೆ ಹೋಗಿ ಬರುತ್ತಾರೆ. ಪಂಕಜ್ ಅಡ್ವಾಣಿ ಹಾಗೂ ನುರಿತ ಆಟಗಾರರ ಮಾರ್ಗದರ್ಶನ ದೊರೆಯುತ್ತಿದೆ. ಇವರ ಕೋಚ್ ಮಾಜಿ ಚಾಂಪಿಯನ್ ಯಾಸಿನ್ ಮರ್ಚೆಂಟ್.

ಬೆಳಿಗ್ಗೆ 10.30ಕ್ಕೆ ಕಾಕಿನಾಡ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಗಳೂರು ತಲುಪಿ ಅಭ್ಯಾಸ ಮುಗಿಸಿ ಸಂಜೆ 7 ಗಂಟೆಗೆ ಮನೆ ತಲುಪುತ್ತಾರೆ. ಆರು ವರ್ಷಗಳಿಂದ ಈ ಕಸರತ್ತು ಮುಂದುವರಿದಿದೆ.


ಆಟದಲ್ಲಿ ನಿರತ ಕೀರ್ತನಾ ಪಾಂಡಿಯನ್

'ನಿತ್ಯ ಸುಮಾರು 3ರಿಂದ 4 ಗಂಟೆ ಸಮಯ ಪ್ರಯಣದಲ್ಲೇ ಕಳೆದು ಹೋಗುತ್ತದೆ. ನಿತ್ಯ ಕನಿಷ್ಠವೆಂದರೆ ₹ 400 ಖರ್ಚಾಗುತ್ತದೆ' ಎಂದು ಕೀರ್ತನಾ ಹೇಳಿದರು.

ಸತತ ಅಭ್ಯಾಸ ಹಾಗೂ ಟೂರ್ನಿಗಳ ಕಾರಣ ಪರೀಕ್ಷಾ ಸಮಯದಲ್ಲಿ ಮಾತ್ರ ಪಠ್ಯದತ್ತ ಹೆಚ್ಚು ಗಮನ ಹರಿಸುವ ಅವರು ಶೈಕ್ಷಣಿಕ ವಿಚಾರದಲ್ಲೂ ಮುಂದಿದ್ದಾರೆ. ದ್ವಿತೀಯ ಬಿ.ಕಾಂನಲ್ಲಿ ಶೇ 82 ಅಂಕ ಪಡೆದಿದ್ದಾರೆ.

'ಸ್ನೂಕರ್, ಬಿಲಿಯರ್ಡ್ಸ್ ಮಾತ್ರವಲ್ಲ; ಬೇರೆ ಯಾವುದೇ ಕ್ರೀಡೆಯಲ್ಲಿ ಗೆದ್ದು ಬಂದರೂ ರಾಜ್ಯದಲ್ಲಿ ಪ್ರೋತ್ಸಾಹ, ಮೆಚ್ಚುಗೆ ಕಡಿಮೆಯೇ. ವ್ಯವಸ್ಥೆ, ಮನಸ್ಥಿತಿ ಬದಲಾಗಬೇಕಿದೆ. ನಾವು ಆಡುವಾಗಲೂ ಇದೇ ಪರಿಸ್ಥಿತಿ ಇತ್ತು. ಒಂದು ಮೆಚ್ಚುಗೆಯ ಮಾತು, ಸನ್ಮಾನ ಸಾಧಕರಿಗೆ ಸ್ಫೂರ್ತಿ ತುಂಬುತ್ತದೆ' ಎಂದು ಮಾಜಿ ಬಿಲಿಯರ್ಡ್ಸ್ ಚಾಂಪಿಯನ್ ಆರ್. ಉಮಾದೇವಿ ನಾಗರಾಜ್ ಅಭಿಪ್ರಾಯಪಟ್ಟರು.

ಅರ್ಜುನ ಪ್ರಶಸ್ತಿ (2004), ಖೇಲ್ ರತ್ನ ಪ್ರಶಸ್ತಿಗೆ (2006) ಭಾಜನವಾಗಿರುವ ಪಂಕಜ್ ಅಡ್ವಾಣಿ ಅವರಿಗೆ ರಾಜ್ಯ ಸರ್ಕಾರ 2007ರಲ್ಲಿ 'ಏಕಲವ್ಯ' ಪ್ರಶಸ್ತಿ ನೀಡಿತ್ತು. 'ಖೇಲ್ ರತ್ನ' ಸಿಗುವವರೆಗೆ ಅವರ ಸಾಧನೆ ಗುರುತಿಸಿರಲಿಲ್ಲ. ಈ ಕ್ರೀಡೆಯ ಮೇಲಿನ ಸರ್ಕಾರದ ನಿರ್ಲಕ್ಷ್ಯ ಧೋರಣೆ ಖಂಡಿಸಿ ಅವರು ಆ ವರ್ಷ ಪ್ರಶಸ್ತಿ ನಿರಾಕರಿಸಿದ್ದು. ಆದರೆ, ರಾಜ್ಯ ಸರ್ಕಾರದ ಮನವಿ ಹಾಗೂ ಪ್ರೋತ್ಸಾಹ ಭರವಸೆ ಮೇರೆಗೆ 2009ರಲ್ಲಿ 'ಏಕಲವ್ಯ' ಪ್ರಶಸ್ತಿ ಸ್ವೀಕರಿಸಿದ್ದರು.

ಸಾಧನೆ ಗುರುತಿಸಿದಾಗ ಖುಷಿಯಾಗುತ್ತದೆ. ಪರಿಶ್ರಮ ಹಾಕಿದ್ದಕ್ಕೂ, ಹಣ ಖರ್ಚು ಮಾಡಿದ್ದಕ್ಕೂ ಸಾರ್ಥಕವಾಗುತ್ತದೆ. ಆದರೆ, ಮಗಳ ಸಾಧನೆಯನ್ನು ಯಾರೂ ಗುರುತಿಸಿಲ್ಲ ಪಾಂಡಿಯನ್, ಕೀರ್ತನಾ ತಂದೆ

ಅಭ್ಯಾಸ, ತರಬೇತಿಗೆ ಹೆಚ್ಚು ಹಣ ಖರ್ಚಾಗುತ್ತಿದೆ. ಮುಂಬೈನಲ್ಲಿ ಸ್ವಂತ ಖರ್ಚಿನಿಂದ ಕೋಚಿಂಗ್ ಪಡೆದೆ. ಟೂರ್ನಿಯಲ್ಲಿ ಪಾಲ್ಗೊಂಡಾಗ ಮಾತ್ರ ಫೆಡರೇಷನ್ ಖರ್ಚು ಭರಿಸುತ್ತದೆ ಕೀರ್ತನಾ, ವಿಶ್ವ ಜೂನಿಯರ್ ಸ್ನೂಕರ್ ಚಾಂಪಿಯನ್